ಬುಧವಾರ, ಜುಲೈ 6, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 186 | ಪುಟ 16
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಶುದ್ಧವಾದ ಕುಡಿಯುವ ನೀರು ಸಿಗದೆ ಮನುಕುಲ ಪರದಾಡುವ ಪರಿಸ್ಥಿತಿ ಎದುರಾಗುವ ಅಪಾಯ ಇದೆ. ವಾತಾವರಣದಲ್ಲಿರುವ ತೇವಾಂಶದಿಂದಲೇ ನೀರು ಸಿಗುವಂತಾದರೆ ಹೇಗೆ?...

ಆಳ-ಅಗಲ
ಮಾನವರಹಿತ ಯುದ್ಧವಿಮಾನ ನಿರ್ಮಾಣದತ್ತ ಮತ್ತೊಂದು ಹೆಜ್ಜೆ

ಸಂವಿಧಾನ ಟೀಕಿಸಿದ ಸಚಿವ ಚೆರಿಯನ್ 12

ಮುಂಬೈನಲ್ಲಿ ಭಾರಿ ಮಳೆ 7

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
53,134	15,810	₹54,020 (ಬೆಂಗಳೂರು)	₹60,300 (ಬೆಂಗಳೂರು)	79.33

ಜಮೀರ್ ಬಂಗಲೆ, ಕಚೇರಿ: ಎಸಿಬಿ ದಾಳಿ

ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವ ಆರೋಪ • ಇ.ಡಿ ವರದಿ ಆಧರಿಸಿ ಎಫ್‌ಐಆರ್ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವ ಆರೋಪದಡಿ ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಶಾಸಕ ಬಿ.ಜೆಡ್.ಜಮೀರ್ ಅಹಮ್ಮದ್ ಖಾನ್ ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಎಫ್‌ಐಆರ್ ದಾಖಲಿಸಿರುವ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ), ಅವರಿಗೆ ಸಂಬಂಧಿಸಿದ ಐದು ಸ್ಥಳಗಳ ಮೇಲೆ ಮಂಗಳವಾರ ದಾಳಿ ಮಾಡಿ ಶೋಧ ನಡೆಸಿತು.

2021ರ ಆಗಸ್ಟ್‌ನಲ್ಲಿ ಜಮೀರ್ ಮೇಲೆ ದಾಳಿಮಾಡಿದ್ದ ಜಾರಿ ನಿರ್ದೇಶನಾಲಯ(ಇ.ಡಿ), ತನಿಖೆ ನಡೆಸಿತ್ತು. ಆ ಸಂದರ್ಭದಲ್ಲಿ ಇ.ಡಿ ಶಾಸಕರ ಮನೆ ಸೇರಿದಂತೆ ಕೆಲವು ಆಸ್ತಿಗಳ ಮೌಲ್ಯಮಾಪನ ಮಾಡಿ ಸಲ್ಲಿಸಿದ್ದ ವರದಿ ಆಧರಿಸಿ ಎಸಿಬಿ ಈಗ ಪ್ರತ್ಯೇಕ ಪ್ರಕರಣ ದಾಖಲಿಸಿದೆ. ಎಸಿಬಿ ಬೆಂಗಳೂರು ನಗರ ಘಟಕದ ಎಸ್‌ಪಿ ಜಿ.ಎಚ್. ಯತೀಶ್ ಚಂದ್ರ ನೇತೃತ್ವದಲ್ಲಿ ಅಧಿಕಾರಿಗಳು ಇಡೀ ದಿನ ಶೋಧ ನಡೆಸಿದರು.

ಕಂಟೋನ್ಮೆಂಟ್ ರೈಲ್ವೆ ನಿಲ್ದಾಣದ ಸಮೀಪದಲ್ಲಿರುವ ಜಮೀರ್ ಅವರ ಬಂಗಲೆ, ಸಿಲ್ವರ್ ಓಕ್ ಅಪಾರ್ಟ್‌ಮೆಂಟ್‌ನಲ್ಲಿರುವ ಫ್ಲ್ಯಾಟ್, ಸದಾಶಿವನಗರದಲ್ಲಿರುವ ಅತಿಥಿಗೃಹ, ಬನಶಂಕರಿಯಲ್ಲಿರುವ ಜಿ.ಕೆ. ಅಸೋಸಿಯೇಟ್ಸ್ ಕಚೇರಿ ಮತ್ತು ಕಲಾಸಿಪಾಳ್ಯದಲ್ಲಿರುವ ನ್ಯಾಷನಲ್ ಟ್ರಾವೆಲ್ಸ್ ಕಚೇರಿಗಳ ಮೇಲೆ ಎಸಿಬಿ ಅಧಿಕಾರಿಗಳು ಹಲವು ತಂಡಗಳಲ್ಲಿ ನಸುಕಿನಲ್ಲೇ ದಾಳಿ ಮಾಡಿದರು.

ಎಸಿಬಿ ಡಿವೈಎಸ್‌ಪಿ ಕೆ. ರವಿಶಂಕರ್ ನೇತೃತ್ವದ ತಂಡ ಶೋಧನಾ ವಾರಂಟ್ ನೀಡಿದಾಗ ಅದನ್ನು ಪರಿಶೀಲಿಸುತ್ತಿರುವ ಶಾಸಕ ಬಿ.ಜೆಡ್. ಜಮೀರ್ ಅಹಮ್ಮದ್ ಖಾನ್

ರಾತ್ರಿಯವರೆಗೂ ಶೋಧ ನಡೆಸಿದ ತನಿಖಾ ತಂಡಗಳು, ಸ್ಥಿರಾಸ್ತಿ ಒಡೆತನಕ್ಕೆ ಸಂಬಂಧಿಸಿದ ದಾಖಲೆಗಳು, ಬ್ಯಾಂಕ್ ವಹಿವಾಟಿಗೆ ಸಂಬಂಧಿಸಿದ ದಾಖಲೆಗಳು, ನ್ಯಾಷನಲ್ ಟ್ರಾವೆಲ್ಸ್ ವಹಿವಾಟಿನ ದಾಖಲೆಗಳನ್ನು ಬೃಹತ್ ಪ್ರಮಾಣದ ದಾಖಲೆಗಳನ್ನು ವಶಕ್ಕೆ ಪಡೆದು ಕೊಂಡೊಯ್ದರು.

ಮನೆಯ ಮೌಲ್ಯವೇ ಕಾರಣ: ಜಾರಿ ನಿರ್ದೇಶನಾಲಯವು ಹಿಂದೆ ಜಮೀರ್ ವಿರುದ್ಧ ತನಿಖೆ ಕೈಗೊಂಡಿದ್ದಾಗ ಕಂಟೋನ್ಮೆಂಟ್ ರೈಲ್ವೆ ನಿಲ್ದಾಣದ ಸಮೀಪದ ಅವರ ಭವ್ಯವಾದ ಬಂಗಲೆಯ ಮೌಲ್ಯಮಾಪನ ನಡೆಸಿತ್ತು. ಜಮೀರ್ ₹ 40 ಕೋಟಿ ಮೌಲ್ಯ ಘೋಷಿಸಿಕೊಂಡಿದ್ದರು. ಮಾರುಕಟ್ಟೆ ದರದಲ್ಲಿ ಅದು ಸುಮಾರು ₹ 80 ಕೋಟಿಗೂ ಹೆಚ್ಚು ಬೆಲೆಬಾಳುತ್ತದೆ ಎಂದು ಮೌಲ್ಯಮಾಪಕರು ವರದಿ ಸಲ್ಲಿಸಿದ್ದರು.

'ಬಂಗಲೆಯ ಘೋಷಿತ ಮೌಲ್ಯ ಮತ್ತು ವಾಸ್ತವಿಕ ಮೌಲ್ಯದ ನಡುವಿನ ಅಂತರದ ಕುರಿತು ವರದಿಯೊಂದನ್ನು ಇ.ಡಿ ಅಧಿಕಾರಿಗಳು ಎಸಿಬಿ ಜತೆ ಹಂಚಿಕೊಂಡಿದ್ದರು. ಅದರ ಆಧಾರದಲ್ಲೇ ಜಮೀರ್ ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಎಫ್‌ಐಆರ್ ದಾಖಲಿಸಿ ತನಿಖೆ ಆರಂಭಿಸಲಾಗಿದೆ' ಎಂದು ಮೂಲಗಳು ತಿಳಿಸಿವೆ.

ವೈಭವೋಪೇತ ಅರಮನೆಯ ಮಾದರಿಯಲ್ಲಿ ಈ ಐಷಾರಾಮಿ ಬಂಗಲೆಯನ್ನು ನಿರ್ಮಿಸಲಾಗಿದೆ. ಬೃಹತ್ ಪ್ರಮಾಣದಲ್ಲಿ ವಿದೇಶಗಳಿಂದ ಆಮದು ಮಾಡಿಕೊಳ್ಳಲಾದ ವಸ್ತುಗಳನ್ನು ಮನೆ ನಿರ್ಮಾಣಕ್ಕೆ ಬಳಸಲಾಗಿದೆ. ಶೌಚಾಲಯ, ಸ್ನಾನಗೃಹ, ಹೋಂ ಥಿಯೇಟರ್ ಸೇರಿದಂತೆ ಎಲ್ಲ ಕಡೆಗಳಲ್ಲೂ ಶೋಧ ನಡೆಸಿದ ಎಸಿಬಿ ಅಧಿಕಾರಿಗಳು, ಮನೆ ನಿರ್ಮಾಣಕ್ಕೆ ಮಾಡಿರುವ ವೆಚ್ಚದ ಕುರಿತು ಮಾಹಿತಿ ಸಂಗ್ರಹಿಸಿದ್ದಾರೆ.

ಟ್ರಾವೆಲ್ಸ್ ಮೇಲೆ ಕಣ್ಣು: ನೂರಾರು ಬಸ್‌ಗಳನ್ನು ಹೊಂದಿರುವ ನ್ಯಾಷನಲ್ ಟ್ರಾವೆಲ್ಸ್ ತಮ್ಮ ಆದಾಯದ ಏಕೈಕ ಮೂಲ ಎಂದು ಜಮೀರ್ ಘೋಷಿಸಿಕೊಂಡಿದ್ದರು. ತನಿಖೆಗೆ ಪೂರಕವಾಗಿ ಈ ಸಂಸ್ಥೆಯ ವಹಿವಾಟಿಗೆ ಸಂಬಂಧಿಸಿದ ಅಪಾರ ಪ್ರಮಾಣದ ದಾಖಲೆಗಳನ್ನು ತನಿಖಾ ತಂಡ ವಶಕ್ಕೆ ಪಡೆದಿದೆ.

9ನೇ ಪುಟ ನೋಡಿ

'ಗಮನ ಬೇರೆಡೆ ತಿರುಗಿಸಲು ದಾಳಿ'

'ಇಡಿ (ಜಾರಿ ನಿರ್ದೇಶನಾಲಯ) ಮತ್ತು ಎಸಿಬಿ (ಭ್ರಷ್ಟಾಚಾರ ನಿಗ್ರಹ ದಳ) ಒಂದಕ್ಕೊಂದು ಸಂಬಂಧ ಇಲ್ಲ. ಪಿಎಸ್‌ಐ ಹಗರಣದ ಗಮನವನ್ನು ಬೇರೆ ಕಡೆಗೆ ತಿರುಗಿಸಲು ಶಾಸಕ ಜಮೀರ್ ಅಹ್ಮದ್ ಅವರ ಮನೆ, ಕಚೇರಿ ಮೇಲೆ ದಾಳಿ ಮಾಡಿದ್ದಾರೆ ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು. ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಯಾವ ಕಾರಣಕ್ಕೆ ಜಮೀರ್ ಮನೆ ಮೇಲೆ ದಾಳಿ ನಡೆದಿದೆಯೋ ಗೊತ್ತಿಲ್ಲ. ಹಾದಿ ತಪ್ಪಿಸಲು ದಾಳಿ ನಡೆಸಿರಬಹುದೇನೋ? ಎಸಿಬಿ ನೇರವಾಗಿ ಮುಖ್ಯಮಂತ್ರಿಯ ಅಡಿಯಲ್ಲಿದೆ' ಎಂದರು.

'ಆ್ಯಂಟಿ ಕರಪ್ಷನ್ ಬ್ಯೂರೋ (ಎಸಿಬಿ) ಅಲ್ಲ, ಕಲೆಕ್ಷನ್ ಬ್ಯೂರೋ. ಅದನ್ನು ಹುಟ್ಟು ಹಾಕಿದ್ದೇ ತಪ್ಪಾ? ಭ್ರಷ್ಟಾಚಾರದ ನಿಯಂತ್ರಣಕ್ಕೆ ಅದನ್ನು ಹುಟ್ಟು ಹಾಕಿದ್ದು. ಹಾಗೆಂದು, ವ್ಯವಸ್ಥೆಯೇ ಭ್ರಷ್ಟಾಚಾರದ ರೂಪ ಪಡೆದರೆ ಹೇಗೆ? ಎಸಿಬಿ ಹುಟ್ಟು ಹಾಕಿದ್ದು ನಾವೇ (ಕಾಂಗ್ರೆಸ್)? ಇದು ನಮ್ಮ ಕೂಸು, ಅವರ ಕೂಸು ಎಂದು ಅಲ್ಲ. ಇದನ್ನು ಹುಟ್ಟು ಹಾಕಿರುವುದು ಭ್ರಷ್ಟರಿಗೆ ಶಿಕ್ಷೆಯಾಗಲಿ ಎಂಬ ಕಾರಣಕ್ಕೆ' ಎಂದರು.

ಚರ್ಚೆಗೆ ಕಾರಣವಾದ ಎಸಿಬಿ ನಡೆ

ಸುಜೀತ್ ಮುಳುಗುಂದ ಎಂಬುವವರು ಸಲ್ಲಿಸಿರುವ ದೂರು ಆಧರಿಸಿ ಬೆಳಗಾವಿ ಗ್ರಾಮೀಣ ವಿಧಾನಸಭಾ ಕ್ಷೇತ್ರದ ಬಿಜೆಪಿ ಶಾಸಕ ಅಭಯ ಪಾಟೀಲ ವಿರುದ್ಧ ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವ ಆರೋಪದಡಿ ಪ್ರಕರಣ ದಾಖಲಿಸಿ, ತನಿಖೆ ನಡೆಸಲು ಎಸಿಬಿ ವಿಧಾನಸಭೆ ಅಧ್ಯಕ್ಷರ ಅನುಮತಿ ಕೋರಿದೆ.

ಆದರೆ, ಜಮೀರ್ ಅಹಮ್ಮದ್ ವಿಚಾರದಲ್ಲಿ ಅಂತಹ ಯಾವುದೇ ಪ್ರಕ್ರಿಯೆ ನಡೆದಿರುವ ಮಾಹಿತಿ ಇಲ್ಲ. ಈ ಬೆಳವಣಿಗೆ ರಾಜಕೀಯ ವಲಯದಲ್ಲಿ ಚರ್ಚೆಗೆ ಕಾರಣವಾಗಿದೆ.

ಪಿಎಸ್‌ಐ ನೇಮಕಾತಿಯಲ್ಲೂ ಕಮಿಷನ್ ದಂಧೆ

ಪಿಎಸ್‌ಐ ಲಂಚ: ಪೌಲ್‌ಗೆ ಶೇ 20ರಷ್ಟು ಪಾಲು?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಎಸ್‌ಐ ನೇಮಕಾತಿ ಅಕ್ರಮದಿಂದ ಬಂದ ಕೋಟ್ಯಂತರ ರೂಪಾಯಿ ಹಣದಲ್ಲಿ ಎಡಿಜಿಪಿ ಅಮ್ರಿತ್ ಪೌಲ್ ಅವರಿಗೆ ಶೇ 20ರಷ್ಟು ಪಾಲು ಸಂದಾಯವಾಗಿರಬಹುದೆಂಬ ಮಾಹಿತಿ ಸಿಐಡಿ ಅಧಿಕಾರಿಗಳ ತನಿಖೆಯಿಂದ ಹೊರ ಬಿದ್ದಿದ್ದು, ಹಣ ವರ್ಗಾವಣೆಯ ದಾಖಲೆಗಳಿಗಾಗಿ ಶೋಧ ಆರಂಭವಾಗಿದೆ.

ಅವರನ್ನು ಬಂಧಿಸಿ ಕಸ್ಟಡಿಗೆ ಪಡೆದಿರುವ ಸಿಐಡಿ ಅಧಿಕಾರಿಗಳು, ಪುರಾವೆಗಳ ಸಮೇತ ವಿಚಾರಣೆ ಮುಂದುವರಿಸಿದ್ದಾರೆ. ಆರೋಪಿ ಡಿವೈಎಸ್ಪಿ ಶಾಂತ ಕುಮಾರ್ ಹಾಗೂ ಇತರರು ನೀಡಿದ್ದ ಹೇಳಿಕೆ ಮುಂದಿಟ್ಟು ಪ್ರಶ್ನೆ ಹಾಕಿದ್ದಾರೆ.

ಸರ್ಕಾರಿ ಕಾಮಗಾರಿಗಳ ಗುತ್ತಿಗೆ ಟೆಂಡರ್‌ನಲ್ಲಿ ಕಮಿಷನ್ ದಂಧೆ ನಡೆಯುತ್ತಿದ್ದ ರೀತಿಯಲ್ಲೇ ಪಿಎಸ್‌ಐ ನೇಮಕಾತಿ ಪ್ರಕ್ರಿಯೆಯಲ್ಲೂ ಕಮಿಷನ್ ದಂಧೆ ನಡೆದಿರುವ ಅನುಮಾನ ಸಿಐಡಿಗೆ ಬಂದಿದೆ.

'ಹಿಂದೆ ಅಧಿಕಾರದಲ್ಲಿದ್ದವರ ಕುಟುಂಬದ 'ಪ್ರಭಾವಿ'ಯೊಬ್ಬರ ಜೊತೆ ಸೇರಿಕೊಂಡು ಎಡಿಜಿಪಿ ಹಾಗೂ ಇತರೆ ಆರೋಪಿಗಳು, ಕಮಿಷನ್ ಆಧಾರದಲ್ಲಿ ಅಕ್ರಮ ಎಸಗಿರುವ ಮಾಹಿತಿ ಲಭ್ಯವಾಗಿದೆ. ಈ ಬಗ್ಗೆ ಕೆಲ ಪುರಾವೆಗಳು ಸಿಕ್ಕಿದ್ದು, ಮತ್ತಷ್ಟು ಪುರಾವೆಗಾಗಿ ತನಿಖೆ ಮುಂದುವರಿಸಲಾಗಿದೆ' ಎಂದು ಸಿಐಡಿ ಮೂಲಗಳು ಹೇಳಿವೆ.

'ಪೊಲೀಸ್ ನೇಮಕಾತಿ ವಿಭಾಗದ ಮುಖ್ಯಸ್ಥರಾಗಿದ್ದ ಅಮ್ರಿತ್ ಪೌಲ್, ರಾಜ್ಯ ಸರ್ಕಾರದಿಂದ ಒಪ್ಪಿಗೆ ಪಡೆದು 545 ಪಿಎಸ್‌ಐ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಆರಂಭಿಸಿದ್ದರು. ಅಧಿಸೂಚನೆ ಹೊರಡಿಸುವುದಕ್ಕೂ ಮುನ್ನವೇ, ಮಧ್ಯವರ್ತಿಗಳ ಮೂಲಕ ಅಭ್ಯರ್ಥಿಗಳ ಹುಡುಕಾಟ ಆರಂಭಿಸಿದ್ದರು' ಎಂದೂ ಮೂಲಗಳು ತಿಳಿಸಿವೆ.

'ಕಲಬುರಗಿ, ಬೆಂಗಳೂರು ಹಾಗೂ ಇತರೆ ಜಿಲ್ಲೆಗಳ ಅಭ್ಯರ್ಥಿಗಳು ಹಣ ನೀಡಿದ್ದರು. ಅವರಿಂದ ಸಂಗ್ರಹಿಸಿದ್ದ ಕೋಟ್ಯಂತರ ರೂಪಾಯಿ ಹಣದಲ್ಲಿ ಶೇ 20ರಷ್ಟು ಪಾಲು ಎಡಿಜಿಪಿ ಅವರ ಕೈ ಸೇರಿತ್ತು. ಬಳಿಕವೇ ಅವರು, ಒಎಂಆರ್ ತಿದ್ದುಪಡಿ ಮಾಡಿಸಿದ್ದರು. ಹಣ ಕೊಟ್ಟ ಅಭ್ಯರ್ಥಿಗಳ ಹೆಸರು ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿತ್ತು' ಎಂದೂ ಸಿಐಡಿ ಮೂಲಗಳು ಹೇಳಿವೆ.

5ನೇ ಪುಟ ನೋಡಿ

'ಪ್ರಭಾವಿ'ಗೆ ಶೇ 30ರಷ್ಟು ಕಮಿಷನ್?

ಪಿಎಸ್‌ಐ ನೇಮಕಾತಿ ಅಕ್ರಮದಲ್ಲಿ ಹಿಂದೆ ಅಧಿಕಾರದಲ್ಲಿದ್ದ ಕುಟುಂಬದವರೊಬ್ಬರು, ಕೆಲ ಹಿರಿಯ ಐಪಿಎಸ್ ಅಧಿಕಾರಿಗಳ ಪಾತ್ರವಿರುವ ಅನುಮಾನ ಸಿಐಡಿಗೆ ಬಂದಿದೆ. ಅವರೆಲ್ಲರ ಬಗ್ಗೆಯೂ ಸಿಐಡಿ ಅಧಿಕಾರಿಗಳು ಮಾಹಿತಿ ಕಲೆಹಾಕುತ್ತಿದ್ದಾರೆ.

'ಚಾಲ್ತಿಯಲ್ಲಿರುವ ಕಾನೂನು ಪ್ರಕಾರ, ಏಕಕಾಲದಲ್ಲಿ 545 ಪಿಎಸ್‌ಐ ಹುದ್ದೆ ನೇಮಕಕ್ಕೆ ಅವಕಾಶವಿರಲಿಲ್ಲ. ಆರಂಭದಲ್ಲಿ ನೇಮಕಾತಿ ಪ್ರಸ್ತಾವವನ್ನು ಸರ್ಕಾರ ತಿರಸ್ಕರಿಸಿತ್ತು. ಆದರೆ, ಸರ್ಕಾರದ ಮಟ್ಟದಲ್ಲಿ ತನ್ನದೇ ಹಿಡಿತ ಹೊಂದಿದ್ದ 'ಪ್ರಭಾವಿ'ಯೊಬ್ಬರು ಒತ್ತಡ ಹೇರಿ ನೇಮಕಾತಿಗೆ ಒಪ್ಪಿಗೆ ಪಡೆದಿದ್ದರು. ಇದಕ್ಕಾಗಿ ಅವರು ಶೇ 30ರಷ್ಟು ಪಾಲು ಕೇಳಿದ್ದರೆಂಬ ಮಾಹಿತಿ ಲಭ್ಯವಾಗಿದ್ದು, ಪರಿಶೀಲಿಸಲಾಗುತ್ತಿದೆ' ಎಂದು ಸಿಐಡಿ ಮೂಲಗಳು ಹೇಳಿವೆ.

'ಪಿಎಸ್‌ಐ ಹುದ್ದೆಗಳನ್ನು ಮಧ್ಯವರ್ತಿಗಳ ಮೂಲಕ ಮಾರಾಟಕ್ಕೆ ಇಟ್ಟಿದ್ದ ನೇಮಕಾತಿ ವಿಭಾಗ, ಅದರಿಂದ ಬಂದ ಹಣದಲ್ಲಿ ಶೇ 30ರಷ್ಟು ಪಾಲನ್ನು ಪ್ರಭಾವಿಗೆ ನೀಡಿರುವ ಅನುಮಾನವಿದೆ. ಉಳಿದ ಶೇ 50ರಷ್ಟು ಪಾಲನ್ನು ಪರೀಕ್ಷಾ ಕೇಂದ್ರದ ಸಿಬ್ಬಂದಿ, ಮಧ್ಯವರ್ತಿಗಳು, ಕೆಲ ಪೊಲೀಸ್ ಅಧಿಕಾರಿಗಳು, ಕೆಲ ನೌಕರರು ಹಾಗೂ ಇತರರು ಹಂಚಿಕೊಂಡಿರುವ ಶಂಕೆಯೂ ಇದೆ. ಈ ಪೈಕಿ ಹಲವರನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಿದ್ದು, ಕೆಲವರಿಂದ ಈಗಾಗಲೇ ₹ 2.16 ಕೋಟಿ ಹಣ ಜಪ್ತಿ ಸಹ ಮಾಡಲಾಗಿದೆ' ಎಂದೂ ತಿಳಿಸಿವೆ.

ಮುಂದುವರಿದ ಭಾರಿ ಮಳೆ

ಬೆಂಗಳೂರು: ರಾಜ್ಯದ ಕೊಡಗು ಹಾಗೂ ಕರಾವಳಿ ಜಿಲ್ಲೆಗಳಲ್ಲಿ ಮಂಗಳವಾರ ಎಡೆಬಿಡದೆ ಮಳೆ ಸುರಿದಿದೆ. ಧಾರವಾಡ, ಬೆಳಗಾವಿ, ವಿಜಯನಗರ, ಬಾಗಲ ಕೋಟೆ, ಗದಗ, ಹಾವೇರಿ ಜಿಲ್ಲೆಗಳಲ್ಲಿಯೂ ಉತ್ತಮ ಮಳೆಯಾಗಿದೆ. 7

ಕಾಮೆಡ್-ಕೆ ಫಲಿತಾಂಶ ಕರ್ನಾಟಕದ ಮೇಲುಗೈ

ಬೆಂಗಳೂರು: ಎಂಜಿನಿಯರಿಂಗ್ ಕಾಲೇಜುಗಳ ಪ್ರವೇಶಕ್ಕೆ ಕಾಮೆಡ್-ಕೆ ನಡೆಸಿದ್ದ ಪರೀಕ್ಷೆಯ ಫಲಿತಾಂಶ ಮಂಗಳವಾರ ಪ್ರಕಟಗೊಂಡಿದ್ದು, ಮೊದಲ 10 ರ‍್ಯಾಂಕ್‌ಗಳಲ್ಲಿ ಐದು ಬೆಂಗಳೂರಿನ ಪಾಲಾಗಿವೆ. 7

ಶಾಲಾ ಮಕ್ಕಳಿಗೆ ಶೂ, ಸಾಕ್ಸ್ ಇಲ್ಲ!

ಬೆಂಗಳೂರು: ಈ ಬಾರಿಯೂ ಸರ್ಕಾರಿ ಶಾಲೆಯ ಮಕ್ಕಳಿಗೆ ಸೈಕಲ್, ಶೂ, ಸಾಕ್ಸ್ ವಿತರಣೆ ಇಲ್ಲ. ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಅನುದಾನ ಮೀಸಲಿಡದೇ ಇರುವುದರಿಂದ ಈ ಯೋಜನೆಗಳನ್ನು ಕೈ ಬಿಡಲು ಶಿಕ್ಷಣ ಇಲಾಖೆ ನಿರ್ಧರಿಸಿದೆ. 7

ಟಿ.ವಿ ನಿರೂಪಕ ಬಂಧನ, ಬಿಡುಗಡೆ

ಗಾಜಿಯಾಬಾದ್: ಕಾಂಗ್ರೆಸ್ ನಾಯಕ ರಾಹುಲ್‌ಗಾಂಧಿ ಅವರನ್ನು ಕುರಿತು ತಿರುಚಿದ ವಿಡಿಯೊ ಪ್ರಸಾರ ಮಾಡಿದ ಆರೋಪದಡಿ ಝೀ ನ್ಯೂಸ್ ವಾಹಿನಿ ನಿರೂಪಕ ರೋಹಿತ್ ರಂಜನ್ ಅವರನ್ನು ಬಂಧಿಸಿ, ಬಳಿಕ ಬಿಡುಗಡೆ ಮಾಡಲಾಗಿದೆ. 12

ಮಾತುಕತೆ ನೆಪದಲ್ಲಿ ಆಪ್ತರಿಂದಲೇ ಕೃತ್ಯ

ಚಂದ್ರಶೇಖರ ಗುರೂಜಿ ಹತ್ಯೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಸರಳ ವಾಸ್ತುತಜ್ಞ ಚಂದ್ರಶೇಖರ ಗುರೂಜಿ (57) ಅವರನ್ನು ಇಲ್ಲಿನ ಉಣಕಲ್ ಕ್ರಾಸ್‌ನಲ್ಲಿರುವ ದಿ ಪ್ರೆಸಿಡೆಂಟ್ ಹೋಟೆಲ್‌ನ ರಿಸೆಪ್ಶನ್ ಲಾಬಿಯಲ್ಲಿ ಅವರ ಇಬ್ಬರು ಆಪ್ತರು ಮಂಗಳವಾರ ಮಧ್ಯಾಹ್ನ ಚಾಕುವಿನಿಂದ ಇರಿದು ಹತ್ಯೆ ಮಾಡಿದ್ದಾರೆ.

ಚಂದ್ರಶೇಖರ ಗುರೂಜಿ

ಕಲಘಟಗಿ ತಾಲ್ಲೂಕಿನ ದುಮ್ಮವಾಡದ ಮಹಾಂತೇಶ ಶಿರೂರ ಮತ್ತು ಧಾರವಾಡದ ಮಂಜುನಾಥ ಮರೇವಾಡ ಆರೋಪಿಗಳು. ಇಬ್ಬರನ್ನೂ ಬೆಳಗಾವಿ ಜಿಲ್ಲೆಯ ರಾಮದುರ್ಗದ ಹೊರವಲಯದಲ್ಲಿ ಪೊಲೀಸರು ಬಂಧಿಸಿದ್ದಾರೆ. ಆರೋಪಿಗಳು ಈ ಮೊದಲು ಚಂದ್ರಶೇಖರ್ ಅವರ 'ಸರಳ ಜೀವನ' ಟಿ.ವಿ ಚಾನಲ್‌ನಲ್ಲಿ ಉದ್ಯೋಗಿಗಳಾಗಿದ್ದರು.

ಪ್ರೆಸಿಡೆಂಟ್ ಹೋಟೆಲ್‌ನಲ್ಲಿ ಪ್ರತಿ ಮಂಗಳವಾರ ಗುರೂಜಿ ವಾಸ್ತು ಬಗ್ಗೆ ಸಲಹೆ ಮತ್ತು ಸೂಚನೆಗಳನ್ನು ನೀಡುತ್ತಾರೆ. ಈ ಹಿನ್ನೆಲೆಯಲ್ಲಿ ಅವರು ಪತ್ನಿ ಜೊತೆ ಜುಲೈ 2ರಂದು ಹೋಟೆಲ್‌ನ ಎರಡನೇ ಮಹಡಿಯ 220ನೇ ಕೊಠಡಿಯಲ್ಲಿ ತಂಗಿದ್ದರು. ಬುಧವಾರ ಕೊಠಡಿ ತೆರವುಗೊಳಿಸುವುದಾಗಿ ಹೇಳಿದ್ದರು.


ಹುಬ್ಬಳ್ಳಿಯ ಉಣಕಲ್ ಕ್ರಾಸ್ ಬಳಿಯಿರುವ ದಿ ಪ್ರೆಸಿಡೆಂಟ್ ಹೋಟೆಲ್‌ನ ರಿಸೆಪ್ಶನ್ ಲಾಬಿಯಲ್ಲಿ ಪೊಲೀಸರು ಮಂಗಳವಾರ ಚಂದ್ರಶೇಖರ ಗುರೂಜಿ ಹತ್ಯೆಗೀಡಾದ ಸ್ಥಳವನ್ನು ಪರಿಶೀಲಿಸಿದರು

ಮಹಾಂತೇಶ ಶಿರೂರ

ಮಂಜುನಾಥ ಮರೇವಾಡ

40ಕ್ಕೂ ಹೆಚ್ಚು ಬಾರಿ ಇರಿತ: ಹೋಟೆಲ್‌ನ ರಿಸೆಪ್ಶನ್ ಲಾಬಿ ಬಳಿ ಬಂದ ಮಹಾಂತೇಶ ಶಿರೂರ ಹಾಗೂ ಮಂಜುನಾಥ ಮರೇವಾಡ ಅವರು, ಗುರೂಜಿಗೆ ದೂರವಾಣಿ ಕರೆ ಮಾಡಿ ಕರೆಸಿಕೊಂಡರು. ಸ್ಥಳಕ್ಕೆ ಬಂದ ಗುರೂಜಿ, ಸೋಫಾದಲ್ಲಿ ಕುಳಿತು ಇಬ್ಬರ ಕುಶಲೋಪರಿ ವಿಚಾರಿಸಿದರು.

ಅವರಲ್ಲೊಬ್ಬ ಕಾಲು ಮುಟ್ಟಿ ನಮಸ್ಕರಿಸಿದಾಗ, ಗುರೂಜಿ ಆತನಿಗೆ ಬಾಗಿ ಆಶೀರ್ವದಿಸಿದರು. ಮತ್ತೊಬ್ಬ ಆರೋಪಿ ತನ್ನಲ್ಲಿದ್ದ ಚಾಕುವಿನಿಂದ ಹೊಟ್ಟೆಗೆ ಇರಿದಿದ್ದಾನೆ. ಹಠಾತ್ ದಾಳಿಗೆ ಬೆಚ್ಚಿದ ಗುರೂಜಿ, ಅವರಿಂದ ತಪ್ಪಿಸಿಕೊಳ್ಳಲು ಯತ್ನಿಸಿದ್ದಾರೆ. ಸ್ಥಳದಲ್ಲಿದ್ದ ಹೋಟೆಲ್ ಸಿಬ್ಬಂದಿ ಹಾಗೂ ಇತರ ಗ್ರಾಹಕರು ಭಯದಿಂದ ದೂರಕ್ಕೆ ಸರಿದರು.

ಇಬ್ಬರೂ ಚಂದ್ರಶೇಖರ್ ಅವರನ್ನು ಕೆಳಗೆ ಬೀಳಿಸಿ ಹೊಟ್ಟೆ, ಭುಜ, ತೊಡೆ ಸೇರಿದಂತೆ ದೇಹದ ವಿವಿಧೆಡೆ 40ಕ್ಕೂ ಹೆಚ್ಚು ಬಾರಿ ಇರಿದರು. ಹೋಟೆಲ್ ಸಿಬ್ಬಂದಿ ಹತ್ತಿರ ಬಾರದಂತೆ, ಚಾಕು ತೋರಿಸಿ ಬೆದರಿಸಿದರು. ನಂತರ ಕುತ್ತಿಗೆ ಕೊಯ್ದು ಸ್ಥಳದಿಂದ ಕಾಲ್ಕಿತ್ತರು. ಕೃತ್ಯದ ದೃಶ್ಯವು ಹೋಟೆಲ್‌ನ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿವೆ. ಘಟನೆಗೆ ಸಂಬಂಧಿಸಿದಂತೆ ವಿದ್ಯಾನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

9ನೇ ಪುಟ ನೋಡಿ

ತೆರಿಗೆ ವಿನಾಯಿತಿ ಕಡಿತದ ಸೂಚನೆ ನೀಡಿದ ಬಜಾಜ್

ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆಯಿಂದ (ಜಿಎಸ್‌ಟಿ) ವಿನಾಯಿತಿ ಪಡೆದಿರುವ ಸರಕು ಹಾಗೂ ಸೇವೆಗಳ ಸಂಖ್ಯೆಯನ್ನು ಇನ್ನಷ್ಟು ಕಡಿಮೆ ಮಾಡಲು ಅವಕಾಶಗಳು ಇವೆ ಎಂದು ಕೇಂದ್ರ ರೆವಿನ್ಯು ಕಾರ್ಯದರ್ಶಿ ತರುಣ್ ಬಜಾಜ್ ಹೇಳಿದ್ದಾರೆ.

ಜಿಎಸ್‌ಟಿ ವ್ಯವಸ್ಥೆಯಲ್ಲಿ ಕೆಲವು ಲೋಪಗಳನ್ನು ಇನ್ನು ಎರಡರಿಂದ ಮೂರು ವರ್ಷಗಳಲ್ಲಿ ಸರಿಪಡಿಸಲಾಗುತ್ತದೆ ಎಂದೂ ತಿಳಿಸಿದ್ದಾರೆ.

ಈಚಿನ ತಿಂಗಳುಗಳಲ್ಲಿ ಜಿಎಸ್‌ಟಿ ಸಂಗ್ರಹ ಉತ್ತಮವಾಗಿ ಆಗುತ್ತಿರುವುದಕ್ಕೆ ಕಾರಣ ಹಣದುಬ್ಬರ ಮಾತ್ರವೇ ಅಲ್ಲ. ಆರ್ಥಿಕ ಚಟುವಟಿಕೆಗಳು ಸುಧಾರಿಸಿರುವುದು, ಜಿಎಸ್‌ಟಿ ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತಂದಿರುವುದರ ಕೊಡುಗೆಯೂ ಇದೆ ಎಂದು ಅವರು ಹೇಳಿದ್ದಾರೆ.

13ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ



ನಿವೃತ್ತ ನ್ಯಾಯಮೂರ್ತಿಗಳು, ಅಧಿಕಾರಿಗಳ ಟೀಕೆ

'ನೂಪುರ್ ಪ್ರಕರಣ: ಲಕ್ಷ್ಮಣರೇಖೆ ದಾಟಿದ ನ್ಯಾಯಮೂರ್ತಿಗಳು'

ಪ್ರಜಾವಾಣಿ ವಾರ್ತೆ

ನವದೆಹಲಿ: 'ಬಿಜೆಪಿಯ ವಕ್ತಾರೆಯಾಗಿದ್ದ ನೂಪುರ್ ಶರ್ಮಾ ಪ್ರಕರಣಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್‌ನ ದ್ವಿಸದಸ್ಯ ಪೀಠದ ಹೇಳಿಕೆಯನ್ನು ದುರದೃಷ್ಟಕರ ಹಾಗೂ ಅನಿರೀಕ್ಷಿತ' ಎಂದು ಹೇಳಿರುವ ವಿವಿಧ ಹೈಕೋರ್ಟ್‌ಗಳ 15 ನಿವೃತ್ತ ನ್ಯಾಯಮೂರ್ತಿಗಳು, 77 ನಿವೃತ್ತ ಅಧಿಕಾರಿಗಳು ಹಾಗೂ ಸೇನೆಯ 25 ನಿವೃತ್ತ ಅಧಿಕಾರಿಗಳು, 'ನ್ಯಾಯಮೂರ್ತಿಗಳು ಲಕ್ಷ್ಮಣ ರೇಖೆ ದಾಟಿದ್ದಾರೆ' ಎಂದು ಪ್ರತಿಪಾದಿಸಿದ್ದಾರೆ.

ಈ ಸಂಬಂಧ 117 ಮಂದಿಯ ಪರವಾಗಿ ಮೂರು ಪುಟಗಳ ಹೇಳಿಕೆ ಬಿಡುಗಡೆ ಮಾಡಿರುವ ಕೇರಳ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಪಿ.ಎನ್.ರವೀಂದ್ರನ್ ಹಾಗೂ ಕೇರಳ ಸರ್ಕಾರದ ನಿವೃತ್ತ ಮುಖ್ಯ ಕಾರ್ಯದರ್ಶಿ ಆನಂದ ಬೋಸ್, 'ನ್ಯಾಯಮೂರ್ತಿಗಳ ಹೇಳಿಕೆಯು ದೇಶ ಮತ್ತು ವಿದೇಶಗಳಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿದೆ' ಎಂದು ಹೇಳಿದ್ದಾರೆ.

ಬಾಂಬೆ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಕ್ಷಿತಿಜ್ ವ್ಯಾಸ್, ಗುಜರಾತ್ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎಸ್.ಎಂ.ಸೋನಿ, ರಾಜಸ್ಥಾನ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಆರ್.ಎಸ್. ರಾಥೋಡ್, ಪ್ರಶಾಂತ್ ಅಗರವಾಲ್, ದೆಹಲಿ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎಸ್.ಎನ್. ಢೀಂಗ್ರಾ, ನಿವೃತ್ತ ಐಎಎಸ್ ಅಧಿಕಾರಿಗಳಾದ ಆರ್.ಎಸ್.ಗೋಪಾಲನ್, ಎಸ್. ಕೃಷ್ಣಕುಮಾರ್, ಮಾಜಿ ರಾಯಭಾರಿ ನಿರಂಜನ್ ದೇಸಾಯಿ, ನಿವೃತ್ತ ಡಿಜಿಪಿಗಳಾದ ಎಸ್.ಪಿ.ವೈದ್, ಬಿ.ಎಲ್. ವೋಹ್ರಾ, ನಿವೃತ್ತ ಲೆಫ್ಟಿನೆಂಟ್ ಜನರಲ್ ವಿ.ಕೆ.ಚತುರ್ವೇದಿ, ಏರ್ ಮಾರ್ಷಲ್ (ನಿವೃತ್ತ) ಎಸ್.ಪಿ.ಸಿಂಗ್ ಅವರೂ ಹೇಳಿಕೆಗೆ ಸಹಿ ಹಾಕಿದ್ದಾರೆ.

5ನೇ ಪುಟ ನೋಡಿ

ಅಟಾರ್ನಿ ಜನರಲ್‌ಗೆ ಪತ್ರ

ನವದೆಹಲಿ: ನೂಪುರ್ ಶರ್ಮಾ ಅವರನ್ನು ತರಾಟೆಗೆ ತೆಗೆದುಕೊಂಡಿರುವ ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳನ್ನು ಟೀಕಿಸಿರುವ ದೆಹಲಿ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎಸ್.ಎನ್. ಢೀಂಗ್ರಾ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಅಟಾರ್ನಿ ಜನರಲ್ ಕೆ.ಕೆ.ವೇಣುಗೋಪಾಲ್ ಅವರಿಗೆ ಮನವಿ ಸಲ್ಲಿಸಲಾಗಿದೆ.

ನ್ಯಾಯಮೂರ್ತಿಗಳ ಅಭಿಪ್ರಾಯ ಕಾನೂನುಬಾಹಿರ ಹಾಗೂ ಬೇಜವಾಬ್ದಾರಿತನದಿಂದ ಕೂಡಿದೆ ಎಂದು ಢೀಂಗ್ರಾ ಟೀಕೆ ಮಾಡಿದ್ದರು. ಈ ಬಗ್ಗೆ ಅಟಾರ್ನಿ ಜನರಲ್ ಅವರಿಗೆ ಪತ್ರ ಬರೆದಿರುವ ವಕೀಲರಾದ ಸಿ.ಆರ್. ಜಯಾ ಸುಕಿನ್ ಅವರು, ಮಾಜಿ ಹೆಚ್ಚುವರಿ ಸಾಲಿಸಿಟರ್ ಜನರಲ್ ಅಮನ್ ಲೇಖಿ ಹಾಗೂ ಹಿರಿಯ ವಕೀಲ ಕೆ. ರಾಮ ಕುಮಾರ್ ಅವರ ವಿರುದ್ಧ ಕ್ರಮಕ್ಕೂ ಆಗ್ರಹಿಸಿದ್ದಾರೆ. ಈ ಇಬ್ಬರೂ ನ್ಯಾಯಮೂರ್ತಿಗಳ ಅಭಿಪ್ರಾಯಗಳನ್ನು ಪ್ರಶ್ನಿಸಿದ್ದರು. 'ಈ ಮೂವರು ಸುಪ್ರೀಂ ಕೋರ್ಟ್‌ಗೆ ಅಗೌರವ ತೋರಿದ್ದಾರೆ. ನ್ಯಾಯಾಂಗಕ್ಕೆ ನಿಂದನೆ ಮಾಡಿದ್ದಾರೆ. ಹಾಗಾಗಿ, ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಪತ್ರದಲ್ಲಿ ಕೋರಿದ್ದಾರೆ.

|| JAI SRI GURUDEV ||

BGSKH Education Trust (R.) – A unit of Sri Adichunchanagiri Shikshana Trust(R.)

BGS College of Engineering and Technology (BGSCET)

(Subject to: Approval from AICTE, VTU and Government of Karnataka)
Adj. to Mahalakshmi Metro Station, Mahalakshmipuram, Bengaluru - 560 086

APPLICATIONS ARE INVITED FOR THE POSTS OF

PRINCIPAL
A Visionary, Competent, Self-Driven, Passionate and Dynamic leader having Strong Verbal & Written Communication skills along with effective Public Speaking ability and Proficient in managing Institution operations with a proven track record of Success.
Education: BE/B Tech and ME/ MTech in IT related branch with First Class or equivalent either in BE/B Tech or ME/M Tech and PhD shall be from a recognized University preferably in IT related areas. Post PhD publications and guiding PhD Students is highly desirable.
Experience: Minimum of 15 years in Teaching / Research / Industry out of which at least 5 years shall be at the level of Professor preferably 3 years of administrative experience as Dean / Vice Principal / Principal. Flair for Management and Leadership is essential.

PROFESSORS / ASSOCIATE PROFESSORS / ASSISTANT PROFESSORS
in CSE, ISE, AIML, AIDS, CSD, ECE, EEE, ME, CV, Phy, Chem, Maths, Kannada and English (Qualification & Experience as per AICTE norms)
LIBRARIAN
(M.Lib / PhD in library Sciences with 5 years of experience),
PED (M.PEd)
SYSTEM ANALYST / PROGRAMMER / INSTRUCTOR / ASSISTANT INSTRUCTOR / MECHANIC / HELPER
(B.E. / B.Tech / Diploma / ITI in CSE/ISE/ECE/ EEE / ME with 5 to 10 years of experience)
ACCOUNTANT (M.Com/ B.Com with ERP)
SDC (M.A. or B.Sc / B.A.
ATTENDER (SSLC/PUC)

Interested, eligible and competent candidates meeting the above requirements may apply online at https://forms.gle/wCN8icu4LEiT5xrK8 by paying application fee of Rs.300/- thru online payment to : Canara Bank A/C Name : President BGSCET, A/C No.: 110045517000, IFSC : CNRB0001146, Vijayanagar Branch, Bengaluru and also send your detailed CV along with necessary Academic Credentials / Testimonials and two recent passport-size photographs in a sealed envelope superscribed with the post applied for within 10 days from the date of this notification addressed to The Director, BGSCET.

Note :
- Salary will be as per AICTE / State Scales
- Candidates with Ph.D from recognized Institutions are preferable.
- The Institution reserves the rights of Processing Applications (Accept/Reject).
- Only eligible and short-listed candidates will be intimated for selection process.

About BGS College of Engineering and Technology (BGSCET)

- A new Engineering College with 5 market-demanding/ employable / emerging new-age UG courses in Engineering & Technology programme:
  Computer Science & Engg. | Information Science & Engg.| Artificial Intelligence & Machine Learning | Artificial Intelligence & Data Science | Computer Science & Design
- Blessed by his holiness Jagadguru Padmabhushan Sri Sri Sri Dr. Balagangadharanatha Maha Swamiji.
- Driven by Passionate Global Leaders, Industry & Academia Experts and Renowned Administrators.
- Established by BGSKH Education Trust(R.), backed by the rich heritage of 50-year-old Sri Adichunchanagiri Group of Educational Institutions, a leading group known amongst the top educational institutions in Karnataka under the ambit of Sri Adichunchanagiri Mahasamsthana Math, a well-known philanthropic and spiritual organization in Karnataka.

In its journey of commitments to the nation for more than 5 decades, the group runs 515 educational institutions catering 150000+ students across the country imparting quality education from Primary to Professional Courses with a special focus on young people of semi-urban and rural areas.
- All our Institutions have achieved a mark of excellence in their respective areas over the years under the able leadership & guidance of his holiness Jagadguru Sri Sri Sri Dr. Nirmalanandanatha Maha Swamiji, President, Sri Adichunchanagiri Shikshana Trust.
- The Institute has a quest for being an out standing centre for learning and development of human resource, conducive to the fast changing national and international situations adhering to consistent policy of recruiting highly qualified teachers.

Director, BGSCET

Application

ADMISSIONS OPEN FOR 2022-23
CONTACT : 9731292555 / 9901653915
www.bgscet.org
Address : CA Site No. 6 & 7, 3rd Main, Pipeline Road, 2nd Phase, 2nd Stage, Mahalakshmipuram Adj. Mahalakshmi Metro Station, West of Chord Road, Bengaluru - 560 086, Karnataka.

Admission

ಯುಎಪಿಎ ಇತರರಿಗೂ ಅನ್ವಯ: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾನೂನು ಬಾಹಿರ ಚಟುವಟಿಕೆ ತಡೆ ಕಾಯ್ದೆ (ಯುಎಪಿಎ) ಅಡಿಯಲ್ಲಿ ನಿಷೇಧಿತ ಭಯೋತ್ಪಾದಕ ಸಂಘಟನೆಗಳ ಸದಸ್ಯರನ್ನು ಮಾತ್ರ ವಿಚಾರಣೆ ನಡೆಸಬೇಕೆಂದೇನೂ ಇಲ್ಲ; ಭಯೋತ್ಪಾದಕ ಕೃತ್ಯವೆಸಗಿದ ಯಾವುದೇ ವ್ಯಕ್ತಿಯನ್ನೂ ವಿಚಾರಣೆಗೆ ಒಳಪಡಿಸಬಹುದು' ಎಂದು ಹೈಕೋರ್ಟ್ ಆದೇಶಿಸಿದೆ.

ಆರ್‌ಎಸ್‌ಎಸ್ ಕಾರ್ಯಕರ್ತ ರುದ್ರೇಶ್ ಕೊಲೆ ಪ್ರಕರಣದಲ್ಲಿ ಜಾಮೀನು ಕೋರಿ ಆರೋಪಿಗಳಾದ ಇರ್ಫಾನ್ ಪಾಷಾ ಹಾಗೂ ಮೊಹಮ್ಮದ್ ಮುಜೀಬ್ ಉಲ್ಲಾ ಸಲ್ಲಿಸಿದ್ದ ಕ್ರಿಮಿನಲ್ ಮೇಲ್ಮನವಿಗಳನ್ನು ವಜಾಗೊಳಿಸಿರುವ ಹೈಕೋರ್ಟ್ ಈ ಮಹತ್ವದ ಅಭಿಪ್ರಾಯ ವ್ಯಕ್ತಪಡಿಸಿದೆ.

ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೆ. ಸೋಮಶೇಖರ್ ಹಾಗೂ ನ್ಯಾಯಮೂರ್ತಿ ಶಿವಶಂಕರ ಅಮರಣ್ಣವರ ಅವರಿದ್ದ ವಿಭಾಗೀಯ ನ್ಯಾಯಪೀಠ, 'ಎನ್‌ಐಎ ವಿಶೇಷ ಕೋರ್ಟ್ ಆದೇಶ ರದ್ದುಪಡಿಸಲು ಯಾವುದೇ ಕಾರಣಗಳಿಲ್ಲ' ಎಂದು ಹೇಳಿದೆ.

'ಯುಎಪಿಎ ಕಲಂ 15ರಲ್ಲಿ ವ್ಯಾಖ್ಯಾನಿಸಲಾಗಿರುವ ಭಯೋತ್ಪಾದಕ ಕೃತ್ಯಗಳಲ್ಲಿ ಯಾವುದೇ ವ್ಯಕ್ತಿ ತನ್ನನ್ನು ತೊಡಗಿಸಿಕೊಂಡಿದ್ದರೆ, ಅವರನ್ನು ವಿಚಾರಣೆ ನಡೆಸಬಹುದು. ಆ ವ್ಯಕ್ತಿ ನಿಷೇಧಿತ ಭಯೋತ್ಪಾದಕ ಸಂಘಟನೆಯ ಸದಸ್ಯನೇ ಆಗಿರಬೇಕೆಂದೇನೂ ಇಲ್ಲ' ಎಂದೂ ತಿಳಿಸಿದೆ. ಪ್ರಕರಣದ ವಿಚಾರಣೆಯನ್ನು ಶೀಘ್ರ ಪೂರ್ಣಗೊಳಿಸುವಂತೆ ಎನ್‌ಐಎ ವಿಶೇಷ ನ್ಯಾಯಾಲಯಕ್ಕೆ ನಿರ್ದೇಶಿಸಲಾಗಿದೆ. ಎನ್‌ಐಎ ಪರ ಪಿ.ಪ್ರಸನ್ನ ಕುಮಾರ್ ವಾದ ಮಂಡಿಸಿದ್ದರು.

ತಕ್ಷಣ ಮನೆ ಕಟ್ಟಲು ಮುಂದಾಗುವ ನಿವೇಶನದಾರರಿಗೆ ಬಿಡಿಎ ಷರತ್ತು

ಮೂಲಸೌಕರ್ಯಕ್ಕೆ ನಿವೇಶನದಾರರೇ ಹೊಣೆ!

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: 'ಒಳಚರಂಡಿ, ಕುಡಿಯುವ ನೀರು, ವಿದ್ಯುತ್ ಸಂಪರ್ಕ ನಿಮ್ಮದೇ ಜವಾಬ್ದಾರಿ, ಮನೆ ನಿರ್ಮಾಣಕ್ಕೆ ನಾವು ಅನುಮತಿ ಕೊಡುತ್ತೇವೆ...' ಇದು ನಾಡಪ್ರಭು ಕೆಂಪೇಗೌಡ ಬಡಾವಣೆ ನಿವೇಶನದಾರರಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ(ಬಿಡಿಎ) ನೀಡಿರುವ 'ಆಫರ್'!

ಬಿಡಿಎ ಅಭಿವೃದ್ಧಿಪಡಿಸಿ ನಿವೇಶನ ಹಂಚಿಕೆ ಮಾಡಿ 6 ವರ್ಷಗಳೇ ಕಳೆದಿವೆ. ಮೂಲಸೌಕರ್ಯ ಇಲ್ಲದೆ ಮನೆ ಕಟ್ಟಲು ಸಾಧ್ಯವಾಗದೆ ನಿವೇಶನ ಖರೀದಿ ಮಾಡಿದವರು ಪರದಾಡುತ್ತಿದ್ದಾರೆ. ಮತ್ತೊಂದೆಡೆ ಮೊದಲನೇ ಹಂತದ ಎರಡನೇ ಬ್ಲಾಕ್‌ನಲ್ಲಿ ನೀರಿನ ಒರತೆ ಹೆಚ್ಚಾಗಿ ನಿವೇಶನಗಳು ಕೆಸರು ಗದ್ದೆಗಳಾಗಿ ಮಾರ್ಪಟ್ಟಿವೆ.

23 ಸಾವಿರ ನಿವೇಶನಗಳನ್ನು ಬಿಡಿಎ ಅಭಿವೃದ್ಧಿಪಡಿಸಿದ್ದು, ಅದರಲ್ಲಿ ಒಬ್ಬರು ಮಾತ್ರ ಧೈರ್ಯ ಮಾಡಿ ಮನೆ ಕಟ್ಟಿದ್ದಾರೆ. ಕಟ್ಟಿರುವ ಮನೆಗೆ ವಿದ್ಯುತ್ ಸಂಪರ್ಕ, ನೀರಿನ ವ್ಯವಸ್ಥೆ, ಶೌಚ ನೀರು ಹರಿಯುವ ವ್ಯವಸ್ಥೆ ಇಲ್ಲದೆ ಪರದಾಡುತ್ತಿದ್ದಾರೆ. ಸಾಲ ಮಾಡಿ ಕಟ್ಟಿದ ಮನೆಯಲ್ಲಿ ವಾಸ ಮಾಡಲು ಸಾಧ್ಯವಾಗದೆ ಸಂಕಟ ಅನುಭವಿಸುತ್ತಿದ್ದಾರೆ.

'ಬ್ಯಾಂಕ್‌ನಲ್ಲಿ ಸಹಾಯಕನಾಗಿದ್ದೆ. ನಿವೇಶನ ಖರೀದಿಸಬೇಕೆಂದು ಹತ್ತಾರು ಬಾರಿ ಬಿಡಿಎಗೆ ಅರ್ಜಿ ಸಲ್ಲಿಸಿದ್ದೆ. ಕೊನೆಗೂ ನಿವೇಶನ ಹಂಚಿಕೆ ಆಗಿದೆ. ₹50 ಲಕ್ಷ ಸಾಲ ಮಾಡಿ ಮನೆ ಕಟ್ಟಿದ್ದೇನೆ. ಆದರೆ, ಅದರಲ್ಲಿ ವಾಸ ಮಾಡಲು ಸಾಧ್ಯವಾಗುತ್ತಿಲ್ಲ. ಕನಿಷ್ಠ ವಿದ್ಯುತ್ ಸಂಪರ್ಕವನ್ನಾದರೂ ನೀಡಿದ್ದರೆ ಉಳಿದ ವ್ಯವಸ್ಥೆಗಳನ್ನು ತಾತ್ಕಾಲಿಕವಾಗಿ ಮಾಡಿಕೊಳ್ಳಬಹುದಿತ್ತು' ಎಂದು ಮನೆ ನಿರ್ಮಿಸಿರುವ ನಾಗರಾಜಯ್ಯ ಹೇಳಿದರು.

'ನಿವೇಶನ ಹಂಚಿಕೆ ಮಾಡಿದ ಬಿಡಿಎ ಜನರಿಗೆ ಈ ರೀತಿ ಮೋಸ ಮಾಡಬಾರದಿತ್ತು. ಸಾಲದ ಸುಳಿಗೆ ನಮ್ಮನ್ನು ಸಿಲುಕಿಸಿ ನಮ್ಮ ಬದುಕಿನೊಂದಿಗೆ ಚೆಲ್ಲಾಟವಾಡುತ್ತಿದೆ' ಎಂದು ಬೇಸರ ವ್ಯಕ್ತಪಡಿಸಿದರು.

ಬಿಡಿಎಗೆ ಮನವಿ ಸಲ್ಲಿಸಿ ರೋಸಿಹೋಗಿರುವ ನಿವಾಸಿಗಳು ವಿಧಾನಸಭೆ ದೂರುಗಳ ಸಮಿತಿಗೆ ಮನವಿ ಸಲ್ಲಿಸಿದ್ದರು. ಸಮಿತಿ ಅಧ್ಯಕ್ಷ ಆನಂದ ಮಾಮನಿ ಸೇರಿ ಸಮಿತಿಯ ತಂಡ ಭೇಟಿ ನೀಡಿ ಪರಿಶೀಲನೆ ನಡೆಸಿತ್ತು. ಮನೆ ನಿರ್ಮಿಸಲು ಮುಂದೆ ಬರುವವರಿಗೆ ಆದ್ಯತೆ ಮೇರೆಗೆ ಒಳಚರಂಡಿ, ವಿದ್ಯುತ್ ಸಂಪರ್ಕ, ನೀರಿನ ವ್ಯವಸ್ಥೆ ಮಾಡಿಕೊಡುವುದಾಗಿ ಸಮಿತಿಗೆ ಬಿಡಿಎ ಭರವಸೆ ನೀಡಿತ್ತು.

'ಈ ಭರವಸೆ ಆಧರಿಸಿ ಮನೆ ನಿರ್ಮಾಣ ಯೋಜನೆಗೆ ಅನುಮತಿ ಪಡೆಯಲು ಬಿಡಿಎಗೆ ಅರ್ಜಿ ಸಲ್ಲಿಸಿದರೆ, ಈ ಮೂರು ಸೌಕರ್ಯಗಳನ್ನು (ಒಳಚರಂಡಿ, ವಿದ್ಯುತ್, ನೀರು) ತಾತ್ಕಾಲಿಕವಾಗಿ ಮಾಡಿಕೊಂಡರೆ ಮಾತ್ರ ಅನುಮೋದನೆ ನೀಡಲು ಬಿಡಿಎ ಸಮ್ಮತಿಸುತ್ತಿದೆ. ನಿವೇಶನದಾರರು ನ್ಯಾಯಾಲಯದ ಮೊರೆ ಹೋಗಬಾರದೆಂಬ ಕಾರಣಕ್ಕೆ ಪ್ರಮಾಣ ಪತ್ರವನ್ನೂ ಪಡೆದುಕೊಳ್ಳುತ್ತಿದೆ' ಎಂದು ನಿವಾಸಿಗಳು ಆರೋಪಿಸಿದ್ದಾರೆ.

ಈ ಸಂಬಂಧ ಬಿಡಿಎ ಪ್ರತಿಕ್ರಿಯೆ ಪಡೆಯಲು ಸಂಬಂಧಪಟ್ಟ ಅಧಿಕಾರಿಗಳನ್ನು ಸಂಪರ್ಕಿಸಲು ಪ್ರಯತ್ನಿಸಲಾಯಿತು. ಆದರೆ, ಅವರು ಕರೆ ಸ್ವೀಕರಿಸಲಿಲ್ಲ.

ಕೆಂಪೇಗೌಡ ಬಡಾವಣೆಯ ದೃಶ್ಯ

ತಿಮ್ಮಕ್ಕಗೂ ಇದೇ ಬಡಾವಣೆಯಲ್ಲಿ ನಿವೇಶನ

ಮೂಲಸೌಕರ್ಯ ಇಲ್ಲದ ಈ ಬಡಾವಣೆಯಲ್ಲೇ ಸಾಲು ಮರದ ತಿಮ್ಮಕ್ಕ ಅವರಿಗೆ ಇತ್ತೀಚೆಗೆ ನಿವೇಶನವನ್ನು ಬಿಡಿಎ ಹಂಚಿಕೆ ಮಾಡಿದೆ.

'ಬ್ಲಾಕ್ 7ರಲ್ಲಿ 5739 ಸಂಖ್ಯೆಯ ನಿವೇಶನವನ್ನು ತಿಮ್ಮಕ್ಕ ಅವರಿಗೆ ವಿತರಿಸಲಾಗಿದೆ. ಮೊದಲೇ ಮೂಲಸೌಕರ್ಯ ಇಲ್ಲ. ಬಡಾವಣೆಯ ಅಂಚಿನಲ್ಲಿರುವುದರಿಂದ ಸದ್ಯಕ್ಕೆ ಅವರು ಮನೆ ಕಟ್ಟುವ ಕನಸು ಕಾಣುವುದು ಕಷ್ಟ' ಎಂದು ಸ್ಥಳೀಯರು ಹೇಳುತ್ತಾರೆ.

'ಹೆಚ್ಚುವರಿ ಹೊರೆ ಬಿಡಿಎ ಭರಿಸಬೇಕು'

'ತಮ್ಮ ನಿವೇಶನ ಇರುವ ಜಾಗಕ್ಕೆ ವಿದ್ಯುತ್ ಸಂಪರ್ಕ ಪಡೆಯಬೇಕೆಂದರೆ ಕಂಬದ ವ್ಯವಸ್ಥೆಗಳನ್ನು ನಿವೇಶನದಾರರೇ ಮಾಡಿಕೊಳ್ಳಬೇಕು. ಅದಕ್ಕೆ ತಗಲುವ ವೆಚ್ಚ ಕೊಡುವವರು ಯಾರು' ಎಂದು ನಾಡಪ್ರಭು ಕೆಂಪೇಗೌಡ ಬಡಾವಣೆ ಮುಕ್ತ ವೇದಿಕೆ ಪ್ರಶ್ನಿಸಿದೆ.

'ನೀರು ಮತ್ತು ಒಳಚರಂಡಿ ವ್ಯವಸ್ಥೆ ಕಲ್ಪಿಸಿಕೊಳ್ಳಬೇಕೆಂದರೆ ಇನ್ನಷ್ಟು ದುಬಾರಿಯಾಗಲಿದೆ. ಮೂಲಸೌಕರ್ಯ ನೀಡದೆ ಸತಾಯಿಸುತ್ತಿರುವ ಬಿಡಿಎ, ಈ ಹೆಚ್ಚುವರಿ ಹೊರೆಯನ್ನು ಭರಿಸಿಕೊಡಬೇಕು. ಈ ಸಂಬಂಧ ಲಿಖಿತ ಭರವಸೆ ನೀಡಿದರೆ ಮನೆ ಕಟ್ಟಿಕೊಳ್ಳಲು ಮುಂದಾಗುತ್ತೇವೆ' ಎಂದು ವೇದಿಕೆ ತಿಳಿಸಿದೆ. ಈ ಸಂಬಂಧ ಪತ್ರವನ್ನೂ ಬಿಡಿಎಗೆ ಸಲ್ಲಿಸಿದೆ.

ಸುದ್ದಿ 2 ನಿಮಿಷ

ಸೀಮಂತ್‌ಕುಮಾರ್ ಸಿಂಗ್ ಬದಲಾವಣೆಗೆ ಆಗ್ರಹ

ಬೆಂಗಳೂರು: ಐಪಿಎಸ್ ಅಧಿಕಾರಿ ಸೀಮಂತ್‌ಕುಮಾರ್ ಸಿಂಗ್ ವಿರುದ್ಧ ಬಳ್ಳಾರಿ ಗಣಿ ಅಕ್ರಮಗಳಿಗೆ ಸಹಕರಿಸಿದ ಆರೋಪವಿದ್ದು, ಅವರನ್ನು ಭ್ರಷ್ಟಾಚಾರ ನಿಗ್ರಹ ದಳದ(ಎಸಿಬಿ) ಎಡಿಜಿಪಿ ಸ್ಥಾನದಿಂದ ಬದಲಾವಣೆ ಮಾಡಬೇಕು ಎಂದು ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ (ಕೆಆರ್‌ಎಸ್) ಆಗ್ರಹಿಸಿದೆ.

'ಎಸಿಬಿ ವಿರುದ್ಧವೇ ಹೈಕೋರ್ಟ್ ನ್ಯಾಯಮೂರ್ತಿ ಎಚ್.ಪಿ.ಸಂದೇಶ್ ಕಿಡಿ ಕಾರಿದ್ದು, ಅವರನ್ನು ವರ್ಗಾವಣೆ ಮಾಡಿಸುವಷ್ಟು ಭ್ರಷ್ಟ ಸರ್ಕಾರ ಇರುವುದಕ್ಕೆ ಬೇಸರ ವ್ಯಕ್ತಪಡಿಸಿದ್ದಾರೆ. [illegible] ನ್ಯಾಯಮೂರ್ತಿಗಳನ್ನು ಬೇರೆ ರಾಜ್ಯಕ್ಕೆ ವರ್ಗಾವಣೆ ಮಾಡಿರುವ ಉದಾಹರಣೆಗಳೂ ಇವೆ' ಎಂದು ಕೆಆರ್‌ಎಸ್ ಪಕ್ಷದ ಅಧ್ಯಕ್ಷ ರವಿಕೃಷ್ಣ ರೆಡ್ಡಿ ತಿಳಿಸಿದ್ದಾರೆ.

'ಪ್ರಾಮಾಣಿಕ ನ್ಯಾಯಮೂರ್ತಿಗಳನ್ನು ವರ್ಗಾವಣೆ ಮಾಡಿದರೆ ಅಂತಿಮವಾಗಿ ರಾಜ್ಯದ ಜನತೆ ನಷ್ಟವಾಗಲಿದೆ. ಈ ರೀತಿ ಆಗದಂತೆ ನೋಡಿಕೊಳ್ಳುವುದು ಸರ್ಕಾರದ ಜವಾಬ್ದಾರಿ' ಎಂದಿದ್ದಾರೆ.

'ಕಳಂಕಿತ ವ್ಯಕ್ತಿಯೊಬ್ಬರು ಎಸಿಬಿ ಮುಖ್ಯಸ್ಥರಾಗಿರುವುದು ಅಕ್ಷಮ್ಯ ಮತ್ತು ನಾಚಿಕೆಗೇಡು. ಸೀಮಂತ್‌ಕುಮಾರ್ ಸಿಂಗ್ ಅವರನ್ನು ಎಸಿಬಿಯಿಂದ ವರ್ಗಾವಣೆ ಮಾಡಬೇಕು' ಎಂದು ಆಗ್ರಹಿಸಿದ್ದಾರೆ.

ಐಎಎಸ್ ಅಧಿಕಾರಿಗಳ ಸಂಘದ ಕಟ್ಟಡ ಒಡೆಯಲು ಒತ್ತಾಯ

ಬೆಂಗಳೂರು: ನಕ್ಷೆ ಮಂಜೂರಾತಿ ಪಡೆಯದೆ ಇನ್‌ಫ್ಯಾಂಟ್ರಿ ರಸ್ತೆಯಲ್ಲಿ ಐಎಎಸ್ ಅಧಿಕಾರಿಗಳ ಸಂಘ ಕಟ್ಟಿರುವ ಕಟ್ಟಡ ಒಡೆಯುವಂತೆ ಸಾಮಾಜಿಕ ಕಾರ್ಯಕರ್ತ ಟಿ.ನರಸಿಂಹಮೂರ್ತಿ ಬಿಬಿಎಂಪಿ ಮುಖ್ಯ ಆಯುಕ್ತರಿಗೆ ದೂರು ನೀಡಿದ್ದಾರೆ.

'ಮಾಹಿತಿ ಹಕ್ಕು ಕಾಯ್ದೆ ಅಡಿ ಬಿಬಿಎಂಪಿ ಅಧಿಕಾರಿಗಳೇ ನೀಡಿರುವ ಮಾಹಿತಿ ಪ್ರಕಾರ, ಐಎಎಸ್ ಅಧಿಕಾರಿಗಳ ಸಂಘದ ಕಟ್ಟಡಕ್ಕೆ ನಕ್ಷೆ ಮಂಜೂರಾತಿ ಅಥವಾ ಕಾಮಗಾರಿ ಆರಂಭಿಕ ಪ್ರಮಾಣಪತ್ರವನ್ನು(ಸಿ.ಸಿ) ಪಾಲಿಕೆ ನೀಡಿಲ್ಲ. ಆದರೆ, ಕಾನೂನುಬಾಹಿರವಾಗಿ ನಿರ್ಮಿಸುವ ಕಟ್ಟಡದ ಬಗ್ಗೆ ಯಾವುದೇ ಕ್ರಮ ಕೈಗೊಂಡಿಲ್ಲ' ಎಂದು ದೂರಿದ್ದಾರೆ.

'ನಕ್ಷೆ ಉಲ್ಲಂಘಿಸಿ ಬಡವರು ಕಟ್ಟಿದ ಮನೆಗಳನ್ನು ಬಿಬಿಎಂಪಿ ಮುಲಾಜಿಲ್ಲದೆ ತೆರವುಗೊಳಿಸುತ್ತದೆ. ಐಎಎಸ್ ಅಧಿಕಾರಿಗಳೇ ಕಾನೂನು ಉಲ್ಲಂಘಿಸಿದರೆ ಅವರ ವಿರುದ್ಧ ಕ್ರಮ ಕೈಗೊಳ್ಳಲು ಹಿಂಜರಿಕೆ ಏಕೆ' ಎಂದು ಪ್ರಶ್ನಿಸಿದ್ದಾರೆ.

'ಕಾನೂನುಬಾಹಿರ ಕಟ್ಟಡವನ್ನು ಕೂಡಲೇ ತೆರವುಗೊಳಿಸಬೇಕು ಮತ್ತು ಕಟ್ಟಡ ಕಟ್ಟಿದವರ ವಿರುದ್ಧವೂ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿದ್ದಾರೆ. 'ಬಿಬಿಎಂಪಿ ಮುಖ್ಯ ಆಯುಕ್ತರು, ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಮುಖ್ಯಮಂತ್ರಿ, ರಾಜ್ಯಪಾಲರು, ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಅವರಿಗೂ ದೂರಿನ ಪ್ರತಿ ಸಲ್ಲಿಸಲಾಗಿದೆ' ಎಂದು ನರಸಿಂಹಮೂರ್ತಿ ತಿಳಿಸಿದರು.

PUBLIC NOTICE

The General Public is hereby informed that my clients 1) **Smt. RADHA.M**, aged about 51 years, W/o. Sri. Y. Nagarajan and 2) Smt. SHASHIKALA. N, Aged about 33 years, W/o. Sri. Vinoothan.S.M, both residing at No.33, 3rd Cross, 13th Main, Lakkasandra, Bangalore – 560030 are intending to purchase the below mentioned Schedule of Property from its owner **Sri. ABHISHEK JAIN KANTHILAL @ Sri. K. VARUN KUMAR**, Aged about 24 years, S/o. Sri. Kanthilal Jain, residing at Flat No.313, Wilson Vintage Apartment, BTS Main Road, Wilson Garden, Bangalore – 560027.

If anybody is having any objection/s, claim/s, dispute/s, interest, for the above intended sale transaction he / she / they may contact the undersigned with the documentary proof subsisting his / her / their objection/s, claim/s, details of dispute/s, interest, within **15 (fifteen) days** from the date of this News paper publication, failing which my clients will proceed to complete the sale transaction with the above mentioned owner **Sri. ABHISHEK JAIN KANTHILAL @ Sri. K. VARUN KUMAR**, as if there are no third party objection/s, claim/s, dispute/s, interest and thereafter no objection/s, claim/s, dispute/s, interest will be entertained.

SCHEDULE OF PROPERTY

All that piece and parcel of the house property bearing No.48, New No.43/2, Later No.4/2, (Facing on the Eastern side), situated at Lakkasandra, 4th Cross, Bangalore – 560030, within the corporation limits Division No.55, present BBMP PID No.62-42-4/2, measuring East to West 20 feet and North to South 30 feet and bounded on the : East by: 5 x 30 feet Common passage and Private Property, West by: Retained Portion of Property No.43/4, North by: Retained Portion of Property No.43/4 and South by: Road, together with building standing thereon, consisting of Ground, First and Partly Second Floor.

Dattatreya Shankar Joshi, Advocate
No.4/4, 1st Floor, 7th Cross, Opp. Police Station, Wilson Garden, Bangalore-27.
Mobile : 9845339493 / 8310604347

ಫ್ರೆಂಚ್ ಭಾಷಾ ವಿಷಯದಲ್ಲಿ ಬಿ.ಎ ಆನರ್ಸ್

ಬೆಂಗಳೂರು: ಬೆಂಗಳೂರು ನಗರ ವಿಶ್ವವಿದ್ಯಾಲಯದ ಜಾಗತಿಕ ಭಾಷೆಗಳ ಕೇಂದ್ರ ಮೊದಲ ಬಾರಿಗೆ ಎನ್‌ಇಪಿ ಅಡಿಯಲ್ಲಿ ಫ್ರೆಂಚ್ ಭಾಷಾ ವಿಷಯದಲ್ಲಿ ಬಿ.ಎ (ಬೇಸಿಕ್/ಆನರ್ಸ್) ಕಾರ್ಯಕ್ರಮ ಪರಿಚಯಿಸುತ್ತಿದೆ.

ಸೆಂಟ್ರಲ್ ಕಾಲೇಜು ಕ್ಯಾಂಪಸ್‌ನ ಜಾಗತಿಕ ಭಾಷೆಗಳ ಕೇಂದ್ರ, ಮಲ್ಲೇಶ್ವರದ ಬಹು-ಶಿಸ್ತಿನ ಮಹಿಳಾ ಸಂಯೋಜಿತ ಕಾಲೇಜಿನಲ್ಲಿ ಪ್ರವೇಶ ನೀಡಲಾಗುತ್ತಿದೆ. ದ್ವಿತೀಯ ಪಿಯು ಅಥವಾ 12ನೇ ತರಗತಿ ಪೂರ್ಣಗೊಳಿಸಿದ ಎಲ್ಲಾ ವಿದ್ಯಾರ್ಥಿಗಳು ತಮ್ಮ ಆಯ್ಕೆಯ ಇನ್ನೊಂದು ವಿಷಯದ ಜತೆಗೆ ಯಾವುದೇ ವಿಭಾಗದ ಫ್ರೆಂಚ್ ಭಾಷೆಯನ್ನು ಆಯ್ಕೆ ಮಾಡಬಹುದು.

ವಿವಿ ವೆಬ್‌ಸೈಟ್ www.bcu.ac.inನಿಂದ ಹೆಚ್ಚಿನ ವಿವರ ಪಡೆಯಬಹುದು ಅಥವಾ ಡಾ. ಕೃಷ್ಣನ್ ಅವರನ್ನು 9353251761, 080-29572019 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಕರ್ನಾಟಕ ರಾಜ್ಯ ಸರ್ಕಾರಿ ಪಡಿತರ ವಿತರಕರ ಸಂಘ ಒತ್ತಾಯ

'₹440ಕ್ಕೆ ಕಮಿಷನ್ ಹೆಚ್ಚಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಡಿತರ ವಿತರಕರು ವಿತರಿಸುವ ಆಹಾರಧಾನ್ಯಕ್ಕೆ ತಲಾ ಒಂದು ಕ್ವಿಂಟಲ್‌ಗೆ ನೀಡುತ್ತಿರುವ ಕಮಿಷನ್ ಅನ್ನು ₹440ಕ್ಕೆ ಹೆಚ್ಚಿಸಬೇಕು ಎಂದು ಕರ್ನಾಟಕ ರಾಜ್ಯ ಸರ್ಕಾರಿ ಪಡಿತರ ವಿತರಕರ ಸಂಘ ಆಗ್ರಹಿಸಿದೆ.

ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸಿದ ಸಾವಿರಾರು ಪಡಿತರ ವಿತರಕರು ಮಂಗಳವಾರ ಫ್ರೀಡಂ ಪಾರ್ಕ್‌ನಲ್ಲಿ ನಡೆದ ಬೃಹತ್ ಪ್ರತಿಭಟನೆಯಲ್ಲಿ ಪಾಲ್ಗೊಂಡರು. ಕೇಂದ್ರ ಹಣಕಾಸು ಸಚಿವಾಲಯ ರಚಿಸಿದ ವರದಿ ಜಾರಿಗೊಳಿಸುವಂತೆ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಬೇಕು ಎಂದು ರಾಜ್ಯ ಸರ್ಕಾರವನ್ನು ಒತ್ತಾಯಿಸಿದರು.

ದೇಶದಾದ್ಯಂತ ಪಡಿತರ ಅಂಗಡಿಗಳಲ್ಲಿ ಆಹಾರ ಧಾನ್ಯಗಳ ಜೊತೆಗೆ ದಿನಸಿ ವಸ್ತುಗಳು, ಎಲ್‌.ಪಿ.ಜಿ ಸಿಲಿಂಡರ್‌ಗಳನ್ನು ಮಾರಾಟ ಮಾಡಲು ಅವಕಾಶ ಕಲ್ಪಿಸಬೇಕು. ಇದರಿಂದ ಸಾರ್ವಜನಿಕರಿಗೆ ಒಂದಡೆ ಹೆಚ್ಚಿನ ಸೌಲಭ್ಯ ಸಿಗಲಿದೆ.

ಕೋವಿಡ್ ಸೋಂಕಿನಿಂದ ಮೃತಪಟ್ಟ ಪಡಿತರ ಮಾರಾಟಗಾರರಿಗೆ ಪರಿಹಾರ ಘೋಷಿಸಬೇಕು ಎಂದು ಸಂಘದ ರಾಜ್ಯ ಘಟಕದ ಅಧ್ಯಕ್ಷ ಟಿ.ಕೃಷ್ಣಪ್ಪ ಆಗ್ರಹಿಸಿದರು.

'ರಾಜ್ಯದಾದ್ಯಂತ 20 ಸಾವಿರ ನ್ಯಾಯಬೆಲೆ ಅಂಗಡಿಗಳಿವೆ. ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಬರುವಂತಹ ಕಮಿಷನ್ ಹೆಚ್ಚಿಸಬೇಕು. ರಾಜ್ಯದ 300 ಸಗಟು ಮಳಿಗೆಗಳಲ್ಲಿ ಮೊದಲು ಬಯೋಮೆಟ್ರಿಕ್ ಅಳವಡಿಸಬೇಕು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಆಹಾರ ಸಚಿವ ಉಮೇಶ ಕತ್ತಿ ಅವರನ್ನು ಒತ್ತಾಯಿಸಿದರು.

ಆಹಾರ ಧಾನ್ಯಗಳನ್ನು ಪ್ಲಾಸ್ಟಿಕ್ ಚೀಲಗಳಲ್ಲಿ ಪೂರೈಸದೇ ಸೆಣಬಿನ ಚೀಲಗಳಲ್ಲಿ ಪೂರೈಕೆ ಮಾಡಬೇಕು. ಇದರಿಂದ ಪಡಿತರ ವಿತರಕರಿಗೆ ಸ್ವಲ್ಪ ಆದಾಯ ದೊರೆಯಲಿದೆ ಎಂದು ಟಿ.ಕೃಷ್ಣಪ್ಪ ಅವರು ಹೇಳಿದರು.

ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ಸರ್ಕಾರಿ ಪಡಿತರ ವಿತರಕರ ಸಂಘದ ಸದಸ್ಯರು ನಗರದ ಸ್ವಾತಂತ್ರ್ಯ ಉದ್ಯಾನವನದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

> ಆಹಾರ ಮತ್ತು ನಾಗರಿಕ ಇಲಾಖೆ ಸಚಿವರು, ಮತ್ತು ಅಧಿಕಾರಿಗಳು ಬಂದು ನಮ್ಮ ಮನವಿ ಸ್ವೀಕರಿಸಿ ಬೇಡಿಕೆಗಳಿಗೆ ಪೂರಕವಾಗಿ ಸ್ಪಂದಿಸಿದರೆ ಪ್ರತಿಭಟನೆ ಕೈಬಿಡಲಾಗುವುದು.
>
> **ಟಿ.ಕೃಷ್ಣಪ್ಪ,** ರಾಜ್ಯ ಘಟಕದ ಅಧ್ಯಕ್ಷ

ಇದೇ 11ಕ್ಕೆ ಮುಖ್ಯಮಂತ್ರಿ ಮನೆಗೆ ಮುತ್ತಿಗೆ

ಬೆಂಗಳೂರು: 'ಕಬ್ಬು ಬೆಳೆಗಾರರ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸಲು ಸರ್ಕಾರವು ಸ್ಪಂದಿಸದಿರುವುದನ್ನು ಖಂಡಿಸಿ ಇದೇ 11ರಂದು ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಮನೆಗೆ ಮುತ್ತಿಗೆ ಹಾಕಲಾಗುವುದು' ಎಂದು ರಾಜ್ಯ ರೈತ ಸಂಘ ತಿಳಿಸಿದೆ.

'ಕಬ್ಬಿನ ಬೆಲೆ ನಿಗದಿಗೆ ಕೇಂದ್ರ ಸರ್ಕಾರ ಶೇ 10 ರಷ್ಟು ಇಳುವರಿ ಆಧಾರವನ್ನು ಮಾನದಂಡವಾಗಿ ಇಟ್ಟುಕೊಂಡು ರೈತರಿಗೆ ಅನ್ಯಾಯ ಮಾಡುತ್ತಿದೆ. ರಾಜ್ಯ ಸರ್ಕಾರ ಇದುವರೆಗೂ ಕಬ್ಬು ನಿಯಂತ್ರಣಾ ಸಮಿತಿ ಸಭೆ ನಡೆಸಿಲ್ಲ. ಎಸ್‌ಎಪಿ ಬೆಂಬಲ ಬೆಲೆಯನ್ನು ಘೋಷಿಸಿಲ್ಲ. ಉತ್ತರ ಕರ್ನಾಟಕ ಭಾಗದಲ್ಲಿರುವ ಸಕ್ಕರೆ ಕಾರ್ಖಾನೆಗಳ ಮಾಲೀಕರು ಎಫ್‌ಆರ್‌ಪಿಗಿಂತ ಕಡಿಮೆ ಬೆಲೆಗೆ ಕಬ್ಬು ಖರೀದಿಸುತ್ತಿದ್ದಾರೆ' ಎಂದು ಸಂಘದ ರಾಜ್ಯ ಘಟಕದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಆರೋಪಿಸಿದರು.

'ಭಾಗ್ಯ ಜ್ಯೋತಿ, ಕುಟೀರ ಜ್ಯೋತಿ ಯೋಜನೆಯ ವಿದ್ಯುತ್ ಬಳಕೆದಾರರಿಗೆ ಉಚಿತ ವಿದ್ಯುತ್ ಪೂರೈಸಲು ಹಿಂದಿನ ಸರ್ಕಾರ ಯೋಜನೆ ರೂಪಿಸಿ ಅನುಷ್ಠಾನಗೊಳಿಸಿ ಬಡವರ ಮನೆಗಳಿಗೆ ಬೆಳಕು ನೀಡಿದ್ದವು. ಆದರೆ ಈಗಿನ ಸರ್ಕಾರ ಎಲ್ಲರ ಮನೆಗೂ ಬೆಳಕು ಎಂಬ ಜಾಹೀರಾತು ನೀಡಿ, ಹೆಚ್ಚು ಯೂನಿಟ್ ಬಳಕೆಯಾಗಿದೆ ಎಂದು ವಿದ್ಯುತ್ ಸಂಪರ್ಕ ಕಡಿತಗೊಳಿಸುತ್ತಿದ್ದಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಸಚಿವ ಸಂಪುಟದ ತೀರ್ಮಾನದಂತೆ ಸರ್ಕಾರ ಕಾಫಿ ಬೆಳೆ ಗಾರರ ಪಂಪ್‌ಸೆಟ್‌ಗಳಿಗೆ ಇದುವರೆಗೂ ಉಚಿತ ವಿದ್ಯುತ್ ಸಂಪರ್ಕ ನೀಡಿಲ್ಲ. ಕೇಂದ್ರ ಸರ್ಕಾರ ಪ್ಯಾಕಿಂಗ್ ಮಾಡಿದ ಆಹಾರ ಪದಾರ್ಥಗಳ ಮೇಲೆ ಶೇ 5ರಷ್ಟು ಜಿಎಸ್‌ಟಿ ವಿಧಿಸುವ ತೀರ್ಮಾನ ಅವೈಜ್ಞಾನಿಕವಾಗಿದೆ. ಇವೆಲ್ಲ ರೈತ ವಿರೋಧಿ ನೀತಿಗಳನ್ನು ವಿರೋಧಿಸಿ ಜುಲೈ 11ರಂದು ಮುಖ್ಯಮಂತ್ರಿ ನಿವಾಸಕ್ಕೆ ಮುತ್ತಿಗೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಬೆಂಗಳೂರಿನ ರೈಲ್ವೆ ನಿಲ್ದಾಣದಿಂದ ಮೆರವಣಿಗೆ ನಡೆಸಲಾಗುವುದು' ಎಂದರು.

ಕರ್ನಾಟಕ ಸರ್ಕಾರ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ

ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ–562 101

ದೂರವಾಣಿ ಸಂಖ್ಯೆ: ಕಛೇರಿ: 08156–295427 ಫ್ಯಾಕ್ಸ್: 08156–295427 ಇಮೇಲ್: eemidcbpura@gmail.com

ಅಲ್ಪಾವಧಿ ಟೆಂಡರ್ ಅಧಿಸೂಚನೆ

ಸಂಖ್ಯೆ : ಕಾಸಬು/ತಾಂಸ/ಸ.ಇಂ–1/ ಟೆಂಡರ್ ಪ್ರಕಟಣೆ ಸಂಖ್ಯೆ: 09/2022–23, ದಿನಾಂಕ : 29/06/2022

4702 ಪ್ರಧಾನ ಕಾಮಗಾರಿಗಳು ಕೆರೆಗಳ ಆಧುನೀಕರಣ ಯೋಜನೆ

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ ರವರಿಂದ, ಗೌರಿಬಿದನೂರು ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 4702 ಪ್ರಧಾನ ಕಾಮಗಾರಿಗಳು ಕೆರೆಗಳ ಆಧುನೀಕರಣ ಯೋಜನೆ ಮತ್ತು 4702 ವಿಶೇಷ ಘಟಕ ಯೋಜನೆ ಅಡಿಯಲ್ಲಿ ಅನುಮೋದನೆಯಾಗಿರುವ ಕಾಮಗಾರಿಗಳಿಗೆ ಕೆ.ಡಬ್ಲ್ಯೂ 1 ಮತ್ತು 2 ನಿಭಂದನೆಗೊಳಪಟ್ಟಂತೆ ಕರ್ನಾಟಕ ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಮೂಲಕ ಏಕ ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಸರ್ಕಾರ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ 1, 2, ಮತ್ತು 3 ನೇ ದರ್ಜೆ (ಸಣ್ಣ ನೀರಾವರಿ ಇಲಾಖೆಯಲ್ಲಿ ನೊಂದಾಯಿತ) ಅರ್ಹ ಗುತ್ತಿಗೆದಾರರಿಂದ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಇ.ಎಂ.ಡಿ ಮೊತ್ತ ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ಇದ್ದಂತೆ. ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ 13/07/2022 ಸಾಯಂಕಾಲ 4.00 ಗಂಟೆಯವರೆಗೆ ಟೆಂಡರ್ ತೆರೆಯುವ ದಿನಾಂಕ : 16/07/2022 ಬೆಳಿಗ್ಗೆ 11.00 ಗಂಟೆಯ ನಂತರ (ಸಾಧ್ಯವಾದ್ದಲ್ಲಿ) ಸದರಿ ಕಾಮಗಾರಿಯ ಟೆಂಡರ್‌ಗಳ ಮೊತ್ತ ಅಥವಾ ಇ.ಎಂ.ಡಿ ಯಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಇ–ಪ್ರಕ್ಯೂರ್‌ಮೆಂಟ್‌ನ ಬಿಡ್ ಡಾಕ್ಯೂಮೆಂಟ್‌ನಲ್ಲಿ ನಮೂದಿಸಿರುವ ಮೊತ್ತಗಳು ಅಂತಿಮವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ – 08156–270427 ಮತ್ತು ಇ–ಪ್ರೋಕ್ಯೂರ್‌ಮೆಂಟ್ ಸಹಾಯವಾಣಿ ದೂರವಾಣಿ ಸಂಖ್ಯೆ: 080–25501216 ಮತ್ತು 080–25501227 ರಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ

ನೈಋತ್ಯ ರೈಲ್ವೆ

ಪ್ರಕಟಣೆ

ರೈಲ್ವೆ ನಿಲ್ದಾಣಗಳಲ್ಲಿ ಸ್ಥಳೀಯ ಉತ್ಪನ್ನಗಳ ಪ್ರಚಾರ ಚಟುವಟಿಕೆಗಳು

ಬೆಂಗಳೂರು ವಿಭಾಗದಲ್ಲಿ ಕೆಳಕಂಡ ನಿಲ್ದಾಣಗಳಿಗಾಗಿ ಒಂದು ನಿಲ್ದಾಣ ಒಂದು ಉತ್ಪನ್ನಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಿದೆ.

ಕ್ರ.	ನಿಲ್ದಾಣ	ಉತ್ಪನ್ನ
1	ಕೆಎಸ್‌ಆರ್ ಬೆಂಗಳೂರು ಸಿಟಿ ರೈಲ್ವೆ ನಿಲ್ದಾಣ	ಚನ್ನಪಟ್ಟಣ ಬೊಂಬೆಗಳು
2	ಕೆಎಸ್‌ಆರ್ ಬೆಂಗಳೂರು ಸಿಟಿ ರೈಲ್ವೆ ನಿಲ್ದಾಣ	ಇಳಕಲ್ ಸೀರೆಗಳು
3	ಯಶವಂತಪುರ	ಚನ್ನಪಟ್ಟಣ ಬೊಂಬೆಗಳು
4	ಮಲ್ಲೇಶ್ವರಂ	ಸಾಲಂಕೃತ ಆಭರಣ (ಕೃತಕ ಆಭರಣಗಳು)
5	ಬೆಂಗಳೂರು ಕಂಟೋನ್ಮೆಂಟ್	ಕರ್ನಾಟಕ ಬುಡಕಟ್ಟು ಉತ್ಪನ್ನಗಳು
6	ಹೊಸೂರು	ಕೃಷಿ ಉತ್ಪನ್ನಗಳು (ರೋಸ್)
7	ಧರ್ಮಪುರಿ	ಕರಕುಶಲ ವಸ್ತುಗಳು
8	ಕೆಂಗೇರಿ	ಚನ್ನಪಟ್ಟಣ ಬೊಂಬೆಗಳು
9	ಕೃಷ್ಣರಾಜಪುರಂ	ಬುಡಕಟ್ಟು ಉತ್ಪನ್ನಗಳು
10	ಚನ್ನಪಟ್ಟಣ	ಚನ್ನಪಟ್ಟಣ ಬೊಂಬೆಗಳು
11	ರಾಮನಗರಂ	ಚನ್ನಪಟ್ಟಣ ಬೊಂಬೆಗಳು
12	ಬಂಗಾರಪೇಟೆ	ಶಿವಾರಪಟ್ಟಣ ಕಲ್ಲು (ಕೆತ್ತನೆ ವಿಗ್ರಹಗಳು)

ಮಳಿಗೆಯ ಅವಧಿಯು ನಾಲ್ಕು ಸ್ಲಾಟ್‌ಗಳಲ್ಲಿ 15 ದಿನಗಳಿಗಾಗಿ ಇರುತ್ತದೆ.

(1) ಮೊದಲ ಸ್ಲಾಟ್‌ನ ಅವಧಿ – **08–07–2022** ರಿಂದ **22–07–2022** ರವರೆಗೆ. (2) ಎರಡನೆಯ ಸ್ಲಾಟ್‌ನ ಅವಧಿ – **23–07–2022** ರಿಂದ **06–08–2022** ರವರೆಗೆ. (3) ಮೂರನೆಯ ಸ್ಲಾಟ್‌ನ ಅವಧಿ – **07–08–2022** ರಿಂದ **21–08–2022** ರವರೆಗೆ. (4) ನಾಲ್ಕನೆಯ ಸ್ಲಾಟ್‌ನ ಅವಧಿ – **22–08–2022** ರಿಂದ **05–09–2022** ರವರೆಗೆ.

ನೋಂದಣಿ ಶುಲ್ಕ / ಹಂಚಿಕೆ ಶುಲ್ಕ ರೂ. 1000/– (ಹಿಂತಿರುಗಿಸಲಾಗುವುದಿಲ್ಲ)

ಅರ್ಜಿಗಳ ಸಲ್ಲಿಕೆಗೆ ದಿನಾಂಕ ಮತ್ತು ಸಮಯ : **07–07–2022 ರಂದು 11.00 ಗಂಟೆ.**

ಅರ್ಜಿಗಳನ್ನು ತೆರೆಯುವ ದಿನಾಂಕ : **07–07–2022 ರಂದು 11.30 ಗಂಟೆ.**

ಯಾವುದೇ ಸ್ಪಷ್ಟೀಕರಣಕ್ಕಾಗಿ ಅರ್ಜಿದಾರರು, ಸಹಾಯಕ ವಾಣಿಜ್ಯ ವ್ಯವಸ್ಥಾಪಕರು, ಬೆಂಗಳೂರು ವಿಭಾಗ (9731666956) ಅಥವಾ ವಾಣಿಜ್ಯ ಶಾಖೆ, ಬೆಂಗಳೂರು (080–22875260) ಇವರನ್ನು ಸಂಪರ್ಕಿಸಬಹುದು.

ಹೆಚ್ಚಿನ ವಿವರಗಳಿಗೆ **www.swr.indianrailways.gov.in** ಗೆ ಲಾಗ್‌ಆನ್ ಮಾಡಿ.

ಪಿಯುಬಿ/206/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2022–23 | ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು, ಬೆಂಗಳೂರು

S.W.Railways | sw_rly | SWRRLY | southwesternrailway | SWRRLY

ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ

(ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ)

ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ಬೆಂಗಳೂರು ಕೇಂದ್ರ, 3ನೇ ಕ್ರಾಸ್, ಕಬ್ಬಡಿ ಕ್ರೀಡಾಂಗಣ ಹತ್ತಿರ, ಬಿ.ಬಿ.ಎಂ.ಪಿ. ಕಟ್ಟಡ, ಮೊದಲನೇ ಮಹಡಿ, ಗೋವಿಂದರಾಜನಗರ, ಬೆಂಗಳೂರು–40. ದೂ: 23204490

ಸಂಖ್ಯೆ: ಶಿಅಯೋ.ಬೆಂ.ಕೇ/ಅ.ಗೋ/ಟೆಂಡರ್/2022–23 ದಿನಾಂಕ: 05.07.2022

ಸಂಖ್ಯೆ: ಶಿಅಯೋ.ಬೆಂ.ಕೇ/ಅಸಾ/ಟೆಂಡರ್/2022–23 ದಿನಾಂಕ: 05.07.2022

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

2022–23ನೇ ಸಾಲಿನಲ್ಲಿ ಕೆಳಕಂಡ 2 ಟೆಂಡರ್‌ಗಳನ್ನು ಶಿಶು ಅಭಿವೃದ್ಧಿ ಯೋಜನೆ ಬೆಂಗಳೂರು ಕೇಂದ್ರ, ಯೋಜನೆಯ ವ್ಯಾಪ್ತಿಯಲ್ಲಿ ಸಾಗಾಣಿಕೆ ಮಾಡಲು ಗುತ್ತಿಗೆದಾರರನ್ನು ಗುರುತಿಸಲು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ. **ಟೆಂಡರ್ ವಿವರ: (1)** ಎಫ್.ಸಿ.ಐ., ಕೆ.ಆರ್. ಪುರಂ, ಬೆಂಗಳೂರು ನಿಂದ ಎಂ.ಎಸ್.ಪಿ.ಸಿ. ಚಿಕ್ಕಬಾಣಾವರದ ಗೋದಾಮಿಗೆ ಅಕ್ಕಿ ಮತ್ತು ಗೋಧಿಯನ್ನು ಎತ್ತುವಳಿ ಮಾಡಲು ಸಾಗಾಣಿಕೆದಾರರನ್ನು ಗುರುತಿಸುವುದು. ಟೆಂಡರ್‌ನ ಅಂದಾಜು ಮೊತ್ತ: **ರೂ. 5,00,000/–. (2)** ಎಂ.ಎಸ್.ಪಿ.ಸಿ. ಚಿಕ್ಕಬಾಣಾವರ ಗೋದಾಮಿನಿಂದ 351 ಅಂಗನವಾಡಿ ಕೇಂದ್ರಗಳಿಗೆ ಪೌಷ್ಟಿಕ ಆಹಾರ ಸಾಮಗ್ರಿಗಳನ್ನು ಸಾಗಾಣಿಕೆ ಮಾಡಲು ಗುತ್ತಿಗೆದಾರರನ್ನು ಗುರುತಿಸುವುದು. ಟೆಂಡರ್‌ನ ಅಂದಾಜು ಮೊತ್ತ: **ರೂ. 8,00,000/–.** ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **05.08.2022 ಸಂಜೆ 5.00 ಗಂಟೆವರೆಗೆ.** ಆಸಕ್ತರು **www.eproc.karnataka.gov.in** ನಲ್ಲಿ ಆನ್‌ಲೈನ್‌ನಲ್ಲಿ ಇ–ಟೆಂಡರ್ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಇ–ಪೋರ್ಟಲ್ ನೋಡಬಹುದು ಮತ್ತು ಕಛೇರಿ ವೇಳೆಯಲ್ಲಿ ದೂರವಾಣಿ 080–23204490 ಸಂಪರ್ಕಿಸಬಹುದು.

ಸಹಿ/– ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಬೆಂಗಳೂರು ಕೇಂದ್ರ

ವಾಸಾಸಂಇ/ಉನಿ-ಸಿ.ಪಿ/1213/ಎಂಸಿಎ/2022–23

ಎಫ್‌ಕೆಸಿಸಿಐನಿಂದ 'ಜರ್ನಿ ಆಫ್ ಜಿಎಸ್‌ಟಿ' ಕಾರ್ಯಕ್ರಮ

ಜಿಎಸ್‌ಟಿ: ರಾಜ್ಯಕ್ಕೆ 2ನೇ ಸ್ಥಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯವು ಜಿಎಸ್‌ಟಿ ಸಂಗ್ರಹದಲ್ಲಿ ದೇಶದಲ್ಲಿಯೇ ಎರಡನೇ ಸ್ಥಾನದಲ್ಲಿದೆ ಎಂದು ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕೆ ಮಹಾಸಂಸ್ಥೆಯ ಅಧ್ಯಕ್ಷ ಡಾ.ಐ.ಎಸ್.ಪ್ರಸಾದ್ ಹೇಳಿದರು.

ನಗರದಲ್ಲಿ ಮಂಗಳವಾರ ಎಫ್‌ಕೆಸಿಸಿಐನಿಂದ ಆಯೋಜಿಸಿದ್ದ 'ಜರ್ನಿ ಆಫ್ ಜಿಎಸ್‌ಟಿ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'2017ರಲ್ಲಿ ಜಿಎಸ್‌ಟಿ ಜಾರಿಗೆ ಬಂತು. ಸಾಕಷ್ಟು ಚರ್ಚೆ, ವಿರೋಧಗಳ ನಡುವೆಯೂ ರಾಜ್ಯದಲ್ಲಿ ಉತ್ತಮವಾಗಿ ಅನುಷ್ಠಾನಗೊಂಡಿದೆ. ಕೋವಿಡ್ ಕಾಲಘಟ್ಟದಲ್ಲಿ ವರ್ಚುವಲ್ ಮೂಲಕ ಗ್ರಾಹಕರ ಹಾಗೂ ವಾಣಿಜ್ಯೋದ್ಯಮಿಗಳ ಸಂದೇಹಗಳನ್ನು ತಜ್ಞರು ಪರಿಹರಿಸಿದ್ದರು' ಎಂದು ಹೇಳಿದರು.

ವರ್ಚುವಲ್ ಮೂಲಕ ಜಿಎಸ್‌ಟಿ ಮಂಡಳಿ ಸದಸ್ಯ ಡಿ.ಪಿ.ನಾಗೇಂದ್ರ ಪ್ರಸಾದ್ ಮಾತನಾಡಿ, 'ದೇಶದಲ್ಲಿ ಜಿಎಸ್‌ಟಿ ಜಾರಿಗೆ ಬಂದು 5 ವರ್ಷಗಳು ಕಳೆದಿವೆ. ಜಾರಿಗೂ ಮೊದಲು ಜಿಎಸ್‌ಟಿ ಮಂಡಳಿಯು 47 ಬಾರಿ ಸಭೆ ನಡೆಸಿತ್ತು. ಜಿಎಸ್‌ಟಿ ಜಾರಿಗೊಳಿಸಿದ್ದು ತೆರಿಗೆ ಸುಧಾರಣೆಗಾಗಿ ಅಲ್ಲ. ಉದ್ಯಮದ ಬೆಳವಣಿಗೆ ಹಾಗೂ ಸುಧಾರಣೆಗೆ' ಎಂದರು.

'ಸ್ಪರ್ಧಾತ್ಮಕ ಉತ್ಪನ್ನಗಳಿಗೆ ಜಿಎಸ್‌ಟಿ ಮುಖ್ಯ. ಕೆಲವು ಗೊಂದಲಗಳ ನಡುವೆಯೂ ಜಿಎಸ್‌ಟಿ ದೇಶದಲ್ಲಿ ಉತ್ತಮವಾಗಿ ಜಾರಿಯಾಗಿದೆ. ಸರ್ಕಾರದ ಆದಾಯಕ್ಕೆ ಜಿಎಸ್‌ಟಿ ಸಂಗ್ರಹ ಬಹಳ ಪ್ರಮುಖ. ಕೋವಿಡ್ ಕಾಲದಲ್ಲಿ ಸಂಗ್ರಹದ ಪ್ರಮಾಣ ಕಡಿಮೆ ಆಗಿತ್ತು. ಈಗ ಎಲ್ಲವೂ ಸಹಜ ಸ್ಥಿತಿಗೆ ಮರಳಿದ್ದು, ಜಿಎಸ್‌ಟಿ ಸಂಗ್ರಹ ಹೆಚ್ಚುತ್ತಿದೆ' ಎಂದರು.

ಕರ್ನಾಟಕ ವಲಯದ ಕೇಂದ್ರ ತೆರಿಗೆಯ ಜಿಎಸ್‌ಟಿ ವಿಭಾಗದ ಪ್ರಧಾನ ಮುಖ್ಯ ಆಯುಕ್ತೆ ರಂಜನಾ ಜಹಾ ಮಾತನಾಡಿ, 'ರಾಜ್ಯವು ತೆರಿಗೆ ಸಂಗ್ರಹದಲ್ಲಿ ದ್ವಿತೀಯ ಸ್ಥಾನದಲ್ಲಿದ್ದರೆ, ಅನುಷ್ಠಾನದಲ್ಲಿ ಮೊದಲ ಸ್ಥಾನದಲ್ಲಿದೆ. ಸಾರ್ವಜನಿಕರ ಸಹಕಾರ ಬಹಳ ಮುಖ್ಯ. ಏಕರೂಪದ ತೆರಿಗೆಯಿಂದ ಅನುಕೂಲ ಇದೆ. ಆರಂಭಿಕ ಹಂತದಲ್ಲಿ ಗೊಂದಲವಿದ್ದರೂ ಕ್ರಮೇಣ ಬದಲಾವಣೆಗಳನ್ನು ತರಲಾಗಿದೆ. ಪ್ರಾಮಾಣಿಕ ತೆರಿಗೆ ಪಾವತಿದಾರರಿಗೆ ಸಮಸ್ಯೆ ಆಗಬಾರದು' ಎಂದು ಹೇಳಿದರು.

ಕೋವಿಡ್ ಬಳಿಕ ಆಟೋಮೊಬೈಲ್ ಕ್ಷೇತ್ರದ ವಹಿವಾಟು ಬಿರುಸಾಗಿದೆ. ಕಟ್ಟಡ ಕಾಮಗಾರಿಯೂ ನಡೆಯುತ್ತಿದೆ. ಉದ್ಯಮದ ಬೆಳವಣಿಗೆಗೆ ಪೂರಕ ವಾತಾವರಣವಿದೆ ಎಂದರು.

ವಾಣಿಜ್ಯ ತೆರಿಗೆ ಇಲಾಖೆ ಆಯುಕ್ತೆ ಸಿ.ಶಿಖಾ, ಎಫ್‌ಕೆಸಿಸಿಐನ ಜಿಎಸ್‌ಟಿ ಸಮಿತಿ ಅಧ್ಯಕ್ಷ ಬಿ.ಟಿ.ಮನೋಹರ್ ಅವರನ್ನು ಸನ್ಮಾನಿಸಲಾಯಿತು. ಹಿರಿಯ ಉಪಾಧ್ಯಕ್ಷ ಬಿ.ವಿ.ಗೋಪಾಲರೆಡ್ಡಿ ಹಾಜರಿದ್ದರು.

ಕಾರ್ಯಕ್ರಮದಲ್ಲಿ ಜಿಎಸ್‌ಟಿ ಸಮಿತಿ ಅಧ್ಯಕ್ಷ ಬಿ.ಟಿ.ಮನೋಹರ್ ಮತ್ತು ಅವರ ಪತ್ನಿ ಬಿ.ಎಂ ಮಹೇಶ್ವರಿ ಅವರನ್ನು ಸನ್ಮಾನಿಸಲಾಯಿತು. (ಎಡದಿಂದ) ಎಫ್‌ಕೆಸಿಸಿಐ ಮಾಜಿ ಅಧ್ಯಕ್ಷ ಶಿವಷಣ್ಮುಗಂ, ವಾಣಿಜ್ಯ ತೆರಿಗೆ ಇಲಾಖೆ ಆಯುಕ್ತೆ ಸಿ.ಶಿಖಾ, ಕೇಂದ್ರ ತೆರಿಗೆಗಳ ಪ್ರಧಾನ ಮುಖ್ಯ ಆಯುಕ್ತೆ ರಂಜನಾ ಜಹಾ, ಎಫ್‌ಕೆಸಿಸಿಐ ಅಧ್ಯಕ್ಷ ಐ.ಎಸ್‌ಪ್ರಸಾದ್ ಮತ್ತು ಮಾಜಿ ಅಧ್ಯಕ್ಷ ಜೆ.ಆರ್‌ ಬಂಗೇರಾ ಇದ್ದರು –ಪ್ರಜಾವಾಣಿ ಚಿತ್ರ

ಆ. 3ಕ್ಕೆ ಸಿದ್ದರಾಮಯ್ಯ ಅಮೃತ ಮಹೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರ 75ನೇ ವರ್ಷದ ಜನ್ಮದಿನಾಚರಣೆ ಹಿನ್ನೆಲೆಯಲ್ಲಿ ಆಗಸ್ಟ್ 3ರಂದು ದಾವಣಗೆರೆಯಲ್ಲಿ ಅಮೃತ ಮಹೋತ್ಸವ ಹಮ್ಮಿಕೊಳ್ಳಲಾಗಿದೆ. ಸಮಾವೇಶವನ್ನು ಎಐಸಿಸಿ ನಾಯಕ ರಾಹುಲ್ ಗಾಂಧಿ ಉದ್ಘಾಟಿಸಲಿದ್ದಾರೆ' ಎಂದು 'ಸಿದ್ದರಾಮಯ್ಯ–75 ಅಭಿನಂದನಾ ಸಮಿತಿ'ಯ ಗೌರವಾಧ್ಯಕ್ಷರೂ ಆಗಿರುವ ಶಾಸಕ ಆರ್‌.ವಿ. ದೇಶಪಾಂಡೆ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, 'ನಾಲ್ಕು ದಶಕಗಳಿಂದ ಸಿದ್ದರಾಮಯ್ಯ ಅವರು ರಾಜಕೀಯದಲ್ಲಿದ್ದಾರೆ. ಸಾಮಾಜಿಕ ನ್ಯಾಯದ ಪರವಾಗಿ ಹಲವು ಹೋರಾಟಗಳಲ್ಲಿ ಭಾಗಿಯಾಗಿ ಪ್ರೊ. ನಂಜುಂಡಸ್ವಾಮಿ ಜೊತೆ ಗುರುತಿಸಿಕೊಂಡರು. ರಾಜಕೀಯ ಕ್ಷೇತ್ರದಲ್ಲಿ ಏಳುಬೀಳು ಕಂಡಿದ್ದಾರೆ. ಅವರ ಅಭಿಮಾನಿಗಳು, ಹಿತೈಷಿ ಗಳ ಒತ್ತಾಸೆಯಿಂದ ಅಮೃತ ಮಹೋತ್ಸವ ಮಾಡಲಾಗುತ್ತಿದೆ' ಎಂದರು.

'ಅಮೃತ ಮಹೋತ್ಸವ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ, ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸೇರಿದಂತೆ ಹಲವಾರು ಕಾಂಗ್ರೆಸ್ ನಾಯಕರು ಭಾಗವಹಿಸಲಿದ್ದಾರೆ' ಎಂದರು.

ಸಮಿತಿ ಅಧ್ಯಕ್ಷ ಕೆ.ಎನ್. ರಾಜಣ್ಣ ಮಾತನಾಡಿ, 'ಸಿದ್ದರಾಮಯ್ಯ ಈ ಆಚರಣೆ ಅವಶ್ಯಕತೆ ಇಲ್ಲ ಅಂದಿದ್ದರು. ಆದರೆ, ನಾವೆಲ್ಲ ಅವರ ಮನವೊಲಿಸಿ ಕಾರ್ಯಕ್ರಮ ಆಯೋಜಿಸಿದ್ದೇವೆ. ಈ ಕಾರ್ಯಕ್ರಮದ ಬಗ್ಗೆ ಯಾರೂ ಅನ್ಯತಾ ಭಾವಿಸಬಾರದು' ಎಂದರು.

ಮಾಜಿ ಸಚಿವ ಬಸವರಾಜ ರಾಯರಡ್ಡಿ, 'ರಾಜ್ಯದಾದ್ಯಂತ ಸಿದ್ದರಾಮಯ್ಯ ಅವರಿಗೆ ಅಭಿಮಾನಿಗಳಿದ್ದಾರೆ. ಹೀಗಾಗಿ ಎಲ್ಲರೂ ಬರಲು ಅನುಕೂಲ ಆಗಲಿ ಎಂದು ದಾವಣಗೆರೆಯಲ್ಲಿ ಕಾರ್ಯಕ್ರಮ ಆಯೋಜಿದ್ದೇವೆ' ಎಂದರು.

ಕಾಂಗ್ರೆಸ್ ಮುಖಂಡರಾದ ಎಚ್‌.ಸಿ. ಮಹದೇವಪ್ಪ, ನಜೀರ್ ಅಹಮದ್, ಭೈರತಿ ಸುರೇಶ್, ಜಯಮಾಲಾ, ಎಚ್. ಆಂಜನೇಯ, ಎಚ್. ಹನುಮಂತಯ್ಯ, ಎಸ್. ಎಸ್. ಮಲ್ಲಿಕಾರ್ಜುನ, ಪಿ.ಜಿ.ಆರ್. ಸಿಂಧ್ಯಾ, ಬಿ.ಎಲ್. ಶಂಕರ್ ಇದ್ದರು.

ಅಂಗನವಾಡಿ ಕೇಂದ್ರ ಹೆಚ್ಚಿಸಿ: ಸರ್ಕಾರಕ್ಕೆ ಶಿಫಾರಸು ಸಲ್ಲಿಕೆ

ಬೆಂಗಳೂರು: 'ನಗರ ಪ್ರದೇಶದ ಕೊಳೆಗೇರಿ, ಎಸ್ಸಿ, ಎಸ್ಟಿ ಸಮುದಾಯಗಳ ವಸತಿ ಪ್ರದೇಶ, ಅಲ್ಪಸಂಖ್ಯಾತರು, ಬುಡ ಕಟ್ಟು-ಆದಿವಾಸಿ ಸಮುದಾಯ ವಾಸವಾಗಿರುವ ಪ್ರದೇಶಗಳಲ್ಲಿ ಅಂಗನವಾಡಿ ಕೇಂದ್ರಗಳನ್ನು ಸ್ಥಾಪಿಸಲು ರಾಜ್ಯ ಸರ್ಕಾರ ಒತ್ತು ನೀಡಬೇಕು' ಎಂದು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎ.ಎನ್. ವೇಣುಗೋಪಾಲಗೌಡ ನೇತೃತ್ವದ ಸಮಿತಿ ಶಿಫಾರಸು ಮಾಡಿದೆ.

ಅಥಣಿಯ 'ವಿಮೋಚನಾ ಸಂಘ'ದ ಅಧ್ಯಕ್ಷ ಬಿ.ಎಲ್. ಪಾಟೀಲ ಅವರು 2011ರಲ್ಲಿ ಸಲ್ಲಿಸಿರುವ ಅರ್ಜಿಯನ್ನು ಸ್ವಯಂಪ್ರೇರಿತ ಅರ್ಜಿಯನ್ನಾಗಿ ಪರಿವರ್ತಿಸಿಕೊಂಡು ಹೈಕೋರ್ಟ್ ವಿಚಾರಣೆ ನಡೆಸುತ್ತಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಮೂರ್ತಿ ಎನ್. ಕೆ. ಪಾಟೀಲ್ ನೇತೃತ್ವದ ಸಮಿತಿ 2012ರಲ್ಲಿ ಮಾಡಿದ್ದ ಶಿಫಾರಸುಗಳನ್ನು ಆಧರಿಸಿ, ನ್ಯಾಯಮೂರ್ತಿ ಎ.ಎನ್. ಗೋಪಾಲಗೌಡ ನೇತೃತ್ವದ ಸಮಿತಿ ಈಗ ವರದಿ ಸಲ್ಲಿಸಿದೆ.

ಹೈಕೋರ್ಟ್ ನಿರ್ದೇಶನದಂತೆ 2021ರಲ್ಲಿ ಈ ಸಮಿತಿಯನ್ನು ರಚಿಸಲಾಗಿತ್ತು.ಒಟ್ಟು 12 ಸಭೆ ನಡೆಸಿರುವ ಸಮಿತಿ ಎಲ್ಲಾ ವಿಷಯಗಳನ್ನು ವಿಸ್ತೃತವಾಗಿ ಚರ್ಚಿಸಿ ಆರಕ್ಕೂ ಹೆಚ್ಚು ಪ್ರಮುಖ ಶಿಫಾರಸುಗಳನ್ನು ಮಾಡಿದೆ.

ಮೂಲದಲ್ಲೇ ಕಡಿವಾಣ ಹಾಕಲು ತಯಾರಿಸುವವರ ಮೇಲೆ ದಾಳಿ: ಬಿಬಿಎಂಪಿ

ಫ್ಲೆಕ್ಸ್: ನಿತ್ಯವೂ ತೆರವಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಸೌಂದರ್ಯಕ್ಕೆ ಧಕ್ಕೆ ಉಂಟು ಮಾಡುತ್ತಿರುವ ಹಾಗೂ ಕಾನೂನುಬಾಹಿರವಾದ ಫ್ಲೆಕ್ಸ್ ಮತ್ತು ಬ್ಯಾನರ್‌ಗಳನ್ನು ಬಿಬಿಎಂಪಿ ನಿತ್ಯವೂ ತೆರವು ಮಾಡಲಿದೆ.

ಫ್ಲೆಕ್ಸ್ ಹಾಗೂ ಬ್ಯಾನರ್ ತೆರವು ಕಾರ್ಯಾಚರಣೆಯನ್ನು ನಿತ್ಯವೂ ನಡೆಸುವಂತೆ ಎಲ್ಲ ವಲಯಗಳ ಜಂಟಿ ಆಯುಕ್ತರು, ಮುಖ್ಯ ಎಂಜಿನಿಯರ್‌ಗಳಿಗೆ ಹೇಳಲಾಗಿದೆ. ಈ ಬಗ್ಗೆ ಯಾವುದೇ ರೀತಿಯ ನಿರ್ಲಕ್ಷ್ಯ ಸಲ್ಲ ಎಂದೂ ಸೂಚಿಸಲಾಗಿದೆ ಎಂದು ಬಿಬಿಎಂಪಿ ಕಂದಾಯ ವಿಭಾಗದ ವಿಶೇಷ ಆಯುಕ್ತ ಡಾ. ದೀಪಕ್ ಮಂಗಳವಾರ ತಿಳಿಸಿದರು.

ನಗರದಲ್ಲಿ ಫ್ಲೆಕ್ಸ್ ಅಥವಾ ಬ್ಯಾನರ್ ಅಳವಡಿಸಿದರೆ ಅವರ ಮೇಲೆ ಕಾನೂನು ಪ್ರಕಾರ ಕ್ರಮ ಕೈಗೊಳ್ಳಬೇಕು. ಕಾಯ್ದೆ ಪ್ರಕಾರ, ಉಲ್ಲಂಘನೆಗೆ ಆರು ತಿಂಗಳು ಸಜೆಯನ್ನೂ ವಿಧಿಸಬಹುದಾಗಿದೆ. ಇನ್ನು ಮುಂದೆ ತೆರವು ಕಾರ್ಯದ ವೆಚ್ಚವನ್ನೂ ಫ್ಲೆಕ್ಸ್ ಅಳವಡಿಸಿದವರಿಂದ ವಸೂಲಿ ಮಾಡಲು ನಿರ್ಧರಿಸಲಾಗಿದೆ ಎಂದರು.

ಸಾಂದರ್ಭಿಕ ಚಿತ್ರ

‘ಕಳೆದ ವಾರ ನಗರದಲ್ಲಿ ಸುಮಾರು 16 ಸಾವಿರ ಫ್ಲೆಕ್ಸ್ ಮತ್ತು ಬ್ಯಾನರ್ ತೆಗೆದಿದ್ದೇವೆ. ಹಿಂದಿನ ವಾರ ಮಾಡಿದ್ದೆವು, ನಿನ್ನೆ ಮಾಡಿದ್ದೆವು ಎಂದು ಅಧಿಕಾರಿಗಳು ಸುಮ್ಮನಿರುವಂತಿಲ್ಲ. ಇದು ನಿತ್ಯದ ಕಾರ್ಯವಾಗಬೇಕು. ಒಂದು ಫ್ಲೆಕ್ಸ್ ಗಮನಕ್ಕೆ ಬಂದರೂ ತೆರವು ಮಾಡಲಾಗುತ್ತದೆ’ ಎಂದರು.

ಮೂಲದಲ್ಲಿ ಕಡಿವಾಣ: ‘ಫ್ಲೆಕ್ಸ್ ಮತ್ತು ಬ್ಯಾನರ್‌ಗಳಿಗೆ ಮೂಲದಲ್ಲೇ ಕಡಿವಾಣ ಹಾಕಲು ನಿರ್ಧರಿಸಲಾಗಿದೆ. ಹೀಗಾಗಿ ಇವುಗಳನ್ನು ತಯಾರಿಸುವವರ ಮೇಲೆ ದಾಳಿ ನಡೆಸಲಾಗುತ್ತದೆ. ಚುನಾವಣೆ, ರಾಜಕೀಯ ಕಾರ್ಯಕ್ರಮಗಳಲ್ಲಿ ಯಾರು ಫ್ಲೆಕ್ಸ್ ಹಾಗೂ ಬ್ಯಾನರ್ ತಯಾರಿಸುತ್ತಾರೆ ಎಂಬ ಬಗ್ಗೆ ನಮ್ಮಲ್ಲಿ ಮಾಹಿತಿ ಇದೆ. ಅವುಗಳನ್ನು ಆಧರಿಸಿ ತಪಾಸಣೆ ನಡೆಸಿ, ಪ್ರಕರಣ ದಾಖಲಿಸಲಾಗುತ್ತದೆ’ ಎಂದು ದೀಪಕ್ ಹೇಳಿದರು.

ಪ್ರಮುಖ ರಸ್ತೆಗಳ ಗುಣಮಟ್ಟದ ಪರಿಶೀಲನೆ ನಡೆಸಿದ ಬಗ್ಗೆ ವರದಿ ಇನ್ನೂ ಬಂದಿಲ್ಲ. ಹಲವು ಮಾದರಿಗಳನ್ನು ಕಳುಹಿಸಲಾಗಿದೆ. ಈ ಬಗ್ಗೆ ವರದಿ ಬಂದಮೇಲೆ ಮುಂದಿನ ಕ್ರಮ ಕೈಗೊಳ್ಳಲಾಗುತ್ತದೆ ಎಂದು ತಿಳಿಸಿದರು.

ಬಿಬಿಎಂಪಿ ಅಭಿವೃದ್ಧಿಪಡಿಸಿರುವ, ಡಾಂಬರು ಹಾಕಿರುವ ಪ್ರಮುಖ ರಸ್ತೆಗಳನ್ನು ಮೂರು ತಿಂಗಳು ಯಾವುದೇ ಕಾರಣಕ್ಕೆ ಅಗೆಯಬಾರದು ಎಂದು ಎಲ್ಲ ಇಲಾಖೆಗಳಿಗೆ ತಿಳಿಸಲಾಗಿದೆ ಎಂದರು.

ಗಾಂಧಿನಗರದಲ್ಲಿ ಬಹುಅಂತಸ್ತಿನ ವಾಹನ ನಿಲುಗಡೆ ಕಲ್ಪಿಸಲು ಟೆಂಡರ್ ಕರೆಯಲಾಗಿದೆ ಎಂದು ತಿಳಿಸಿದರು.

‘ಓಕಳಿಪುರಂ ಬಳಿ ರೈಲ್ವೆ ಇಲಾಖೆ ಹಾಗೂ ಬಿಬಿಎಂಪಿ ವತಿಯಿಂದ ಕಾಮಗಾರಿ ನಡೆಯುತ್ತಿದೆ. ಜಿಲೆಟಿನ್ ಬಳಸಿ ಬಂಡೆ ಸಿಡಿಸಲಾಗಿದೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ನಮ್ಮ ಯೋಜನೆ ವಿಭಾಗದ ಮುಖ್ಯ ಎಂಜಿನಿಯರ್ ಮಾಹಿತಿ ನೀಡಿದ್ದು, ಬಿಬಿಎಂಪಿ ಜಿಲೆಟಿನ್ ಬಳಸಿಲ್ಲ’ ಎಂದು ಸ್ಪಷ್ಟಪಡಿಸಿದರು.

ನಿಯಮ ರಚನೆ: ಮಂತ್ರಿ ಮಾಲ್ ಆಸ್ತಿ ತೆರಿಗೆ ವಸೂಲಿಗೆ ಸಂಬಂಧಿಸಿದಂತೆ ಬಿಬಿಎಂಪಿ ನಿಧಾನಗತಿ ಅನುಸರಿಸುತ್ತಿಲ್ಲ. ನೋಟಿಸ್‌ಗಳನ್ನು ನೀಡಲಾಗಿದೆ. ಯಾವುದೇ ರೀತಿಯಲ್ಲಿ ಬ್ಯಾಂಕ್ ಖಾತೆಗಳನ್ನು ಜಪ್ತಿ ಮಾಡಿಕೊಳ್ಳಲು ಹಾಗೂ ಇತರೆ ಮಾರ್ಗದಿಂದ ವಸೂಲಿಗೆ ಕಾಯ್ದೆ ಪ್ರಕಾರ ನಿಯಮಗಳನ್ನು ರೂಪಿಸಬೇಕಿದೆ. ಇನ್ನು ಎರಡು ವಾರದಲ್ಲಿ ಆ ಪ್ರಕ್ರಿಯೆ ಪೂರ್ಣಗೊಳ್ಳಲಿದೆ ಎಂದು ಅವರು ಹೇಳಿದರು.

ನಿಮ್ಮ ಕಣ್ಣಿಗೂ ಫ್ಲೆಕ್ಸ್ ಬಿತ್ತೆ? ನಮಗೆ ತಿಳಿಸಿ

ನೀವು ವಾಸ ಮಾಡುತ್ತಿರುವ ನಗರದ ಸ್ಥಳದಲ್ಲೂ ಫ್ಲೆಕ್ಸ್ ಇದ್ದರೆ ಅದರದ್ದೊಂದು ಫೋಟೊ, ನಿಮ್ಮ ಪೂರ್ಣ ವಿಳಾಸ ಹಾಗೂ ಪಾಸ್‌ಪೋರ್ಟ್ ಅಳತೆಯ ಫೋಟೊ ವಾಟ್ಸ್ ಆ್ಯಪ್ ಮಾಡಿ. ಬಡಾವಣೆಯಲ್ಲಿ ಅಂತಹ ಎಷ್ಟು ಫ್ಲೆಕ್ಸ್‌ಗಳು ಎಲ್ಲೆಲ್ಲಿ ನಿಮ್ಮ ಕಣ್ಣಿಗೆ ಬಿದ್ದಿವೆ ಎಂಬ ಮಾಹಿತಿಯನ್ನೂ ಕಳುಹಿಸಿ. ’ಪ್ರಜಾವಾಣಿ‘ ಫ್ಲೆಕ್ಸ್ ತೆರವಿಗೆ ಇಂಬುಗೊಡಲು ವೇದಿಕೆ ಕಲ್ಪಿಸಲಿದ್ದು, ಆಯ್ದ ಬರಹಗಳು ಪ್ರಕಟವಾಗಲಿವೆ

ನಂಬರ್: 9606038256

ಕೆರೆಯಂಗಳದಲ್ಲಿ ಮಳಿಗೆ: ತೆರವಿಗೆ ಸೂಚನೆ

ಬೆಂಗಳೂರು: ಪಾದಚಾರಿ ರಸ್ತೆಗಳಲ್ಲಿ ವಾಹನ ತೆರವುಗೊಳಿಸಿ, ಜಲಮಂಡಳಿ ಅಗೆದ ರಸ್ತೆಯನ್ನು ದುರಸ್ತಿ ಮಾಡಿ, ಬೀದಿ ದೀಪಗಳನ್ನು ಅಳವಡಿಸಿ, ಚರಂಡಿ, ರಾಜಕಾಲುವೆಗಳಲ್ಲಿ ಹೂಳೆತ್ತಿ, ರಸ್ತೆ ಬದಿ ತ್ಯಾಜ್ಯ ಹಾಕುವುದನ್ನು ನಿರ್ಬಂಧಿಸಲು ಮಾರ್ಷಲ್‌ಗಳನ್ನು ನೇಮಿಸಿ, ಕೆರೆ ಅಂಗಳದಲ್ಲಿರುವ ಅಂಗಡಿಗಳನ್ನು ಕೂಡಲೇ ತೆರವುಗೊಳಿಸಿ– ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಪೂರ್ವ ವಲಯದ ಅಧಿಕಾರಿಗಳಿಗೆ ಸೂಚನೆ ನೀಡಿದ ಪರಿ ಇದು.

ಪೂರ್ವ ವಲಯದ ಮೆಯೊ ಹಾಲ್ ಕಚೇರಿಯಲ್ಲಿ ನಡೆದ ‘ಮುಖ್ಯ ಆಯುಕ್ತರ ನಡೆ ವಲಯದ ಕಡೆ’ ಕಾರ್ಯಕ್ರಮದಲ್ಲಿ ನಾಗರಿಕರ ಅಹವಾಲನ್ನು ಮಂಗಳವಾರ ಸ್ವೀಕರಿಸಿದ ನಂತರ ಮುಖ್ಯ ಆಯುಕ್ತರು, ಕೂಡಲೇ ಕ್ರಮಗಳನ್ನು ಕೈಗೊಂಡು ಅನುಪಾಲನಾ ವರದಿಯನ್ನು ಸಲ್ಲಿಸಲು ಅಧಿಕಾರಿಗಳಿಗೆ ಆದೇಶಿಸಿದರು.

ಬಾಣಸವಾಡಿ ವಾರ್ಡ್ 27ರ ಒಎಂಬಿಆರ್ ಲೇಔಟ್ 4 ಹಾಗೂ 6ನೇ ಅಡ್ಡರಸ್ತೆಯಲ್ಲಿ ಜಲಮಂಡಳಿ ರಸ್ತೆ ಅಗೆದಿದೆ. ಖಾಲಿ ಸ್ಥಳಗಳಲ್ಲಿ ಕಸ ಹಾಕುವುದನ್ನು ತಪ್ಪಿಸಿ. ಸಗಯಾಪುರಂ ವಾರ್ಡ್ 60ರಲ್ಲಿ ಬೀದಿ ದೀಪ ಅಳವಡಿಸಿ. ಪಾದಚಾರಿ ಮಾರ್ಗ ಹಾಳಾಗಿದೆ. ರಿಚರ್ಡ್ಸ್ ಉದ್ಯಾನ ನಿರ್ವಹಣೆ ಮಾಡಿಸಿ ಎಂದು ನಾಗರಿಕರು ಕುಂದುಕೊರತೆ ಹೇಳಿಕೊಂಡು, ಮನವಿ ಮಾಡಿಕೊಂಡರು.

ಬಾಣಸವಾಡಿ ವಾರ್ಡ್‌ನಲ್ಲಿರುವ ಕೆರೆಯ ಅಂಗಳದಲ್ಲಿ ಅನಧಿಕೃತ ಕಟ್ಟಡಗಳು ನಿರ್ಮಾಣವಾಗಿದ್ದು, ಅವನ್ನು ತೆರವುಗೊಳಿಸಬೇಕೆಂದು ನಾಗರಿಕರು ಮನವಿ ಮಾಡಿಕೊಂಡರು. ಇದಕ್ಕೆ ಸ್ಪಂದಿಸಿದ ಮುಖ್ಯ ಆಯುಕ್ತರು, ಕೆರೆ ವಿಭಾಗದ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ, ಕೂಡಲೇ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಆದೇಶಿಸಿದರು.

ನ್ಯೂ ತಿಪ್ಪಸಂದ್ರ ವಾರ್ಡ್ ಎಚ್.ಎ.ಎಲ್ 3ನೇ ಸ್ಟೇಜ್, ಇಂದಿರಾನಗರ 80 ಅಡಿ ರಸ್ತೆಯ ರಾಜಕಾಲುವೆ ಹಾಗೂ ರಸ್ತೆ ಬದಿಯ ಚರಂಡಿ ಹೂಳೆತ್ತುವ ಕೆಲಸವನ್ನು ಕೈಗೊಳ್ಳಬೇಕು. ಲಿಂಗರಾಜಪುರ ಡಾ. ರಾಜ್ ಕುಮಾರ್ ಕೆಳಸೇತುವೆಯಲ್ಲಿ ನೀರು ನಿಂತುಕೊಳ್ಳುವುದನ್ನು ಪರಿಹರಿಸಬೇಕು ಎಂದು ಕಾರ್ಯಪಾಲಕ ಎಂಜಿನಿಯರ್‌ಗೆ ಸೂಚಿಸಿದರು.

ಪರಿಹಾರ: ಜೂನ್ 8ರಂದು ಮಳೆ ಸಂದರ್ಭದಲ್ಲಿ ಮರದ ಕೆಳಗೆ ನಿಂತಿದ್ದ ರಾಕೇಶ್(13 ವರ್ಷ) ಕೊಂಬೆ ಬಿದ್ದು ಮೃತಪಟ್ಟಿದ್ದರು. ಪರಿಹಾರಕ್ಕೆ ಪೋಷಕರು ಮನವಿ ಮಾಡಿದರು. ವಲಯ ಆಯುಕ್ತರು ಬುಧವಾರವೇ ₹5 ಲಕ್ಷ ಪರಿಹಾರ ನೀಡಬೇಕು ಎಂದು ಮುಖ್ಯ ಆಯುಕ್ತರು ಆದೇಶಿಸಿದರು.

ಶಿಸ್ತುಕ್ರಮಕ್ಕೆ ಸೂಚನೆ: ಜೀವನ್ ಬಿಮಾ ನಗರ ವಾರ್ಡ್ ಆನಂದಪುರ ಕೊಳೆಗೇರಿ ಪ್ರದೇಶದಲ್ಲಿ ಮನೆಗೆ ಮಳೆ ನೀರು ನುಗ್ಗಿತ್ತು. ಆದರೂ ನಮಗೆ ಯಾವುದೇ ಪರಿಹಾರ ಸಿಕ್ಕಿಲ್ಲ ಎಂದು ನಿವಾಸಿಗಳು ಹೇಳಿದರು. ಪರಿಶೀಲಿಸಿ ನಿಯಮಾನುಸಾರ ಪರಿಹಾರ ನೀಡಿ. ಪರಿಹಾರ ನೀಡದ ಅಧಿಕಾರಿ ಮೇಲೆ ಶಿಸ್ತು ಕ್ರಮ ಕೈಗೊಳ್ಳಿ ಎಂದು ವಲಯ ಜಂಟಿ ಆಯುಕ್ತರಿಗೆ ಸೂಚಿಸಿದರು.

ವಲಯ ಆಯುಕ್ತ ಪಿ.ಎನ್. ರವೀಂದ್ರ, ವಲಯ ಜಂಟಿ ಆಯುಕ್ತರಾದ ಶಿಲ್ಪಾ, ಮುಖ್ಯ ಎಂಜಿನಿಯರ್ ಸುಗುಣಾ ಹಾಜರಿದ್ದರು.

ಬೆಂಗಳೂರಿನ ಪ್ರಧಾನ ಅಂಚೆ ಕಚೇರಿ (ಜಿಪಿಒ) ಮುಖ್ಯ ಅಂಚೆ ಪಾಲಕರಾಗಿ ಎಲ್. ಮಂಜುನಾಥ ಮಂಗಳವಾರ ಅಧಿಕಾರ ಸ್ವೀಕರಿಸಿದರು. ಪ್ರಧಾನ ಅಂಚೆ ಕಚೇರಿಯ ಸಿಬ್ಬಂದಿ ಹೂಗುಚ್ಛ ನೀಡಿ ಸ್ವಾಗತಿಸಿದರು.

‘ಬೆಂಗಳೂರು ಚಲೋ’ ನಾಳೆ

ಬೆಂಗಳೂರು: ನಿವೃತ್ತ ಐಎಎಸ್ ಅಧಿಕಾರಿ ಪಿ.ಎನ್. ಶ್ರೀನಿವಾಸಾಚಾರಿ ಅಧ್ಯಕ್ಷತೆಯ ಮಾನವ ಸಂಪನ್ಮೂಲ ಸಮಿತಿ ವರದಿ ಅನುಷ್ಠಾನ, ನೌಕರರ ವಾರ್ಷಿಕ ಮೌಲ್ಯಮಾಪನ ರದ್ದತಿಗೆ ಆಗ್ರಹಿಸಿ ಆರೋಗ್ಯ ಇಲಾಖೆ, ವೈದ್ಯಕೀಯ ಶಿಕ್ಷಣ ಇಲಾಖೆ ಹಾಗೂ ರಾಷ್ಟ್ರೀಯ ಆರೋಗ್ಯ ಅಭಿಯಾನದ ಗುತ್ತಿಗೆ ಮತ್ತು ಹೊರಗುತ್ತಿಗೆ ನೌಕರರು ಇದೇ ಗುರುವಾರ ‘ಬೆಂಗಳೂರು ಚಲೋ’ ಹಮ್ಮಿಕೊಂಡಿದ್ದಾರೆ.

‘ಶ್ರೀನಿವಾಸಾಚಾರಿ ನೇತೃತ್ವದ ಸಮಿತಿ 2020ರ ಡಿ.28ಕ್ಕೆ ಸರ್ಕಾರಕ್ಕೆ ವರದಿ ಸಲ್ಲಿಸಿದೆ. ವರದಿ ಅನುಷ್ಠಾನ ಹಾಗೂ ಬೇಡಿಕೆಗಳ ಈಡೇರಿಕೆ ಬಗ್ಗೆ ಸಿ.ಎಂ ಹಾಗೂ ಆರೋಗ್ಯ ಸಚಿವರಿಗೆ ಹಲವು ಮನವಿ ಸಲ್ಲಿಸಲಾಗಿದೆ. ಆದರೆ, ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿರ್ದೇಶಕರು ನೌಕರರ ಆತ್ಮಸ್ಥೈರ್ಯ ಕುಗ್ಗಿಸುವ ಆದೇಶ ಹೊರಡಿಸುತ್ತಿದ್ದಾರೆ. ಹೀಗಾಗಿ, ಬೀದಿಗೆ ಇಳಿಯುವುದು ಅನಿವಾರ್ಯವಾಗಿದೆ’ ಎಂದು ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆ ಗುತ್ತಿಗೆ ಹಾಗೂ ಹೊರಗುತ್ತಿಗೆ ನೌಕರರ ಸಂಘದ ರಾಜ್ಯ ಘಟಕದ ಅಧ್ಯಕ್ಷ ವಿಶ್ವಾರಾಧ್ಯ ಎಚ್.ವೈ. ತಿಳಿಸಿದ್ದಾರೆ.

‘ಮುಖ್ಯಮಂತ್ರಿ ಅವರು ನೌಕರರ ಸಮಸ್ಯೆಗೆ ಸ್ಪಂದಿಸಬೇಕು. ವರದಿ ಅನುಷ್ಠಾನ ಜತೆಗೆ ಮೌಲ್ಯಮಾಪನ ಪದ್ಧತಿಯನ್ನು ಕೈಬಿಡಬೇಕು’ ಎಂದು ಅವರು ಪ್ರಕಟಣೆಯಲ್ಲಿ ಹೇಳಿದ್ದಾರೆ.

ಕೇಂದ್ರ ಕಾರಾಗೃಹದ ಮುಖ್ಯ ಅಧೀಕ್ಷಕ ವರ್ಗಾವಣೆ

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳ ಬಗ್ಗೆ ಎಡಿಜಿಪಿ ಎಸ್. ಮುರುಗನ್ ನೇತೃತ್ವದ ತಂಡ ವರದಿಯ ಬೆನ್ನಲ್ಲೇ ಏಳು ಸಿಬ್ಬಂದಿ ಎತ್ತಂಗಡಿ ಮಾಡಿದ್ದ ಗೃಹ ಇಲಾಖೆ, ಈಗ ಮುಖ್ಯ ಅಧೀಕ್ಷಕ ಪಿ. ರಂಗನಾಥ್ ಅವರನ್ನೂ ವರ್ಗಾವಣೆ ಮಾಡಿದೆ.

‘ರಂಗನಾಥ್ ಅವರನ್ನು ಕಲಬುರಗಿ ಕೇಂದ್ರ ಕಾರಾಗೃಹಕ್ಕೆ ವರ್ಗಾಯಿಸಲಾಗಿದೆ. ಕಲಬುರಗಿ ಕಾರಾಗೃಹದಲ್ಲಿದ್ದ ಮುಖ್ಯ ಅಧೀಕ್ಷಕ ಪಿ.ಎಸ್. ರಮೇಶ್ ಅವರನ್ನು ಬೆಂಗಳೂರಿಗೆ ವರ್ಗಾವಣೆ ಮಾಡಲಾಗಿದೆ’ ಎಂದು ಗೃಹ ಇಲಾಖೆ ಮೂಲಗಳು ಹೇಳಿವೆ.

ಕೈದಿಗಳಿಗೆ ಟಿ.ವಿ, ಪ್ರತ್ಯೇಕ ಬೆಡ್ ಸೇರಿ ಐಷಾರಾಮಿ ಸೌಲಭ್ಯ ಒದಗಿಸಲಾಗುತ್ತಿತ್ತು. ಕೆಲ ಕೈದಿಗಳು, ಹಣ ಕೊಟ್ಟು ಮಾದಕ ದ್ರವ್ಯ, ತಮ್ಮಿಷ್ಟದ ಆಹಾರವನ್ನು ತರಿಸಿಕೊಳ್ಳುತ್ತಿದ್ದು, ಈ ವಿಡಿಯೊಗಳು ಮಾಧ್ಯಮಗಳಲ್ಲಿ ಹರಿದಾಡಿದ್ದವು. ಈ ಬಗ್ಗೆ ತನಿಖೆ ನಡೆಸಿದ್ದ ಎಡಿಜಿಪಿ ನೇತೃತ್ವದಲ್ಲಿ ತಂಡ ಅಧೀಕ್ಷಕ ಸೇರಿದಂತೆ ಎಂಟು ಮಂದಿ ವಿರುದ್ಧ ಶಿಸ್ತುಕ್ರಮ ಕೈಗೊಳ್ಳುವಂತೆ ಶಿಫಾರಸು ಮಾಡಿತ್ತು. ಅದರನ್ವಯ ಅವರೆಲ್ಲರನ್ನೂ ಇತ್ತೀಚೆಗೆ ವರ್ಗಾವಣೆ ಮಾಡಲಾಗಿತ್ತು.

ಅರಮನೆ ಮೈದಾನಕ್ಕೆ ಟಿಡಿಆರ್: ಕಾನೂನು ಸಲಹೆಗೆ ನಿರ್ಧಾರ

ಬೆಂಗಳೂರು: ಜಯಮಹಲ್ ರಸ್ತೆ ಹಾಗೂ ಬಳ್ಳಾರಿ ರಸ್ತೆಗಳ ವಿಸ್ತರಣೆಗೆ ಅರಮನೆ ಮೈದಾನದ ಜಾಗ ಸ್ವಾಧೀನಕ್ಕೆ ವರ್ಗಾಯಿಸಬಹುದಾದ ಅಭಿವೃದ್ಧಿ ಹಕ್ಕು (ಟಿಡಿಆರ್) ನೀಡುವ ವಿಷಯದಲ್ಲಿ ಅಡ್ವೊಕೇಟ್ ಜನರಲ್ ಅವರಿಂದ ಕಾನೂನು ಸಲಹೆ ಪಡೆದುಕೊಳ್ಳಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಜಯಮಹಲ್ ರಸ್ತೆಯನ್ನು ಮೇಖ್ರಿ ವೃತ್ತದಿಂದ ಕಂಟೋನ್ಮೆಂಟ್ ರೈಲು ನಿಲ್ದಾಣದವರೆಗೆ ಹಾಗೂ ಬಳ್ಳಾರಿ ರಸ್ತೆಯನ್ನು ಬಿಡಿಎ ಜಂಕ್ಷನ್‌ನಿಂದ ಮೇಖ್ರಿ ವೃತ್ತದವರೆಗೆ ವಿಸ್ತರಿಸಲು ಬಿಬಿಎಂಪಿ 2009ರಲ್ಲೇ ಯೋಜನೆ ರೂಪಿಸಿತ್ತು. ಈ ಕಾಮಗಾರಿಗಳಿಗೆ ಅರಮನೆ ಮೈದಾನದ ಆಸ್ತಿಯಲ್ಲಿ 15 ಎಕರೆ 39 ಗುಂಟೆ ಜಾಗದ ಅವಶ್ಯಕತೆ ಇದ್ದು, ಸ್ವಾಧೀನಪಡಿಸಿಕೊಂಡು ಟಿಡಿಆರ್ ನೀಡುವ ಪ್ರಸ್ತಾವ ಸರ್ಕಾರದ ಮುಂದಿದೆ.

ಟಿಡಿಆರ್ ನೀಡಿದರೆ ಮುಂದೆ ಎದುರಾಗಲಿರುವ ತಾಂತ್ರಿಕ ಸಮಸ್ಯೆಗಳ ಬಗ್ಗೆ ಚರ್ಚಿಸಲು ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ ಅವರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ಸಭೆ ನಡೆದಿದೆ. ಸುಪ್ರೀಂ ಕೋರ್ಟ್ ಆದೇಶ ಸರ್ಕಾರದ ಪರವಾಗಿ ಬಂದರೆ ಟಿಡಿಆರ್ ವಾಪಸ್ ಪಡೆಯುವುದು ಕಷ್ಟವಾಗಲಿದೆ ಎಂಬ ಅಭಿಪ್ರಾಯ ಸಭೆಯಲ್ಲಿ ವ್ಯಕ್ತವಾಯಿತು.

‘ಟಿಡಿಆರ್ ವಿತರಿಸಬಹುದೇ, ವಿತರಿಸದಿದ್ದರೆ ನ್ಯಾಯಾಂಗ ನಿಂದನೆ ಆಗಲಿದೆಯೇ ಎಂಬುದರ ಪರಿಶೀಲನೆ ನಡೆಸುವ ಅಗತ್ಯವಿದೆ’ ಎಂದು ಮುಖ್ಯ ಕಾರ್ಯದರ್ಶಿ ಅಭಿಪ್ರಾಯಪಟ್ಟರು. ಅಡ್ವೊಕೇಟ್ ಜನರಲ್ ಅವರಿಗೆ ಕಡತ ಸಲ್ಲಿಸುವಂತೆ ಬಿಬಿಎಂಪಿ ಮುಖ್ಯ ಆಯುಕ್ತರು ಮತ್ತು ಬಿಡಿಎ ಆಯುಕ್ತರಿಗೆ ಸೂಚನೆ ನೀಡಿದರು.

ಪಿಯು ಉತ್ತರ ಪತ್ರಿಕೆ ಛಾಯಾಪ್ರತಿ ಲಭ್ಯ

ಬೆಂಗಳೂರು: ದ್ವಿತೀಯ ಪಿಯು ವಾರ್ಷಿಕ ಪರೀಕ್ಷೆಯ ಉತ್ತರ ಪತ್ರಿಕೆಗಳ ಛಾಯಾಪ್ರತಿಗಳನ್ನು ಪಡೆಯಲು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿರುವ ವಿದ್ಯಾರ್ಥಿಗಳು ಜುಲೈ 6ರಿಂದ ಇಲಾಖೆಯ ವೆಬ್‌ಸೈಟ್‌ನಿಂದ ಪ್ರತಿಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಈ ಕುರಿತು ವಿದ್ಯಾರ್ಥಿಗಳ ನೋಂದಾಯಿತ ಫೋನ್ ನಂಬರ್‌ಗಳಿಗೆ ಎಸ್‌ಎಂಎಸ್ ಕಳುಹಿಸಲಾಗುತ್ತದೆ ಎಂದು ಪದವಿಪೂರ್ವ ಶಿಕ್ಷಣ ಇಲಾಖೆ ನಿರ್ದೇಶಕರು ಮಾಹಿತಿ ನೀಡಿದ್ದಾರೆ.

PRINCE JEWELLERY

Flat 3.5% value addition for all plain Gold Jewellery*
Limited Period Offer
0% Making Charges
Exchange your 916 old gold jewellery for new 916 gold jewellery without loss in weight and rate.
Avail the lowest gold price in the market on the day of purchase!
BENGALURU: 11th Main Road, Near Cosmopolitan Club, 3rd Block, Jayanagar. Ph: 080-4264 9999.
CHENNAI | COIMBATORE | THIRUVANANTHAPURAM
www.princejewellery.com. Open on Sundays. Valet parking available.
*Terms and conditions apply. Offer cannot be clubbed with other offers and closure of purchase plan.

ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ
INVEST KARNATAKA
Azadi Ka Amrit Mahotsav
ಸುಲಲಿತ ವ್ಯವಹಾರಗಳ ಶ್ರೇಯಾಂಕ- ‘ಅಗ್ರಪಂಕ್ತಿ’ಯಲ್ಲಿ ನಮ್ಮ ಹೆಮ್ಮೆಯ ಕರ್ನಾಟಕ
ಬಂಡವಾಳ ಹೂಡಿಕೆ, ಆವಿಷ್ಕಾರ, ವಿದೇಶಿ ನೇರ ಬಂಡವಾಳ ಹೂಡಿಕೆಗಳಲ್ಲಿ ಮುಂಚೂಣಿ ಸಾಧಿಸಿ ಮುನ್ನಡೆಯುತ್ತಿದೆ ರಾಜ್ಯ
ದೇಶದ ಒಟ್ಟಾರೆ ವಿದೇಶಿ ಹೂಡಿಕೆಯಲ್ಲಿ 38% ಪಾಲು ತನ್ನದಾಗಿಸಿಕೊಂಡಿದೆ ಕರ್ನಾಟಕ

ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ. ಮುರುಗೇಶ್ ಆರ್.ನಿರಾಣಿ
ಇನ್ವೆಸ್ಟ್ ಕರ್ನಾಟಕ - 2022 ಉದ್ಘಾಟನಾ ಕಾರ್ಯಕ್ರಮದಲ್ಲಿ ಉಪಸ್ಥಿತವಿರುವ ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು
ಉದ್ಯಮಿ ಸ್ನೇಹಿ ಕರ್ನಾಟಕ- ಹೂಡಿಕೆದಾರರ ನೆಚ್ಚಿನ ತಾಣ
BOSCH | ISMC | ReNew POWER | TOYOTA | JSW | SIEMENS Healthineers | ACME | Kirloskar Ferrous
ZEISS | EXIDE | APPLIED MATERIALS | Collins Aerospace | NTT | GOLD PLUS FLOAT GLASS Indian Values. Global Standards. | LNG ALLIANCE
ನಮ್ಮ ಸಂವಿಧಾನದಲ್ಲಿ ಪ್ರತಿಪಾದಿಸಲ್ಪಟ್ಟಂತೆ, "ವೈಯಕ್ತಿಕ ಮತ್ತು ಸಾಮೂಹಿಕ ಚಟುವಟಿಕೆಯ ಎಲ್ಲಾ ಕ್ಷೇತ್ರಗಳಲ್ಲಿ ಉತ್ಕೃಷ್ಟತೆಯ ಕಡೆಗೆ ಶ್ರಮಿಸಬೇಕು, ಇದರಿಂದ ರಾಷ್ಟ್ರವು ನಿರಂತರವಾಗಿ ಉನ್ನತ ಮಟ್ಟದ ಪ್ರಯತ್ನ ಮತ್ತು ಸಾಧನೆಗೆ ಏರುತ್ತದೆ" ಎಂಬುದು ಭಾರತದ ಪ್ರತಿಯೊಬ್ಬ ನಾಗರಿಕನ ಮೂಲಭೂತ ಕರ್ತವ್ಯವಾಗಿದೆ.
Source: https://eodb.dpiit.gov.in/
ಗುಂಜನ್ ಕೃಷ್ಣ, ಐಎಎಸ್
ಕೈಗಾರಿಕಾ ಅಭಿವೃದ್ಧಿ ಆಯುಕ್ತರು; ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ನಿರ್ದೇಶಕರು ಕರ್ನಾಟಕ ಸರ್ಕಾರ
ಡಾ.ಇ.ವಿ.ರಮಣ ರೆಡ್ಡಿ, ಐಎಎಸ್
ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಕೈಗಾರಿಕೆಗಳು ಮತ್ತು ವಾಣಿಜ್ಯ ಇಲಾಖೆ ಕರ್ನಾಟಕ ಸರ್ಕಾರ

ನಕ್ಷೆ ಉಲ್ಲಂಘನೆ: ಶ್ರೀಕಾಂತ್ ಚನ್ನಾಳ್ ಅಭಿಪ್ರಾಯ

‘ಬೈಲಾ ಲೋಪಗಳೇ ಕಾರಣ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಿಯಮ ಉಲ್ಲಂಘಿಸಿ ಕಟ್ಟಿರುವ ಕಟ್ಟಡಗಳು ನಗರದಲ್ಲಿ ಶೇ 95ರಷ್ಟಿವೆ. ಬಿಬಿಎಂಪಿ ಬೈಲಾದಲ್ಲಿ ಇರುವ ಲೋಪಗಳೇ ಇದಕ್ಕೆ ಪ್ರಮುಖ ಕಾರಣ’ ಎಂದು ಅಸೋಷಿಯೇಷನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಎಂಜಿನಿಯರ್ಸ್ ಸಂಸ್ಥೆಯ ಬೆಂಗಳೂರು ಕೇಂದ್ರದ ಅಧ್ಯಕ್ಷ ಶ್ರೀಕಾಂತ್ ಚನ್ನಾಳ್ ಅಭಿಪ್ರಾಯಪಟ್ಟರು.

ರಾಷ್ಟ್ರೀಯ ಕಟ್ಟಡ ಸಂಹಿತೆ(ಎನ್ ಬಿಸಿ) ನಿಯಮಗಳನ್ನು ಬಿಬಿಎಂಪಿ ಬೈಲಾ -2020ರಲ್ಲಿ ಅಳವಡಿಕೆ ಮಾಡುವ ಅಗತ್ಯದ ಬಗ್ಗೆ ನಡೆದ ಅಧ್ಯಯನ ಸಭೆಯಲ್ಲಿ ಅವರು ಮಾತನಾಡಿದರು.

‘ಬಡವರು ಕಟ್ಟುವ ಸಣ್ಣ ಮನೆಗಳಿಗೆ ಫ್ಲೋರ್ ಏರಿಯಾ ರೇಷಿಯೊ (ಎಫ್‌ಎಆರ್) 1.75ರಷ್ಟು ಇದ್ದರೆ, ದೊಡ್ಡ ಕಟ್ಟಡಗಳಿಗೆ 3.25 ಇದೆ. ನಿವೇಶನಗಳ ಅಳತೆಗಿಂತ ಶೇ 1.75ರಷ್ಟು ಹೆಚ್ಚಿನ ಚದರ ಅಡಿಯಲ್ಲಿ ಬಡವರು ಮನೆ ಕಟ್ಟಿಕೊಳ್ಳಲು ಅವಕಾಶವಿದ್ದರೆ, ಶೇ 3.25ರಷ್ಟು ಹೆಚ್ಚಿನ ಚದರ ಅಡಿಯಲ್ಲಿ ನಿರ್ಮಿಸಲು ಅವಕಾಶ ನೀಡಲಾಗಿದೆ. ಅದಕ್ಕೆ ಎಲ್ಲರೂ ನಿಯಮ ಉಲ್ಲಂಘಿಸುತ್ತಿದ್ದಾರೆ’ ಎಂದರು.

‘ನಕ್ಷ ಉಲ್ಲಂಘಿಸಿ ಕಟ್ಟಿರುವ ಮನೆ ಕೆಡವಲು ಮುಂದಾದರೆ, ಅದಕ್ಕೆ ಹಣ ಹೊಂದಿಸುವುದೇ ಕಷ್ಟ. ಅವಶೇಷಗಳನ್ನು ಎಲ್ಲಿ ಹಾಕಬೇಕು ಎಂಬ ಸಮಸ್ಯೆ ಎದುರಾಗಲಿದೆ’ ಎಂದರು.

‘ಈ ಸಮಸ್ಯೆ ಎದುರಾಗಲಿದೆ ಎಂಬ ಕಾರಣಕ್ಕೆ ಚೆನ್ನೈ ಹೈಕೋರ್ಟ್ ನಕ್ಷೆ ಉಲ್ಲಂಘಿಸಿ ಕಟ್ಟಡ ಕಟ್ಟಿದವರಿಂದ 5 ಪಟ್ಟು ಹೆಚ್ಚಿನ ವಿದ್ಯುತ್ ಶುಲ್ಕ ಮತ್ತು ನೀರಿನ ಶುಲ್ಕ ಪಡೆಯಲು ಆದೇಶಿಸಿದೆ. ನಕ್ಷೆ ಉಲ್ಲಂಘಿಸಿದವರು ಎಷ್ಟು ದಂಡ ಪಾವತಿಸಬೇಕು ಎಂಬುದನ್ನೇ ಬಿಬಿಎಂಪಿ ನಿಗದಿ ಮಾಡಿಲ್ಲ. ಅದನ್ನು ಬೈಲಾದಲ್ಲಿ ಅಳವಡಿಸಿಕೊಳ್ಳುವ ಅಗತ್ಯವಿದೆ’ ಎಂದು ಪ್ರತಿಪಾದಿಸಿದರು.

‘ನಕ್ಷೆಗೆ ಮಂಜೂರಾತಿ ನೀಡುವ ಪದ್ಧತಿ ಹೋಗಬೇಕಿದೆ. ಕಟ್ಟಡಗಳ ರಚನೆ, ಎಲೆಕ್ಟ್ರಿಕ್ ಮತ್ತು ಪ್ಲಂಬಿಂಗ್‌ಗೆ ಸಂಬಂಧಿಸಿದ ಡ್ರಾಯಿಂಗ್‌ಗಳನ್ನು ಮೊದಲೇ ಪಡೆಯಬೇಕು ಎಂದು ಎನ್‌ಬಿಸಿ ಹೊಸ ನಿಯಮಗಳು ಹೇಳುತ್ತಿವೆ’ ಎಂದು ಉಲ್ಲೇಖಿಸಿದರು.

‘ಬಿಬಿಎಂಪಿ ಸರ್ಕಾರಕ್ಕೆ ಸಲ್ಲಿಸಿರುವ ಕಟ್ಟಡ ಬೈಲಾದಲ್ಲಿ ಈ ಅಂಶಗಳು ಇಲ್ಲ. ಅವುಗಳನ್ನು ಸೇರ್ಪಡೆ ಕುರಿತು ಆರು ಸಂಸ್ಥೆಗಳು ಒಟ್ಟಾಗಿ ವರದಿ ಸಿದ್ಧಪಡಿಸುತ್ತಿದ್ದೇವೆ’ ಎಂದು ಹೇಳಿದರು.

ನಗರೋತ್ಥಾನ: ಪೂರ್ವ ವಲಯಕ್ಕೆ ₹450 ಕೋಟಿ

ಬೆಂಗಳೂರು: ಅಮೃತ್ ನಗರೋತ್ಥಾನ ಯೋಜನೆಯಡಿ ಬಿಬಿಎಂಪಿಯ ಪೂರ್ವ ವಲಯಕ್ಕೆ ₹450 ಕೋಟಿ ಮಂಜೂರಾಗಿದೆ ಎಂದು ಸಚಿವ ಡಾ.ಸಿ ಎನ್ ಅಶ್ವತ್ಥನಾರಾಯಣ ತಿಳಿಸಿದರು. ಮಳೆಯಿಂದಾಗಬಹುದಾದ ತೊಂದರೆಗಳ ಬಗ್ಗೆ ಸಂಬಂಧ ಬಿಬಿಎಂಪಿ ಪೂರ್ವ ವಲಯದ ಅಧಿಕಾರಿಗಳ ಜೊತೆ ನಡೆದ ವರ್ಚುಯಲ್ ಸಭೆಯಲ್ಲಿ ಮಾತನಾಡಿದರು.

₹450 ಕೋಟಿಯಲ್ಲಿ ₹180 ಕೋಟಿಯನ್ನು ಮಳೆ ನೀರು ಚರಂಡಿ ಹೂಳೆತ್ತುವ ಕೆಲಸಕ್ಕೆ ವಿನಿಯೋಗಿಸಲಾಗುವುದು. ಇದಕ್ಕೆ ಈಗಾಗಲೇ ಟೆಂಡರ್ ಕರೆಯಲಾಗಿದೆ ಎಂದರು.

ರಸ್ತೆ ನಿರ್ಮಿಸುವ ಸಂದರ್ಭದಲ್ಲಿ ಮಳೆ ನೀರು ನಿಲ್ಲದಂತೆ ಕಾಮಗಾರಿ ನಡೆಸಬೇಕು ಎಂದು ಸೂಚಿಸಿದರು. ಕಳೆದ ಬಾರಿ ಮಳೆಯಿಂದ ವಲಯದಲ್ಲಿ ಸಂತ್ರಸ್ತರಾಗಿದ್ದ 874 ಮಂದಿಯಲ್ಲಿ 200 ಮಂದಿಗೆ ಪರಿಹಾರ ವಿತರಿಸಲು ತಾಂತ್ರಿಕ ಅಡಚಣೆ ಎದುರಾಗಿದೆ. ಅವರಿಗೂ ಕೂಡಲೇ ಪರಿಹಾರಧನ ಸಿಗಲಿದೆ ಎಂದರು. ಸಭೆಯಲ್ಲಿ ಬಿಬಿಎಂಪಿ ಪೂರ್ವ ವಲಯದ ಆಯುಕ್ತ ಪಿ.ಎನ್.ರವೀಂದ್ರ, ಮುಖ್ಯ ಎಂಜಿನಿಯರ್‌ಗಳು ಇದ್ದರು.

‘ಅತಿಗೆಂಪು’ ಬೆಳಕು ಹಿಡಿದು ಬಳಸಲು ಸಾಧನ ಅಭಿವೃದ್ಧಿ !

ಬೆಂಗಳೂರು: ಕಣ್ಣಿಗೆ ಕಾಣದ ಆದರೆ ವಾತಾವರಣದಲ್ಲಿ ವ್ಯಾಪಕವಾಗಿರುವ ಅತಿಗೆಂಪು ಬೆಳಕನ್ನು (ಇನ್ಫ್ರಾ ರೆಡ್) ಪತ್ತೆ ಮಾಡಿ, ಅಗತ್ಯಕ್ಕೆ ತಕ್ಕಂತೆ ನಿಯಂತ್ರಿಸುವ ಮೂಲಕ ಆಪ್ಟಿಕಲ್ ಸಂಪರ್ಕ ಸಾಧನಗಳಿಗೆ ಬಳಸ ಬಹುದಾದ ಸಾಧನವನ್ನು ಬೆಂಗಳೂರಿನ ವಿಜ್ಞಾನಿಗಳು ಅಭಿವೃದ್ಧಿಪಡಿಸಿದ್ದಾರೆ.

‘ಸಿಂಗಲ್ ಕ್ರಿಸ್ಟಲೈನ್ ಸ್ಕ್ಯಾಂಡಿಯಮ್ ನೈಟ್ರೈಡ್’ ಎಂಬ ಸಾಧನವನ್ನು ಜವಾಹರಲಾಲ್ ನೆಹರೂ ಉನ್ನತ ವೈಜ್ಞಾನಿಕ ಸಂಶೋಧನಾ ಕೇಂದ್ರದ (ಜೆಎನ್‌ಸಿಎಎಸ್‌ಆರ್) ವಿಜ್ಞಾನಿಗಳು ಅಭಿವೃದ್ಧಿಪಡಿಸಿದ್ದಾರೆ. ಈ ಮೂಲಕ ಅತಿಗೆಂಪು ಬೆಳಕಿನಿಂದ ಸೌರ ಮತ್ತು ಉಷ್ಣ ವಿದ್ಯುತ್ ಉತ್ಪಾದಿಸಬಹುದು ಎಂದು ಸಾಧಿಸಿ ತೋರಿಸಿದ್ದಾರೆ.

ವಿದ್ಯುತ್ ಕಾಂತೀಯ ತರಂಗಗಳು ನವೀಕರಿಸಬಹುದಾದ ಇಂಧನ ಮೂಲವಾಗಿದೆ. ವಿದ್ಯುತ್ ಉತ್ಪಾದನೆ, ದೂರ ಸಂಪರ್ಕ, ಮಿಲಿಟರಿ, ಭದ್ರತಾ ತಂತ್ರಜ್ಞಾನ, ಸೆನ್ಸಾರ್ ಮತ್ತು ಆರೋಗ್ಯ ಆರೈಕೆ ಕ್ಷೇತ್ರಗಳಲ್ಲಿಯೂ ಬಳಸಬಹುದು. ವಿದ್ಯುತ್‌ಕಾಂತೀಯ ಅಲೆಗಳನ್ನು ನಮ್ಮ ಅಗತ್ಯಾನುಸಾರ ಮತ್ತು ನಿಖರವಾಗಿ ಬಳಸಲು ಅತ್ಯುನ್ನತ ತಂತ್ರಜ್ಞಾನವನ್ನು ಬಳಸಲಾಗಿದೆ. ಎಲ್ಲ ಬಗೆಯ ವಿದ್ಯುತ್ ಕಾಂತೀಯ ಅಲೆಗಳ ಬಳಕೆ ಸಾಧ್ಯವಿಲ್ಲ. ಅತಿಗೆಂಪು ಬೆಳಕು ಪತ್ತೆ ಇನ್ನೂ ಕಷ್ಟ. ಸಿಂಗಲ್ ಕ್ರಿಸ್ಟಲೈನ್ ಸ್ಕ್ಯಾಂಡಿಯಮ್ ನೈಟ್ರೈಡ್ ಹೆಚ್ಚು ಕ್ಷಮತೆಯಿಂದ ಅತಿಗೆಂಪು ಬೆಳಕು ಪತ್ತೆಗೆ ನೆರವಾಗುತ್ತದೆ.

ಜೆಎನ್‌ಸಿಎಎಸ್‌ಆರ್‌ನ ಸಹಾಯಕ ಪ್ರೊಫೆಸರ್ ಡಾ. ಬಿಸ್ವ ಸಹಾ, ಕೆ.ಸಿ.ಮೌರ್ಯ ಮತ್ತು ತಂಡ ಸ್ಕ್ಯಾಂಡಿಯಮ್ ನೈಟ್ರೈಡ್ ಅಭಿವೃದ್ಧಿಪಡಿಸಿದೆ. ಈ ಕುರಿತು ಬಿಸ್ವ ಸಹಾ ಅವರು, ‘ಎಲೆಕ್ಟ್ರಾನಿಕ್ಸ್‌ನಿಂದ ಆರೋಗ್ಯ ಕ್ಷೇತ್ರದವರೆಗೆ, ರಕ್ಷಣಾ ಉದ್ದೇಶಗಳಿಂದ ವಿದ್ಯುತ್ ತಂತ್ರಜ್ಞಾನದವರೆಗೆ ಅತಿಗೆಂಪು ಬೆಳಕಿನ ಮೂಲಕ್ಕೆ ಭಾರಿ ಬೇಡಿಕೆ ಇದೆ. ಸ್ಕ್ಯಾಂಡಿಯಮ್ ನೈಟ್ರೈಡ್ ಇನ್ನೂ ಹಲವು ಕ್ಷೇತ್ರಗಳಲ್ಲಿ ಬಳಕೆ ಮಾಡಬಹುದಾಗಿದೆ’ ಎಂದಿದ್ದಾರೆ.

ಸಂಶೋಧನೆಯಲ್ಲಿ ಭಾರತೀಯ ವಿಜ್ಞಾನ ಸಂಸ್ಥೆಯ ಸೆಂಟರ್ ಫಾರ್ ನ್ಯಾನೊ ಸೈನ್ಸ್ ಅಂಡ್ ಎಂಜಿನಿಯರಿಂಗ್, ಸಿಡ್ನಿ ವಿಶ್ವವಿದ್ಯಾಲಯಗಳೂ ಭಾಗಿಯಾಗಿವೆ. ಈ ಸಂಶೋಧನೆಯ ಮಾಹಿತಿ ‘ನ್ಯಾನೋ ಲೆಟರ್ಸ್ ಜರ್ನಲ್’ನಲ್ಲಿ ಪ್ರಕಟವಾಗಿದೆ.

ಮರು ಪರಿಷ್ಕರಣೆ ಮಾಡಿದ ಪಠ್ಯಪುಸ್ತಕ ರದ್ದುಗೊಳಿಸಲು ಆಗ್ರಹಿಸಿ 'ಕರ್ನಾಟಕ ದಲಿತ ಸಂಘರ್ಷ ಸಮಿತಿ (ಡಿ.ಜಿ. ಸಾಗರ ನೇತೃತ್ವ) ಸದಸ್ಯರು ನಗರದ ಸ್ವಾತಂತ್ರ್ಯ ಉದ್ಯಾನವನದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು —ಪ್ರಜಾವಾಣಿ ಚಿತ್ರ

ಹೊಸ ಪಠ್ಯಪುಸ್ತಕ ರದ್ದತಿಗೆ ದಸಂಸ ಆಗ್ರಹ

ಬೆಂಗಳೂರು: ರೋಹಿತ್ ಚಕ್ರತೀರ್ಥ ಸಮಿತಿ ಪರಿಷ್ಕರಣೆ ಮಾಡಿದ ಪಠ್ಯಪುಸ್ತಕಗಳನ್ನು ರದ್ದು ಮಾಡಿ, ಬರಗೂರು ರಾಮಚಂದ್ರಪ್ಪ ಸಮಿತಿಯ ಹಿಂದಿನ ಪುಸ್ತಕಗಳನ್ನೇ ಮುಂದುವರಿಸಬೇಕು. ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿ ಡಿ.ಜಿ.ಸಾಗರ್ ನೇತೃತ್ವದ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ಕಾರ್ಯಕರ್ತರು ಮಂಗಳವಾರ ಪ್ರತಿಭಟನೆ ನಡೆಸಿದರು.

ಹೊಸ ಪಠ್ಯಪುಸ್ತಕದಲ್ಲಿ ಪ್ರಬುದ್ಧ ಭಾರತ ಮತ್ತು ಕರ್ನಾಟಕ ಕಟ್ಟಲು ಶ್ರಮಿಸಿದ, ಸಾಮಾಜಿಕ ನ್ಯಾಯ, ಸಮ ಸಮಾಜಕ್ಕಾಗಿ ಧ್ವನಿ ಎತ್ತಿದ ಹಲವು ಮಹನೀಯರಿಗೆ ಅವಮಾನ ಮಾಡಲಾಗಿದೆ. ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್, ಬಸವಣ್ಣ, ಕುವೆಂಪು, ಗೌತಮ ಬುದ್ಧ, ಸುರಪುರ ವೆಂಕಟಪ್ಪ ನಾಯಕ, ನಾರಾಯಣ ಗುರುಗಳಿಗೂ ಅಗೌರವ ತೋರಲಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮಕ್ಕಳಿಗೆ ಅಗತ್ಯವಿರುವುದು ವೈಚಾರಿಕ ಮನೋಭಾವದ ಪಾಠಗಳು. ಆದರೆ, ಸಮಿತಿ ಮನುವಾದ ಸಿದ್ಧಾಂತಗಳನ್ನು ಬೋಧಿಸಲು ಹೊರಟಿದೆ. ಅಂಬೇಡ್ಕರ್ ಕುರಿತ ಕವನ, ಹೋರಾಟ, ಬದುಕಿನ ವಿವರಗಳನ್ನು ತೆಗೆದುಹಾಕಲಾಗಿದೆ. ಸಂವಿಧಾನ ಕರಡು ರಚನೆಯ ಪ್ರಕ್ರಿಯೆಯಲ್ಲಿ ಬಿ.ಎನ್.ರಾವ್ ಅವರ ಪಾತ್ರಕ್ಕೆ ಮಹತ್ವ ನೀಡಲಾಗಿದೆ. ಬೌದ್ಧ ಧರ್ಮ ಸ್ವೀಕರಿಸಲು ಕಾರಣವಾದ ಸನ್ನಿವೇಶ ವಿವರಿಸುವ ಅಧ್ಯಾಯಗಳನ್ನೂ ಕೈಬಿಡಲಾಗಿದೆ. ಅಂಬೇಡ್ಕರ್ ಅವರಿಗೆ ಬಿಜೆಪಿ ಅವಮಾನ ಮಾಡುತ್ತಿದೆ ಎಂದು ದೂರಿದರು.

ಮುಖಂಡರಾದ ಡಿ.ಜಿ.ಸಾಗರ್, ರಮೇಶ ಆಸಂಗಿ, ಎ.ಮಾನಯ್ಯ, ಶ್ರೀಮಂತ ನಡುವಿನಕೇರಿ, ಮಾರುತಿ ಬೌದ್ಧೆ, ಮುನಿರಾಜು, ಕ್ಯಾಲಸಹಳ್ಳಿ ಶ್ರೀನಿವಾಸ, ದಾಸರಹಳ್ಳಿ ಭುವನೇಶ್, ಅರುಣ್ ಕುಮಾರ್, ಮುನಿರಾಜು, ನಾಗೇಶ್, ರಮೇಶ್, ವೆಂಕಟಸ್ವಾಮಿ, ಎ.ವೈ.ಚಂದ್ರಪ್ಪ, ಸಜ್ಜಪ್ಪ ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

WANTED GRADUATE Lady OFFICE ASSISTANT and Trained LADY TEACHERS to teach English, Kannada and Computer in English Medium Primary and High schools and NTT Trained for NURSERY Classes. Attractive Salary for Talented Candidates. Walk-in Interview on 07.07.2022 between 2.00 PM and 4.00 PM at 'PRATHIBHA SHIKSHANA SAMITHI', #9, 18th Main, BSK II Stage, Bangalore-70. Phone: 080 26710170/ 74833-77387

HERITAGE PUBLIC SCHOOL, Srinidhi Layout, J.P.Nagar 8th Phase, Konanakunte, Bengaluru-62 Requires Kindergarten Teachers Attractive Salary, Graduates can also apply Call 080-26322111, 9901733776.

WANTED NURSERY, PRIMARY & High School English TEACHERS. MODERN SCHOOL J.P.NAGAR 1st PHASE Phone: 08048144415. Mail- mesprincipal1986@gmail.com

M.A.J.FOUNDATION
Invites applications from suitable applicants for the proposed institution in the name of
DHANWANTARI ACADEMY FOR MANAGEMENT STUDIES
39/1, VINAYAKA NAGAR, CHIKKASANDRA, CHIKKABANAVARA, BANGALORE – 560090.
Mob: +91 9880717006
TEACHING STAFF REQUIREMENT
- DIRECTOR
- PROFESSORS
- ASSOCIATE PROFESSORS
- ASSISTANT PROFESSORS

Qualifications, Experience & Pay: **As per AICTE Norms**
NON-TEACHING STAFF REQUIREMENT
Training and Placement Officer, Chief Librarian, Assistant Librarian, Accountant, Office Assistant, Warden, System Admin, Maintenance Incharge, Helpers & Attenders.
Interested and eligible candidates shall mail the CV to **principal@damsmaj.com** by **10th July, 2022.**
Reservation for SC/ST candidate as per rules.
Sd\- Chairman
M A J FOUNDATION

WANTED LADY Trained Nursery Teachers,and Chemistry(Msc,BEd). SS(BA,BEd or MA.BEd) &.Computer Teacher. Walkin Between 10.30-1pm.with the Secretary, Srikrishna International School. ITI-Layout.BSK.3rd Stage.B'lore-85 Ph:080-26690799

REQUIRED LECTURERS in Pharmacy, candidates with B.Pharm or M.Pharm qualification may apply to: The Director, Valley College of Pharmacy, Kurubarahalli, Bangalore- 560086. Email: valley_college@rediffmail.com

ST SOPHIA Convent School (CBSE) Nagarabhavi requires Office Assistant, trained experienced Coordinators, Teachers for Nursery & Mathematics, Science English, Social Science for Primary & High School. Email us: principal@stsophiaconvent.org 9243031872

SRI AHAM AATHMA VIDYALAYA-[ICSE], Gruhalakshmi layout, Nagasandra post, Peenya Dasarahalli, Bangalore-73 Invites applications for the following posts with good English vocabulary for the academic year 2022-2023 (1) Computer science- BCA/ MCA/Geography (2) TEACHERS to teach all the subjects for Nursery/Primary/Middle/ High-school (3) Office Staff/Clerk/Date-Entry with Tally (4) Lab-assistant/ Librarian. Offers Attractive Salary. 'Transportation provided' Contact: 9880200172, 9663778869 Email: sriaavapplic@gmail.com

SRI-AYYAPPAN EDUCATIONAL INSTITUTIONS Nandidurga Road Behind Airtel Office BANGALORE-46 (Phone: 23433008) TRAINED TEACHERS REQUIRED FOR PRIMARY CLASSES MATHEMATICS SCIENCE.

CHRIST THE KING ENGLISH SCHOOL, Coxtown, Jeevanahalli, Bangalore-05 requires Fresh and Experienced Female Teachers for Primary and High School DEd/ TCH, BSc Bed, BA BEd, BSc Computers. Contact immediately Ph: 9886107212, 9980773758. Email: ctkscoxtown@yahoo.com

S.S.R GROUP of Institutions Wanted Lecturers in English, Hindi, Computer Science Commerce and Management Contact : 9480885702 /9606900576 send your resume to ssrtrust@gmail.com #25/4, Kyalasanahalli, Kothanur Post, Bengaluru- 560077.

SRI.VENKATESHWARA SCHOOL, Tavarekere, Madiwala Requires PE-TEACHER with BP.Ed/ MP.Ed. Secretary-9886447657 Mail: nagajois@gmail.com

REQUIRED TRAINED & Exp Lady Teachers for Computer, Music English & Hindi for High School and also Nursery. Hebbal Contact: 9008981637

MOTHER MARY School,Thippasandra requires immediately Teachers. Primary- ENGLISH. High School: HINDI.Call: 080-25281661.

Engg/ Production Technical

"WANTED DIPLOMA/B.E candidate from ECE,EEE and CSE,with Experience of 0/2Year only.Contact: "Yukthi Datasoft Pvt.Ltd". 9986934382"

Walk-in

DEC INFRASTRUCTURE & PROJECTS (INDIA) PVT. LTD.
Near CVH Guest House, MSR Gate, IISC Campus, Bangalore 560012
WALK IN INTERVIEW
Screening Test and Interview for **CIVIL and ELECTRICAL** Engineering Diploma, Graduate and Post Graduates against vacancies in IISC Project at Bangalore and NACIN Project at Palasamudram, Anantapur District, A.P. will be conducted from **08.07.2022 to 15.07.2022** (except on 10.07.2022) **from 9am to 5pm** in IISC Campus, Bangalore. Interested candidates may attend interview along with their bio-data and documents.
Laison officer: +91 9972241911

Marketing & Sales

WANTED SALES Fresher/Experience 2wheeler mandatory, 4wheeler DL advantage,Office in Sahakar nagar near Hebbal, Salary and incentive as per market Email:hr@kstewd.org 81399 62000

Multiple Vacancy

WANTED SALES Executive, Spare Parts Assistant and Shop Supervisor for a Two Wheeler Showroom in Koramangala & JP Nagar. Call: 9945083900, 9731028676.

OPPORTUNITYFOR RETIRED Officials, Bankers,NRI, Teachers, Professionals, Homemakers, CAs.Earn salary+ Incentives. CALL: 8095301555

Graphic Designers

WANTED MALE/ Female Graphic Designer (Corel Draw Photoshop Illustrator) for a Pvt Limited Company in around Rajajinagar. Contact: 9108458798/ 23384085

Accounts & Finance

B.COM GRADUATES WITH ABOVE 75% MARKS FRESHERS OR EXPERIENCED WITH 1 OR 2 YEARS IN ACCOUNTS AND COMPUTERS. SEND YOUR RESUME TO headoffice@acharya.co PH.NO.: 9901612959

General

WANTED APARTMENT Maintenance Supervisors Qualifcation Under Graduates EXP: 2-3years Salary 20,000 + Incentives Free-Family Accommodation Call:7338084555 9845053636:Mail glprojects7889@gmail.com

RELIANCE CLUB J.P.NAGAR 7th Phase Required ACCOUNTANTS, B.Com Graduates. Apply relianceclubnsp@gmail.com Phone- 7483831733

'SRI VIVEKANANDA Research Laboratories' wanted BSc CHEMISTS/ DME Chemical/ METALLURGIST, #22, 10th cross, D.I.E, Peenya 2nd stage, Bangalore-91 #9945371498, 8861008531

REAL ESTATE SELLING

Commerical

Rajajinagar

PG FOR Sale for 7 Crores at 4th block Rajajinagar. Area 2400 Sq.feet, 2 floors with all amenities. Contact Manohar Pai: 9620777194.

Flat

Mathikere

URGENT SALE of 2Bhk furnished flat 1257sqft Muthyalanagara 6500/-per sqft slightly negotiable. 9686973320

Sites

General

30X40 SITE at Chikka thirupathi for Rs.16.5 Lakhs. SBI approved.Call 7022206007

Vidyaranyapura

50 X 112 Ft CommercialNear Vidyaranyapura Main RoadPhone 82178 03911

RENTAL PROPERTIES

Accommodation Available

Commercial

RENT 2200 sq ft 3bhk duplex house for commercial purpose near Lingaraj nagar Global college Hubballi, 9449949819,8971124318

BUSINESS

Business to Business

Finance

WE ARRANGE Mortgage, Purchase, Construction & Completion of Construction, Takeover, Loans from Banks. Contact: 9353507002

Business Offers

Finance

OM NAMAH SHIVAY Loan Avail @ 3.5% per Annum Personal, Business, Project Takeover all types loan. Call & whatsApp :7678360713

NRI'S INVESTMENT And Finance Available On Low Interest Against Properties, Land& Building,Sites,Flats, Converted& Agriculture Lands Call: 7411265189

PUBLIC NOTICE

NOTICE
Notice is hereby given that the Share Certificate(s) with Account Number: 04/04484Share Certificate(s) No. 11576 for 2600 Ordinary Shares bearing Distinctive No(s) 21236831 to 21239430 of ITC Limited and the Share Certificate(s) No. 77785 for 1300 Ordinary Shares bearing Distinctive No(s) 2514046486 to 2514047785 of ITC Limited standing in the Name of V Damodhar has been reported Lost and that an application for issue of Duplicate Certificate(s) in respect thereof has been made to the Company's Investor Service Centre, ITC Limited 37, J L Nehru Road, Kolkata - 700 071 to whom Objection, if any, against issuance of such Duplicate Share Certificate(s) should be made within 15 days from the date of publication of this notice. The public are cautioned against dealing in any manner with these shares.

EDUCATIONAL

Correspondence Courses

DIRECT FINAL PUC B.Com BA BBA BCA MBA B.Ed Diploma BE D.Pharm PhD: 9739077186/ 8618506480

General

'A GUIDE To Customs Brokers Examination' Available At WWW.NOTIONPRESS.COM.

Special Courses

JOB ORIENTED Course Diploma in Student Counselling 6months ONLINE CLASSES, Starts 12.07.2022 WhatsApp 9886044221 www.darwinpsychologycentre.com

TOURS & TRAVEL

Travel

"NEPAL TOUR" EVERY MONTH Muktinath for Parents, Chandragiri for kids, Kathmandu- Mankamna- Pokhara for All! NALANDA TRAVELS, Kundapura- 8310028157

PERSONAL

Change of Name

6503376A SEP/ASH VISNOI SOBHARAJ MOHANRAM ASC Centre & College Mother name Records VISNOI SURTEE DEVI instead of SURTI Notary KV Mani

I, VIJAYA LAKSHMI W/o B. Vijay R/a#8.701, Sriram Sameeksha, Near GangammaGudi Police Station, Jalahalli East Bangalore- 560013 Have Changed My Name to S. VIJAYALAKSHMI vide Affidavit Dated 04-07-2022 Before Notary Sreedharan Nair P.N Bangalore.

RAJSILA RANJAN W/O JC674181H NB/SUB KRISHAN KANT KUMAR R/a CHERON BIHARSARIF NALANDA BIHAR my name RAJSILA RANJAN to RAJSHEELA RANJAN Notary KV Mani

6503376A SEP/ASH VISNOI SOBHARAJ MOHANRAM ASC Centre & College Father name Records VISNOI MOHANRAM instead of MOHANRAM Notary KV Mani

I, M.G. RAJESHWARI W/o G. Sukumaran R/a#49, 16th Cross, 1st A Main Road, VignanaNagar, New Thippasandra Post, Bangalore- 560075 Have Changed My Name to M.G. RAJESWARI vide Affidavit Dated 04-07-2022 Before Notary Sreedharan Nair P.N Bangalore.

I, DEVAKI S. W/o #1355817 Ex-Spr M. Gopi, residing at #908 HMT Layout Nagasandra 4th block 5th cross, Bangalore- 560073, have changed my name to DEVAKY S., vide affidavit dated 05.07.2022 before Notary C.V. Earappa, Bangalore.

I, MANDEM UTTHEJ have changed my name to GOLLAPALLI UTTHEJ vide affidavit dated 13-05-2022 before L. Puttaraju, Notary Bangalore.

I, TEJASHWINI SIDRAI KHANGAONKAR R/o.No.8A 1st Main, 1st Cross, Bhuvaneshwari Nagar, R.T.Nagar Post Bangalore-32 have changed my name to TEJASHWINI LOKESH GUNDKAL vide affidavit dated 16.10.2021, before notary Shri. S.N. Jalihal Belgavi, Henceforth I shall be known as TEJASHWINI LOKESH GUNDKAL.

Lost

DOCUMENT LOST
I, Lakhan A s/o Late Annadorai residing at #114 Dhobi Ghat, Brindavanagar have lost my Kodaikanal site document . Identification: survey # Ward "D" block #25,T.S #6 and 7. In this regard I have lodged a missing complaint with the lost article report reference no 0258059/2022. Finders please
Contact : 8660316509

LOST
I, Rekha Modi Gomes, have lost my Registered Property Sale Deed as No. BNG(U) - BLR(S) 6679/1998-1999, Dated: 03.02.1999 for Site No.A-15 of 2400 sft. in Sector 5 property situated at Greenville Layout, Junnasandra Village, Varthur Hobli, Bangalore East (Earlier South) Taluk. Finders please contact: 98450 14031.

LOST
I, Vivek K.R., R/o. #234, 1st Main, Anchekeri, Kengeri, Bengaluru - 560060 **have lost my Gift Deed Site No. 91/4, Situated at Kengeri. Near Kengeri Police Station. Document No. Identification 3132/67-68** while shifting my residence.
Finders please contact: 90087 23503

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

CONNECT ಕ್ಲಾಸಿಫೈಡ್ಸ್



ತ್ಯಾಜ್ಯ ತಾಣ ನಿರ್ಮೂಲನೆ: ಬಿಬಿಎಂಪಿಯಿಂದ ಬ್ಲ್ಯಾಕ್ ಸ್ಪಾಟ್‌ಗಳಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಕೆ

ನೆರವು ನೀಡಿದವರೇ 'ಪರಿಸರ ಹಿತೈಷಿ'

• ಆರ್. ಮಂಜುನಾಥ್

ರಸ್ತೆ ಮಧ್ಯೆ ಕಸ (ಸಾಂದರ್ಭಿಕ ಚಿತ್ರ)

ಬೆಂಗಳೂರು: ನಗರದಲ್ಲಿ ನಿತ್ಯವೂ ಕಸದ ತಾಣಗಳಾಗುವ (ಬ್ಲ್ಯಾಕ್ ಸ್ಪಾಟ್) ಸ್ಥಳಗಳನ್ನು ಕಸರಹಿತವನ್ನಾಗಿಸಲು ಬಿಬಿಎಂಪಿ ಹೊಸ ಯೋಜನೆ ರೂಪಿಸಿದೆ. ಇದರಲ್ಲಿ ನಾಗರಿಕರೂ ಭಾಗವಹಿಸಿದರೆ ಅವರಿಗೆ 'ಪರಿಸರ ಹಿತೈಷಿ' ಎಂಬ ಗೌರವವೂ ಸಿಗಲಿದೆ.

ರಸ್ತೆಗಳಲ್ಲಿ ಕಸ ಸಂಗ್ರಹವಾಗುತ್ತಿರುವ ತಾಣಗಳನ್ನು ಗುರುತಿಸಿರುವ ಬಿಬಿಎಂಪಿ, ಆ ಸ್ಥಳಗಳಲ್ಲಿ ಸಿ.ಸಿ.ಟಿ.ವಿ. ಕ್ಯಾಮೆರಾ ಅಳವಡಿಸಲು ನಿರ್ಧರಿಸಿದೆ. ಇಂತಹ ತಾಣಗಳ ಸಮೀಪದ ಮನೆ ಅಥವಾ ವಾಣಿಜ್ಯ ಅಂಗಡಿಗಳಲ್ಲಿ ಅಳವಡಿಸಿ, ಅದರ 'ಮಾನಿಟರ್' ಅನ್ನು ಇರಿಸಲಿದೆ. ಕಸವನ್ನು ಯಾರು ಹಾಕುತ್ತಾರೆ ಎಂಬ ಮಾಹಿತಿಯನ್ನು ಅವರು ಬಿಬಿಎಂಪಿಗೆ ನೀಡಬೇಕು. ಅದರ ಆಧಾರದಲ್ಲಿ ದಂಡ ವಿಧಿಸುವ, ಪ್ರಕರಣ ದಾಖಲಿಸುವ ಪ್ರಕ್ರಿಯೆಯನ್ನು ಅಧಿಕಾರಿಗಳು ನಿರ್ವಹಿಸಲಿದ್ದಾರೆ.

ಸಿ.ಸಿ.ಟಿ.ವಿ. ಕ್ಯಾಮೆರಾ ಅಳವಡಿಸಿಕೊಂಡು, ಮಾಹಿತಿ ನೀಡಿ ಕಸರಹಿತ ತಾಣವನ್ನಾಗಿಸಲು ಸಹಕರಿಸಿದ ಇಂತಹ ನಾಗರಿಕರಿಗೆ 'ಪರಿಸರ ಹಿತೈಷಿ' ಎಂಬ ಪ್ರಮಾಣಪತ್ರ ನೀಡಿ ಮುಖ್ಯ ಆಯುಕ್ತರು ಗೌರವಿಸಲಿದ್ದಾರೆ. ಮಾಹಿತಿ ಒದಗಿಸುವ ನಾಗರಿಕರ ಹೆಸರನ್ನು ಗೋಪ್ಯವಾಗಿರಿಸಲಾಗುತ್ತದೆ.

ಪ್ರಜಾವಾಣಿ ವಿಶೇಷ

ನಗರದಲ್ಲಿ ನಿತ್ಯವೂ ಕಸ ಸಂಗ್ರಹ ವಾಗುವ 1,549 ತಾಣಗಳಿವೆ. ಇದರಲ್ಲಿ 68 ತಾಣಗಳು ಶಾಶ್ವತ ತಾಣಗಳು. ಅಂದರೆ, ಈ ತಾಣಗಳಲ್ಲೇ ನಿತ್ಯವೂ ತ್ಯಾಜ್ಯ ಶೇಖರಣೆಯಾಗುತ್ತದೆ. ಇನ್ನುಳಿದ ಸ್ಥಳಗಳು ನಿತ್ಯವೂ ಬದಲಾಗುತ್ತವೆ. ಆದರೆ ಅದೇ ಪ್ರದೇಶದಲ್ಲೇ ಇರು ತ್ತವೆ. ನಾಗರಿಕರು ಅಲ್ಲಿ ಕಸವನ್ನು ಎಸೆಯುತ್ತಾರೆ ಅಥವಾ ತಂದು ಹಾಕುತ್ತಿದ್ದಾರೆ.

ಕಸ ಎಸೆಯುವುದರಿಂದಾಗುವ ಆರೋಗ್ಯ ಸಮಸ್ಯೆ, ಪರಿಣಾಮಗಳನ್ನು ತಿಳಿಸಿ, ಅದನ್ನು ನಿಲ್ಲಿಸಿ ಎಂಬ ಪ್ರಚಾರವನ್ನೂ ಕೈಗೊಳ್ಳಲಿದೆ. ಕಸವನ್ನು ವಿಂಗಡಿಸಿ ಸಂಗ್ರಹಕಾರರಿಗೆ ನೀಡಿ ಎಂದೂ ಹೇಳಲಿದೆ. ಇದರ ಜೊತೆಯಲ್ಲಿ ನಗರದಲ್ಲಿ ಎಲ್ಲೆಂದರಲ್ಲಿ ಕಸವನ್ನು ಎಸೆಯುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಬಿಬಿಎಂಪಿ ನಿರ್ಧರಿಸಿದೆ.

'ನಗರದಲ್ಲಿರುವ ಬ್ಲ್ಯಾಕ್ ಸ್ಪಾಟ್‌ಗಳಲ್ಲಿ ಸಿ.ಸಿ.ಟಿ.ವಿ. ಕ್ಯಾಮೆರಾ ಅಳವಡಿಸಿ ನಾಗರಿಕರ ಸಹಕಾರದೊಂದಿಗೆ ಕ್ರಮ ಕೈಗೊಂಡು ಕಸರಹಿತ ತಾಣಗಳನ್ನಾಗಿಸಲು ಯೋಜಿಸಲಾಗಿದೆ. ಈ ವ್ಯವಸ್ಥೆ ಇಲ್ಲದಿದ್ದರೂ ದಾಖಲೆಯೊಂದಿಗೆ ನಾಗರಿಕರು ಕಸ ಎಸೆಯುವವರ ಬಗ್ಗೆ ವಾರ್ಡ್ ಅಥವಾ ವಿಭಾಗೀಯ ಅಧಿಕಾರಿಗೆ ದೂರು ನೀಡಬಹುದು. ಅಂತಹವರ ಮಾಹಿತಿಯನ್ನೂ ಗೋಪ್ಯವಾಗಿರಿಸಲಾಗುತ್ತದೆ. ಹೀಗೆ ಕಸದ ತಾಣವನ್ನು ಕಸರಹಿತ ತಾಣವನ್ನಾಗಿಸಲು ನೆರವಾದವರಿಗೆ 'ಪರಿಸರ ಹಿತೈಷಿ' ಎಂಬ ಪ್ರಮಾಣ ಪತ್ರವನ್ನೂ ನೀಡಲಾಗುತ್ತದೆ' ಎಂದು ಬಿಬಿಎಂಪಿ ಘನತ್ಯಾಜ್ಯ ನಿರ್ವಹಣೆ ವಿಭಾಗದ ವಿಶೇಷ ಆಯುಕ್ತ ಹರೀಶ್ ಕುಮಾರ್ ತಿಳಿಸಿದರು.

ಕಸದ ತಾಣಗಳ ನಿರ್ಮೂಲನೆಗಾಗಿ ಸ್ಥಳೀಯ ನಿವಾಸಿಗಳ ಕಲ್ಯಾಣ/ಕ್ಷೇಮಾಭಿವೃದ್ಧಿ ಸಂಘಗಳನ್ನೂ ಸೇರಿಸಿಕೊಂಡು ವಲಯ ಅಧಿಕಾರಿಗಳು ಅರಿವು ಕಾರ್ಯಕ್ರಮ ನಡೆಸಲಿದ್ದಾರೆ ಎಂದರು.

ಎಲ್ಲೆಲ್ಲಿ ಬ್ಲ್ಯಾಕ್ ಸ್ಪಾಟ್

ವಲಯ	ಸಂಖ್ಯೆ
ಪೂರ್ವ	250
ಪಶ್ಚಿಮ	268
ದಕ್ಷಿಣ	230
ಮಹದೇವಪುರ	344
ಆರ್.ಆರ್.ನಗರ	86
ಯಲಹಂಕ	121
ದಾಸರಹಳ್ಳಿ	61
ಬೊಮ್ಮನಹಳ್ಳಿ	121
ಒಟ್ಟು;1,481	

ಆರ್.ಆರ್. ನಗರ ವಲಯದಲ್ಲಿ ಹೆಚ್ಚು

ಬಿಬಿಎಂಪಿ ವ್ಯಾಪ್ತಿಯಲ್ಲಿ ಒಟ್ಟು 68 ಶಾಶ್ವತ ಕಸದ ಸ್ಥಳಗಳಿವೆ. ನಾಲ್ಕು ವಲಯದಲ್ಲೇ ಈ ತಾಣಗಳಿವೆ. ಇದರಲ್ಲಿ ರಾಜರಾಜೇಶ್ವರಿ ನಗರ ವಲಯ ಪ್ರಥಮ ಸ್ಥಾನದಲ್ಲಿದೆ. ಈ ವಲಯದಲ್ಲಿ 27 ಶಾಶ್ವತ ಕಸದ ತಾಣಗಳಿವೆ. ನಂತರದ ಸ್ಥಾನ ದಕ್ಷಿಣ ವಲಯ (17), ಪೂರ್ವ ವಲಯ (14) ಹಾಗೂ ಮಹದೇವಪುರ ವಲಯ (10) ಇವೆ.

ಮಕ್ಕಳ ಡೈಪರ್ ಬದಲಿಸಲು ಪುರುಷರ ಶೌಚಾಲಯದಲ್ಲೂ ಕೊಠಡಿ

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ವ್ಯವಸ್ಥೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿರುವ ಪುರುಷರ ಶೌಚಾಲಯದಲ್ಲಿ ಮಕ್ಕಳ ಡೈಪರ್ ಬದಲಿಸಲು ವಿಶೇಷ ಕೊಠಡಿ ಮೀಸಲಿಡಲಾಗಿದ್ದು, ಇದರ ಫೋಟೊಗಳು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿವೆ.

'ಹೆಚ್ಚಿನ ಸಂದರ್ಭದಲ್ಲಿ ತಾಯಂದಿರೇ ಮಕ್ಕಳ ಡೈಪರ್ ಬದಲಿಸುತ್ತಾರೆ. ಆದರೆ, ವಿಮಾನ ನಿಲ್ದಾಣದ ಆಡಳಿತ ಮಂಡಳಿ ಈ ನಿಯಮವನ್ನು ಸಮಾನವಾಗಿ ಜಾರಿಗೆ ತರಲು ಇಚ್ಛಿಸಿದೆ. ಇದೇ ಕಾರಣಕ್ಕೆ ಪುರುಷರ ಶೌಚಾಲಯದಲ್ಲೂ ಮಕ್ಕಳ ಡೈಪರ್ ಬದಲಿಸಲು ವಿಶೇಷ ಕೊಠಡಿ ಮೀಸಲಿಟ್ಟಿದೆ. ಮಹಿಳೆಯರು ಇದನ್ನು ಗಮನಿಸಬೇಕು. ತಮ್ಮ ಪತಿಗೂ ಡೈಪರ್ ಬದಲಿಸಿಕೊಂಡು ಬರಲು ಧೈರ್ಯವಾಗಿ ಹೇಳಬಹುದು' ಎಂದು ಹಲವು ಪ್ರಯಾಣಿಕರು ಟ್ವೀಟ್ ಮಾಡಿದ್ದಾರೆ.

ಪುರುಷರ ಶೌಚಾಲಯದಲ್ಲಿರುವ ಮಕ್ಕಳ ಡೈಪರ್ ಬದಲಿಸುವ ಕೊಠಡಿ

'ಹಲವು ವಿಮಾನ ನಿಲ್ದಾಣಗಳಲ್ಲಿ ಮಹಿಳೆಯರ ಶೌಚಾಲಯದಲ್ಲಿ ಡೈಪರ್ ಬದಲಿಸಲು ಕೊಠಡಿಗಳು ಇರುತ್ತವೆ. ಬೆಂಗಳೂರು ನಿಲ್ದಾಣದಲ್ಲಿ ಪುರುಷರ ಶೌಚಾಲಯದಲ್ಲಿ ಇದೇ ಮೊದಲ ಬಾರಿಗೆ ಇಂಥ ಕೊಠಡಿ ನಿರ್ಮಿಸಲಾಗಿದೆ. ಹೊಸದಾಗಿ ಶೌಚಾಲಯಕ್ಕೆ ಹೋದವರಿಗೆ ಆಶ್ಚರ್ಯ ಆಗುತ್ತಿದೆ' ಎಂದೂ ಕೆಲವರು ಪ್ರತಿಕ್ರಿಯಿಸಿದ್ದಾರೆ.

'ಮಕ್ಕಳ ಪಾಲನೆ ಜವಾಬ್ದಾರಿಯನ್ನು ತಂದೆ–ತಾಯಿ ಸಮಾನವಾಗಿ ಸ್ವೀಕರಿಸಬೇಕು. ನಿಲ್ದಾಣಕ್ಕೆ ಬರುವ ಪುರುಷರು, ತಮ್ಮ ಮಕ್ಕಳ ಡೈಪರನ್ನು ತಾವೇ ಬದಲಿಸಲು ವಿಮಾನ ನಿಲ್ದಾಣ ಅವಕಾಶ ನೀಡಿದೆ' ಎಂದಿದ್ದಾರೆ.

ಕೆಲವರು, 'ಪುರುಷರ ಶೌಚಾಲಯದಲ್ಲಿ ಮಕ್ಕಳ ಡೈಪರ್ ಬದಲಿಸುವ ಕೊಠಡಿ ಏಕೆ ಎಂಬುದನ್ನು ನಾವೆಲ್ಲರೂ ಚಿಂತಿಸಬೇಕಿದೆ. ಇದಕ್ಕೆ ವಿಮಾನ ನಿಲ್ದಾಣದ ಆಡಳಿತ ಮಂಡಳಿಯಿಂದಲೂ ಪ್ರತಿಕ್ರಿಯೆ ನಿರೀಕ್ಷಿಸುತ್ತಿದ್ದೇವೆ' ಎಂದು ಟ್ವೀಟ್ ಮಾಡಿದ್ದಾರೆ.

ಪ್ಲಾಸ್ಟಿಕ್ ಚೀಲದಲ್ಲಿ ಮೃತದೇಹ

ಬೆಂಗಳೂರು: ಕಾಡುಗೋಡಿ ಠಾಣೆ ವ್ಯಾಪ್ತಿಯ ಬೆಳತೂರು ಬಳಿಯ ಚರಂಡಿಯಲ್ಲಿ ವ್ಯಕ್ತಿಯೊಬ್ಬರ ಮೃತದೇಹ ಮಂಗಳವಾರ ಪತ್ತೆಯಾಗಿದ್ದು, ಕೊಲೆ ಮಾಡಿ ಎಸೆದಿರುವ ಶಂಕೆ ವ್ಯಕ್ತವಾಗಿದೆ.

'35ರಿಂದ 45 ವಯಸ್ಸಿನ ವ್ಯಕ್ತಿಯನ್ನು ಕೊಲೆ ಮಾಡಿ, ಚರಂಡಿಯಲ್ಲಿ ಎಸೆಯಲಾಗಿದೆ. ಮೃತನ ಹೆಸರು ಗೊತ್ತಾಗಿಲ್ಲ. ಸ್ಥಳೀಯರ ಹೇಳಿಕೆ ಅನ್ವಯ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ' ಎಂದು ಕಾಡುಗೋಡಿ ಠಾಣೆ ಪೊಲೀಸರು ಹೇಳಿದರು.

'3 ದಿನಗಳ ಹಿಂದೆಯೇ ಕೊಲೆ ಮಾಡಿರುವ ಶಂಕೆ ಇದೆ. ಮೃತದೇಹವನ್ನು ಪ್ಲಾಸ್ಟಿಕ್ ಚೀಲದಲ್ಲಿ ತುಂಬಿ, ಚೀಲದ ಸಮೇತ ಚರಂಡಿಗೆ ಎಸೆಯಲಾಗಿದೆ. ಸೋಮವಾರ ಬೆಳಿಗ್ಗೆ ಚೀಲದ ಒಂದು ಭಾಗ ಹರಿದಿದ್ದರಿಂದ, ಸ್ಥಳೀಯರು ಮೃತದೇಹ ಗಮನಿಸಿದ್ದರು. ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ಸಾಗಿಸಲಾಗಿದೆ' ಎಂದೂ ತಿಳಿಸಿದರು.

ಗೌರಿ ಲಂಕೇಶ್ ಹತ್ಯೆ ಪ್ರಕರಣ: ಪಂಚನಾಮೆ ಸಾಕ್ಷಿ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪತ್ರಕರ್ತೆ ಗೌರಿ ಲಂಕೇಶ್ ಕೊಲೆ ಆರೋಪಕ್ಕೆ ಸಂಬಂಧಿಸಿದಂತೆ ಪಂಚನಾಮೆಗಳ ಸಾಕ್ಷಿ ವಿಚಾರಣೆ ಮಂಗಳವಾರ ನಡೆಯಿತು.

ಬೆಂಗಳೂರು ನಗರ ಪ್ರಧಾನ ಮತ್ತು ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶ ಚಂದ್ರಶೇಖರ ಮೃತ್ಯುಂಜಯ ಜೋಶಿ ಪಂಚನಾಮೆ ಸಾಕ್ಷಿಯಾದ ಕೃಷ್ಣ ಕುಮಾರ್ ಅವರ ಹೇಳಿಕೆಯನ್ನು ದಾಖಲಿಸಿಕೊಂಡರು.

ಕೃಷ್ಣಕುಮಾರ್ ಅವರು ಗೌರಿ ಕುಟುಂಬವರ ಆಪ್ತರಾಗಿದ್ದು ಸುದ್ದಿ ತಿಳಿದ ತಕ್ಷಣ ಸ್ಥಳಕ್ಕೆ ತೆರಳಿದ್ದರು. ಆ ಸಮಯದಲ್ಲಿ ಪೊಲೀಸರು ನಡೆಸಿದ ಪಂಚನಾಮೆಗೆ ಅವರು ಸಾಕ್ಷಿಯಾಗಿದ್ದಾರೆ. ಆರೋಪಿಗಳ ಪರ ವಕೀಲರಾದ ಕೃಷ್ಣಮೂರ್ತಿ, ಉಮಾಶಂಕರ್, ಗಂಗಾಧರ ಶೆಟ್ಟಿ, ರಾಜೇಶ್ ರೈ ಅವರು ಕೃಷ್ಣ ಕುಮಾರ್ ಅವರಿಗೆ ಕೇಳಿದ ಪ್ರಶ್ನೋತ್ತರ ಹೇಳಿಕೆಯನ್ನು ನ್ಯಾಯಾಧೀಶರು ದಾಖಲು ಮಾಡಿಕೊಂಡರು.

ಅಂತೆಯೇ, ನಗರದ ಗನ್ ಶಾಪ್‌ನಲ್ಲಿ ರಿಪೇರಿ ಕೆಲಸ ಮಾಡುವ ಸಯ್ಯದ್ ಶಬ್ಬೀರ್ ಅವರನ್ನು ಪ್ರಾಸಿಕ್ಯೂಷನ್ ಮತ್ತು ಆರೋಪಿಗಳ ಪರ ವಕೀಲರು ವಿಚಾರಣೆಗೆ ಒಳಪಡಿಸಿದರು.

ಗೌರಿ ಲಂಕೇಶ್

ಇದೇ ವೇಳೆ ನಗರದ ಪರಪ್ಪನ ಅಗ್ರಹಾರದಲ್ಲಿ ನ್ಯಾಯಾಂಗ ಬಂಧನದಲ್ಲಿರುವ 11 ಆರೋಪಿಗಳನ್ನೂ ವಿಡಿಯೊ ಕಾನ್ಫರೆನ್ಸ್ ಮುಖಾಂತರ ಹಾಜರುಪಡಿಸಲಾಗಿತ್ತು.

ಘಟನೆ ನಡೆದ ಸ್ಥಳದಲ್ಲಿ ಪೊಲೀಸರು ನಡೆಸಿದ್ದ ಮಹಜರು, ದೊರೆತ ವಸ್ತುಗಳನ್ನು ಕಂಡಿದ್ದ ವ್ಯಕ್ತಿಗಳ ಸಾಕ್ಷಿ ಹೇಳಿಕೆಯನ್ನು ನ್ಯಾಯಾಧೀಶರು ದಾಖಲು ಮಾಡಿಕೊಂಡರು. ವಿಚಾರಣೆಯನ್ನು ಬುಧವಾರಕ್ಕೆ (ಜು.6) ಮುಂದೂಡಲಾಗಿದೆ.

ಗೌರಿ ಲಂಕೇಶ್ ಅವರನ್ನು 2017ರ ಸೆಪ್ಟೆಂಬರ್ 5ರಂದು ರಾಜರಾಜೇಶ್ವರಿ ನಗರದಲ್ಲಿರುವ ಅವರ ನಿವಾಸದ ಹೊರಗೆ ಗುಂಡಿಟ್ಟು ಹತ್ಯೆ ಮಾಡಲಾಗಿತ್ತು.

ಚಿತ್ರಾವಳಿ

ನಾಗಸಂದ್ರದ ವಿನಾಯಕನಗರ ಮತ್ತು ವಿಕಾಸನಗರ ಬಡಾವಣೆಗಳಲ್ಲಿ ಭಾನುವಾರ ನಾಡಪ್ರಭು ಕೆಂಪೇಗೌಡರ ಜಯಂತಿ ಅಂಗವಾಗಿ ನಡೆದ ಮೆರವಣಿಗೆಯಲ್ಲಿ ಕಳಸ ಹೊತ್ತ ಮಹಿಳೆಯರು ಪಾಲ್ಗೊಂಡಿದ್ದರು. ಶಾಸಕ ಆರ್. ಮಂಜುನಾಥ ಭಾಗವಹಿಸಿದ್ದರು

ಬೆಂಗಳೂರು ದಕ್ಷಿಣ ತಾಲ್ಲೂಕು ಒಕ್ಕಲಿಗರ ಸಂಘದ ವತಿಯಿಂದ ದೊಡ್ಡಕಲ್ಲಸಂದ್ರದ ನಾರಾಯಣ ನಗರದಲ್ಲಿ ನಾಡಪ್ರಭು ಕೆಂಪೇಗೌಡರ ಜಯಂತಿ ಆಚರಿಸಲಾಯಿತು

ಡ್ರಗ್ಸ್ ಮಾರಾಟ: ನಾಲ್ವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉದ್ಯೋಗ ಅರಸಿ ನಗರಕ್ಕೆ ಬಂದು ಡ್ರಗ್ ಮಾರುತ್ತಿದ್ದ ನಾಲ್ವರು ಆರೋಪಿಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ಕೇರಳದ ಮುಹಮ್ಮದ್ ನಹೀಫ್, ಶೆಬಿನ್ ಜೋಸೆಫ್, ರೆಹಾನ್ ಬಾಬು ಹಾಗೂ ದಿಲ್ಶಾದ್ ಆಫ್ರಿದಿ ಬಂಧಿತರು. 70 ಗ್ರಾಂ ತೂಕದ ಎಂಡಿಎಂಎ ಡ್ರಗ್ಸ್ ಹಾಗೂ ನಾಲ್ಕು ಮೊಬೈಲ್‌ಗಳನ್ನು ಜಪ್ತಿ ಮಾಡಲಾಗಿದೆ' ಎಂದು ಸಿಸಿಬಿ ಮೂಲಗಳು ಹೇಳಿವೆ.

'ಎರಡು ವರ್ಷಗಳ ಹಿಂದೆ ನಗರಕ್ಕೆ ಬಂದಿದ್ದ ಆರೋಪಿಗಳು, ಖಾಸಗಿ ಕಂಪನಿಗಳಲ್ಲಿ ಕೆಲಸ ಆರಂಭಿಸಿದ್ದರು. ಅದರಿಂದ ಬಂದ ವೇತನ ಅವರಿಗೆ ಸಾಲುತ್ತಿರಲಿಲ್ಲ. ಆಫ್ರಿಕಾ ಪ್ರಜೆಯೊಬ್ಬರನ್ನು ಪರಿಚಯ ಮಾಡಿಕೊಂಡು, ಅವರ ಮೂಲಕ ಡ್ರಗ್ಸ್ ಖರೀದಿಸಿ ಮಾರಾಟ ಮಾಡಲಾರಂಭಿಸಿದ್ದರು' ಎಂದು ತಿಳಿಸಿವೆ.

'ಡ್ರಗ್ಸ್ ಮಾರಾಟ ಪ್ರಕರಣದಲ್ಲಿ ಆಫ್ರಿಕಾ ಪ್ರಜೆಯನ್ನು ಇತ್ತೀಚೆಗೆ ಬಂಧಿಸಲಾಗಿತ್ತು. ಆತನಿಂದಲೇ ನಾಲ್ವರು ಆರೋಪಿಗಳ ಮಾಹಿತಿ ಲಭ್ಯವಾಗಿತ್ತು. ಬಾಗಲೂರು ಠಾಣೆ ವ್ಯಾಪ್ತಿಯಲ್ಲಿ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಗಿದೆ' ಎಂದು ಹೇಳಿವೆ.

'ಎಂಡಿಎಂಎ ಮಾತ್ರೆಗಳನ್ನು ಗ್ರಾಂಗೆ ₹2 ಸಾವಿರದಿಂದ ₹3 ಸಾವಿರಕ್ಕೆ ಆರೋಪಿಗಳು ಖರೀದಿಸುತ್ತಿದ್ದರು. ಅದನ್ನೇ ₹8 ಸಾವಿರದಿಂದ ₹10 ಸಾವಿರಕ್ಕೆ ಮಾರುತ್ತಿದ್ದರು. ಕೆಲ ಕಾಲೇಜು ವಿದ್ಯಾರ್ಥಿಗಳು ಹಾಗೂ ಕೆಲ ಖಾಸಗಿ ಕಂಪನಿ ಉದ್ಯೋಗಿಗಳು ಆರೋಪಿಗಳ ಬಳಿ ಡ್ರಗ್ಸ್ ಖರೀದಿಸುತ್ತಿದ್ದರು' ಎಂದೂ ತಿಳಿಸಿವೆ.

ಕನ್ನಡ ಕಡೆಗಣನೆ: ಕಸಾಪದಿಂದ ಹೋರಾಟದ ಎಚ್ಚರಿಕೆ

ಬೆಂಗಳೂರು: ಕೇಂದ್ರ ಸರ್ಕಾರವು 'ಪಿ.ಎಂ. ಕಿಸಾನ್' ವೆಬ್‌ಸೈಟ್‌ನಲ್ಲಿ ಕನ್ನಡ ಕಡೆಗಣಿಸಿರುವುದನ್ನು ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ವಿರೋಧಿಸಿದ್ದು, 'ಕನ್ನಡಿಗರಿಗಾಗಿ ಬೀದಿಗಿಳಿಯುವುದು ಅನಿವಾರ್ಯ' ಎಂದು ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದ್ದಾರೆ.

'ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯಡಿ ರಾಜ್ಯದಲ್ಲಿ 50 ಲಕ್ಷಕ್ಕೂ ಹೆಚ್ಚು ಫಲಾನುಭವಿಗಳಿದ್ದಾರೆ. ಹೀಗಿರುವಾಗ ಯೋಜನೆಯ ವೆಬ್‌ಸೈಟ್‌ನಲ್ಲಿ ಕನ್ನಡ ಭಾಷೆಯನ್ನು ಕಡೆಗಣಿಸಿರುವುದು ಕನ್ನಡಿಗರ ಸ್ವಾಭಿಮಾನಕ್ಕೆ ಕೇಂದ್ರ ಸರ್ಕಾರವು ಗದಾಪ್ರಹಾರ ಮಾಡಿದಂತಾಗಿದೆ. ವೆಬ್‌ಸೈಟ್‌ನಲ್ಲಿ ಇಂಗ್ಲಿಷ್, ಅಸ್ಸಾಮಿ, ಗುಜರಾತಿ, ಹಿಂದಿ, ಮಲಯಾಳಂ, ಮರಾಠಿ, ತಮಿಳು ಹಾಗೂ ತೆಲುಗು ಭಾಷೆಗಳಿಗೆ ಮಾನ್ಯತೆ ನೀಡಲಾಗಿದೆ. ಆದರೆ, ಕನ್ನಡ ಭಾಷೆಯನ್ನು ಕಡೆಗಣಿಸುವ ಮೂಲಕ ಕನ್ನಡಿಗರಿಗೆ ಅನ್ಯಾಯ ಮಾಡಲಾಗಿದೆ. ಕೇಂದ್ರ ಸರ್ಕಾರದ ಇಬ್ಬಗೆಯ ನೀತಿ ಖಂಡನೀಯ' ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ದಕ್ಷಿಣ ಭಾರತದ ಬಹುತೇಕ ಎಲ್ಲ ಭಾಷೆಗಳನ್ನು ವೆಬ್‌ಸೈಟ್‌ನಲ್ಲಿ ಅಳವಡಿಸಿ, ಪ್ರಾಚೀನ ಹಾಗೂ ಶಾಸ್ತ್ರೀಯ ಸ್ಥಾನಮಾನ ಹೊಂದಿದ ಕನ್ನಡಕ್ಕೆ ಮನ್ನಣೆ ನೀಡದಿರುವುದು ಬೇಸರದ ಸಂಗತಿ. ಕೇಂದ್ರ ಸರ್ಕಾರ ಕರ್ನಾಟಕದ ಬಗ್ಗೆ ಅಸಡ್ಡೆ ತೋರುತ್ತಲೇ ಬಂದಿದೆ. ಪಿ.ಎಂ. ಕಿಸಾನ್ ವೆಬ್‌ಸೈಟ್ ಮಾಹಿತಿ ಪ್ರಕಾರ ಕೇರಳದಲ್ಲಿ 37 ಲಕ್ಷ, ಅಸ್ಸಾಂನಲ್ಲಿ 31 ಲಕ್ಷ ಫಲಾನುಭವಿಗಳಿದ್ದಾರೆ. ಕರ್ನಾಟಕದಲ್ಲಿ ಈ ಸಂಖ್ಯೆ 50 ಲಕ್ಷಕ್ಕೂ ಅಧಿಕವಿದೆ' ಎಂದು ಹೇಳಿದ್ದಾರೆ.

'ಕೇಂದ್ರ ಸರ್ಕಾರವು ವೆಬ್‌ಸೈಟ್‌ನಲ್ಲಿ ಕೂಡಲೇ ಕನ್ನಡ ಭಾಷೆಯನ್ನು ಅಳವಡಿಸಬೇಕು. ನಿರ್ಲಕ್ಷ್ಯ ತೋರಿದರೆ ಪರಿಷತ್ತು ಕೈಕಟ್ಟಿ ಕುಳಿತುಕೊಳ್ಳಲು ಸಾಧ್ಯವಿಲ್ಲ. ಸದ್ಯದಲ್ಲಿಯೇ ನಾಡಿನ ಸಾಹಿತಿಗಳು, ಚಿಂತಕರು ಹಾಗೂ ಹೋರಾಟಗಾರರೊಂದಿಗೆ ಈ ಬಗ್ಗೆ ಚರ್ಚೆ ನಡೆಸಲಾಗುವುದು. ಸಮಸ್ತ ಕನ್ನಡಿಗರ ಅಭಿಪ್ರಾಯ ಸಂಗ್ರಹಿಸಿ, ಕೇಂದ್ರ ಸರ್ಕಾರದ ವಿರುದ್ಧ ಬೀದಿಗಿಳಿದು ಪ್ರತಿಭಟನೆ ಮಾಡಲಾಗುವುದು' ಎಂದು ಎಚ್ಚರಿಸಿದ್ದಾರೆ.

ದಂಡ ತಪ್ಪಿಸಿಕೊಳ್ಳಲು ನಕಲಿ ಫಲಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿಚಕ್ರ ವಾಹನದ ಮೇಲೆ ವಿಧಿಸಿದ್ದ ₹28,500 ದಂಡದಿಂದ ತಪ್ಪಿಸಿಕೊಳ್ಳಲು ನಕಲಿ ನೋಂದಣಿ ಸಂಖ್ಯೆ ಫಲಕ ಅಳವಡಿಸಿಕೊಂಡಿದ್ದ ಆರೋಪದಡಿ ಮಾಲೀಕ ಆರ್. ನಿಖಿಲ್ ಎಂಬುವರ ವಿರುದ್ಧ ವಿಜಯನಗರ ಸಂಚಾರ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

'ವಿಜಯನಗರದ ಮಾರೇನಹಳ್ಳಿ ಜಂಕ್ಷನ್‌ನಲ್ಲಿ ಜುಲೈ 3ರಂದು ಕರ್ತವ್ಯದಲ್ಲಿದ್ದ ಸಿಬ್ಬಂದಿ, ಸಂಚಾರ ನಿಯಮ ಉಲ್ಲಂಘಿಸುವವರನ್ನು ತಡೆದು ದಂಡ ವಿಧಿಸುತ್ತಿದ್ದರು. ಅದೇ ಮಾರ್ಗವಾಗಿ ಹೊರಟಿದ್ದ ದ್ವಿಚಕ್ರ ವಾಹನದ (ಕೆಎ 02 ಜೆ 938) ಸವಾರ, ತನ್ನನ್ನು ತಡೆಯಲು ಬಂದ ಕಾನ್‌ಸ್ಟೆಬಲ್ ಹರೀಶ್ ಅವರನ್ನು ತಳ್ಳಿ ಪರಾರಿಯಾಗಲು ಯತ್ನಿಸಿದ್ದ. ಸಿಬ್ಬಂದಿ ಬೆನ್ನಟ್ಟಿದಾಗ, ರಸ್ತೆಯಲ್ಲಿ ವಾಹನ ಬಿಟ್ಟು ಓಡಿಹೋಗಿದ್ದ' ಎಂದು ಸಂಚಾರ ವಿಭಾಗದ ಜಂಟಿ ಕಮಿಷನರ್ ಬಿ.ಆರ್. ರವಿಕಾಂತೇಗೌಡ ಹೇಳಿದರು.

'ವಾಹನದ ಎಂಜಿನ್ ಹಾಗೂ ಚಾಸೀಸ್ ನಂಬರ್ ಪರಿಶೀಲಿಸಿದಾಗ, ವಾಹನದ ಅಸಲಿ ನೋಂದಣಿ ಸಂಖ್ಯೆ ಕೆಎ 02 ಜೆಜಿ- 9381 ಎಂಬುದು ತಿಳಿಯಿತು. ಸವಾರ ತನ್ನ ದ್ವಿಚಕ್ರ ವಾಹನದಲ್ಲಿ 55 ಸಂಚಾರ ನಿಯಮಗಳನ್ನು ಉಲ್ಲಂಘಿಸಿದ್ದ. ಇದಕ್ಕಾಗಿ ₹ 28,500 ದಂಡ ವಿಧಿಸಲಾಗಿತ್ತು. ಪೊಲೀಸರು ತನ್ನ ವಾಹನ ಹಿಡಿದು ಪೂರ್ತಿ ದಂಡ ವಸೂಲಿ ಮಾಡಬಹುದೆಂದು ತಿಳಿದ ಸವಾರ, ನೋಂದಣಿ ಸಂಖ್ಯೆ ಫಲಕವನ್ನೇ ಬದಲಿಸಿದ್ದ' ಎಂದು ತಿಳಿಸಿದರು.

'ಕಾನ್‌ಸ್ಟೆಬಲ್ ನೀಡಿದ್ದ ದೂರಿನನ್ವಯ ವಂಚನೆ ಆರೋಪದಡಿ ಮಾಲೀಕನ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ದ್ವಿಚಕ್ರ ವಾಹನ ಜಪ್ತಿ ಮಾಡಿ, ಮಾಲೀಕರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗಿದೆ' ಎಂದೂ ಹೇಳಿದರು.

ಜಾರ್ಖಂಡ್: 4 ಸಾವಿರ ಮೆಗಾವಾಟ್ ಸೌರವಿದ್ಯುತ್ ಉತ್ಪಾದಿಸಲು ನಿರ್ಧಾರ

ರಾಂಚಿ (ಪಿಟಿಐ): ಜಾರ್ಖಂಡ್ ರಾಜ್ಯವು 2026–27ರೊಳಗೆ ಸೌರಶಕ್ತಿಯಿಂದ ಒಟ್ಟು 4 ಸಾವಿರ ಮೆಗಾವಾಟ್ ವಿದ್ಯುತ್ ಉತ್ಪಾದನೆ ಮಾಡಲಿದೆ. ಮುಖ್ಯಮಂತ್ರಿ ಹೇಮಂತ ಸೊರೇನ್ ಅವರು ಮಂಗಳವಾರ ಬಿಡುಗಡೆ ಮಾಡಿರುವ ಸೌರಶಕ್ತಿ ನೀತಿ – 2022ರಲ್ಲಿ ಈ ಮಾಹಿತಿ ಇದೆ.

ಹೊಸ ನೀತಿಯ ಮೂಲಕ ಸೌರಶಕ್ತಿ ಕ್ಷೇತ್ರದಲ್ಲಿ ಹೂಡಿಕೆದಾರರನ್ನು ಆಕರ್ಷಿಸುವ ಉದ್ದೇಶವನ್ನೂ ರಾಜ್ಯವು ಹೊಂದಿದ್ದು, ಅವರಿಗೆ ಹಲವು ಅನುಕೂಲಗಳನ್ನು ಕಲ್ಪಿಸಲಾಗಿದೆ ಎಂದು ಸೊರೇನ್ ಹೇಳಿದ್ದಾರೆ. ಏಕಗವಾಕ್ಷಿ ವ್ಯವಸ್ಥೆ ಸೇರಿದಂತೆ ಇತರ ಹಲವು ಸೌಲಭ್ಯಗಳು ಹೂಡಿಕೆದಾರರಿಗೆ ಸಿಗಲಿವೆ.

ಜಮೀನು ಬ್ಯಾಂಕ್ ಮೂಲಕ ಅವರಿಗೆ ಜಮೀನಿನ ವ್ಯವಸ್ಥೆ ಮಾಡಿಕೊಡಲಾಗುತ್ತದೆ. 25 ಮೆಗಾವಾಟ್ ಹಾಗೂ ಅದಕ್ಕಿಂತ ಹೆಚ್ಚಿನ ಸಾಮರ್ಥ್ಯದ ಸೌರವಿದ್ಯುತ್ ಯೋಜನೆಗಳಿಗೆ ರಾಜ್ಯ ಮಟ್ಟದ ಉನ್ನತಾಧಿಕಾರ ಸಮಿತಿಯು ಅನುಮೋದನೆ ನೀಡುತ್ತದೆ ಎಂದು ನೀತಿಯಲ್ಲಿ ಹೇಳಲಾಗಿದೆ.

ಮನೆಯ ಛಾವಣಿ ಮೇಲೆ ಸೌರಫಲಕಗಳನ್ನು ಅಳವಡಿಸಿಕೊಳ್ಳುವ ನಗರವಾಸಿಗಳಿಗೆ, ಅವರ ವಾರ್ಷಿಕ ಆದಾಯವು ₹ 3 ಲಕ್ಷಕ್ಕಿಂತ ಕಡಿಮೆ ಇದ್ದರೆ ಸೌರಫಲಕ ಅಳವಡಿಕೆ ವೆಚ್ಚದ ಗರಿಷ್ಠ ಶೇಕಡ 80ರಷ್ಟನ್ನು ಸಬ್ಸಿಡಿ ರೂಪದಲ್ಲಿ ನೀಡಲಾಗುತ್ತದೆ ಎಂದು ಸೊರೇನ್ ಹೇಳಿದ್ದಾರೆ. ರಾಜ್ಯವು ಒಟ್ಟು ಒಂದು ಸಾವಿರ ಹಳ್ಳಿಗಳನ್ನು ಮಾದರಿ ಸೌರವಿದ್ಯುತ್ ಹಳ್ಳಿಗಳನ್ನಾಗಿ ಪರಿವರ್ತಿಸಲಿದೆ.

₹ 1.75 ಕೋಟಿ ವೆಚ್ಚದಲ್ಲಿ ಕೈಗೊಂಡಿರುವ ಯೋಜನೆ

ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ

ಪ್ರಜಾವಾಣಿ ವಾರ್ತೆ

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರ ವ್ಯಾಪ್ತಿಯ ಬಡಾವಣೆಗಳಲ್ಲಿ ₹1.75 ಕೋಟಿ ವೆಚ್ಚದಲ್ಲಿ ಕೈಗೊಂಡಿರುವ ರಸ್ತೆಗಳ ಅಭಿವೃದ್ಧಿ ಕಾಮಗಾರಿಗೆ ಶಾಸಕ ಕೃಷ್ಣ ಬೈರೇಗೌಡ ಚಾಲನೆ ನೀಡಿದರು.

ನಂತರ ಮಾತನಾಡಿ, 'ಭುವನೇಶ್ವರಿನಗರ ಹಾಗೂ ಸುತ್ತಮುತ್ತಲ ಬಡಾವಣೆಗಳಲ್ಲಿ ಈ ಹಿಂದೆಯೇ ಬಹುತೇಕ ರಸ್ತೆಗಳ ಡಾಂಬರೀಕರಣ ಕಾಮಗಾರಿ ಪೂರ್ಣಗೊಳಿಸಲಾಗಿತ್ತು. ನಂತರ ಕಾವೇರಿ ನೀರು, ಒಳಚರಂಡಿ ಮತ್ತು ಅನಿಲ ಪೈಪ್‌ಲೈನ್ ಅಳವಡಿಸುವ ಕಾಮಗಾರಿಯಿಂದ ಎಲ್ಲ ರಸ್ತೆಗಳನ್ನು ಅಗೆಯಲಾಗಿತ್ತು. ಹೀಗಾಗಿ, ಮತ್ತೆ ರಸ್ತೆಗಳ ಡಾಂಬರೀಕರಣ ಮಾಡಲಾಗುತ್ತಿದ್ದು, ಈಗಾಗಲೇ ಶೇ 70ರಷ್ಟು ಕಾಮಗಾರಿ ಪೂರ್ಣಗೊಂಡಿದೆ. ಬಾಕಿ ಇರುವ ಕಾಮಗಾರಿಯನ್ನು ಮುಗಿಸಲು ಚಾಲನೆ ನೀಡಲಾಗಿದೆ' ಎಂದು ತಿಳಿಸಿದರು.

ಭುವನೇಶ್ವರಿನಗರದಾಸರಹಳ್ಳಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿದ ಬಳಿಕ ಶಾಸಕ ಕೃಷ್ಣ ಬೈರೇಗೌಡ ಮಾತನಾಡಿದರು. ಕಾಂಗ್ರೆಸ್ ಮುಖಂಡರಾದ ಡಿ.ಬಿ.ಸುರೇಶ್ ಗೌಡ, ಡಿ.ಸಿ.ಮುನಿರಾಜು, ಡಿ.ಸಿ.ಮುನಿಸ್ವಾಮಿ, ಸುರೇಶ್ ಗೌಡ, ಸಹಾಯಕ ಎಂಜಿನಿಯರ್ ಸುರೇಶ್ ದೇವತ್ ರಾಜ್, ಗುತ್ತಿಗೆದಾರ ನಾರಾಯಣಗೌಡ ಹಾಜರಿದ್ದರು

ಕಾಂಗ್ರೆಸ್ ಮುಖಂಡರಾದ ಡಿ.ಬಿ. ಸುರೇಶ್‌ಗೌಡ, ಡಿ.ಸಿ.ಮುನಿರಾಜು, ಗೌರೀಶ್, ಸುರೇಶ್‌ಗೌಡ, ಎಚ್.ಎ. ಶಿವಕುಮಾರ್, ಟಿ.ವೆಂಕಟರಾಮರೆಡ್ಡಿ, ಗೋಕುಲ್ ರೆಡ್ಡಿ, ಬಿಬಿಎಂಪಿ ಸಹಾಯಕ ಕಾರ್ಯಪಾಲಕ ಎಂಜಿನಿಯರ್‌ಗಳಾದ ನಾಗಪ್ಪ, ಸುಂದರೇಶ್, ಸಹಾಯಕ ಎಂಜಿನಿಯರ್‌ಗಳಾದ ಸುರೇಶ್ ದೇವತ್‌ರಾಜ್, ಮಾಲತೇಶ್, ಗುತ್ತಿಗೆದಾರ ನಾರಾಯಣಗೌಡ ಉಪಸ್ಥಿತರಿದ್ದರು.



ನಿರ್ಮಾಪಕ ಕಿಶೋರ್‌ಗೆ ಶಸ್ತ್ರಚಿಕಿತ್ಸೆ

ಬೆಂಗಳೂರು: ಪ್ರಜ್ಞಾಹೀನ ಸ್ಥಿತಿಯಲ್ಲಿ ಶೇಷಾದ್ರಿಪುರದ ಅಪೋಲೊ ಆಸ್ಪತ್ರೆಗೆ ದಾಖಲಾಗಿದ್ದ ಚಲನಚಿತ್ರ ನಿರ್ಮಾಪಕ ಕಿಶೋರ್ ಪತ್ತಿಕೊಂಡ ಅವರಿಗೆ ಶಸ್ತ್ರ ಚಿಕಿತ್ಸೆ ನಡೆಸಲಾಗಿದ್ದು, ಸದ್ಯ ತೀವ್ರ ನಿಗಾ ಘಟಕದಲ್ಲಿ (ಐಸಿಯು) ಚಿಕಿತ್ಸೆ ನೀಡಲಾಗುತ್ತಿದೆ.

ಅಧಿಕ ರಕ್ತದೊತ್ತಡದಿಂದ ಪ್ರಜ್ಞಾಹೀನ ಸ್ಥಿತಿಗೆ ತಲುಪಿದ್ದ 40 ವರ್ಷದ ಕಿಶೋರ್ ಅವರನ್ನು ಸೋಮವಾರ ರಾತ್ರಿ ಅಪೋಲೊ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅವರನ್ನು ತಪಾಸಣೆಗೆ ಒಳಪಡಿಸಿದಾಗ ತಲೆಯಲ್ಲಿ ಆಗಿದ್ದ ರಕ್ತಸ್ರಾವವನ್ನು ಗುರುತಿಸಿ, ಶಸ್ತ್ರ ಚಿಕಿತ್ಸೆ ನಡೆಸಲಾಗಿತ್ತು.

'ಕಿಶೋರ್ ಅವರಿಗೆ ಸೋಮವಾರ ರಾತ್ರಿಯೇ ಶಸ್ತ್ರ ಚಿಕಿತ್ಸೆ ಮಾಡಲಾಗಿದೆ. ಐಸಿಯು ಘಟಕದಲ್ಲಿರುವ ಅವರಿಗೆ, ವೆಂಟಿಲೇಟರ್ ಸಂಪರ್ಕದೊಂದಿಗೆ ಚಿಕಿತ್ಸೆ ನೀಡಲಾಗುತ್ತಿದ್ದು, ಆರೋಗ್ಯದಲ್ಲಿ ಚೇತರಿಕೆ ಕಾಣುತ್ತಿದೆ' ಎಂದು ಆಸ್ಪತ್ರೆಯ ವೈದ್ಯರು ತಿಳಿಸಿದ್ದಾರೆ.

ಅಂತರರಾಷ್ಟ್ರೀಯ ಮಟ್ಟದ ಟನೆಲ್ ಅಕ್ವೇರಿಯಂ ನಿರ್ಮಾಣಕ್ಕೆ ಯೋಜನೆ

ಮತ್ಸ್ಯಾಲಯಕ್ಕೆ ಆಧುನಿಕ ಸ್ಪರ್ಶ

• ಆದಿತ್ಯ ಕೆ.ಎ.

ಬೆಂಗಳೂರು: ವಾಯುವಿಹಾರಿಗಳ ಹಾಗೂ ವೀಕ್ಷಕರ ಸ್ವರ್ಗದಂತಿರುವ ಕಬ್ಬನ್ ಪಾರ್ಕ್‌ನಲ್ಲಿರುವ ಮತ್ಸ್ಯಾಲಯಕ್ಕೆ ಮೀನುಗಾರಿಕೆ ಇಲಾಖೆ ಆಧುನಿಕ ಸ್ಪರ್ಶ ನೀಡಲು ಮುಂದಾಗಿದೆ.

ಇಲಾಖೆಗೆ ಸೇರಿದ್ದ ಮತ್ಸ್ಯಾಲಯವಿದ್ದರೂ ಹೊಸತನ ಇಲ್ಲದಿದ್ದರಿಂದ ಅದು ವೀಕ್ಷಕರ ಕೊರತೆ ಎದುರಿಸುತ್ತಿತ್ತು. ಮತ್ಸ್ಯಾಲಯಕ್ಕೆ ಮತ್ತೆ ಜೀವಕಳೆ ತರಲು ಇಲಾಖೆ ಯೋಜನೆ ರೂಪಿಸಿದೆ.

ವಿಭಿನ್ನ ಹಾಗೂ ವಿಶೇಷ ತಳಿಯ ಮೀನುಗಳು ಮತ್ಸ್ಯಾಲಯದಲ್ಲಿ ಇರಲಿಲ್ಲ. ಮತ್ಸ್ಯಾಲಯಕ್ಕೆ ಆಧುನಿಕ ಸ್ಪರ್ಶ ನೀಡಿ ಕರಾವಳಿ ಹಾಗೂ ಒಳನಾಡಿನಲ್ಲಿ ಸಿಗುವ ಅಲಂಕಾರಿಕ ಮೀನುಗಳನ್ನು ಅಕ್ವೇರಿಯಂನಲ್ಲಿ ಇಟ್ಟು ಪ್ರವಾಸಿಗರು, ಮಕ್ಕಳನ್ನು ತನ್ನತ್ತ ಸೆಳೆಯುವ ಯೋಜನೆ ಇದೆ ಎಂದು ಇಲಾಖೆ ಅಧಿಕಾರಿಗಳು ಮಾಹಿತಿ ನೀಡುತ್ತಾರೆ.

ಹಳೇ ಕಟ್ಟಡವನ್ನೇ ಉಳಿಸಿಕೊಂಡು ಸಾರ್ವಜನಿಕ ಸಹಭಾಗಿತ್ವದಲ್ಲಿ ಆಧುನೀಕರಣಕ್ಕೆ ಚಾಲನೆ ನೀಡಲಾಗಿದೆ. 1983ರಲ್ಲಿ ಈ ಮತ್ಸ್ಯಾಲಯ ಆರಂಭವಾಗಿತ್ತು. ಸ್ಥಳೀಯ ಹಾಗೂ ವಿದೇಶದ 70 ಜಾತಿಯ ಅಲಂಕಾರಿಕ ಮೀನುಗಳನ್ನಷ್ಟೆ ಪ್ರದರ್ಶಿಸಲಾಗುತ್ತಿತ್ತು. ಆಧುನಿಕ ಅಕ್ವೇರಿಯಂನಲ್ಲಿ ಹೆಚ್ಚಿನ ತಳಿಗಳ ಪ್ರದರ್ಶನಕ್ಕೆಅವಕಾಶ ಲಭಿಸಲಿದೆ.

ನಗರದ ಕಬ್ಬನ್ ಪಾರ್ಕ್‌ನ ಪ್ರವೇಶ ದ್ವಾರದಲ್ಲಿರುವ ಸರ್ಕಾರಿ ಮತ್ಸ್ಯಾಲಯ – ಪ್ರಜಾವಾಣಿ ಚಿತ್ರ / ಎಂ.ಎಸ್‌.ಮಂಜುನಾಥ್

ಮೀನಿಗೂ ತನ್ನದೇ ಸೌಂದರ್ಯವಿದೆ. ಬರೀ ಆದಾಯ ಗಳಿಕೆ ಮಾತ್ರವಲ್ಲದೆ ಮಕ್ಕಳು ಹಾಗೂ ಸಾರ್ವಜನಿಕರಿಗೆ ಅಲಂಕಾರಿಕ ಮೀನುಗಳ ಮಾಹಿತಿ ತಿಳಿಸುವ ಉದ್ದೇಶವೂ ಈ ಯೋಜನೆಗೆ ಇದೆ ಎಂದು ಅಧಿಕಾರಿಗಳು ಹೇಳುತ್ತಾರೆ.

ಕಾಮಗಾರಿ ಪೂರ್ಣಗೊಂಡರೆ ರಾಜ್ಯದಲ್ಲಿ ಮೊದಲ ಅಂತರರಾಷ್ಟ್ರೀಯ ಮಟ್ಟದ ಟನೆಲ್ ಅಕ್ವೇರಿಯಂ ಇದಾಗಲಿದೆ. 1 ಲಕ್ಷ ಲೀಟರ್ ಸಾಮರ್ಥ್ಯದ ಜಪಾನ್ ಕೋಯಿ ಫಿಶ್‌ಗಳ ಕೊಳ ನಿರ್ಮಾಣ ಮಾಡಲಾಗುತ್ತಿದೆ. ಇದಲ್ಲದೆ ಸುರಂಗ ಅಕ್ವೇರಿಯಂ, ಕ್ವಾರಂಟೈನ್ ಘಟಕ, ಕೆಫೆ ಹಾಗೂ ಅಕ್ವೇರಿಯಂ ಮೀನು ಮಳಿಗೆ ನಿರ್ಮಿಸಲು ನೀಲನಕ್ಷೆ ತಯಾರಿಸಲಾಗಿದೆ. ಹೊಸ ಕಟ್ಟಡದಲ್ಲಿ ಮಳೆ ನೀರು ಸಂಗ್ರಹ ವ್ಯವಸ್ಥೆ ಸಹ ಇರಲಿದೆ. ಎಲ್ಲವೂ ಆಧುನಿಕ ವ್ಯವಸ್ಥೆಯಿಂದ ಕೂಡಿರಲಿದೆ ಎಂಬುದು ಅಧಿಕಾರಿಗಳ ಮಾಹಿತಿ.

ಭಾರತೀಯರು ಹೆಚ್ಚಾಗಿ ಸಿಂಗಾಪುರ, ತೈವಾನ್, ಮಲೇಷ್ಯಾ ಸೇರಿದಂತೆ ವಿವಿಧ ದೇಶಗಳಿಗೆ ಅಕ್ವೇರಿಯಂ ವೀಕ್ಷಣೆಗೆ ತೆರಳುತ್ತಾರೆ. ಮುಂದಿನ ದಿನಗಳಲ್ಲಿ ಅಂತಹದ್ದೇ ವಾತಾವರಣವನ್ನು ಬೆಂಗಳೂರಿನಲ್ಲಿಯೇ ನೋಡಲು ಸಾಧ್ಯವಾಗಲಿದೆ. ಅಲಂಕಾರಿಕ ಮೀನುಗಳ ಕೆಲವು ತಳಿಗಳು ಕಣ್ಮರೆಯಾಗುತ್ತಿದ್ದು, ಅವುಗಳ ರಕ್ಷಣೆಗೂ ಇಲಾಖೆ ಮುಂದಾಗಿದೆ.

ಉದ್ಯಮದ ರೂಪ

ಅಲಂಕಾರಿಕ ಮೀನು ಉದ್ಯಮವು ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಕ್ಷೇತ್ರ. ಮನೆಯಲ್ಲಿ ಪುಟ್ಟ ಅಕ್ವೇರಿಯಂನಲ್ಲಿ ಅಲಂಕಾರಿಕ ಮೀನುಗಳ ಸಾಕಣೆ ಮಾಡುವವರ ಸಂಖ್ಯೆಯೂ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಯುವಕರು, ಖಾಸಗಿ ಉದ್ಯೋಗ ಬಿಟ್ಟು ಅಲಂಕಾರಿಕ ಮೀನು ಮಾರಾಟ ಮಾಡಿಯೂ ಹೆಚ್ಚಿನ ಆದಾಯ ಗಳಿಸುತ್ತಿದ್ದಾರೆ ಎಂದು ಅಧಿಕಾರಿಗಳು ಹೇಳುತ್ತಾರೆ.

ಅಕ್ವೇರಿಯಂ ಉದ್ಯಮದಲ್ಲಿ ಸಾಕಷ್ಟು ಆವಿಷ್ಕಾರ ಹಾಗೂ ಬದಲಾವಣೆಗಳು ನಡೆದಿವೆ. ಡಿಜಿಟಲ್ ತಂತ್ರಜ್ಞಾನದೊಂದಿಗೆ ಅಕ್ವೇರಿಯಂ ನಿರ್ಮಿಸಲಾಗುತ್ತಿದೆ

ರಾಮಾಚಾರ್ಯ, ನಿರ್ದೇಶಕ, ಮೀನುಗಾರಿಕೆ ಇಲಾಖೆ

ಸುದ್ದಿ 2 ನಿಮಿಷ

ನ್ಯಾಯಮೂರ್ತಿಗೇ ರಕ್ಷಣೆ ಇಲ್ಲದಿದ್ದರೆ ಹೇಗೆ: ಸಿದ್ದರಾಮಯ್ಯ ಪ್ರಶ್ನೆ

ಬೆಂಗಳೂರು: 'ವರ್ಗಾವಣೆ ಮಾಡುವುದಾಗಿ ನ್ಯಾಯಮೂರ್ತಿಗಳನ್ನೇ ಹೆದರಿಸಿದ್ದಾರೆ. ನ್ಯಾಯಮೂರ್ತಿಗಳಿಗೇ ರಕ್ಷಣೆ ಇಲ್ಲದಂತಾಗಿದೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಲಂಚ ಪಡೆದ ಪ್ರಕರಣದ ವಿಚಾರಣೆ ವೇಳೆ ಹೈಕೋರ್ಟ್ ನ್ಯಾಯಮೂರ್ತಿ ಎಚ್‌.ಪಿ. ಸಂದೇಶ್ ಅವರು, 'ಪ್ರಕರಣದಲ್ಲಿ ಪ್ರಭಾವ ಬೀರಲು ನ್ಯಾಯಮೂರ್ತಿಯೊಬ್ಬರು ಯತ್ನಿಸಿದ್ದು, ವರ್ಗಾವಣೆ ಬೆದರಿಕೆ ಒಡ್ಡಲಾಗಿದೆ' ಎಂದು ಮುಕ್ತ ಕಲಾಪದಲ್ಲಿ ಮೌಖಿಕವಾಗಿ ಆರೋಪಿಸಿದ್ದರು.

ಈ ಬಗ್ಗೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, 'ಲಂಚ ಪ್ರಕರಣದಲ್ಲಿ ಜಿಲ್ಲಾಧಿಕಾರಿ ಜೈಲಿಗೆ ಹೋಗಿರುವ ಪ್ರಕರಣದಲ್ಲಿ ನ್ಯಾಯಮೂರ್ತಿಯವರನ್ನು ಹೆದರಿಸುವ ಪ್ರಯತ್ನ ನಡೆದಿದೆ. ಸರ್ಕಾರ ಭ್ರಷ್ಟರಿಂದ ಹಣ ಪಡೆದು ಅವರ ರಕ್ಷಣೆಗೆ ನಿಂತಿರುವುದೇ ಈ ಸ್ಥಿತಿಗೆ ಕಾರಣ. ಒಂದು ವೇಳೆ ನ್ಯಾಯಮೂರ್ತಿಗಳು ಹೆದರಿದ್ದರೆ ಪ್ರಕರಣದಲ್ಲಿ ನ್ಯಾಯ ಸಿಗುತ್ತಿರಲಿಲ್ಲ' ಎಂದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, 'ನ್ಯಾಯಮೂರ್ತಿಗಳು ತಮ್ಮ ಸ್ಥಾನಕ್ಕೆ ಕಂಟಕ ಬಂದಿರುವ ರೀತಿಯ ಬಗ್ಗೆ ದುಗುಡದಿಂದ ಹೇಳಿಕೊಂಡಿದ್ದಾರೆ' ಎಂದರು.

ನ್ಯಾಯಮೂರ್ತಿ ಸಂದೇಶ್ ಹೇಳಿಕೆ ಬೆಂಬಲಿಸಿದ ವಕೀಲರ ಸಂಘ

ಬೆಂಗಳೂರು: 'ಲಂಚ ಪಡೆದ ಪ್ರಕರಣದಲ್ಲಿ ಆರೋಪಿಯಾಗಿ ಬಂಧನದಲ್ಲಿರುವ ಬೆಂಗಳೂರು ನಗರ ಜಿಲ್ಲೆಯ ವಿಶೇಷ ತಹಶೀಲ್ದಾರ್ ಪಿ.ಎಸ್.ಮಹೇಶ್ ಅರ್ಜಿ ವಿಚಾರಣೆ ವೇಳೆ ನ್ಯಾಯಮೂರ್ತಿ ಎಚ್.ಪಿ.ಸಂದೇಶ್ ಅವರು ಕೋರ್ಟ್‌ನ ಮುಕ್ತ ಕಲಾಪದಲ್ಲಿ ಆಡಿರುವ ಮಾತುಗಳು ವಕೀಲ ವೃಂದ ಮತ್ತು ಸಾರ್ವಜನಿಕರ ಆತ್ಮಸಾಕ್ಷಿಯನ್ನು ಕಲಕುವಂತಿದೆ' ಎಂದು ಬೆಂಗಳೂರು ವಕೀಲರ ಸಂಘ ಹೇಳಿದೆ.

'ಪ್ರಕರಣದಲ್ಲಿ ಪ್ರಭಾವ ಬೀರಲು ನ್ಯಾಯಮೂರ್ತಿಯೊಬ್ಬರು ಯತ್ನಿಸಿದ್ದು, ವರ್ಗಾವಣೆ ಬೆದರಿಕೆ ಒಡ್ಡಲಾಗಿದೆ ಎಂದು ನ್ಯಾಯಮೂರ್ತಿಗಳು ಮುಕ್ತ ಕಲಾಪದಲ್ಲಿ ಮೌಖಿಕ ಆರೋಪ ಮಾಡಿದ್ದಾರೆ. ಈ ಕುರಿತಂತೆ ಆಂತರಿಕ ವಿಚಾರಣೆ ನಡೆಸುವಂತೆ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಿಗೆ ಮನವಿ ಮಾಡಲಾಗುವುದು' ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

'ಇಂದು ಭ್ರಷ್ಟಾಚಾರ ಸಮಾಜದ ಎಲ್ಲ ಕ್ಷೇತ್ರಗಳಲ್ಲಿ ವ್ಯಾಪಕವಾಗಿ ಹರಡಿದೆ. ಹೀಗಾಗಿ, ಸಂದೇಶ್ ಅವರ ಮಾತುಗಳು ರಾಜ್ಯಾಂಗ, ಕಾರ್ಯಾಂಗ ಹಾಗೂ ನ್ಯಾಯಾಂಗಗಳ ಕಣ್ಣು ತೆರೆಸುವಂತಿದೆ. ಸ್ವಸ್ಥ ಸಮಾಜಕ್ಕಾಗಿ ಹಂಬಲಿಸಿರುವ ಸಂದೇಶ್ ಅವರ ಬೆನ್ನಿಗೆ ಸಂಘವು ಸದಾ ಆಸರೆಯಾಗಿ ನಿಲ್ಲುತ್ತದೆ' ಎಂದು ಪತ್ರದಲ್ಲಿ ವಿವರಿಸಲಾಗಿದೆ.

ಈ ಪತ್ರಕ್ಕೆ ಸಂಘದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ, ಪ್ರಧಾನ ಕಾರ್ಯದರ್ಶಿ ಟಿ.ಜಿ.ರವಿ ಮತ್ತು ಖಜಾಂಚಿ ಎಂ.ಟಿ.ಹರೀಶ್ ಸಹಿ ಮಾಡಿದ್ದಾರೆ.

'ಸಂಶೋಧನೆ, ಅಭಿವೃದ್ಧಿ ನೀತಿ ಶೀಘ್ರ ಜಾರಿ'

ಬೆಂಗಳೂರು: 'ಸಂಶೋಧನೆ ಮತ್ತು ಅಭಿವೃದ್ಧಿ ನೀತಿ' ಜಾರಿಗೆ ತರುತ್ತಿರುವ ಮೊದಲ ರಾಜ್ಯ ಕರ್ನಾಟಕವಾಗಿದ್ದು, ಈ ನೀತಿಯನ್ನು ನಿಟ್ಟಿನಲ್ಲಿ ವ್ಯವಸ್ಥಿತವಾಗಿ ಜಾರಿಗೆ ತರಬೇಕು' ಎಂದು ಅಧಿಕಾರಿಗಳಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೂಚಿಸಿದರು.

ನೀತಿ ಕುರಿತು ಪ್ರೊ. ಅಶೋಕ ಶೆಟ್ಟರ್ ನೇತೃತ್ವದ ಕಾರ್ಯಪಡೆ ಮತ್ತು ಹಿರಿಯ ಅಧಿಕಾರಿಗಳ ಸಭೆ ಮಂಗಳವಾರ ನಡೆಯಿತು.

ಶೆಟ್ಟರ್ ಅವರಿಂದ ಮಾಹಿತಿ ಪಡೆದ ಮುಖ್ಯಮಂತ್ರಿ, 'ಸಂಶೋಧನೆ ಮತ್ತು ಅಭಿವೃದ್ಧಿ ಕ್ಷೇತ್ರದಲ್ಲಿ ರಾಜ್ಯ ಮುಂಚೂಣಿಯಲ್ಲಿದ್ದರೂ ಈ ವಲಯವನ್ನು ಪರಿಗಣಿಸಿದಾಗ ಅಭಿವೃದ್ಧಿಗೆ ವಿಪುಲ ಅವಕಾಶವಿದೆ. ಆದ್ದರಿಂದ, ಈ ಕ್ಷೇತ್ರದ ಅಭಿವೃದ್ಧಿಗೆ ವ್ಯವಸ್ಥಿತ ಚೌಕಟ್ಟು ನೀಡುವ ಅಗತ್ಯವಿದೆ. ಜೊತೆಗೆ ನೀತಿಯು ಅತ್ಯಂತ ಸರಳವಾಗಿದ್ದು, ಜನಸಾಮಾನ್ಯರಿಗೂ ಅರ್ಥವಾಗುವಂತಿರಬೇಕು. ಸಂಶೋಧನೆ ಮತ್ತು ಅಭಿವೃದ್ಧಿಯ ಫಲಶ್ರುತಿ ಮಾನವನ ದೈನಂದಿನ ಜೀವನದಲ್ಲಿ ಬಳಕೆಯಾದಾಗ ಸಾರ್ಥಕ ವೆನಿಸುತ್ತದೆ. ಗ್ರಾಮೀಣ ಜನರು, ವ್ಯಕ್ತಿಗಳ ಸಂಶೋಧನೆಗಳಿಗೂ ಮಾನ್ಯತೆ ನೀಡುವ ವ್ಯವಸ್ಥೆ ರೂಪಿಸುವ ಅಗತ್ಯವಿದೆ. ಜೊತೆಗೆ, ನಿರ್ದಿಷ್ಟ ವಲಯಕ್ಕೆ ಸೀಮಿತವಾಗದೆ ಎಲ್ಲ ವಲಯಗಳಿಗೂ ಅನ್ವಯವಾಗುವಂತೆ ನೀತಿ ರೂಪಿಸಬೇಕು' ಎಂದು ಸಲಹೆ ನೀಡಿದರು.

'ನೀತಿಗೆ ಪೂರಕವಾಗಿ ರಾಜ್ಯಮಟ್ಟದ ಸಂಶೋಧನೆ ಮತ್ತು ಅಭಿವೃದ್ಧಿ ಪರಿಷತ್ ಹಾಗೂ ಫೌಂಡೇಷನ್‌ಗಳನ್ನು ಸ್ಥಾಪಿಸುವ ಮೂಲಕ ನೀತಿ ಜಾರಿಗೆ ಸಿದ್ಧತೆ ಮಾಡಿಕೊಳ್ಳಬೇಕು. ಉದ್ಯಮ, ಶೈಕ್ಷಣಿಕ ವಲಯ ಹಾಗೂ ಉದ್ಯಮದ ಸಂಶೋಧನಾ ಮತ್ತು ಅಭಿವೃದ್ಧಿ ಸಂಸ್ಥೆಗಳಿಗೂ ಪ್ರಾತಿನಿಧ್ಯ ನೀಡಬೇಕು' ಎಂದರು.

ಐಟಿ–ಬಿಟಿ, ಕೌಶಲಾಭಿವೃದ್ಧಿ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಇದ್ದರು.

ಅಧಿಕಾರ ಸ್ವೀಕಾರ

ಬೆಂಗಳೂರಿನ ರೋಟರಿ ಇಂದಿರಾ ನಗರದ 42ನೇ ಅಧ್ಯಕ್ಷರಾಗಿ ಎ.ಕೆ.ಸುಗುಣನ್ ಹಾಗೂ ಸದಸ್ಯರು ಅಧಿಕಾರ ಸ್ವೀಕರಿಸಿದರು. ಜಿತೇಂದ್ರ ಅನೇಜ, ಟಿ.ಎನ್. ಸುಬ್ರಹ್ಮಣ್ಯನ್ ಮೊದಲಾದವರು ಹಾಜರಿದ್ದರು - ಪ್ರಜಾವಾಣಿ ಚಿತ್ರ

ಕಾಂಗ್ರೆಸ್ ಮುಖಂಡರ ಸಭೆಯಲ್ಲಿ ಪ್ರಸ್ತಾಪ

ಕೋಲಾರದಿಂದ ಸ್ಪರ್ಧಿಸಲು ಸಿದ್ದರಾಮಯ್ಯಗೆ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋಲಾರ ಜಿಲ್ಲೆಯ ಕಾಂಗ್ರೆಸ್ ಮುಖಂಡರು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರನ್ನು ಮಂಗಳವಾರ ಭೇಟಿ ಮಾಡಿ, ಮುಂದಿನ ಚುನಾವಣೆಯಲ್ಲಿ ಕೋಲಾರ ಕ್ಷೇತ್ರದಿಂದ ಸ್ಪರ್ಧಿಸುವಂತೆ ಆಹ್ವಾನ ನೀಡಿದರು.

ಶಿವಾನಂದ ವೃತ್ತದಲ್ಲಿರುವ ಸಿದ್ದರಾಮಯ್ಯ ಅವರ ಸರ್ಕಾರಿ ನಿವಾಸದಲ್ಲಿ ನಡೆದ ಮಾತುಕತೆಯ ವೇಳೆ, 'ನೀವು ಕಣಕ್ಕಿಳಿಯುವುದಾದರೆ ನಾವೆಲ್ಲರೂ ಒಟ್ಟಾಗಿ ಗೆಲ್ಲಿಸುತ್ತೇವೆ' ಎಂದು ಮಾತು ನೀಡಿದರು. 'ನೀವು ಕ್ಷೇತ್ರಕ್ಕೆ ಬಂದರೆ ನಾನು ಸ್ಪರ್ಧಿಸದೆ ನಿಮ್ಮ ಪರ ಕೆಲಸ ಮಾಡುತ್ತೇನೆ' ಎಂದು ಜೆಡಿಎಸ್‌ನಿಂದ ಅಮಾನತುಗೊಂಡಿರುವ ಶಾಸಕ ಕೆ. ಶ್ರೀನಿವಾಸ್ ಗೌಡ ಅವರು ಹೇಳಿದರು.

ಕಾಂಗ್ರೆಸ್ ಮುಖಂಡರಾದ ಕೆ.ಆರ್. ರಮೇಶ್ ಕುಮಾರ್, ಕೃಷ್ಣ ಬೈರೇಗೌಡ, ನಜೀರ್ ಅಹಮ್ಮದ್, ಎಂ.ಸಿ. ಸುಧಾಕರ್, ಕೊತ್ತನೂರು ಮಂಜುನಾಥ್, ಮಾಲೂರು ನಂಜೇಗೌಡ, ಶಿಡ್ಲಘಟ್ಟದ ವಿ. ಮುನಿಯಪ್ಪ, ಸುಬ್ಬಾರೆಡ್ಡಿ, ಶರತ್ ಬಚ್ಚೇಗೌಡ ಸೇರಿದಂತೆ 20ಕ್ಕೂ ಹೆಚ್ಚು ನಾಯಕರು ಈ ವೇಳೆ ಇದ್ದರು. ಅಸಮಾಧಾನಗೊಂಡಿರುವ ಮಾಜಿ ಸಂಸದ ಕೆ.ಎಚ್. ಮುನಿಯಪ್ಪ ಹೊರತುಪಡಿಸಿ ಬಹುತೇಕ ಎಲ್ಲ ಮುಖಂಡರು ಸಿದ್ದರಾಮಯ್ಯ ಅವರ ಜೊತೆ ಚರ್ಚಿಸಿದ ನಡೆಸಿದರು.

ಈ ವೇಳೆ ಸಿದ್ದರಾಮಯ್ಯ, 'ನೀವು ನನ್ನ ಮೇಲೆ ನಂಬಿಕೆ ಇಟ್ಟು ಆಹ್ವಾನ ನೀಡಿದ್ದೀರಿ. ಆದರೆ, ನಾನು ಬಾದಾಮಿ ಕ್ಷೇತ್ರದ ಜನಪ್ರತಿನಿಧಿ. ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಸೋಲಿಸಿದರೂ ಬಾದಾಮಿ ಜನರು ಕೈಹಿಡಿದಿದ್ದಾರೆ. ಈಗ ಕ್ಷೇತ್ರ ಬದಲಿಸುವ ಮಾತು ಆಡಿದರೆ ಜನರಿಗೆ ತಪ್ಪು ಸಂದೇಶ ರವಾನೆಯಾಗಲಿದೆ. ನನ್ನನ್ನು ಗೆಲ್ಲಿಸಿದವರ ಅಭಿಪ್ರಾಯ ಆಲಿಸಬೇಕಿದೆ ಎಂದು ತಿಳಿಸಿದ್ದಾರೆ' ಎಂದೂ ಗೊತ್ತಾಗಿದೆ.

ಚಿಕ್ಕಬಳ್ಳಾಪುರ ಟಿಕೆಟ್‌ಗೆ ಪೈಪೋಟಿ?

ಪಕ್ಷದ ನಾಯಕರ ಜೊತೆ ಮುನಿಸಿಕೊಂಡಿರುವ ಕೆಪಿಸಿಸಿ ಉಪಾಧ್ಯಕ್ಷ ಎಂ. ಆರ್ ಸೀತಾರಾಂ ಅವರ ಪುತ್ರ, ಯುವ ಕಾಂಗ್ರೆಸ್ ಮುಖಂಡ ರಕ್ಷಾ ರಾಮಯ್ಯ ಅವರಿಗೆ ಚಿಕ್ಕಬಳ್ಳಾಪುರ ಕ್ಷೇತ್ರ ಟಿಕೆಟ್ ಭರವಸೆ ನೀಡಿದ ಬೆನ್ನಲ್ಲೆ, ಕೇಂದ್ರದ ಮಾಜಿ ಸಚಿವ ಆರ್.ಎಲ್. ಜಾಲಪ್ಪ ಅವರ ಮೊಮ್ಮಗ ವಿನಯ್ ಶ್ಯಾಮ್ ಪರ ಬೆಂಬಲಿಗರು ಕಾಂಗ್ರೆಸ್ ನಾಯಕರನ್ನು ಭೇಟಿ ಮಾಡಿ ಸಮಾಲೋಚನೆ ನಡೆಸಿದರು.

ರಕ್ಷಾ ರಾಮಯ್ಯಗೆ ಟಿಕೆಟ್ ಭರವಸೆಯನ್ನು ಸಿದ್ದರಾಮಯ್ಯ ಮತ್ತು ಡಿ.ಕೆ ಶಿವಕುಮಾರ್ ನೀಡಿದ್ದಾರೆ. ಆದರೆ, ವಿನಯ್ ಶ್ಯಾಮ್ ಅವರಿಗೆ ಟಿಕೆಟ್ ನೀಡುವಂತೆ ಒತ್ತಾಯಿಸಿ ಅವರ ನೂರಕ್ಕೂ ಹೆಚ್ಚು ಬೆಂಬಲಿಗರು ಡಿ.ಕೆ. ಶಿವಕುಮಾರ್ ಅವರನ್ನು ಮಂಗಳವಾರ ಭೇಟಿ ಮಾಡಿದರು.

ಎಸಿಬಿ ಎಸ್‌ಪಿಗೆ ₹50 ಲಕ್ಷ ಕೊಟ್ಟಿದ್ಯಾರು: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭ್ರಷ್ಟಾಚಾರ ನಿಗ್ರಹ ದಳದ (ಎಸಿಬಿ) ಎಸ್ಪಿ ಶ್ರೇಣಿಯ ಅಧಿಕಾರಿಗೆ ₹ 50 ಲಕ್ಷ ಕೊಟ್ಟವರು ಯಾರು? ಎಲ್ಲಿಂದ, ಯಾರಿಂದ ಹಣ ಪಡೆದರು ಎನ್ನುವ ಮಾಹಿತಿ ಬೇಕಾ ಮುಖ್ಯಮಂತ್ರಿಗೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಪ್ರಶ್ನಿಸಿದ್ದಾರೆ.

ಸುದ್ದಿಗಾರರ ಜತೆ ಮಂಗಳವಾರ ಮಾತನಾಡಿದ ಅವರು, 'ಎಸಿಬಿಗೆ ಕೋರ್ಟ್ ಛೀಮಾರಿ ಹಾಕಿದೆ. ಸರ್ಕಾರ ನಡೆಸುವ ಇವರಿಗೆ ನಾಚಿಕೆಯಾಗಬೇಕು' ಎಂದ ಅವರು, ಬಹುಕೋಟಿ ರೂಪಾಯಿ ಹಗರಣವಾಗಿರುವ ಪಿಎಸ್‌ಐ ನೇಮಕಾತಿ ಕರ್ಮಕಾಂಡದ ಬಗ್ಗೆ ನಾನು ಗಾಳಿಯಲ್ಲಿ ಗುಂಡು ಹೊಡೆದಿಲ್ಲ. ಇದ್ದುದನ್ನು ಇದ್ದ ಹಾಗೆಯೇ ಹೇಳಿದ್ದೇನೆ ಎಂದರು.

25 ಅಭ್ಯರ್ಥಿಗಳಿಂದ ತಲಾ ₹30 ಲಕ್ಷ ವಸೂಲಿ ಆಗಿದೆ ಅಂದರೆ ಒಟ್ಟು ಮೊತ್ತ ಎಷ್ಟಾಯ್ತು? 200-300 ಜನ ₹70 ಲಕ್ಷದಿಂದ ₹80 ಲಕ್ಷ ಕೊಟ್ಟಿದ್ದರೆ ಒಟ್ಟು ಹಣ ಎಷ್ಟಾಯ್ತು? ಹಗರಣದ ಕಿಂಗ್ ಪಿನ್ ಬೇರೆಯೇ ಇದ್ದು, ಅವರನ್ನು ಮೊದಲು ಬಂಧಿಸಿ ಎಂದು ಆಗ್ರಹಿಸಿದರು.

'ಕಾಂಗ್ರೆಸ್ ಅಧಿಕಾರದಲ್ಲಿ ಇದ್ದಾಗ ಹಿರಿಯ ಅಧಿಕಾರಿಯೊಬ್ಬರಿಗೆ ಸೇರಿದ್ದ ಯಶವಂತಪುರದ ಫ್ಲಾಟ್‌ನಲ್ಲಿ ₹5 ಕೋಟಿ ಸಿಕ್ಕಿತ್ತು. ಆ ಅಧಿಕಾರಿಗೆ ಮತ್ತೆ ರಕ್ಷಣೆ ನೀಡಿ, ಉನ್ನತ ಹುದ್ದೆ ಕೊಟ್ಟರು. ಇಂಥ ಪ್ರವೃತ್ತಿ ಕಾಂಗ್ರೆಸ್‌ನಿಂದ ಪ್ರಾರಂಭ ಆಗಿದ್ದು, ಈಗ ಬಿಜೆಪಿ ಅದನ್ನು ಮುಂದುವರಿಸಿದೆ. ಇದರಿಂದ ಯಾವುದೇ ಅಧಿಕಾರಿಗಳಿಗೆ ಭಯ ಇಲ್ಲವಾಗಿದೆ' ಎಂದರು.

ಸಂಕ್ಷಿಪ್ತ ಸುದ್ದಿ

ರಿಷಿ ಸುನಕ್ ರಾಜೀನಾಮೆ

ರಿಷಿ ಸುನಕ್

ಲಂಡನ್ (ಪಿಟಿಐ): 'ಕಳಂಕಿತ ಸಂಸದರೊಬ್ಬರನ್ನು ಸರ್ಕಾರದ ಆಯಕಟ್ಟಿನ ಸ್ಥಾನಕ್ಕೆ ನೇಮಿಸುವಲ್ಲಿ ತಪ್ಪಾಗಿದೆ' ಎಂದು ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ಹೇಳಿದ್ದಾರೆ. ಇದರ ಹಿಂದೆಯೇ, ಹಣಕಾಸು ಸಚಿವ ರಿಷಿ ಸುನಕ್ ರಾಜೀನಾಮೆ ನೀಡಿದ್ದಾರೆ.

ಆಹಾರ ಇಲಾಖೆಯ ಕಾರ್ಯದರ್ಶಿ ಸಾಜಿದ್ ಜಾವಿದ್ ಅವರ ರಾಜೀನಾಮೆಯ ಹಿಂದೆಯೇ ಸುನಕ್ ಅವರು ತಮ್ಮ ರಾಜೀನಾಮೆ ಪತ್ರವನ್ನು ಟ್ವಿಟರ್‌ನಲ್ಲಿ ರಿಷಿ ಸುನಕ್ ಪ್ರಕಟಿಸಿದ್ದಾರೆ. ಈ ಬೆಳವಣಿಗೆ ಬೋರಿಸ್ ಜಾನ್ಸನ್ ಅವರಿಗೆ ಹಿನ್ನಡೆಯಾಗಲಿದೆ ಎನ್ನಲಾಗಿದೆ.

ಅಮಾನತುಗೊಂಡಿರುವ ಸಂಸದ ಕ್ರಿಸ್ ಪಿಚ್ಚೆರ್ ಅವರ ವಿರುದ್ಧದ ಆರೋಪಗಳನ್ನು ಪ್ರಧಾನಮಂತ್ರಿಗಳ ಕಚೇರಿಯು ನಿರ್ವಹಣೆ ಮಾಡಿದ ಕ್ರಮ ಕುರಿತಂತೆ ರಿಷಿ ಸುನಕ್ ಈಚೆಗೆ ಮಾತನಾಡಿದ್ದರು.

'ಸರ್ಕಾರ ನಿಖರವಾಗಿ, ಪೂರ್ಣ ಪ್ರಮಾಣದಲ್ಲಿ ಹಾಗೂ ಗಂಭೀರವಾದ ಶೈಲಿಯಲ್ಲಿ ಕಾರ್ಯನಿರ್ವಹಿಸಬೇಕು ಎಂದು ಸಾರ್ವಜನಿಕರು ನಿರೀಕ್ಷೆ ಮಾಡುತ್ತಾರೆ' ಎಂದು ಸುನಕ್ ಅವರು ಟ್ವೀಟ್ ಮಾಡಿದ್ದಾರೆ.

'ಬಹುಶಃ ಇದು ಸಚಿವನಾಗಿ ನನ್ನ ಕೊನೆಯ ಕೆಲಸ ಎಂದು ಭಾವಿಸಿದ್ದೇನೆ. ಮೌಲ್ಯ, ಗುಣಮಟ್ಟಕ್ಕಾಗಿ ಹೋರಾಟ ಮಾಡುವುದರಲ್ಲಿ ನಾನು ನಂಬಿಕೆ ಇಟ್ಟಿದ್ದೇನೆ. ಇದೇ ಕಾರಣದಿಂದ ನನ್ನ ಸ್ಥಾನಕ್ಕೆ ರಾಜೀನಾಮೆ ನೀಡುತ್ತಿದ್ದೇನೆ' ಎಂದು ಹೇಳಿದ್ದಾರೆ.

ಅಗ್ನಿಪಥ: ವಾಯುಪಡೆಗೆ 7.5 ಲಕ್ಷ ಅರ್ಜಿ

ನವದೆಹಲಿ (ಪಿಟಿಐ): ಅಗ್ನಿಪಥ ಯೋಜನೆಯಡಿ ಒಟ್ಟು 7.5 ಲಕ್ಷ ಅರ್ಜಿಗಳನ್ನು ಸ್ವೀಕರಿಸಲಾಗಿದೆ ಎಂದು ವಾಯುಪಡೆ ತಿಳಿಸಿದೆ. ಜೂನ್ 24ರಂದು ಆರಂಭವಾಗಿದ್ದ ಆನ್‌ಲೈನ್ ನೋಂದಣಿ ಪ್ರಕ್ರಿಯೆ ಪೂರ್ಣಗೊಂಡಿದೆ ಎಂದು ವಾಯುಪಡೆ ಟ್ವೀಟ್ ಮಾಡಿದೆ.

ಕಳೆದ ನೇಮಕಾತಿ ಪ್ರಕ್ರಿಯೆಯಲ್ಲಿ 6,31,528 ಅರ್ಜಿಗಳನ್ನು ಸ್ವೀಕರಿಸಲಾಗಿತ್ತು. ಈ ಬಾರಿ ಒಟ್ಟು 7,49,899 ಅರ್ಜಿಗಳನ್ನು ಸ್ವೀಕರಿಸಲಾಗಿದೆ ಎಂದು ತಿಳಿಸಿದೆ.

ಅಗ್ನಿವೀರರಾಗಿ ಸೇವೆ ಸಲ್ಲಿಸಿದರಿಗೆ ರಾಜ್ಯ ಪೊಲೀಸ್ ನೇಮಕಾತಿಯಲ್ಲಿ ಪ್ರಾತಿನಿಧ್ಯ ನೀಡಲಾಗುವುದು ಎಂದು ಬಿಜೆಪಿ ಆಡಳಿತವಿರುವ ವಿವಿಧ ರಾಜ್ಯಗಳು ಈಗಾಗಲೇ ಘೋಷಿಸಿವೆ.

ಲೈಂಗಿಕ ಕಿರುಕುಳ ಐಎಎಸ್ ಅಧಿಕಾರಿ ಬಂಧನ

ಖುಂತಿ, ಜಾರ್ಖಂಡ್ (ಪಿಟಿಐ): ತರಬೇತಿ ನಿರತ ಐಐಟಿ ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ ನೀಡಿದ್ದ ಆರೋಪದಡಿ ಐಎಎಸ್ ಅಧಿಕಾರಿ, ಖುಂತಿ ಉಪ ವಿಭಾಗದ ಮ್ಯಾಜಿಸ್ಟ್ರೇಟ್ ಸೈಯದ್ ರಿಯಾಜ್ ಅಹಮ್ಮದ್ ಅವರನ್ನು ಪೊಲೀಸರು ಬಂಧಿಸಿದ್ದಾರೆ.

ಇವರನ್ನು ಸ್ಥಳೀಯ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ಕೋರ್ಟ್ ಆರೋಪಿಗೆ 14 ದಿನ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ. ಅಧಿಕಾರಿ ವಿರುದ್ಧ 2019ರಲ್ಲಿ ಪ್ರಕರಣ ದಾಖಲಾಗಿತ್ತು ಎಂದು ಪೊಲೀಸ್ ವರಿಷ್ಠಾಧಿಕಾರಿ ಅಮನ್ ಕುಮಾರ್ ತಿಳಿಸಿದರು.

ಬೋಟ್ ದುರಂತ: 22 ಮಂದಿ ಸಾವು

ಜಿನಿವಾ (ಎಎಫ್‌ಪಿ): ಲಿಬಿಯಾ ಕರಾವಳಿಯಲ್ಲಿ ಸಂಭವಿಸಿದ ಬೋಟ್ ದುರಂತದಲ್ಲಿ ಮಾಲಿ ದೇಶದ 22 ಮಂದಿ ವಲಸಿಗರು ಮೃತಪಟ್ಟಿದ್ದಾರೆ ಎಂದು ವಿಶ್ವಸಂಸ್ಥೆ ತಿಳಿಸಿದೆ.

ವಲಸಿಗರು ಜೂನ್ 22ರಂದು ಲಿಬಿಯಾದ ಝುವರಾ ನಗರದಿಂದ ರಬ್ಬರ್ ಬೋಟ್‌ನಲ್ಲಿ ಪ್ರಯಾಣ ಬೆಳೆಸಿದ್ದರು.

ರಕ್ತದ ಕ್ಯಾನ್ಸರ್: ಆಕರಕೋಶ ದಾನಕ್ಕೆ ಮನವಿ

ಬೆಂಗಳೂರು: 'ದೇಶದಲ್ಲಿ ಪ್ರತಿವರ್ಷ ಲಕ್ಷಕ್ಕೂ ಅಧಿಕ ಮಂದಿ ರಕ್ತದ ಕ್ಯಾನ್ಸರ್‌ಗೆ ಒಳಪಡುತ್ತಿದ್ದಾರೆ. ಆರೋಗ್ಯವಂತ ವ್ಯಕ್ತಿಗಳು ರಕ್ತದ ಆಕರಕೋಶ ದಾನ ಮಾಡುವ ಮೂಲಕ ರೋಗಿಗಳ ಚೇತರಿಕೆಗೆ ನೆರವಾಗಬೇಕು' ಎಂದು ಡಿಕೆಎಂಎಸ್–ಬಿಎಂಎಸ್‌ಟಿ ಫೌಂಡೇಷನ್ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಪ್ಯಾಟ್ರಿಕ್ ಪಾಲ್ ಮನವಿ ಮಾಡಿಕೊಂಡಿದ್ದಾರೆ.

'ದಾನಿಗಳ ರಕ್ತದಿಂದ ಆಕರ ಕೋಶಗಳನ್ನು ಪಡೆದು, ಅಸ್ಥಿಮಜ್ಜೆ ಹಾಳಾಗಿರುವಂತಹ ರೋಗಿಗಳಿಗೆ ಕಸಿ ಮಾಡಲಾಗುತ್ತದೆ. ಇದು ಅಗತ್ಯವಿರುವಂತಹ ರೋಗಿಗಳ ಕುಟುಂಬದಲ್ಲಿ ಹೊಂದಾಣಿಕೆಯಾಗಬಲ್ಲ ದಾನಿಗಳು ಸಿಗುವುದು ಶೇ 30ರಷ್ಟು ಮಾತ್ರ. ಉಳಿದವರು ಸಂಬಂಧಿಗಳಲ್ಲದ ದಾನಿಗಳ ಮೇಲೆ ಅವಲಂಬಿತರಾಗಬೇಕಾಗುತ್ತದೆ' ಎಂದು ಹೇಳಿದ್ದಾರೆ.

'ದಾನಿಗಳಿಂದ ಕೇವಲ 200ರಿಂದ 250 ಎಂ.ಎಲ್ ರಕ್ತವನ್ನಷ್ಟೇ ಪಡೆಯಲಾಗುತ್ತದೆ. ದಾನಿಗೆ ಯಾವುದೇ ಸಮಸ್ಯೆಯಾಗುವುದಿಲ್ಲ. ದಾನ ಮಾಡಲು ಇಚ್ಛಿಸುವವರು dkms-bmst.org ಮೂಲಕ ಹೆಸರು ನೋಂದಾಯಿಸಿಕೊಳ್ಳಬಹುದು' ಎಂದು ತಿಳಿಸಿದರು.

ಸಂಪರ್ಕಕ್ಕೆ: 080 68286500

₹32,200 ಕೋಟಿ ಹೂಡಿಕೆಗೆ ಒಪ್ಪಂದ

ಬೆಂಗಳೂರು: ಮಲೇಷ್ಯಾ ಮೂಲದ ಪೆಟ್ರೋನಾಸ್ ಹೈಡ್ರೋಜನ್ ಮತ್ತು ಕಾಂಟಿನೆಂಟಲ್ ಇಂಡಿಯಾ ಸಂಸ್ಥೆಗಳು ರಾಜ್ಯದಲ್ಲಿ ₹32,200 ಕೋಟಿ ಬಂಡವಾಳ ಹೂಡಿಕೆ ಮಾಡುವ ಒಪ್ಪಂದಗಳಿಗೆ ಸಹಿ ಮಾಡಿವೆ.

ಪೆಟ್ರೋನಾಸ್ ಹೈಡ್ರೋಜನ್ ಸಂಸ್ಥೆಯು ಮಂಗಳೂರಿನಲ್ಲಿ ನವೀಕರಿಸಬಹುದಾದ ಇಂಧನ ಘಟಕವನ್ನು ಸ್ಥಾಪಿಸಲು ₹31,200 ಕೋಟಿ ಹೂಡಿಕೆ ಮಾಡಲಿದ್ದು, ಇದರಿಂದ 3,000 ಉದ್ಯೋಗಗಳು ಸೃಷ್ಟಿಯಾಗಲಿವೆ. ಕಾಂಟಿನೆಂಟಲ್ ಇಂಡಿಯಾ ಬೆಂಗಳೂರಿನಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರ ಸ್ಥಾಪನೆಗೆ ₹1,000 ಕೋಟಿ ಬಂಡವಾಳ ಹೂಡಲಿದೆ. ಇದರಿಂದ 6,000 ಜನರಿಗೆ ಉದ್ಯೋಗ ಸಿಗಲಿದೆ.

ಕಾಂಟಿನೆಂಟಲ್ ಇಂಡಿಯಾ ಆಟೋಮೋಟಿವ್ ಸಾಫ್ಟ್‌ವೇರ್ ಅಭಿವೃದ್ಧಿ, ಸಂವಹನ ತಂತ್ರಜ್ಞಾನ ಉದ್ಯಮದಲ್ಲಿ ತೊಡಗಿರುವ ತಂತ್ರಜ್ಞಾನ ಕಂಪನಿ. ಬೆಂಗಳೂರಿನಲ್ಲಿ ಬೆಳೆಯುತ್ತಿರುವ ಆಟೋಮೋಟಿವ್ ಕ್ಷೇತ್ರದ ಸಂಶೋಧನೆ ಮತ್ತು ಅಭಿವೃದ್ಧಿಗೆ ಈ ಹೂಡಿಕೆ ಪೂರಕವಾಗಲಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಸಮ್ಮುಖದಲ್ಲಿ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಹೆಚ್ಚುವರಿ ಮುಖ್ಯಕಾರ್ಯದರ್ಶಿ ಡಾ.ಇ.ವಿ.ರಮಣ ರೆಡ್ಡಿ, ಪೆಟ್ರೋನಾಸ್ ಹೈಡ್ರೋಜನ್ ಸಿಇಒ ಅದ್ನಾನ್ ಅಹಮದ್, ಕಾಂಟಿನೆಂಟಲ್ ಇಂಡಿಯಾದ ಸಿಇಒ ಪ್ರಶಾಂತ್ ದೊರೆಸ್ವಾಮಿ ಒಪ್ಪಂದಕ್ಕೆ ಸಹಿ ಮಾಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಬೊಮ್ಮಾಯಿ, ಈ ಹೂಡಿಕೆ ಒಪ್ಪಂದಗಳು ನಿಗದಿತ ಅವಧಿಯಲ್ಲಿ ಜಾರಿಗೆ ಬರಬೇಕು. ಇದಕ್ಕೆ ಅಗತ್ಯವಿರುವ ಎಲ್ಲ ಸಹಕಾರವನ್ನು ರಾಜ್ಯ ಸರ್ಕಾರ ನೀಡಲಿದೆ ಎಂದು ಹೇಳಿದರು.

ಛಾಯಾಚಿತ್ರ ಪ್ರದರ್ಶನಕ್ಕೆ ಆಹ್ವಾನ

ಬೆಂಗಳೂರು: ಇಲ್ಲಿನ ಯೂಥ್ ಫೋಟೋಗ್ರಾಫಿಕ್ ಸೊಸೈಟಿಯು 40ನೇ ರಾಷ್ಟ್ರೀಯ ಛಾಯಾಚಿತ್ರ ಪ್ರದರ್ಶನ ಏರ್ಪಡಿಸಿದ್ದು, 18 ವರ್ಷದೊಳಗಿನವರು ಪಾಲ್ಗೊಳ್ಳಬಹುದು. ಈ ಪ್ರದರ್ಶನವು ಫೆಡರೇಶನ್ ಆಫ್ ಇಂಡಿಯನ್ ಫೋಟೋಗ್ರಫಿಯ ಮಾನ್ಯತೆ ಪಡೆದಿದೆ. ಆರು ವಿಭಾಗಗಳ ಅಡಿ ಆಯ್ಕೆಗೊಂಡ ಚಿತ್ರಗಳ ಪ್ರದರ್ಶನ ಆಯೋಜಿಸಲಾಗುತ್ತದೆ. ವಿವಿಧ ವಿಭಾಗಗಳಲ್ಲಿ ವಿಜೇತರಿಗೆ ಒಟ್ಟು ₹ 1.05 ಲಕ್ಷದವರೆಗೆ ನಗದು ಬಹುಮಾನ, ಪದಕ ಹಾಗೂ ರಿಬ್ಬನ್‌ಗಳನ್ನು ನೀಡಲಾಗುತ್ತದೆ.

ಭಾರತದ ಎಲ್ಲಾ ಹವ್ಯಾಸಿ ಹಾಗೂ ವೃತ್ತಿಪರ ಛಾಯಾಗ್ರಾಹಕರು ಇದರಲ್ಲಿ ಪಾಲ್ಗೊಳ್ಳಬಹುದಾಗಿದೆ. ಪ್ರಿಂಟ್ ವಿಭಾಗದಲ್ಲಿ ಜುಲೈ 13 ಹಾಗೂ ಡಿಜಿಟಲ್ ವಿಭಾಗದಲ್ಲಿ ಜುಲೈ 20 ಛಾಯಾಚಿತ್ರ ಕಳುಹಿಸಿಕೊಡಲು ಕೊನೆಯ ದಿನವಾಗಿದೆ.

ನಿಯಮಗಳಿಗೆ ವೆಬ್‌ಸೈಟ್ https://salon.ypsbengaluru.in ವೀಕ್ಷಿಸಿ. ಹೆಚ್ಚಿನ ಮಾಹಿತಿಗೆ ಪ್ರದರ್ಶನದ ಚೇರ್ಮನ್ ಕೃಷ್ಣ ಭಟ್ಟ (ಮೊ: 9945336316) ಅವರನ್ನು ಸಂಪರ್ಕಿಬಹುದು ಎಂದು ಪ್ರಕಟಣೆ ತಿಳಿಸಿದೆ.

ಮೈಸೂರು ರೇಸ್

ಅಶ್ವ ಮಗಧೀರ ಗೆಲ್ಲುವ ನಿರೀಕ್ಷೆ

ಮೈಸೂರು ಕೋಲ್ಟ್ಸ್ ಟ್ರಯಲ್ ಸ್ಟೇಕ್ಸ್ 2022 ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಅಶ್ವ ಮಗಧೀರ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಸೇಂಟ್ ಲೂಸಿಯಾ 2, ಸರ್ ಕ್ಯಾಲ್ಕ್ಯುಲಸ್ 1, ಸ್ಟಾರ್ ಪೆಕ್ 3
2ನೇ ರೇಸ್: ವಿಂಡ್ ಪವರ್ 3, ಕ್ಯಾಲಿಫೋರ್ನಿಯಾ ಗೋಲ್ಡ್ 14, ಕಂಟ್ರೆಸ್ ಫ್ಲಾಶ್ 2
3ನೇ ರೇಸ್: ಫಾರೆಸ್ಟ್ ವ್ಯೂ 2, ಸ್ವಿಸ್ ಟೈಗ್ರೆಸ್ 1, ಬ್ರೇಕ್ ಅವೇ 9
4ನೇ ರೇಸ್: ಸಾಂತೋರಿನಿ 2, ಫ್ಲಾಶ್ ಬಾಂಡ್ 4, ಡಿ ಲಾರ್ಡ್ 7
5ನೇ ರೇಸ್: ಮ್ಯೂಟಂಟ್ 1, ಮೋರ್ಗಾನೈಟ್ 6, ಅಸೆಂಡೆಂಟ್ 2
6ನೇ ರೇಸ್: ಅಶ್ವ ಮಗಧೀರ 1, ಸ್ಟಿಲ್ ಐ ರೈಸ್ 2, ವಂಡರ್‌ಫುಲ್ 6
7ನೇ ರೇಸ್: ಟ್ರೆಮಂಡಸ್ 9, ಆಲ್ ಗ್ರೇಟ್ ಫ್ರೆಂಡ್ಸ್ 4, ನಥಿಂಗ್ ಟು ವರಿ 2
8ನೇ ರೇಸ್: ಮ್ಯಾಜಿಕ್ ಸರ್ಕಲ್ 9, ಲವ್ಲಿ ಥಾಟ್ಸ್ 10, ಪರ್ಫೆಕ್ಟೊ ಪರ್ಫೆಕ್ಟೊ 7

ಉತ್ತಮ ಬೆಟ್: ಮ್ಯೂಟಂಟ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
4,5,6,7,8	1,2,3	3,4,5	6,7,8

ಯಾರೊಂದಿಗೂ ಹಸ್ತಲಾಘವ ಮಾಡಬೇಡಿ

ನಗರದಲ್ಲಿ ಇಂದು

ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಿಂದ ಪ್ರಾಜೆಕ್ಟ್ ಎಕ್ಸಿಬಿಷನ್–2022: ಅತಿಥಿಗಳು: ರವೀಂದ್ರ ಬಾಲಕೃಷ್ಣ ಶೇಟ್, ಸಮರ್ಥ ರಾಘವ ನಾಗಭೂಷಣಂ, ಮುರಳಿಕೃಷ್ಣನ್ ಜಿ., ಅಧ್ಯಕ್ಷತೆ: ಡಾ.ಎಂ.ಆರ್. ಜಯರಾಂ, ಎಂ.ಆರ್. ಸೀತಾರಾಂ, ಎಂ.ಆರ್. ರಾಮಯ್ಯ, ಬಿ.ಎಸ್. ರಾಮಪ್ರಸಾದ್, ಜಿ. ರಾಮಚಂದ್ರ, ಆಯೋಜನೆ ಮತ್ತು ಸ್ಥಳ: ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಳಿಗ್ಗೆ 10.30

ಪಠ್ಯಪುಸ್ತಕ ಪರಿಷ್ಕರಣೆ ಕುರಿತು ಸಂವಾದ: ಅತಿಥಿಗಳು: ಎಚ್.ಎನ್. ನಾಗಮೋಹನ ದಾಸ್, ವಿಷಯ ಮಂಡನೆ: ಪ್ರೊ.ಬರಗೂರು ರಾಮಚಂದ್ರಪ್ಪ, ರಾಜಪ್ಪ ದಳವಾಯಿ, ನಿರಂಜನಾರಾಧ್ಯ ವಿ.ಪಿ., ಬಿ.ಎಂ ಹನೀಫ್, ಕೆ.ಆರ್ ಸೌಮ್ಯ, ಅಧ್ಯಕ್ಷತೆ: ಜಿ.ಬಿ ಪಾಟೀಲ್, ಆಯೋಜನೆ: ವಿಶ್ವಮಾನವ ಕ್ರಾಂತಿಕಾರಿ ಮಹಾಕವಿ ಕುವೆಂಪು ಹೋರಾಟ ಸಮಿತಿ, ಸ್ಥಳ: ಗಾಂಧಿಭವನ, ಶೇಷಾದ್ರಿಪುರ, ಬೆಳಿಗ್ಗೆ 11

ಸತ್ಯು ಸಂಭ್ರಮ–93: 'ಚಿತೆಗೂ ಚಿಂತೆ' ಚಲನಚಿತ್ರ ಪ್ರದರ್ಶನ: ಚಿತ್ರಕಥೆ: ಜಾವೇದ್ ಸಿದ್ದಿಕಿ, ಸಂಭಾಷಣೆ: ಎಸ್. ರಾಮಸ್ವಾಮಿ, ನಿರ್ದೇಶನ: ಎಂ.ಎಸ್. ಸತ್ಯು, ನಿರ್ಮಾಣ: ಜಿ.ಎನ್. ಲಕ್ಷ್ಮೀಪತಿ, ಸಂಗೀತ: ಜಿ.ಕೆ. ವೆಂಕಟೇಶ್, ಉಪಸ್ಥಿತಿ: ಕನ್ನಡ ಚಲನಚಿತ್ರ ವಾಣಿಜ್ಯ ಮಂಡಳಿ, ಆಯೋಜನೆ: ವಿಭಿನ್ನ, ಸ್ಥಳ: ಎಡಿಎ ರಂಗಮಂದಿರ, ಸಂಜೆ 6

ಕುವೆಂಪು 118ನೇ ಜಯಂತಿ, **ದೇ.ಜವರೇಗೌಡ ಜಯಂತಿ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭ:** ಉದ್ಘಾಟನೆ: ಮಹೇಶ ಜೋಶಿ, ಅತಿಥಿಗಳು: ಸರ್ವೋತ್ತಮ ಶೆಟ್ಟಿ, ಟಿ.ಎಸ್. ನಾಗಾಭರಣ, ನಾಗತಿಹಳ್ಳಿ ರಮೇಶ್, ವ.ಚ. ಚನ್ನೇಗೌಡ, ವಿ.ಮನೋಹರ್, ಡಾ.ಕಿಕ್ಕೇರಿ ಕೃಷ್ಣಮೂರ್ತಿ, ಅಧ್ಯಕ್ಷತೆ: ವೂಡೇ.ಪಿ. ಕೃಷ್ಣ, ಆಯೋಜನೆ: ಕುವೆಂಪು ಕಲಾನಿಕೇತನ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಸಂಜೆ: 5.30

ರಾಜಾನುಕುಂಟೆ ಗ್ರಾಮ ಪಂಚಾಯಿತಿಯಿಂದ ₹44 ಲಕ್ಷ ವೆಚ್ಚದಲ್ಲಿ ನಿರ್ಮಾಣ

ತ್ಯಾಜ್ಯ ಸಂಸ್ಕರಣಾ ಘಟಕಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಯಲಹಂಕ: ರಾಜಾನುಕುಂಟೆ ಪಂಚಾಯಿತಿಯಿಂದ ನಿರ್ಮಿಸಿರುವ ತ್ಯಾಜ್ಯ ಸಂಸ್ಕರಣಾ ಘಟಕವನ್ನು ಸಚಿವ ಕೋಟಾ ಶ್ರೀನಿವಾಸ ಪೂಜಾರಿ ಉದ್ಘಾಟಿಸಿದರು.

ನಂತರ ಮಾತನಾಡಿ, 'ಮಲತ್ಯಾಜ್ಯ ವಿಲೇವಾರಿ ಮಾಡಲು ₹ 44 ಲಕ್ಷ ವೆಚ್ಚದಲ್ಲಿ ಘಟಕ ನಿರ್ಮಿಸಲಾಗಿದೆ. ಶೌಚಗುಂಡಿಗಳೂ ಸೇರಿ ಇಡೀ ತಾಲ್ಲೂಕಿನಲ್ಲಿ ಸಂಗ್ರಹವಾಗುವ ಮಲತ್ಯಾಜ್ಯವನ್ನು ತಂದು, ಇಲ್ಲಿ ಸಂಸ್ಕರಣೆ ಮಾಡಲು ವ್ಯವಸ್ಥೆ ಮಾಡಲಾಗಿದೆ. ಇದರಿಂದ ತ್ಯಾಜ್ಯ ವಿಲೇವಾರಿ ಸಮಸ್ಯೆಗೆ ಪರಿಹಾರ ಸಿಗಲಿದೆ' ಎಂದರು.

ಶಾಸಕ ಎಸ್.ಆರ್.ವಿಶ್ವನಾಥ್ ಮಾತನಾಡಿ, 'ನಗರದಲ್ಲಿ ತ್ಯಾಜ್ಯ ನಿರ್ವಹಣೆ ಘಟಕಗಳು ಕಾರ್ಯನಿರ್ವಹಿಸುತ್ತಿವೆ. ಆದರೆ, ಗ್ರಾಮೀಣ ಭಾಗದಲ್ಲಿ ತ್ಯಾಜ್ಯ ವಿಲೇವಾರಿ ಬಹಳ ದೊಡ್ಡ ಸಮಸ್ಯೆಯಾಗಿದೆ. ಇದಕ್ಕೆ ಪರಿಹಾರವೆಂಬಂತೆ ಸರ್ಕಾರದಿಂದ ಜಾಗವನ್ನು ಮಂಜೂರು ಮಾಡಿಸಿಕೊಂಡು ಕೇಂದ್ರ, ರಾಜ್ಯ ಸರ್ಕಾರಗಳ ಸಹಯೋಗದಲ್ಲಿ ಇಡೀ ರಾಜ್ಯದಲ್ಲೇ ಪ್ರಪ್ರಥಮವಾಗಿ ಈ ಘಟಕ ನಿರ್ಮಿಸಲಾಗಿದೆ. ಇದರಿಂದ ಐದು ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯ ಜನರಿಗೆ ಉಪಯೋಗವಾಗಲಿದೆ' ಎಂದು ತಿಳಿಸಿದರು.

ರಾಜಾನುಕುಂಟೆ ಗ್ರಾಮ ಪಂಚಾಯಿತಿ ವತಿಯಿಂದ ನಿರ್ಮಿಸಿರುವ ಮಲತ್ಯಾಜ್ಯ ಸಂಸ್ಕರಣಾ ಘಟಕವನ್ನು ಸಚಿವ ಕೋಟಾ ಶ್ರೀನಿವಾಸ ಪೂಜಾರಿ ಉದ್ಘಾಟಿಸಿದರು. ಶಾಸಕ ಎಸ್‌ಆರ್‌ವಿಶ್ವನಾಥ್, ವಿಧಾನಪರಿಷತ್ ಸದಸ್ಯರಾದ ಗೋಪಿನಾಥ್ ರೆಡ್ಡಿ, ಅ.ದೇವೇಗೌಡ, ಗ್ರಾಮ ಪಂಚಾಯಿತಿ ಅಧ್ಯಕ್ಷ ಕೆ.ವೀರಣ್ಣ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಾದ ನಾಗರಾಜ್, ರಾಜೇಶ್, ಮುಖಂಡರಾದ ದಿಬ್ಬೂರು ಜಯಣ್ಣ, ಎಸ್‌ಎನ್‌ರಾಜಣ್ಣ, ಹನುಮಯ್ಯ, ಸತೀಶ್ ಕಡತನಮಲೆ, ಮಂಜುನಾಥರೆಡ್ಡಿ, ಎಂ.ಮೋಹನ್ ಕುಮಾರ್, ಇತರರು ಇದ್ದರು

ಗ್ರಾಮ ಪಂಚಾಯಿತಿ ಅಧ್ಯಕ್ಷ ಕೆ.ವೀರಣ್ಣ ಮಾತನಾಡಿ, 'ಈ ಹಿಂದೆ ಮಲತ್ಯಾಜ್ಯವನ್ನು ಸೆಪ್ಟಿಕ್ ಟ್ಯಾಂಕ್ ಮೂಲಕ ಕೊಂಡೊಯ್ದು ರಸ್ತೆ ಬದಿ, ಚರಂಡಿ, ಕಾಲುವೆ ಮತ್ತು ಖಾಲಿ ಜಾಗಗಳಲ್ಲಿ ಸುರಿಯಲಾಗುತ್ತಿತ್ತು. ಇದರಿಂದ ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವುದರ ಜೊತೆಗೆ ಸಾರ್ವಜನಿಕರಿಂದ ದೂರುಗಳು ಕೇಳಿಬರುತ್ತಿದ್ದವು' ಎಂದು ಹೇಳಿದರು.

ವಿಧಾನಪರಿಷತ್ ಸದಸ್ಯರಾದ ಗೋಪಿನಾಥ್ ರೆಡ್ಡಿ, ಅ.ದೇವೇಗೌಡ, ಅಭಿವೃದ್ಧಿ ಅಧಿಕಾರಿಗಳಾದ ನಾಗರಾಜ್, ರಾಜೇಶ್, ಗ್ಲೋಬಲ್ ಟೆಕ್ನಾಲಜೀಸ್ ಸಂಸ್ಥೆಯ ನಿರ್ದೇಶಕ ಎ.ಸಿ. ಬಾಬಾಸಾಹೇಬ್, ಮುಖಂಡರಾದ ದಿಬ್ಬೂರು ಜಯಣ್ಣ, ಎಸ್.ಎನ್. ರಾಜಣ್ಣ, ಹನುಮಯ್ಯ, ಸತೀಶ್ ಕಡತನಮಲೆ, ಮಂಜುನಾಥರೆಡ್ಡಿ, ಎಂ.ಮೋಹನ್ ಕುಮಾರ್ ಉಪಸ್ಥಿತರಿದ್ದರು.

ಕಾನೂನು ವಿಶ್ವವಿದ್ಯಾಲಯದ ನೂತನ ಕುಲಪತಿ ಆಯ್ಕೆಗೆ ಪ್ರಕ್ರಿಯೆ

ಕಾಯ್ದೆ ಉಲ್ಲಂಘಿಸಿ ಶೋಧನಾ ಸಮಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹುಬ್ಬಳ್ಳಿಯಲ್ಲಿರುವ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ನೂತನ ಕುಲಪತಿ ಆಯ್ಕೆಗೆ ರಾಜ್ಯ ಸರ್ಕಾರದ ಕಾನೂನು ಇಲಾಖೆಯೇ ಕಾಯ್ದೆಗೆ ವ್ಯತಿರಿಕ್ತವಾಗಿ ಶೋಧನಾ ಸಮಿತಿ ನೇಮಕ ಮಾಡಿದೆ. ಈ ಬೆಳವಣಿಗೆ ಕುರಿತು ಕಾನೂನು ಪ್ರಾಧ್ಯಾಪಕರ ವಲಯದಲ್ಲಿ ಆಕ್ಷೇಪ ವ್ಯಕ್ತವಾಗುತ್ತಿದೆ.

ವಿಶ್ವವಿದ್ಯಾಲಯಕ್ಕೆ ಸಂಯೋಜನೆಗೊಂಡಿರುವ ಯಾವುದೇ ಸಂಸ್ಥೆಯ ನೌಕರರನ್ನು ಶೋಧನಾ ಸಮಿತಿಗೆ ನೇಮಿಸಲು ಅವಕಾಶವಿಲ್ಲ. ಅದನ್ನು ಉಲ್ಲಂಘಿಸಿ ಮೈಸೂರು ಜೆಎಸ್‌ಎಸ್ ಕಾನೂನು ಕಾಲೇಜಿನ ನಿವೃತ್ತ ಪ್ರಾಂಶುಪಾಲರೂ ಆಗಿರುವ ಹಾಲಿ ಮುಖ್ಯ ಕಾರ್ಯನಿರ್ವಾಹಕ ಪ್ರೊ.ಕೆ.ಎಸ್. ಸುರೇಶ್ ಅವರನ್ನು ನೇಮಿಸಲಾಗಿದೆ ಎಂದು ಕಾನೂನು ಪ್ರಾಧ್ಯಾಪಕರು ದೂರಿದ್ದಾರೆ.

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಕುಲಪತಿಯಾಗಿದ್ದ ಪ್ರೊ. ಈಶ್ವರ ಭಟ್ ಜೂನ್ 12ರಂದು ನಿವೃತ್ತರಾಗಿದ್ದರು. ವಿಶ್ವವಿದ್ಯಾಲಯದ ಅತ್ಯಂತ ಹಿರಿಯ ಡೀನ್ ರತ್ನಾ ಆರ್. ಭರಮಗೌಡರ್ ಪ್ರಭಾರ ಕುಲಪತಿಯಾಗಿದ್ದಾರೆ. ನೂತನ ಕುಲಪತಿ ನೇಮಕಕ್ಕೆ ಸೂಕ್ತ ಅಭ್ಯರ್ಥಿಗಳ ಹೆಸರುಗಳನ್ನು ಆಯ್ಕೆಮಾಡಿ, ಶಿಫಾರಸು ಮಾಡಲು ನಾಲ್ವರು ಸದಸ್ಯರ ಶೋಧನಾ ಸಮಿತಿ ರಚಿಸಿ ಜೂನ್ 23ರಂದು ಕಾನೂನು ಇಲಾಖೆ ಆದೇಶ ಹೊರಡಿಸಿದೆ.

ಭೋಪಾಲ್ ನ್ಯಾಷನಲ್ ಲಾ ಇನ್‌ಸ್ಟಿಟ್ಯೂಟ್ ಯೂನಿವರ್ಸಿಟಿ ಕುಲಪತಿ ಡಾ.ವಿ. ವಿಜಯಕುಮಾರ್ ಶೋಧನಾ ಸಮಿತಿ ಅಧ್ಯಕ್ಷರಾಗಿದ್ದು, ದೆಹಲಿಯ ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ನಾಗೇಶ್ವರ್ ರಾವ್, ಜಬಲ್ಪುರ್ ನ್ಯಾಷನಲ್ ಲಾ ಯೂನಿವರ್ಸಿಟಿ ಕುಲಪತಿ ಪ್ರೊ. ವಿ. ನಾಗರಾಜ್ ಮತ್ತು ಮೈಸೂರು ಜೆಎಸ್‌ಎಸ್ ಕಾನೂನು ಕಾಲೇಜಿನ ಪ್ರೊ. ಕೆ.ಎಸ್. ಸುರೇಶ್ ಅವರನ್ನು ಸದಸ್ಯರನ್ನಾಗಿ ನೇಮಿಸಲಾಗಿದೆ.

ಕಾಯ್ದೆ ಉಲ್ಲಂಘನೆ ಆರೋಪ: 'ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ಕಾಯ್ದೆ–2009ರ ಸೆಕ್ಷನ್ 14ರ ಅಡಿಯಲ್ಲಿ ನೂತನ ಕುಲಪತಿ ನೇಮಕಕ್ಕೆ ಶೋಧನಾ ಸಮಿತಿ ರಚಿಸಲಾಗಿದೆ. ಈ ಪ್ರಕ್ರಿಯೆಯಲ್ಲಿ ಈ ಕಾಯ್ದೆಯ ಸೆಕ್ಷನ್ 14(2) ಅನ್ನು ಉಲ್ಲಂಘಿಸಿರುವುದು ಸ್ಪಷ್ಟವಾಗಿ ಕಾಣಿಸುತ್ತಿದೆ' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಕಾನೂನು ಪ್ರಾಧ್ಯಾಪಕರೊಬ್ಬರು ಹೇಳಿದರು.

'ಸೆಕ್ಷನ್ 14(2)ರ ಪ್ರಕಾರ, ರಾಜ್ಯ ಸರ್ಕಾರ, ಕಾನೂನು ವಿಶ್ವವಿದ್ಯಾಲಯ ಅಥವಾ ಕಾನೂನು ವಿಶ್ವವಿದ್ಯಾಲಯದ ಜತೆ ಸಂಯೋಜನೆ ಹೊಂದಿರುವ ಯಾವುದೇ ಕಾಲೇಜು ಅಥವಾ ಸಂಸ್ಥೆಗೆ ಸೇರಿದ ವ್ಯಕ್ತಿಗಳನ್ನು ಶೋಧನಾ ಸಮಿತಿಗೆ ನೇಮಿಸುವಂತಿಲ್ಲ. ಜೆಎಸ್‌ಎಸ್ ಕಾನೂನು ಕಾಲೇಜು ನೇರವಾಗಿ ಕರ್ನಾಟಕ ರಾಜ್ಯ ಕಾನೂನು ವಿ.ವಿ. ಸಂಯೋಜಿತ ಕಾಲೇಜು. ಅಲ್ಲಿನ ನಿವೃತ್ತ ಪ್ರಾಂಶುಪಾಲರೂ ಆಗಿದ್ದು, ಹಾಲಿ ಆಡಳಿತ ಮಂಡಳಿಯಲ್ಲಿ ಮುಖ್ಯ ಕಾರ್ಯನಿರ್ವಾಹಕ ಹುದ್ದೆಯಲ್ಲಿರುವ ಕೆ.ಎಸ್. ಸುರೇಶ್ ಅವರನ್ನು ಶೋಧನಾ ಸಮಿತಿ ಸದಸ್ಯರನ್ನಾಗಿ ನೇಮಿಸಿರುವುದು ಕಾಯ್ದೆಯ ಉಲ್ಲಂಘನೆ' ಎಂದರು.

'ತಪ್ಪಾಗಿದ್ದರೆ ಸರಿಪಡಿಸಲಾಗುವುದು'

'ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಕುಲಪತಿ ನೇಮಕಕ್ಕೆ ರಚಿಸಿರುವ ಶೋಧನಾ ಸಮಿತಿ ಸದಸ್ಯರ ಆಯ್ಕೆಯಲ್ಲಿ ಲೋಪವಾಗಿದ್ದರೆ ಸರಿಪಡಿಸಲಾಗುವುದು. ಈ ಕುರಿತು ಇದುವರೆಗೆ ಯಾರೂ ನಮ್ಮ ಗಮನಕ್ಕೆ ತಂದಿಲ್ಲ. ಕಾನೂನು ಪ್ರಾಧ್ಯಾಪಕರಿಗೆ ಸಮಿತಿ ರಚನೆ ಕುರಿತು ಆಕ್ಷೇಪಗಳಿದ್ದರೆ ನೇರವಾಗಿ ನನಗೆ ತಿಳಿಸಬಹುದು' ಎಂದು ಕಾನೂನು ಇಲಾಖೆ ಪ್ರಧಾನ ಕಾರ್ಯದರ್ಶಿ ವೆಂಕಟೇಶ್ ನಾಯ್ಕ್ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಎಲ್‌ಇಟಿ ಉಗ್ರರಿಗೆ ಆಶ್ರಯ: ಬಿಜೆಪಿ ವಿರುದ್ಧ ತನಿಖೆಗೆ ಒತ್ತಾಯ

ಜಮ್ಮು (ಪಿಟಿಐ): ಲಷ್ಕರ್-ಎ-ತಯಬಾ ಸಂಘಟನೆಯ (ಎಲ್‌ಇಟಿ) ಭಯೋತ್ಪಾದಕ ತಾಲಿಬ್ ಹುಸೇನ್ ಬಿಜೆಪಿಯೊಂದಿಗೆ ಸಂಬಂಧ ಹೊಂದಿದ್ದಾನೆ ಎಂದು ಆರೋಪಿಸಿರುವ ಪೀಪಲ್ಸ್ ಡೆಮಕ್ರಾಟಿಕ್ ಪಕ್ಷವು (ಪಿಡಿಪಿ), ಬಿಜೆಪಿ ನಾಯಕತ್ವದ ವಿರುದ್ಧ ಉನ್ನತ ಮಟ್ಟದ ತನಿಖೆ ನಡೆಸಬೇಕೆಂದು ಒತ್ತಾಯಿಸಿ ಮಂಗಳವಾರ ಪ್ರತಿಭಟನೆ ನಡೆಸಿತು.

ಪಿಡಿಪಿಯ ಪ್ರಧಾನ ಕಾರ್ಯದರ್ಶಿ ಅಮರಿಕ್ ಸಿಂಗ್ ರೀನ್ ನೇತೃತ್ವದಲ್ಲಿ ಪಿಡಿಪಿ ಕಾರ್ಯಕರ್ತರು ಜಮ್ಮುವಿನ ಗಾಂಧಿನಗರದಲ್ಲಿರುವ ಪಕ್ಷದ ಪ್ರಧಾನ ಕಚೇರಿಯ ಮುಂಬದಿ ಪ್ರತಿಭಟನೆ ನಡೆಸಿದರು. ಅಲ್ಲದೇ ತಾಲಿಬ್ ಹಾಗೂ ಆತನ ಸಹಚರ ಫೈಸಲ್ ಅಹ್ಮದ್ ದಾರ್‌ನ ಪೂರ್ವಾಪರಗಳನ್ನು ಪರಿಶೀಲಿಸದೆ ಅವರ ಪ್ರವೇಶವನ್ನು ಬಿಜೆಪಿ ಸುಗಮಗೊಳಿಸಿದೆ ಎಂದರು.

ಹುಸೇನ್, ಬಿಜೆಪಿ ನಾಯಕರ ಜೊತೆಗಿರುವ ಕೆಲವು ಚಿತ್ರಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ಆದರೆ ಹುಸೇನ್ ಪಕ್ಷದ ಸಕ್ರಿಯ ಸದಸ್ಯ ಎಂಬ ಆರೋಪವನ್ನು ಬಿಜೆಪಿ ನಿರಾಕರಿಸಿದ್ದು, ಇದು ಬಿಜೆಪಿಯ ನಾಯಕರನ್ನು ಗುರಿಯಾಗಿಸಿ ಪಾಕಿಸ್ತಾನ ಮಾಡಿರುವ ಪಿತೂರಿಯ ಭಾಗ. ಹುಸೇನ್ ತಾನು ಸುದ್ದಿ ಸಂಸ್ಥೆಯೊಂದರ ವರದಿಗಾರ ಎಂದು ಪರಿಚಯಿಸಿಕೊಂಡು ಜಮ್ಮುವಿನ ಪಕ್ಷದ ಪ್ರಧಾನ ಕಚೇರಿಗೆ ಭೇಟಿ ನೀಡಿದ್ದ ಎಂದು ಬಿಜೆಪಿ ತಿಳಿಸಿದೆ.

ಆದರೆ, 'ಬಿಜೆಪಿ ನಾಯಕರು ಸುಳ್ಳು ಹೇಳಿಕೆಗಳನ್ನು ನೀಡುವ ಮೂಲಕ ಜನರನ್ನು ದಾರಿ ತಪ್ಪಿಸುತ್ತಿದ್ದಾರೆ. ವಾಸ್ತವದಲ್ಲಿ ಹುಸೇನ್ ಬಿಜೆಪಿಯ ಸದಸ್ಯ ಹಾಗೂ ಬಿಜೆಪಿಯ ಅಲ್ಪಸಂಖ್ಯಾತ ಸಮುದಾಯದ ಐಟಿ ಮತ್ತು ಸಾಮಾಜಿಕ ಮಾಧ್ಯಮದ ಮುಖ್ಯಸ್ಥ' ಎಂದು ಪಿಡಿಪಿ ವಕ್ತಾರ ವರೀಂದರ್ ಸಿಂಗ್ ಸೋನು ತಿಳಿಸಿದರು.

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಸಭೆಯಲ್ಲಿ ಹುಸೇನ್ ಹಾಜರಿದ್ದದ್ದನ್ನು ಪ್ರಶ್ನಿಸಿದ ಸೋನು, 'ಸಾಮಾಜಿಕ ಮಾಧ್ಯಮದಲ್ಲಿ ಈ ಬಗ್ಗೆ ಸೋರಿಕೆಯಾಗಿರುವ ಮಾಹಿತಿಗಳನ್ನು ಪರಿಶೀಲಿಸಿದರೆ, ಬಿಜೆಪಿಯಲ್ಲಿ ಹುಸೇನ್ ಇರುವ ಸಂಗತಿ ರಾಷ್ಟ್ರೀಯ ಭದ್ರತೆಗೆ ದೊಡ್ಡ ಅಪಾಯವಾಗಿದೆ' ಎಂದರು.

'ನೂಪುರ್ ಪ್ರಕರಣ: ಲಕ್ಷ್ಮಣರೇಖೆ ದಾಟಿದ ನ್ಯಾಯಮೂರ್ತಿಗಳು'

ಒಂದನೇ ಪುಟದಿಂದ

'ಇಬ್ಬರು ನ್ಯಾಯಮೂರ್ತಿಗಳ ಹೇಳಿಕೆಯು ನ್ಯಾಯಾಂಗದ ನೈತಿಕತೆಗೆ ಹೊಂದಿಕೆ ಆಗುವುದಿಲ್ಲ. ಅವರ ಅಭಿಪ್ರಾಯಗಳು ಎಲ್ಲ ಟಿವಿ ವಾಹಿನಿಗಳಲ್ಲಿ ಪ್ರಸಾರವಾಗಿ ಎಲ್ಲ ಕಡೆ ಚರ್ಚೆಗೆ ಗ್ರಾಸವಾಗಿದೆ. ತೀರ್ಪಿನ ಭಾಗವಾಗಿಲ್ಲದ ನ್ಯಾಯಮೂರ್ತಿಗಳ ಅಭಿಪ್ರಾಯಗಳು ನ್ಯಾಯಾಂಗದ ಔಚಿತ್ಯ ಹಾಗೂ ನ್ಯಾಯಸಮ್ಮತೆಗೆ ಕಪ್ಪುಚುಕ್ಕೆ' ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

'ಇಂತಹ ಅತಿರೇಕದ ಹೇಳಿಕೆಗಳಿಂದ ನ್ಯಾಯಾಂಗದ ಘನ ಇತಿಹಾಸಕ್ಕೆ ಧಕ್ಕೆ ಉಂಟಾಗುತ್ತದೆ. ತಮ್ಮ ವಿರುದ್ಧದ ಪ್ರಕರಣಗಳನ್ನು ಒಂದೇ ಕಡೆ ವಿಚಾರಣೆಗೆ ನಡೆಸಬೇಕು ಎಂದು ಕೋರಿ ನೂಪುರ್ ಶರ್ಮಾ ಅವರು ದೇಶದ ಅತ್ಯುನ್ನತ ನ್ಯಾಯಾಲಯಕ್ಕೆ ಮನವಿ ಮಾಡಿದ್ದರು. ನ್ಯಾಯಮೂರ್ತಿಗಳು ಅರ್ಜಿದಾರರ ಮೂಲಭೂತ ಹಕ್ಕುಗಳನ್ನು ಎತ್ತಿಹಿಡಿಯುವ ಕೆಲಸ ಮಾಡಿಲ್ಲ. ಜತೆಗೆ, ಅವರು ಅರ್ಜಿಯನ್ನೇ ವಾಪಸ್ ಪಡೆಯುವಂತೆ ಮಾಡಿದ್ದಾರೆ. ಜತೆಗೆ, ನ್ಯಾಯಮೂರ್ತಿಗಳ ಹೇಳಿಕೆಗಳು, ಅರ್ಜಿಯಲ್ಲಿದ್ದ ಅಂಶಗಳಿಗೆ ಸಂಬಂಧಪಟ್ಟಿರಲಿಲ್ಲ. ಇಂತಹ ಹೇಳಿಕೆಗಳು ನ್ಯಾಯಾಂಗದ ಇತಿಹಾಸದಲ್ಲಿ ದುರದೃಷ್ಟಕರ ಬೆಳವಣಿಗೆ. ಇದರಿಂದ ಅತಿದೊಡ್ಡ ಪ್ರಜಾಪ್ರಭುತ್ವದ ನ್ಯಾಯ ವ್ಯವಸ್ಥೆಯಲ್ಲಿ ಅಳಿಸಲಾಗದ ಗಾಯ ಉಂಟಾಗಿದೆ' ಎಂದು ಅವರು ಹೇಳಿದ್ದಾರೆ.

ಸುದ್ದಿವಾಹಿನಿಯೊಂದರ ಚರ್ಚಾ ಕಾರ್ಯಕ್ರಮದಲ್ಲಿ ಮಾತನಾಡುವಾಗ ಪ್ರವಾದಿ ಮಹಮ್ಮದರ ಕುರಿತು ನೂಪುರ್ ಶರ್ಮಾ ನೀಡಿದ್ದ ಹೇಳಿಕೆಗೆ ವ್ಯಾಪಕ ಆಕ್ಷೇಪ ವ್ಯಕ್ತವಾಗಿತ್ತು. ನೂಪುರ್ ಅವರ ಹೇಳಿಕೆ ವಿರುದ್ಧ ದೇಶದ ಹಲವೆಡೆ ಎಫ್‌ಐಆರ್ ದಾಖಲಾಗಿದ್ದವು. ಆ ಎಲ್ಲ ಎಫ್‌ಐಆರ್‌ಗಳನ್ನು ದೆಹಲಿಗೆ ವರ್ಗಾಯಿಸಬೇಕು ಎಂದು ಕೋರಿ ನೂಪುರ್ ಅವರು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಜೆ.ಬಿ. ಪಾರ್ದೀವಾಲಾ ಅವರಿದ್ದ ಪೀಠವು ಅರ್ಜಿಯ ವಿಚಾರಣೆ ನಡೆಸಿ, ನೂಪುರ್ ಅವರನ್ನು ತರಾಟೆಗೆ ತೆಗೆದುಕೊಂಡಿತ್ತು. 'ನೂಪುರ್ ಶರ್ಮಾ ಅವರ ಹಿಡಿತವಿಲ್ಲದ ಮಾತು ಇಡೀ ದೇಶಕ್ಕೆ ಬೆಂಕಿ ಹಚ್ಚಿದೆ. ದೇಶದಲ್ಲಿ ಈಗ ಏನಾಗುತ್ತಿದೆಯೋ ಅದಕ್ಕೆಲ್ಲಾ ಅವರೊಬ್ಬರೇ ಹೊಣೆ' ಎಂದೂ ಹೇಳಿತ್ತು.

ಮೈಸೂರು, ಕಲಬುರ್ಗಿಯಲ್ಲಿ ಕೃಷಿ ಜಾಗೃತಕೋಶ'

ಮೈಸೂರು: 'ಕಳಪೆ ಬಿತ್ತನೆ ಬೀಜ, ರಸಗೊಬ್ಬರಗಳನ್ನು ವಿತರಿಸುತ್ತಿರುವ ಕಾಳಸಂತೆಕೋರರ ಹೆಡೆಮುರಿ ಕಟ್ಟಲು ಮೈಸೂರು, ಕಲಬುರ್ಗಿಯಲ್ಲಿ ಜಾಗೃತ ಕೋಶವನ್ನು ಆರಂಭಿಸಲಾಗಿದೆ' ಎಂದು ಕೃಷಿ ಸಚಿವ ಬಿ.ಸಿ.ಪಾಟೀಲ ಹೇಳಿದರು.

ಇಲ್ಲಿನ ನಾಗನಹಳ್ಳಿಯ ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಆವರಣದಲ್ಲಿ ಮಂಗಳವಾರ ಕೋಶದ ಮೈಸೂರು ವಿಭಾಗೀಯ ಕಚೇರಿ ಉದ್ಘಾಟಿಸಿ ಅವರು ಮಾತನಾಡಿದರು. 'ಬೆಂಗಳೂರು ಮತ್ತು ಬೆಳಗಾವಿಯಲ್ಲಷ್ಟೇ ಜಾಗೃತ ಕೋಶವಿದ್ದು, ಈಗ ಕಂದಾಯ ಇಲಾಖೆ ಮಾದರಿಯಲ್ಲಿ ನಾಲ್ಕು ವಲಯಗಳನ್ನು ವಿಭಾಗಿಸಲಾಗಿದೆ. ಮೈಸೂರು ವ್ಯಾಪ್ತಿಗೆ ಮೈಸೂರು, ಮಂಡ್ಯ, ಹಾಸನ, ಚಾಮರಾಜನಗರ, ಶಿವಮೊಗ್ಗ, ಚಿಕ್ಕಮಗಳೂರು, ಕೊಡಗು, ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳು ಸೇರಿವೆ' ಎಂದರು.

'ಕೃಷಿ ಪರಿಕರಗಳ ವಹಿವಾಟಿನಿಂದ ರಾಜ್ಯಕ್ಕೆ ₹ 22 ಸಾವಿರ ಕೋಟಿ ಆದಾಯವಿದೆ. ಎರಡೂವರೆ ವರ್ಷದಲ್ಲಿ ₹ 27.11 ಕೋಟಿ ಮೌಲ್ಯದ ಕಳಪೆ ಬಿತ್ತನೆ ಬೀಜ ಹಾಗೂ ರಸಗೊಬ್ಬರಗಳನ್ನು ವಶಪಡಿಸಿಕೊಳ್ಳಲಾಗಿದೆ. 276 ಪ್ರಕರಣಗಳನ್ನು ದಾಖಲಿಸಿ 416 ಪರವಾನಗಿ ರದ್ದು ಮಾಡಲಾಗಿದೆ. 26 ಪ್ರಕರಣಗಳಲ್ಲಿ ನ್ಯಾಯಾಲಯವು ಶಿಕ್ಷೆ ವಿಧಿಸಿ, ₹ 15.5 ಲಕ್ಷ ದಂಡ ಹಾಕಿದೆ' ಎಂದರು.

'ರೈತ ವಿದ್ಯಾನಿಧಿಯಡಿ 7 ಲಕ್ಷ ಮಕ್ಕಳಿಗೆ ₹ 269 ಕೋಟಿ ಬಿಡುಗಡೆ ಮಾಡಲಾಗಿದೆ' ಎಂದು ಹೇಳಿದರು.

'ಶೇ 18 ಮಳೆ ಕೊರತೆ, ಶೇ 44 ಬಿತ್ತನೆ ಪೂರ್ಣ'

'ರಾಜ್ಯದಲ್ಲಿ ಮುಂಗಾರು ಹಂಗಾಮಿನಲ್ಲಿ ಶೇ 18ರಷ್ಟು ಮಳೆ ಕೊರತೆಯಾಗಿದೆ. 2.02 ಕೋಟಿ ಎಕರೆ ಭೂಮಿಯಲ್ಲಿ ಬಿತ್ತನೆ ಕೈಗೊಳ್ಳುವ ಗುರಿಯಿದ್ದು, ಶೇ 44ರಷ್ಟು ಬಿತ್ತನೆ ಪ್ರಕ್ರಿಯೆ ಮುಗಿದಿದೆ' ಎಂದು ಸಚಿವ ಪಾಟೀಲ ಮಾಹಿತಿ ನೀಡಿದರು.

'ಬಿತ್ತನೆ ಬೀಜ, ರಸಗೊಬ್ಬರಕ್ಕೆ ಕೊರತೆಯಿಲ್ಲ. ಬೇಡಿಕೆಗೆ ತಕ್ಕಂತೆ ಪೂರೈಸಲಾಗುತ್ತಿದ್ದು, ರೈತರು ನಿರಾಳವಾಗಿರಬಹುದು. ಡಿಎಪಿ 64.4 ಸಾವಿರ ಟನ್, ಎಂಒಪಿ 24.8 ಸಾವಿರ ಟನ್, ಕಾಂಪ್ಲೆಕ್ಸ್ 3.1 ಲಕ್ಷ ಟನ್, 2.7 ಲಕ್ಷ ಟನ್ ದಾಸ್ತಾನಿದೆ' ಎಂದು ಜಿಲ್ಲಾ ಪಂಚಾಯಿತಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಪಿಎಸ್‌ಐ ಲಂಚ: ಪೌಲ್‌ಗೆ ಶೇ 20ರಷ್ಟು ಪಾಲು?

ಒಂದನೇ ಪುಟದಿಂದ

'ಎಡಿಜಿಪಿ ಅಮ್ರಿತ್ ಪೌಲ್ ಅವರ ಸೂಚನೆಯಂತೆ ಭದ್ರತಾ ಕೊಠಡಿ ಕೀ ತೆರೆದು, ಅಭ್ಯರ್ಥಿಗಳ ಒಎಂಆರ್ ಪ್ರತಿ ತಿದ್ದುಪಡಿ ಮಾಡಲಾಗಿತ್ತು. ಅಕ್ರಮದಿಂದ ಬಂದ ಹಣದಲ್ಲಿ ಪ್ರಭಾವಿಗಳು, ಎಡಿಜಿಪಿ... ಎಲ್ಲರಿಗೂ ಪಾಲು ಹೋಗಿದೆ' ಎಂಬುದಾಗಿ ಡಿವೈಎಸ್ಪಿ ಹೇಳಿಕೆ ನೀಡಿದ್ದರು. ಈ ಹೇಳಿಕೆಯೇ ಅಮ್ರಿತ್ ಪೌಲ್ ಬಂಧಿಸಲು ಪ್ರಮುಖ ಸಾಕ್ಷ್ಯವಾಗಿತ್ತು' ಎಂದೂ ತಿಳಿಸಿವೆ.

ಬಿಲ್ಡರ್‌ಗಳ ಬಳಿ ಹಣ?: ಅಮ್ರಿತ್ ಪೌಲ್ ಅವರಿಗೆ ಸಂದಾಯವಾದ ಹಣ ಎಲ್ಲಿದೆ? ಎಂಬ ಬಗ್ಗೆ ಸಿಐಡಿ ಅಧಿಕಾರಿಗಳು ಮಾಹಿತಿ ಕಲೆಹಾಕುತ್ತಿದ್ದಾರೆ. ನಾಲ್ವರು ಬಿಲ್ಡರ್‌ಗಳ ಜೊತೆ ಒಡನಾಟ ಹೊಂದಿದ್ದ ಪೌಲ್, ಅವರ ಬಳಿಯೇ ಹಣ ಇರಿಸಿರುವ ಅನುಮಾನವೂ ಸಿಐಡಿಗೆ ಬಂದಿದೆ.

'ಬೆಂಗಳೂರು ಕಮಿಷನರ್ ಆಗಲು ಪ್ರಯತ್ನಿಸುತ್ತಿದ್ದ ಅಮ್ರಿತ್ ಪೌಲ್, ಹಣ ಕೊಟ್ಟಾದರೂ ಹುದ್ದೆ ಪಡೆಯಲು ಪೈಪೋಟಿ ನಡೆಸಿದ್ದರು. ಪಿಎಸ್‌ಐ ಅಕ್ರಮದಿಂದ ಬಂದ ಹಣವನ್ನೇ ಇದಕ್ಕೆ ಬಳಸಲು ಯೋಚಿಸಿದ್ದರು. ಆದರೆ, ಪ್ರತಾಪ್ ರೆಡ್ಡಿ ಅವರು ಕಮಿಷನರ್ ಆಗಿ ನಿಯೋಜನೆಗೊಂಡರು. ಪೌಲ್ ಆಸೆ ಈಡೇರಲಿಲ್ಲ. ಮಧ್ಯವರ್ತಿಗಳ ಮೂಲಕ ಬಂದ ಹಣವನ್ನು ಪೌಲ್ ಬಳಕೆ ಮಾಡಿಲ್ಲ. ಪರಿಚಯಸ್ಥರ ಮೂಲಕ ಬೇರೆಡೆ ನೀಡಿರುವ ಮಾಹಿತಿ ಇದೆ. ಈ ಬಗ್ಗೆ ಖಚಿತ ದಾಖಲೆಗಳನ್ನು ಸಂಗ್ರಹಿಸಿ, ಎಲ್ಲರಿಗೂ ನೋಟಿಸ್ ನೀಡಲು ಚಿಂತನೆ ನಡೆಸಲಾಗುತ್ತಿದೆ' ಎಂದೂ ಸಿಐಡಿ ಮೂಲಗಳು ಹೇಳಿವೆ.

ವಿಶೇಷ ಪ್ರಾಸಿಕ್ಯೂಟರ್ ನೇಮಕಕ್ಕೆ ಪ್ರಸ್ತಾವ

ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣದ ವಿಚಾರಣೆ ನಡೆಯುತ್ತಿರುವ ನ್ಯಾಯಾಲಯಗಳಲ್ಲಿ ಸೂಕ್ತ ವಾದ ಮಂಡಿಸಲು ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್‌ಗಳನ್ನು ನೇಮಕ ಮಾಡುವಂತೆ ಸಿಐಡಿ ಅಧಿಕಾರಿಗಳು ಗೃಹ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿದ್ದಾರೆ.

'ಪ್ರಕರಣದಲ್ಲಿ ಬಹುಕೋಟಿ ಅಕ್ರಮ ನಡೆದಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಬೆಂಗಳೂರು ಹಾಗೂ ಕಲಬುರಗಿಯಲ್ಲಿ ಪ್ರತ್ಯೇಕವಾಗಿ 8 ಎಫ್‌ಐಆರ್‌ಗಳು ದಾಖಲಾಗಿದ್ದು, ಅದರನ್ವಯ ತನಿಖೆ ಚುರುಕುಗೊಳಿಸಲಾಗಿದೆ. ಬಂಧಿತ ಆರೋಪಿಗಳಿಗೆ ಕಾನೂನಿನಡಿ ಸೂಕ್ತ ಶಿಕ್ಷೆಯಾಗುವಂತೆ ನೋಡಿಕೊಳ್ಳಬೇಕಿದೆ. ಹೀಗಾಗಿ, ಬೆಂಗಳೂರು ಹಾಗೂ ಕಲಬುರಗಿ ನ್ಯಾಯಾಲಯದಲ್ಲಿ ವಾದಿಸಲು ವಿಶೇಷ ಪ್ರಾಸಿಕ್ಯೂಟರ್ ನೇಮಿಸಬೇಕು' ಎಂದು ಸಿಐಡಿ ಕೋರಿದೆ.

ಸಿಐಡಿ ಸಲ್ಲಿಸಿರುವ ಪ್ರಸ್ತಾವಕ್ಕೆ ಗೃಹ ಇಲಾಖೆಯಿಂದ ಇದುವರೆಗೂ ಸ್ಪಂದನೆ ಸಿಕ್ಕಿಲ್ಲ.

ಇ.ಡಿಗೆ ಪತ್ರ

ಪಿಎಸ್‌ಐ ನೇಮಕಾತಿಯಲ್ಲಿ ಕೋಟ್ಯಂತರ ರೂಪಾಯಿ ಹಣ ಕೈ ಬದಲಾವಣೆ ಆಗಿದ್ದು, ಈ ಬಗ್ಗೆ ಜಾರಿ ನಿರ್ದೇಶನಾಲಯಕ್ಕೆ (ಇ.ಡಿ) ಪತ್ರ ಬರೆಯಲು ಸಿಐಡಿ ಸಿದ್ಧತೆ ನಡೆಸುತ್ತಿದೆ.

'ಅಭ್ಯರ್ಥಿಗಳಿಂದ ಮಧ್ಯವರ್ತಿಗಳ ಮೂಲಕ ಹಿರಿಯ ಅಧಿಕಾರಿಗಳಿಗೆ ಹಣ ಸಂದಾಯವಾಗಿರುವುದು ತನಿಖೆಯಿಂದ ಗೊತ್ತಾಗಿದೆ. ಜೊತೆಗೆ, ತಮ್ಮ ಕೈ ಸೇರಿದ ಹಣವನ್ನು ಅಧಿಕಾರಿಗಳು ಬೇನಾಮಿ ಹೆಸರಿನಲ್ಲಿ ಅಕ್ರಮವಾಗಿ ವರ್ಗಾಯಿಸಿಕೊಂಡಿದ್ದಾರೆ. ಇದು, ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆಯಡಿ (ಪಿಎಂಎಲ್‌ಎ) ಅಪರಾಧವಾಗುತ್ತದೆ. ಹೀಗಾಗಿ, ಇ.ಡಿ ಮಧ್ಯಪ್ರವೇಶಿಸಬಹುದು' ಎಂದು ಸಿಐಡಿ ಮೂಲಗಳು ಹೇಳಿವೆ.

ಉದ್ಯೋಗ ವಾಣಿ

ಪ್ರಜಾವಾಣಿ
ಉದ್ಯೋಗ ವಾಣಿ
ಉದ್ಯೋಗಾವಕಾಶದ ಜಾಹೀರಾತಿಗಾಗಿ ಸಂಪರ್ಕಿಸಿ:
Mob : 96069 12220

भारत इलेक्ट्रॉनिक्स
BHARAT ELECTRONICS
QUALITY. TECHNOLOGY. INNOVATION.

ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್
(ರಕ್ಷಣಾ ಮಂತ್ರಾಲಯದ ಅಧೀನ ಭಾರತ ಸರ್ಕಾರದ ಒಂದು ಉದ್ಯಮ)
(CIN: L32309KA1954GOI000787)

ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್, ಒಂದು ನವರತ್ನ ಕಂಪನಿ ಮತ್ತು ಭಾರತದ ಪ್ರಮುಖ ವೃತ್ತಿಪರ ಎಲೆಕ್ಟ್ರಾನಿಕ್ಸ್ ಕಂಪನಿಗೆ ತನ್ನ ಬೆಂಗಳೂರಿನ ತರಬೇತಿ ಅಕಾಡಮಿ " ನಾಳಂದ - ಬಿಇಎಲ್ ಉತ್ಕೃಷ್ಟತಾ ಅಕಾಡಮಿ" ಗಾಗಿ ಶಿಕ್ಷಣಾರ್ಥಿ ಅಧಿಕಾರಿ (ಗ್ರಂಥಾಲಯ) ಯ ಆವಶ್ಯಕತೆ ಇದೆ.

೫೫% ಮತ್ತು ಅಧಿಕ ಅಂಕಗಳೊಂದಿಗೆ ಮಾನ್ಯತೆ ಪಡೆದ ವಿಶ್ವವಿದ್ಯಾಲಯ/ ಸಂಸ್ಥೆ / ಮಹಾವಿದ್ಯಾಲಯದಿಂದ ಗ್ರಂಥಾಲಯ ವಿಜ್ಞಾನ / ಗ್ರಂಥಾಲಯ ವಿಜ್ಞಾನ ಮತ್ತು ಮಾಹಿತಿ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿದಾರರು ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ.

ಅಧಿಕ ವಿವರಗಳಿಗಾಗಿ ಮತ್ತು ನೋಂದಣೀಕರಣಕ್ಕೆ ದಯವಿಟ್ಟು ನಮ್ಮ ವೆಬ್ ಸೈಟ್ www.bel-india.in/career ಅನ್ನು ವೀಕ್ಷಿಸಿ.

'ಪ್ರತಿ ದೇಶದ ಹೆಸರು'

Shamanur Education Trust (R.)
SMT. PUSHPA SHAMANUR MAHALINGAPPA RESIDENTIAL CBSE, ICSE SCHOOL & PU SCIENCE COLLEGE
5335, 1st Main Road, Near BIET College, Swamy Vivekananda Badavane, Davanagere, Karnataka.

REQUIRED TEACHERS / LECTURERS

Well qualified & Experienced Teachers & Lecturers required for CBSE, ICSE & Integrated PU (11th &12th) Curriculum

Class	Salary	PUC (11th & 12th Std) + CET
Science, Mathematics, Social, English and PE Teachers		Physics, Chemistry, Mathematics, Biology (PCMB)
1st - 4th Std	Upto ₹ 37 K	Upto ₹ 1 lakh
5th - 8th Std	Upto ₹ 45 K	
9th - 10th Std	Upto ₹ 55 K	

Co-ordinator For Pre-School, Middle School & High School. Salary : Upto ₹ 50K
Admission Counsellor - Marketing Salary : Upto ₹ 75K
For Residential Teachers, Food & Accommodation will be provided.
Shortlisted candidates will be called for interview
Share Your Resume through website Or WhatsApp : 9686266990
www.spsmrs.org
Click on "Click here to Apply for Jobs"
For Enquiry Call : 8970071100, 8970067700, 8951851567

ರಾತ್ರಿಯೆಲ್ಲಾ ನಿದ್ದೆ ಇಲ್ಲ; ಶಬ್ದವಾದರೆ ನಡುಗುವ ಜನ!

ಚೆಂಬು ಗ್ರಾಮಸ್ಥರು ಹೈರಾಣ

• ಕೆ.ಎಸ್.ಗಿರೀಶ

ಮಡಿಕೇರಿ: ಪದೇ ಪದೇ ಭೂಮಿ ಕಂಪಿಸುತ್ತಿರುವುದರಿಂದ ಇಲ್ಲಿನ ಚೆಂಬು ಗ್ರಾಮದಲ್ಲಿ ಭಯ ಮತ್ತು ಆತಂಕ ಮಡುಗಟ್ಟಿದೆ. ಧಾರಾಕಾರವಾಗಿ ಸುರಿಯುತ್ತಿರುವ ಮಳೆಯು ಜನರ ನೆಮ್ಮದಿ ಕೆಡಿಸಿದೆ. ಎಲ್ಲಿ ಯಾವುದೇ ಶಬ್ದವಾದರೂ ಅಂಜುವಂತಹ ಸ್ಥಿತಿ ನಿರ್ಮಾಣವಾಗಿದೆ.

ರಾತ್ರಿ ವೇಳೆ ಅಲ್ಲಿನ ಬಹುತೇಕ ಮನೆಯ ಹಿರಿಯರಿಗೆ ನಿದ್ದೆ ಬರುತ್ತಿಲ್ಲ. ಭೂಮಿ ಕಂಪಿಸಿದರೆ ಜನರನ್ನು ಎಬ್ಬಿಸಿ ಹೊರಕ್ಕೆ ಕರೆತರಲು ಕೆಲವು ಮನೆಗಳಲ್ಲಿ ಸರದಿಯ ಪ್ರಕಾರ ನಿತ್ಯವೂ ಒಬ್ಬರು ಎಚ್ಚರವಾಗಿ ಇರುತ್ತಿದ್ದಾರೆ. ಕೆಲವು ಬೀದಿಗಳಲ್ಲಿ ನಿತ್ಯವೂ ಒಂದೊಂದು ಮನೆಯವರು ರಾತ್ರಿ ಕಾವಲು ಕಾಯುತ್ತಿದ್ದಾರೆ.

ಎತ್ತರ ಪ್ರದೇಶದ ಕೆಳಗೆ ಮನೆ ಇರುವವರು, ಮಣ್ಣು ಕುಸಿಯಬಹುದೆಂಬ ಭೀತಿಯಿಂದ ವರಾಂಡದಲ್ಲೇ ಮಲಗುತ್ತಿದ್ದಾರೆ. ಕೆಲವರು ರಾತ್ರಿ ವೇಳೆ ಮನೆಗೆ ಬೀಗ ಹಾಕಿ ಸುರಕ್ಷಿತ ಸ್ಥಳದಲ್ಲಿರುವ ಸಂಬಂಧಿಕರ ಮನೆಗೆ ಹೋಗುತ್ತಿದ್ದಾರೆ. ಯಾವಾಗ ಏನಾಗುವುದೋ ಎಂಬ ಆತಂಕ ಅವರನ್ನು ಕಾಡುತ್ತಿದೆ.

ಈ ಬಗ್ಗೆ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಗ್ರಾಮಸ್ಥ ಜಯಪ್ರಕಾಶ್, 'ಗ್ರಾಮದ ಎಲ್ಲ ಮನೆಗಳವರೂ ಮುಂಜಾಗ್ರತೆ ವಹಿಸಿದ್ದಾರೆ. ಭೂಮಿ ಕಂಪಿಸುತ್ತಿರುವುದು, ಎಡೆಬಿಡದೇ ಬೀಳುತ್ತಿರುವ ಮಳೆಯಿಂದ ಸಹಜವಾಗಿಯೇ ಆತಂಕಗೊಂಡಿದ್ದಾರೆ' ಎಂದು ತಿಳಿಸಿದರು.

ಕೆಲವೆಡೆ ಸಣ್ಣಪುಟ್ಟ ಮಣ್ಣು ಕುಸಿತ ಪ್ರಕರಣಗಳೂ ನಡೆದಿವೆ. ಎತ್ತರದ ಪ್ರದೇಶದಿಂದ ಮಣ್ಣು ಕುಸಿದು ಮನೆಯೊಂದಕ್ಕೆ ಹಾನಿಯಾಗಿದೆ. ಊಹಾಪೋಹದ ಸುದ್ದಿಗಳೂ ಅತಿವೇಗದಲ್ಲಿ ವಾಟ್ಸ್‌ಆ್ಯಪ್‌ನಲ್ಲಿ ಹರಡುತ್ತಿದ್ದು, ಇದರಿಂದ ಜನರ ಭೀತಿ ಹೆಚ್ಚಾಗುತ್ತಿದೆ.

ಭೂಕಂಪನದ ಕೇಂದ್ರ ಬಿಂದು ಇದೆ ಎಂದು ಹೇಳಲಾದ ಪ್ರದೇಶದಲ್ಲಿರುವ ಜನರು, ಸಮೀಪದ ಗುಡ್ಡದ ಮೇಲಿರುವವರೂ ತಮ್ಮ ಜಾನುವಾರು ಹಾಗೂ ಮನೆಗಳನ್ನು ತೊರೆಯಲು ಒಪ್ಪುತ್ತಿಲ್ಲ. ನಾವು ಇಲ್ಲೇ ಸುರಕ್ಷಿತವಾಗಿ ಬದುಕಲು ಜಿಲ್ಲಾಡಳಿತ ಅವಕಾಶ ಕೊಡಬೇಕು ಎಂದು ಕೋರುತ್ತಾರೆ.

> ಗ್ರಾಮಸ್ಥರು ಹೆದರಿದ್ದಾರೆ. ಜಿಲ್ಲಾಡಳಿತ ಧೈರ್ಯ ತುಂಬುತ್ತಿದ್ದು, ವೈಜ್ಞಾನಿಕ ಮಾಹಿತಿಗಳನ್ನು ಜನರಿಗೆ ನೀಡುತ್ತಿದ್ದಾರೆ. ಇದರಿಂದ ವಿಶ್ವಾಸ ಬಂದಿದೆ
>
> **ಕುಸುಮಾ**
> ಅಧ್ಯಕ್ಷರು, 'ಚೆಂಬು' ಗ್ರಾಮ ಪಂಚಾಯಿತಿ

> ಕೊಡಗಿನಲ್ಲಿ ಸಂಭವಿಸುತ್ತಿರುವ ಭೂಕಂಪದಿಂದ ಆತಂಕಪಡುವ ಅಗತ್ಯ ಇಲ್ಲ. ಜನರಲ್ಲಿ ವಿಶ್ವಾಸ ವೃದ್ಧಿಸುವ ಕೆಲಸ ಮಾಡಲಾಗುತ್ತಿದೆ
>
> **ಅನನ್ಯ ವಾಸುದೇವ್**
> ಜಿಲ್ಲಾ ವಿಪತ್ತು ನಿರ್ವಹಣಾ ಕೇಂದ್ರದ ಪರಿಣತ

ವಿಪತ್ತು ನಿರ್ವಹಣಾ ಕೇಂದ್ರದಿಂದ ಧೈರ್ಯ ತುಂಬುವ ಯತ್ನ: ಜಿಲ್ಲಾ ವಿಪತ್ತು ನಿರ್ವಹಣಾ ಕೇಂದ್ರವು ಗ್ರಾಮಸ್ಥರಲ್ಲಿ ಧೈರ್ಯ ತುಂಬುವ ಯತ್ನ ನಡೆಸಿದೆ. ಅಲ್ಲಿನ ಶಾಲೆಯಲ್ಲಿ ಸಿಸ್ಮೋಮೀಟರ್ ಅಳವಡಿಸಿ, ಭೂಕಂಪನ ಮಾಪನ ಉಪಕೇಂದ್ರ ತೆರೆದಿದೆ. ಭೂಕಂಪದ ಬಗ್ಗೆ ವೈಜ್ಞಾನಿಕ ಕಾರಣ ತಿಳಿಸುತ್ತಿದ್ದಾರೆ. ಇದರಿಂದ ಅಪಾಯ ಸಂಭವಿಸುವುದಿಲ್ಲ ಎಂದು ಶಾಲಾ ಮಕ್ಕಳು, ಗ್ರಾಮ ಪಂಚಾಯಿತಿ ಸದಸ್ಯರು, ಶಿಕ್ಷಕರಿಗೆ ಧೈರ್ಯ ತುಂಬಿದ್ದಾರೆ.

ಭೂವಿಜ್ಞಾನಿಗಳಿಂದ, ಭೂಕಂಪದ ಬಗ್ಗೆ ಗ್ರಾಮಸ್ಥರಿಗೆ ವೈಜ್ಞಾನಿಕ ವಿವರಣೆ ಕೊಡಿಸುವ ಮತ್ತೊಂದು ಸುತ್ತಿನ ಕಾರ್ಯಕ್ರಮ ಆಯೋಜನೆಗೂ ಸಿದ್ಧತೆ ನಡೆದಿದೆ.

ಮಹಾರಾಷ್ಟ್ರದ 14 ಶಾಸಕರಿಗೆ ನೋಟಿಸ್

ಮುಂಬೈ (ಪಿಟಿಐ): ವಿಶ್ವಾಸ ಮತ ಸಾಬೀತುಪಡಿಸುವ ವೇಳೆ ಸರ್ಕಾರದ ಪರ ಮತ ಚಲಾಯಿಸಲು ನೀಡಿದ್ದ ವಿಪ್ ಉಲ್ಲಂಘಿಸಿದ ಕಾರಣಕ್ಕೆ ಉದ್ಧವ್ ಠಾಕ್ರೆ ಬಣದ 14 ಶಾಸಕರಿಗೆ ಶಿಂಧೆ ನಂಬಿಕಸ್ಥ, ಶಿವಸೇನಾದ ಮುಖ್ಯ ಸಚೇತಕ ಭರತ್ ಗೊಗವಾಲೆ ಅವರು ಸೋಮವಾರ ನೋಟಿಸ್ ಜಾರಿ ಮಾಡಿದರು.

ಕಬ್ಬಿನ ಹಾಲು ಯಂತ್ರಕ್ಕೆ ಸಿಲುಕಿ ಮಹಿಳೆ ಸಾವು

ಕೆಜಿಎಫ್: ಕಬ್ಬಿನ ಹಾಲು ತಯಾರಿಸುವ ಯಂತ್ರಕ್ಕೆ ಸಿಲುಕಿ ಮಹಿಳೆಯೊಬ್ಬರು ಸ್ಥಳದಲ್ಲೇ ಮೃತಪಟ್ಟ ಘಟನೆ ಇಲ್ಲಿನ ರಾಬರ್ಟಸನ್‌ಪೇಟೆ ಮೂರನೇ ಕ್ರಾಸ್‌ನಲ್ಲಿ ಮಂಗಳವಾರ ನಡೆದಿದೆ.

ಸಂಜಯಗಾಂಧಿ ನಗರದ ಕೌಸರ್ (38) ಮೃತಪಟ್ಟವರು.

ನಗರದ ಕಿಂಗ್ ಜಾರ್ಜ್ ಹಾಲ್ ಕಟ್ಟಡದ ಪಕ್ಕದಲ್ಲಿ ಅವರು ಕಬ್ಬಿನ ಹಾಲು ಮಾರಾಟ ಮಾಡುತ್ತಿದ್ದರು. ಈ ವೇಳೆ ಅವರು ಕುತ್ತಿಗೆಗೆ ಸುತ್ತಿಕೊಂಡಿದ್ದ ಬಟ್ಟೆ ಯಂತ್ರಕ್ಕೆ ಸಿಲುಕಿದೆ. ವೇಗವಾಗಿ ಬಟ್ಟೆ ಯಂತ್ರಕ್ಕೆ ಸುತ್ತಿಕೊಂಡ ತಕ್ಷಣ ಅವರು ಕೂಗಿಕೊಂಡಿದ್ದಾರೆ. ನೆರೆಹೊರೆಯವರು ಬಂದು ಬಟ್ಟೆ ಕತ್ತರಿಸಿ ಅವರನ್ನು ರಕ್ಷಿಸುವಷ್ಟರಲ್ಲಿ ಮೃತಪಟ್ಟಿದ್ದಾರೆ.

ಈ ಸಂಬಂಧ ರಾಬರ್ಟಸನ್‌ಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿದ್ಯುತ್ ಪೂರೈಕೆ ಸಹಜ ಸ್ಥಿತಿಗೆ

ಪ್ರಜಾವಾಣಿ ವಾರ್ತೆ

ವರದಿ ಪರಿಣಾಮ

ಮಡಿಕೇರಿ: ವಿದ್ಯುತ್ ಇಲ್ಲದ ಕಾರಣಕ್ಕೆ ರಜೆ ನೀಡಿದ್ದ ಇಲ್ಲಿನ ಭಾಗಮಂಡಲದ ಕೋರಂಗಾಲದಲ್ಲಿರುವ ಅಟಲ್‌ಬಿಹಾರಿ ವಾಜಪೇಯಿ ವಸತಿ ಶಾಲೆಗೆ ಸೆಸ್ಕ್ ಮಂಗಳವಾರ ವಿದ್ಯುತ್ ಪೂರೈಸಿದೆ.

'ಹಲವು ಮರಗಳು ವಿದ್ಯುತ್ ತಂತಿಗಳ ಮೇಲೆ ಬಿದ್ದು ಪೂರೈಕೆ ಸ್ಥಗಿತಗೊಂಡಿತ್ತು. ಸಮರೋಪಾದಿಯಲ್ಲಿ ಕಾರ್ಯಾಚರಣೆ ನಡೆಸಿ ಶಾಲೆಗೆ ವಿದ್ಯುತ್ ಪೂರೈಸಲಾಗಿದೆ' ಎಂದು ಸೆಸ್ಕ್‌ನ ಕಾರ್ಯನಿರ್ವಾಹಕ ಎಂಜಿನಿಯರ್ ಅಶೋಕ್ ತಿಳಿಸಿದರು.

500 ಮಕ್ಕಳಿದ್ದ ಶಾಲೆಗೆ ವಿದ್ಯುತ್ ಕಡಿತಗೊಂಡಿದ್ದರಿಂದ ನೀರಿಲ್ಲದೇ ವಿದ್ಯಾರ್ಥಿಗಳು ಪರದಾಡುತ್ತಿದ್ದು, ಜುಲೈ 10ರವರೆಗೂ ಶಾಲೆಗೆ ರಜೆ ಘೋಷಿಸಲಾಗಿತ್ತು. ಈ ಕುರಿತು 'ಪ್ರಜಾವಾಣಿ' ಜುಲೈ 4ರಂದು ವಿಶೇಷ ವರದಿ ಪ್ರಕಟಿಸಿತ್ತು.

ಜಿಲ್ಲೆಯಲ್ಲಿ 2 ದಿನ ಭಾರೀ ಮಳೆ ಮುನ್ಸೂಚನೆ ಇರುವುದರಿಂದ ಶಾಲೆಗೆ ನೀಡಿದ್ದ ರಜೆಯನ್ನು ರದ್ದುಪಡಿಸಿಲ್ಲ ಎಂದು ಮೂಲಗಳು ತಿಳಿಸಿವೆ.

'ಸಿದ್ದರಾಮೋತ್ಸವ; ಕಾಂಗ್ರೆಸ್‌ನ ಕೊನೇ ನಾಟಕ'

ಎಸ್.ಟಿ. ಸೋಮಶೇಖರ್

ಮೈಸೂರು: 'ಸಿದ್ದರಾಮೋತ್ಸವ ಸಿದ್ದರಾಮಯ್ಯನವರ ಹೊಸ ಅವತಾರ. ಕಾಂಗ್ರೆಸ್‌ನ ಕೊನೆಯ ನಾಟಕ. ಸಿಎಂ ಆಗಿದ್ದಾಗ ಸರಿಯಾಗಿ ಕೆಲಸ ಮಾಡಿದ್ದರೆ ಚಾಮುಂಡೇಶ್ವರಿ ಕ್ಷೇತ್ರದಲ್ಲಿ 35 ಸಾವಿರ ಮತಗಳಿಂದ ಹೀನಾಯವಾಗಿ ಸೋಲುತ್ತಿರಲಿಲ್ಲ' ಎಂದು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಪ್ರತಿಪಾದಿಸಿದರು.

ನಗರದಲ್ಲಿ ಮಂಗಳವಾರ ಮಾತನಾಡಿ, 'ವೈಫಲ್ಯ ಮುಚ್ಚಿಕೊಳ್ಳಲು ಆಚರಿಸುತ್ತಿರುವ ಉತ್ಸವ ಸಿದ್ದರಾಮಯ್ಯ ಅವರ ವೈಭವೀಕರಣವಷ್ಟೇ. ಕಾಂಗ್ರೆಸ್ ಭವನದಲ್ಲಿ ಹುಟ್ಟುಹಬ್ಬ ಆಚರಿಸಿಕೊಳ್ಳಲಿ. ಬಹಿರಂಗ ಸಮಾವೇಶವೇಕೆ' ಎಂದರು.

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

ಆಯುಕ್ತರವರ ಕಚೇರಿ, ಆರ್‌ಡಿಡಬ್ಲ್ಯು&ಎಸ್ ಇಲಾಖೆ, 2ನೇ ಮಹಡಿ, ಇ-ಬ್ಲಾಕ್, ಕೆಹೆಚ್‌ಬಿ ಕಾಂಪ್ಲೆಕ್ಸ್, ಕಾವೇರಿ ಭವನ, ಬೆಂಗಳೂರು-560009. ದೂ: 080-22240508 ಇಮೇಲ್: krwssd@gmail.com

ಸಂಖ್ಯೆ: ಆರ್‌ಡಿಡಬ್ಲ್ಯು&ಎಸ್‌ಡಿ/47/ಡಬ್ಲ್ಯುಕ್ಯೂಎಂಎಸ್‌ಪಿ/2021 ದಿನಾಂಕ: 04-07-2022

ಟೆಂಡರ್ ಪ್ರಕಟಣೆ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಕರ್ನಾಟಕ ಸರ್ಕಾರ ಇವರು ಆರ್‌ಡಿಡಬ್ಲ್ಯು&ಎಸ್ ಇಲಾಖೆಯ ವಿಭಾಗೀಯ ಮತ್ತು ತಾಲ್ಲೂಕು ಮಟ್ಟದಲ್ಲಿ ಎಂಪಿಎನ್ ವಿಧಾನ ಐಎಸ್ 1622:1981 ಗುಣಮಟ್ಟದ ಮೈಕ್ರೋಬಯಾಲಜಿಕಲ್ ಪ್ಯಾರಾಮೀಟರ್‌ನ (Total Coliform & E.coli) ಮಾದರಿ ಮತ್ತು ವಿಶ್ಲೇಷಣೆಗಾಗಿ ಎನ್‌ಎಬಿಎಲ್ ಮಾನ್ಯತೆ ಪಡೆದ ನೀರಿನ ಗುಣಮಟ್ಟ ಪರೀಕ್ಷಾ ಪ್ರಯೋಗಾಲಯಗಳ ಎಂಪ್ಯಾನೆಲ್‌ಮೆಂಟ್‌ಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಇ-ಪೋರ್ಟಲ್ ಮೂಲಕ ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **01.08.2022ರ ಸಂಜೆ 5.30 ಗಂಟೆಗೆ** ಮುಂಚಿತವಾಗಿ. ಇಎಂಡಿ ಮೊತ್ತ: **ರೂ. 50,000/-.**

ಸಹಿ/- ಟೆಂಡರ್ ಆಹ್ವಾನ ಪ್ರಾಧಿಕಾರ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

DIPR/CP/BCPL/1205/2022-23

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ

ಜಿಲ್ಲಾ ನಗರಾಭಿವೃದ್ಧಿ ಕೋಶ

ಜಿಲ್ಲಾಧಿಕಾರಿಯವರ ಕಾರ್ಯಾಲಯ, ಬೆಂಗಳೂರು ಗ್ರಾಮಾಂತರ ಜಿಲ್ಲೆ. ಜಿಲ್ಲಾ ಸಂಕೀರ್ಣ, ಬೀರಸಂದ್ರ ಗ್ರಾಮ, ಕುಂದಾಣ ಹೋಬಳಿ, ದೇವನಹಳ್ಳಿ ತಾಲ್ಲೂಕು-562110. ದೂರವಾಣಿ ಸಂಖ್ಯೆ: 080-29500164, E-mail: dudc_blr@yahoo.co.in | dudc.blrrural@gmail.com

ಸಂ.: ಜಿನಕೋ/ಬೆ.ಗ್ರಾ./ಅಮೃತ. ನ-4/ವಿ.ಪು/ಸಿಆರ್/01/2022-23 ದಿನಾಂಕ: 05.07.2022

ತಿದ್ದುಪಡಿ ಅಧಿಸೂಚನೆ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಯಾದ ವಿಜಯಪುರ ಪುರಸಭೆಗೆ ಸಂಬಂಧಿಸಿದಂತೆ ಅಮೃತ್ ನಗರೋತ್ಥಾನ (ಮುನಿಸಿಪಾಲಿಟಿ) ಹಂತ-4ರ ಯೋಜನೆಯಡಿ, ವಿಜಯಪುರ ಪುರಸಭೆಗೆ ಅನುಮೋದಿನೆಯಾಗಿರುವ ಕ್ರಿಯಾಯೋಜನೆಯಲ್ಲಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಹಾಗೂ ಮಳೆ ನೀರು ಚರಂಡಿ ಕಾಮಗಾರಿಗಳಿಗೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಇಂಡೆಂಟ್ ಸಂಖ್ಯೆ: DMA/2022-23/RD/WORK_INDENT 133123 ಅನ್ನು ಪ್ರಕಟಿಸಲಾಗಿದ್ದು, ಅದರಂತೆ ವಿಜಯಪುರ ಪುರಸಭೆಗೆ ಅನುಮೋದಿನೆಯಾಗಿರುವ ಕ್ರಿಯಾಯೋಜನೆಯಲ್ಲಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಹಾಗೂ ಮಳೆ ನೀರು ಚರಂಡಿ ಕಾಮಗಾರಿಗಳ ಅಂದಾಜು ವಿವರಗಳಲ್ಲಿ (7.25%) ಘಟಕದ ಅಡಿಯಲ್ಲಿ ಡ್ರಾಫ್ಟ್ ಟೆಂಡರ್ ಶೆಡ್ಯೂಲ್ (DTS) ಐಟಂ ಕೋಡ್ ಯುನಿಟ್ ವಿವರಣೆ ಕಾಲಂನಲ್ಲಿ ಕ್ರಮ ಸಂಖ್ಯೆ 06 ಮತ್ತು 25 ಅನ್ನು ಸಂಖ್ಯೆ (Nos) ಎಂದು ನಮೂದಿಸಲಾಗಿದೆ. ಇದರ ಬದಲಿಗೆ ಅದನ್ನು ರನ್ನಿಂಗ್ ಮೀಟರ್ (RMTR) ಎಂದು ಓದಿಕೊಳ್ಳುವುದು, ಟೆಂಡರ್ ಅಧಿಸೂಚನೆಯ ಇತರೆ ಅಂಶಗಳಲ್ಲಿ ಯಾವುದೇ ತಿದ್ದುಪಡಿ ಇರುವುದಿಲ್ಲ.

ಸಹಿ/- ಕಾರ್ಯಪಾಲಕ ಅಭಿಯಂತರರು
ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಂಗಳೂರು ಗ್ರಾಮಾಂತರ ಜಿಲ್ಲೆ

ವಾಸಾಸಂ/ಬೆಂ.ನ/ಎಎಎ/1206/2022-23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರು-3 ರವರ ಕಚೇರಿ, ಘನ ತ್ಯಾಜ್ಯ ನಿರ್ವಹಣೆ, ದಾಸಪ್ಪ ಆಸ್ಪತ್ರೆ ಆವರಣ, ಬೆಂಗಳೂರು - 560 002.

ಸಂ: ಕಾಪಾಅ-3/ಘತ್ಯಾನಿ/ಟೆಂಡರ್/06/2022-23 ದಿನಾಂಕ: 05.07.2022

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ದ್ವಿ ಲಕೋಟೆ ಪದ್ಧತಿ) (ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು-3, ಘನ ತ್ಯಾಜ್ಯ ನಿರ್ವಹಣೆ, ಬೃಬೆಂಮಪಾ, ಇವರು ಈ ಕೆಳಕಂಡ ಕಾಮಗಾರಿಗೆ ಅರ್ಹ ಬಿಡ್ಡುದಾರರಿಂದ ಬಿಡ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರ್‌ಗಿಟ್ಟ ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇಎಂಡಿ (ರೂ.ಗಳಲ್ಲಿ)
1	ಕೆಳಕಂಡ ಯಾಂತ್ರಿಕ ಸ್ವೀಪಿಂಗ್ ಯಂತ್ರಗಳ ಕಾರ್ಯಾಚರಣೆ ಮತ್ತು ನಿರ್ವಹಣೆ. i) 1 Cum Ride On (1 No.) ii) 5 Cum Truck Mounted (8 Nos.) iii) 6 Cum Truck Mounted (1 No.)	475.00	7,12,500/-

1) ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಮುಖಾಂತರ ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ: **07.07.2022ರಿಂದ.** (2) ಪ್ರಶ್ನಾವಳಿಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: **14.07.2022ರ ಸಂಜೆ 4:00 ಗಂಟೆಯವರೆಗೆ.** (3) ಕೆಳಸಹಿದಾರರ ಕಛೇರಿಯಲ್ಲಿ ಪೂರ್ವಭಾವಿ ಸಭೆ ದಿನಾಂಕ: **15.07.2022ರ ಸಂಜೆ 4:00 ಗಂಟೆಗೆ.** (4) ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ: **25.07.2022 ರ ಸಂಜೆ 4:30 ಗಂಟೆಯವರೆಗೆ.** (5) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **27.07.2022ರ ಸಂಜೆ 4:00 ಗಂಟೆ ನಂತರ. ಅಥವಾ ಮುಂದಿನ ಕೆಲಸದ ದಿವಸ.** (6) ಹಣಕಾಸು ಪ್ರಸ್ತಾವನೆಗಳನ್ನು ತಾಂತ್ರಿಕ ಪ್ರಸ್ತಾವನೆಗಳ ಅನುಮೋದನೆ ನಂತರ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ತೆರೆಯಲಾಗುವುದು.

ವಿವರಗಳು, ನೋಂದಣಿ ಹಾಗೂ ಇ-ಪಾವತಿಗಾಗಿ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://eproc.karnataka.gov.in ಅಥವಾ ಬೃಬೆಂಮಪಾ ವೆಬ್‌ಸೈಟ್ www.bbmp.gov.in ಅಥವಾ ಇ-ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ: 080-22441076 ಸಂಪರ್ಕಿಸಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು-3, ಘನತ್ಯಾಜ್ಯ ನಿರ್ವಹಣೆ, ಬೃಬೆಂಮಪಾ.

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರು, ಬೊಮ್ಮನಹಳ್ಳಿ ವಲಯ, ಕೆರೆಗಳ ವಿಭಾಗ, ರೂಂ ನಂ.309, 3ನೇ ಮಹಡಿ, ನ್ಯೂ ಬಿಲ್ಡಿಂಗ್, ಬಿಬಿಎಂಪಿ, ಎನ್.ಆರ್. ಚೌಕ, ಬೆಂಗಳೂರು-560002.

ಸಂಖ್ಯೆ:ಕಾಅ-ಬೊಮ್ಮನಹಳ್ಳಿ/ಕೆರೆಗಳು/ಟೆಂಡರ್-01/2022-23 ದಿನಾಂಕ: 05-07-2022

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) - (ಅಲ್ಪಾವಧಿ)
(ದ್ವಿ-ಲಕೋಟೆ ಟೆಂಡರ್) (ಜಿಓಕೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಬೊಮ್ಮನಹಳ್ಳಿ ವಲಯ, ಕೆರೆಗಳ ವಿಭಾಗ ಇವರು ಈ ಕೆಳಕಂಡ ಕಾಮಗಾರಿಗಳಿಗೆ ಬಿಬಿಎಂಪಿಯಲ್ಲಿ ನೋಂದಾಯಿಸಿರುವ ಗುತ್ತಿಗೆದಾರರು ಅಥವಾ ಸಿಪಿಡಬ್ಲ್ಯೂಡಿ / ಕೆಪಿಡಬ್ಲ್ಯೂಡಿ / ರೈಲ್ವೇಸ್ / ಎಂಇಎಸ್ ಅಥವಾ ಯಾವುದೇ ರಾಜ್ಯ ಸರ್ಕಾರದ ಸಂಸ್ಥೆಗಳಲ್ಲಿ ತತ್ಸಮಾನ ನೋಂದಾಯಿತ ಗುತ್ತಿಗೆದಾರರಿಂದ ಐಟಂ ದರದ ಆಧಾರದಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು	ಕಾಮಗಾರಿಯ ಅಂದಾಜು ವೆಚ್ಚ (ರೂ. ಲಕ್ಷಗಳಲ್ಲಿ)
1	(1) ಅಕ್ಷಯನಗರ ಕೆರೆಯಲ್ಲಿ ಪಾತ್‌ವೇ ಅಭಿವೃದ್ಧಿ, ಬೇಲಿ ಹಾಕುವಿಕೆ ಮತ್ತು ಇತರೆ ಕಾಮಗಾರಿಗಳು. (2) ಗುಬ್ಬಲಾಳು ಕೆರೆಯಲ್ಲಿ ವಾಟರ್ ಬಾಡಿ ಫೆನ್ಸಿಂಗ್, ಭದ್ರತಾ ಕೊಠಡಿ ಒದಗಿಸವುದು ಮತ್ತು ಇತರೆ ಕಾಮಗಾರಿಗಳು. (3) ದೊರೆಕೆರೆ ಕೆರೆಯಲ್ಲಿ ಔಟರ್ ಬಾಡಿ ಫೆನ್ಸಿಂಗ್ ಒದಗಿಸುವುದು, ವಾಕ್‌ವೇಗೆ ಅಭಿವೃದ್ಧಿ ಮತ್ತಿತರ ಕಾಮಗಾರಿಗಳು. (4) ಬಸಪುರ ಕೆರೆ-2 ರಲ್ಲಿ ಔಟರ್ ಬಾಡಿ ಫೆನ್ಸಿಂಗ್ ಒದಗಿಸುವುದು, ವಾಕ್‌ವೇಗೆ ಅಭಿವೃದ್ಧಿ ಮತ್ತಿತರ ಕಾಮಗಾರಿಗಳು. (5) ಕಮ್ಮನಹಳ್ಳಿ ಮೀನಾಕ್ಷಿ ಕೆರೆಯಲ್ಲಿ ಇನ್‌ಲೆಟ್, ಔಟ್‌ಲೆಟ್ ಏರ್ಪಾಡುಗಳು, ಔಟರ್ ಬಾಡಿ ಫೆನ್ಸಿಂಗ್, ಪಾತ್‌ವೇ ಅಭಿವೃದ್ಧಿ ಮತ್ತಿತರ ಕಾಮಗಾರಿಗಳು. (6) ಯಲೇನಹಳ್ಳಿ ಕೆರೆಯಲ್ಲಿ ವಾಟರ್ ಬಾಡಿ ಫೆನ್ಸಿಂಗ್, ಪಾತ್‌ವೇ ಅಭಿವೃದ್ಧಿಗಳು ಮತ್ತಿತರ ಕಾಮಗಾರಿಗಳು. (7) ದೊಡ್ಡಕಲ್ಲಸಂದ್ರ ಕೆರೆಯಲ್ಲಿ ವಾಟರ್ ಬಾಡಿ ಫೆನ್ಸಿಂಗ್, ಭದ್ರತಾ ಕೊಠಡಿ ಹಾಗೂ ಶೌಚಾಲಯದ ಬ್ಲಾಕ್ ಒದಗಿಸುವುದು, ಮತ್ತಿತರ ಕಾಮಗಾರಿಗಳು. (8) ಕೋನಪ್ಪನ ಅಗ್ರಹಾರ ಕೆರೆಯಲ್ಲಿ ವಾಟರ್ ಬಾಡಿ ಫೆನ್ಸಿಂಗ್, ಉಳಿಕೆ ಔಟರ್ ಬಾಡಿ ಫೆನ್ಸಿಂಗ್ ಒದಗಿಸುವುದು, ಮತ್ತಿತರ ಕಾಮಗಾರಿಗಳು. (9) ಸುಬ್ರಮಣ್ಯಪುರ ಕೆರೆಯಲ್ಲಿ ವಾಕ್‌ವೇ ಅಭಿವೃದ್ಧಿ, ಭದ್ರತಾ ಕೊಠಡಿ ಮತ್ತಿತರ ಕಾಮಗಾರಿಗಳು. (10) ಕೆಂಭತ್ತಹಳ್ಳಿ ಕೆರೆಗೆ ಫೆನ್ಸಿಂಗ್ ಒದಗಿಸುವುದು. (11) ಪರಪ್ಪನ ಅಗ್ರಹಾರ ಕೆರೆಗೆ ಅಭಿವೃದ್ಧಿಗಳು. (ಪ್ಯಾಕೇಜ್-1)	1260.00
2	(1) ಬೆರೆತನ ಅಗ್ರಹಾರ ಕೆರೆಯಲ್ಲಿ (ಚೌಡೇಶ್ವರಿ ಲೇಔಟ್) ಅಭಿವೃದ್ಧಿ ಕಾಮಗಾರಿಗಳು. (2) ಕೋಣನಕುಂಟೆ ಕೆರೆಯಲ್ಲಿ ಅಭಿವೃದ್ಧಿ ಕಾಮಗಾರಿಗಳು. (ಪ್ಯಾಕೇಜ್-3)	1200.00

ಇ.ಎಂ.ಡಿ (ರೂ. ಲಕ್ಷಗಳಲ್ಲಿ): ಕ್ರ.ಸಂ. 1 ರಿಂದ 2 ರವರೆಗಿನ ಕೆಲಸಕ್ಕೆ ತಲಾ ರೂ. 15.00 ಲಕ್ಷ (ರೂ. 1.00 ಲಕ್ಷ ಮೊಬಲಗನ್ನು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮತ್ತು ರೂ. 14.00 ಲಕ್ಷ ಮೊಬಲಗನ್ನು ಬಿಜಿ ರೂಪದಲ್ಲಿ ಸಲ್ಲಿಸಬೇಕು.

ಟೆಂಡರ್ ವೇಳಾಪಟ್ಟಿ: 1) ಬಿಡ್ ಡಾಕ್ಯೂಮೆಂಟ್‌ನ್ನು ಜಿಓಕೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **www.eproc.karnataka.gov.in** ನಲ್ಲಿ ದಿನಾಂಕ: **14-07-2022** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಬಿಡ್ ಪೂರ್ವಭಾವಿ ಸಭೆ ದಿನಾಂಕ: **21-07-2022ರಂದು 15.00 ಗಂಟೆಗೆ ಕಾರ್ಯಪಾಲಕ ಅಭಿಯಂತರರ ಕಛೇರಿ (ಬೊಮ್ಮನಹಳ್ಳಿ), ಕೆರೆಗಳು, ಬಿಬಿಎಂಪಿ ಇಲ್ಲಿ ನಡೆಯುತ್ತದೆ.** 3) ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಆನ್‌ಲೈನ್‌ನಲ್ಲಿ ಸಲ್ಲಿಸುವ ಕೊನೆಯ ದಿನಾಂಕ: **30-07-2022ರಂದು 16.00 ಗಂಟೆಗೆ ಅಥವಾ ಮುಂಚಿತವಾಗಿ.** 4) ತಾಂತ್ರಿಕ ಬಿಡ್‌ಗಳನ್ನು ದಿನಾಂಕ: **01-08-2022ರಂದು 16.30 ಗಂಟೆಗೆ ಕಾರ್ಯಪಾಲಕ ಅಭಿಯಂತರರ ಕಛೇರಿ (ಬೊಮ್ಮನಹಳ್ಳಿ), ಕೆರೆಗಳು, ಬಿಬಿಎಂಪಿ ಇಲ್ಲಿ ತೆರೆಯಲಾಗುವುದು.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು (ಬೊಮ್ಮನಹಳ್ಳಿ), ಕೆರೆಗಳ ವಿಭಾಗ, ಬಿಬಿಎಂಪಿ.

ಅಭಿವೃದ್ಧಿ ಶುಲ್ಕ ಪಾವತಿಸಿ, ಬೆಂಗಳೂರು ಅಭಿವೃದ್ಧಿಗೆ ಸಹಕರಿಸಿ.
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರಾಸಕೈಅನಿನಿ — ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನೊಂದಾಯಿತ ಕಛೇರಿ: ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು-560010. ದೂರವಾಣಿ: 080-23407011-25, ಇಮೇಲ್: kssidcho@karnataka.gov.in

ಸಂಖ್ಯೆ:ಆಡಳಿತ/ಸಿಬ್ಬಂದಿ/ತಾಂತ್ರಿಕ/2022 ದಿನಾಂಕ: 06.07.2022

ಪ್ರಕಟಣೆ

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ವತಿಯಿಂದ ಹೊರಗುತ್ತಿಗೆ ಆಧಾರದ ಮೇರೆಗೆ ನಿವೃತ್ತ ಸರ್ಕಾರಿ ಅಭಿಯಂತರರುಗಳನ್ನು ನೇಮಕ ಮಾಡಿಕೊಳ್ಳಲು ಅರ್ಜಿಗಳನ್ನು ಆಹ್ವಾನಿಸಿದೆ. ಆಸಕ್ತ ಅಭಿಯಂತರರುಗಳು ಹೆಚ್ಚಿನ ಮಾಹಿತಿಗಾಗಿ ನಿಗಮದ ವೆಬ್‌ಸೈಟ್ www.kssidc.co.in ನಲ್ಲಿ ಸಂಪರ್ಕಿಸುವುದು.

ಸಹಿ/-
ವ್ಯವಸ್ಥಾಪಕ ನಿರ್ದೇಶಕರು

ವಾಸಾಸಂಇ/ವಾಪ್ರ/1217/2022-23

ಕರ್ನಾಟಕ ಸರ್ಕಾರ

ಉಪನಿರ್ದೇಶಕರ ಕಛೇರಿ, ಸಮಾಜ ಕಲ್ಯಾಣ ಇಲಾಖೆ, ಚಿಕ್ಕಮಗಳೂರು.

ಸಂಖ್ಯೆ:ಉನಿ:ಸಕಇ:ಲೆಪ:ಸಿಆರ್.04/2022-23 ದಿನಾಂಕ : 02.07.2022

ಇ- ಟೆಂಡರ್ ಪ್ರಕಟಣೆ

ಚಿಕ್ಕಮಗಳೂರು ಜಿಲ್ಲೆಯಲ್ಲಿ ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸಿರುತ್ತಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಿಗೆ ಮೂಲಭೂತ ಸಾಮಗ್ರಿಗಳ ಸರಬರಾಜಿಗೆ ಇ ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ.

ಕ್ರ.. ಸಂ	ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ (ರೂ. ಲಕ್ಷಗಳಲ್ಲಿ)
01	ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಿಗೆ ಟು ಟಯರ್ ಕಾಟ್, ಡೈನಿಂಗ್ ಟೇಬಲ್, ಆಫೀಸ್ ಟೇಬಲ್ ಛೇರ್ ಮತ್ತು ಡೆಸ್ಕ್ ಕಮ್ ಬೆಂಚುಗಳನ್ನು ಸರಬರಾಜು ಮಾಡುವುದು.	50,00,000.00	1,50,000.00
02	ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಿಗೆ ಕಾಯರ್ ಬೆಡ್, ದಿಂಬು ಮತ್ತು ಬೆಡ್ ಶೀಟ್ ಮತ್ತು ಬೆಡ್ ಸ್ಪ್ರೆಡ್‌ಗಳನ್ನು ಸರಬರಾಜು ಮಾಡುವುದು.	35,00,000.00	1,05,000.00

1. ಟೆಂಡರ್ ಡಾಕ್ಯೂಮೆಂಟ್ ಗಳು ದೊರೆಯುವ ದಿನಾಂಕ : 02.07.2022 ರಿಂದ
2. ಟೆಂಡರ್ ಡಾಕ್ಯೂಮೆಂಟ್ ಗಳನ್ನು ಅಪ್ ಲೋಡ್ ಮಾಡಲು ಕೊನೆಯ ದಿನಾಂಕ : 18.07.2022 ಸಂಜೆ 4.30 ಗಂಟೆವರೆಗೆ.
3. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : 20.07.2022 ಬೆಳ್ಳಿಗ್ಗೆ 11.00 ಗಂಟೆಗೆ (ಸಾಧ್ಯವಾದಲ್ಲಿ)

ಹೆಚ್ಚಿನ ಮಾಹಿತಿಯನ್ನು ಈ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು ಹಾಗೂ ಇ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http://eproc.karnataka.gov.in ನಲ್ಲಿ ಪಡೆಯಬಹುದಾಗಿದೆ.

ಸಹಿ/-(ಚೈತ್ರ ಬಿ.ವಿ)
ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಚಿಕ್ಕಮಗಳೂರು

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ

ಕಹಾಮ ಸಂಕೀರ್ಣ, ಡಾ. ಎಂ. ಹೆಚ್ ಮರೀಗೌಡ ರಸ್ತೆ, ಬೆಂಗಳೂರು 560 029. ಫೋನ್: 080-25536625/25536789

IFTNO. ಕಹಾಮ/ಅಭಿ/ಹಾವೇರಿ ಪ್ಯಾಕಿಂಗ್ ಸ್ಟೇಷನ್/2022-23 ದಿನಾಂಕ: 05.07.2022

ಇ-ಪ್ರೊಕ್ಯೂರ್‌ಮೆಂಟ್ ಅಡಿಯಲ್ಲಿ ಅಲ್ಪಾವಧಿ ಟೆಂಡರ್ ಪ್ರಕಟಣೆ

ಹಾವೇರಿ ಹಾಲು ಒಕ್ಕೂಟವು ನೂತನ ಹಾಲು ಪ್ಯಾಕಿಂಗ್ ಸ್ಟೇಷನ್ ಅನ್ನು ಸ್ಥಾಪಿಸಲು ಉದ್ದೇಶಿಸಿದ್ದು, ಅನುಷ್ಠಾನಕ್ಕೆ ಸಂಬಂಧಿಸಿದಂತೆ, ಒಕ್ಕೂಟದ ಪರವಾಗಿ ಕರ್ನಾಟಕ ಹಾಲು ಮಹಾ ಮಂಡಳವು ಈ ಕೆಳಗಿನ ಕೋಷ್ಟಕದಲ್ಲಿ ನೀಡಿರುವ ಕೆಲಸಕ್ಕಾಗಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖೇನ ದ್ವಿಲಕೋಟೆ ಪದ್ಧತಿಯ ಅಲ್ಪಾವಧಿ ಟೆಂಡರನ್ನು (Technical and Financial) ಆಹ್ವಾನಿಸಲಾಗಿದೆ. ಆಸಕ್ತರು ವೆಬ್‌ಸೈಟ್ http://eproc.karnataka.gov.in ಮೂಲಕ ಟೆಂಡರನ್ನು ಸಲ್ಲಿಸಬಹುದಾಗಿದೆ.

ಕ್ರಮ ಸಂಖ್ಯೆ	ಕೆಲಸದ ವಿವರ	ಸಂಖ್ಯೆ	ಇ.ಎಂ.ಡಿ. ರೂ.	ಮುಕ್ತಾಯದ ಅವಧಿ
1	ಹಾವೇರಿ ಹಾಲು ಒಕ್ಕೂಟಕ್ಕಾಗಿ ಹಾವೇರಿ ಜಿಲ್ಲೆಯಲ್ಲಿ ನೂತನವಾಗಿ ಸ್ಥಾಪಿಸುತ್ತಿರುವ ಯು.ಹೆಚ್.ಟಿ. ಘಟಕದಲ್ಲಿ ಹೆಚ್ಚುವರಿಯಾಗಿ 50 ಸಾವಿರ ಲೀಟರ್ ಸಾಮರ್ಥ್ಯದ ಹಾಲು ಸಂಸ್ಕರಣೆ ಮತ್ತು ಹಾಲು ಪ್ಯಾಕಿಂಗ್ ಸ್ಟೇಷನ್ ಘಟಕವನ್ನು ಅನುಷ್ಠಾನಗೊಳಿಸಲು ಸಂಬಂಧಿಸಿದ ಯಂತ್ರೋಪಕರಣಗಳ ಸರಬರಾಜು ಮತ್ತು ಅಳವಡಿಕೆ ಕೆಲಸಗಳು.	1 ಜಾಬ್	11,00,000/-	06 ತಿಂಗಳು

1. ಟೆಂಡರ್ ಷೆಡ್ಯೂಲ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ: 06.07.2022 ರಿಂದ 20.07.2022 ರ ಸಾಯಂಕಾಲ 4:00 ಗಂಟೆಯವರೆಗೆ.
2. ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 20.07.2022 ರ ಸಾಯಂಕಾಲ 4:00 ಗಂಟೆಯವರೆಗೆ.
3. ಪ್ರಿ-ಬಿಡ್ ಸಭೆ ದಿನಾಂಕ 11.07.2022 ರ ಬೆಳಿಗ್ಗೆ 11.30 ಗಂಟೆಗೆ.
4. ಟೆಂಡರುಗಳನ್ನು (Cover - 1) ತೆರೆಯುವ ದಿನಾಂಕ: 22.07.2022 ರಂದು ಬೆಳಿಗ್ಗೆ 11:30 ಗಂಟೆಗೆ.

ನಿರ್ದೇಶಕರು (ಅಭಿಯಂತರ-2)

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ

Email: ee_pwdbellary@yahoo.com ದೂರವಾಣಿ ಸಂ: 08392 266123

ಸಂ:ಕಾನಿಇ/ಲೋಇ/ಬವಿ/ಟಿ.ಎಸ್-3/2022-23/1577 ದಿನಾಂಕ: 04-07-2022.

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಆಸಕ್ತಿಯುಳ್ಳ ಗುತ್ತಿಗೆದಾರರಿಂದ ಈ ಕೆಳಕಾಣಿಸಿದ ಕಾಮಗಾರಿಗಳಿಗೆ ದ್ವಿ ಲಕೋಟೆ ಪದ್ಧತಿಯಂತೆ ಟೆಂಡರುಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಪ್ರಕಟಣೆಯಲ್ಲಿನ ಕಾಮಗಾರಿಗಳನ್ನು ಅಂತರ್ಜಾಲದ ಮೂಲಕ ವೆಬ್ ಸೈಟ್ ವಿಳಾಸ http://eproc. karnataka.gov.inವನ್ನು ಸಂದರ್ಶಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯ ಬಹುದಾಗಿರುತ್ತದೆ.

ಕ್ರ ಸಂ	ಕಾಮಗಾರಿಗಳ ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
1)	KPWD/2021-22/BR/WORK_INDENT149501/CALL-2	569.92
2)	KPWD/2022-23/RD/WORK_INDENT152788	191.75
3)	KPWD/2022-23/RD/WORK_INDENT153320	150.00
4)	KPWD/2022-23/RD/WORK_INDENT152245/CALL-2	60.00
5)	KPWD/2022-23/RD/WORK_INDENT152297/CALL-2	58.73

ಸೂಚನೆ : ಕಾರಣಾಂತರಗಳಿಂದ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳು ಹಾಗೂ ಇನ್ನಿತರೆ ಬದಲಾವಣೆಗಳಾದಲ್ಲಿ ಗುತ್ತೇದಾರರು ಇ- ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಗಮನಸಬಹುದಾಗಿದೆ.

ಟೆಂಡರಿಗಾಗಿ ನಿಗದಿಪಡಿಸಿದ ದಿನಾಂಕಗಳು ಕೆಳಗಿನಂತಿವೆ.

ಅ) ಕ್ರಮ ಸಂ.(1)ರಿಂದ (3)ರ ವರೆಗಿನ ಕಾಮಗಾರಿಗೆ ನಿಗಧಿಪಡಿಸಿದ ಪ್ರಿ-ಬಿಡ್ ಸಭೆ ದಿನಾಂಕ ಮತ್ತು ಸಮಯ: **08-07-2022 ರಂದು 11.00 ಗಂಟೆಗೆ ಕಾರ್ಯನಿರ್ವಾಹಕ ಇಂಜನೀಯರ್, ಲೋಕೋಪಯೋಗಿ ಇಲಾಖಾ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ.** ಆ) ಟೆಂಡರ್ ಆಕ್ಷೇಪಣೆಗಳಿಗಾಗಿ ನಿಗದಿಪಡಿಸಲಾದ ದಿನಾಂಕ: **12-07-2022 ರಂದು 12.00 ಗಂಟೆಯ ವರೆಗೆ.** ಇ) ಇ-ಪೋರ್ಟ್‌ಲ್ ಮುಖಾಂತರ ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **18-07-2022 ರಂದು 16.00 ಗಂಟೆಯ ವರೆಗೆ.** ಈ) ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: **19-07-2022 ರಂದು 16.30 ಗಂಟೆಗೆ ಕಾರ್ಯನಿರ್ವಾಹಕ ಇಂಜನೀಯರ್, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ ತೆರೆಯಲಾಗುವುದು**

ಸಹಿ/-ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖಾ ವಿಭಾಗ, ಬಳ್ಳಾರಿ.

ಡಿಐಪಿಆರ್/ಬಳ್ಳಾರಿ/216/ಎಂಸಿಎ/2022-23

ಕರ್ನಾಟಕ ಸರ್ಕಾರ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂಜಿನಿಯರಿಂಗ್ ವಿಭಾಗ ಕಲಬುರಗಿ

ಕಾರ್ಯನಿರ್ವಾಹಕ ಅಭಿಯಂತರವರ ಕಾರ್ಯಾಲಯ # ಲೋಕೋಪಯೋಗಿ ಇಲಾಖೆ ವಸತಿ ಗೃಹ ಸಂಖ್ಯೆ: 110-ಡಿ, ಐವಾನ್-ಇ-ಶಾಹಿ ಕಾಲೋನಿ, ಹೆಚ್.ಕೆ.ಇ. ಶಿಕ್ಷಣ ಸಂಸ್ಥೆಯ ಮಹಿಳಾ ಪಾಲಿಟೆಕ್ನಿಕ್ ಕಾಲೇಜು ಎದುರುಗಡೆ ಕಲಬುರಗಿ-585102 ದೂರವಾಣಿ/ಫ್ಯಾಕ್ಸ ಸಂ.: 08472-241982, E-mail ee.khsdrp.klb@gmail.com

ಸಂಖ್ಯೆ: ಆಕುಕ/ಕಾನಿಅ/ಇಂ.ವಿ.ಕ/ಎಇ-2/ವ್ಯಾಸ್ಟೋ ಟೆಂ.ಸಾ/2022-23/320 ದಿನಾಂಕ : 05-07-2022

ಟೆಂಡರ್ ಪ್ರಕಟಣೆ

ಕಾರ್ಯನಿರ್ವಾಹಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ವಿಭಾಗ, ಕಲಬುರಗಿ ರವರಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ 3ನೇ ದರ್ಜೆ ಮೇಲ್ಪಟ್ಟ ಗುತ್ತಿಗೆದಾರರಿಂದ, ಕಲಬುರಗಿ ವಿಭಾಗ ವ್ಯಾಪ್ತಿಯಲ್ಲಿ ಬರುವ ರಾಯಚೂರು ಜಿಲ್ಲೆಯಲ್ಲಿ ವ್ಯಾಕ್ಸಿನ್ ಸ್ಟೋರ್ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳುವ ಕಾಮಗಾರಿಗಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ (E-Procurement) ಮೂಲಕ ದ್ವಿ ಲಕೋಟೆ ಟೆಂಡರ್ ದಾಸ್ತಾವೇಜು ಪದ್ಧತಿಯಲ್ಲಿ ಟೆಂಡರ್ ಅನ್ನು ಆಹ್ವಾನಿಸಲಾಗಿದೆ. ಟೆಂಡರ್‌ಗಿಟ್ಟ ಅಂದಾಜು ಮೊತ್ತ ರೂ. 65.00 ಲಕ್ಷಗಳು ಆಗಿರುತ್ತದೆ. ಟೆಂಡರ್ ಕಾಲಾವಧಿ 06 ತಿಂಗಳುಗಳು ಮಳೆಗಾಲ ಸೇರಿದಂತೆ. ಹೆಚ್ಚಿನ ವಿವರಗಳಿಗೆ ಇ-ಪೋರ್ಟಲ್‌ನಲ್ಲಿ ನೋಡುವುದು.

ಟೆಂಡರ್ ಪ್ರಕ್ರಿಯೆಗಳ ದಿನಾಂಕಗಳು-

1. ಟೆಂಡರ್ ಪ್ರಶ್ನೋತ್ತರಗಳಿಗೆ ಕೋನೆಯ ದಿನಾಂಕ ಮತು ಸಮಯ : **18-07-2022 ರಂದು 16.30 ಗಂಟೆಯವರೆಗೆ**
2. ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ : **25-07-2022ರಂದು 16.30 ಗಂಟೆಯವರೆಗೆ**
3. ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ (ತಾಂತ್ರಿಕ ಬಿಡ್) : **26-07-2022 ರಂದು 17:00 ಗಂಟೆಗೆ.**

ಟೆಂಡರ್‌ಗಳ ವಿವರಗಳನ್ನು ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (Through E-Procurement Platform) www.eproc.karnataka.gov.in ದಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಇ.ಎಂ.ಡಿ. ಮೊತ್ತವನ್ನು ಮತ್ತು ಟೆಂಡರ್‌ಗಳ ಪ್ರಕ್ರಿಯೆ ಶುಲ್ಕವನ್ನು www.eproc.karnataka.gov.in ನಲ್ಲಿ ವಿದ್ಯುನ್ಮಾನ (Electronic) ವಿಧಾನದಲ್ಲಿ ಪಾವತಿಸಬಹುದಾಗಿರುತ್ತದೆ. ಆಸಕ್ತಿಯುಳ್ಳ ಗುತ್ತಿಗೆದಾರರು ಸದರಿ ಟೆಂಡರ್‌ಗಳಲ್ಲಿ ಭಾಗವಹಿಸಲು ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ (E-Procurement Platform) ನೊಂದಾಯಿಸುವ ಅಗತ್ಯ ಇದೆ.

ಟಿಪ್ಪಣಿ: 1) ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯ ಮುಂದೂಡುವಿಕೆ /ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ / ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. 2) ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು,
ಆ&ಕುಕಇ, ಇಂಜಿನಿಯರಿಂಗ್ ವಿಭಾಗ, ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/329/ಎಂ.ಸಿ.&ಎ/2022-23

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಲೋ.ಇ ವಿಭಾಗ, ಶಿವಮೊಗ್ಗ

ಸಂಖ್ಯೆ:ಕಾಪಾಅ/ಶಿವಿಶಿ/ಎಇ-2/ಐಎಫ್‌ಟಿ-14/22-23 ದಿ: 04.07.2022

ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ಅರ್ಹ ನೋಂದಾಯಿತ 4ನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಂದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ (http://eproc. karnataka.gov.in) ಮೂಲಕ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ.

ಪರಿಶಿಷ್ಟ ಜಾತಿಯ ಗುತ್ತಿಗೆದಾರರಿಗೆ ಮೀಸಲಿಡಲಾದ ಕಾಮಗಾರಿಗಳು

1. ಹೊಸನಗರ ತಾಲ್ಲೂಕು 1 ಕಾಮಗಾರಿ

ಎಲ್ಲಾ ಗುತ್ತಿಗೆದಾರರು ಭಾಗವಹಿಸಬಹುದಾದ ಕಾಮಗಾರಿಗಳು

1. ಹೊಸನಗರ ತಾಲ್ಲೂಕು 6 ಕಾಮಗಾರಿ

ಟೆಂಡರ್ ದಾಖಲಾತಿಗಳನ್ನು ಡೌನ್ ಲೋಡ್ ಮಾಡಲು ಮತ್ತು ಸಲ್ಲಿಸಲು ಎಲ್ಲಾ ಕಾಮಗಾರಿಗಳಿಗೆ ದಿನಾಂಕ:06-07-2222 ರಿಂದ 20-07-2022 ರವರೆಗೆ, ಕಾಮಗಾರಿಗಳನ್ನು ಪೂರ್ಣಗೊಳಿಸಲು ಕಾಲಾವಧಿ(ಮಳೆಗಾಲ ಸೇರಿ) : ಕ್ರ.ಸಂ 1 ರಿಂದ 3 ರ ವರೆಗೆ 3 ತಿಂಗಳು, ಕ್ರ.ಸಂ. 4 ರಿಂದ 7 ರ ವರೆಗೆ 6 ತಿಂಗಳು

ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ 08182-274942) ಹಾಗೂ ಸಹಾಯಕ ದೂರವಾಣಿ ಸಂಖ್ಯೆ: 080-25501216/ 080-25501227 ರಿಂದ ಮಾಹಿತಿ ಪಡೆಯಬಹುದು.

ಸಹಿ/- ಕಾ.ಇಂ, ಲೋಕೋಪಯೋಗಿ ಇಲಾಖೆ, ವಿಭಾಗ, ಶಿವಮೊಗ್ಗ

ವಾ.ಸಾ.ಸಂ.ಇ/ಎಂಸಿಎ/ಶಿ/27/07/22-23/531

ಕರ್ನಾಟಕ ಸರ್ಕಾರ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ)

ಸಕಾಲ ಮಿಷನ್

1ನೇ ಗೇಟ್, 6ನೇ ಮಹಡಿ, ಕೊಠಡಿ ಸಂಖ್ಯೆ: 607, ಬಹುಮಹಡಿ ಕಟ್ಟಡ, ಬೆಂಗಳೂರು - 560001 ದೂರವಾಣಿ: 080-22032857, 080-22032899
Website: www.sakala.kar.nic.in Email: aosakala@karnataka.gov.in

ಅಲ್ಪಾವಧಿ ಟೆಂಡರ್ ಅಧಿಸೂಚನೆ

Tender no: dpar/5/spm/2022-23 ದಿನಾಂಕ: 05.07.2022

ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ 2011 ಮತ್ತು (ತಿದ್ದುಪಡಿ) ಅಧಿನಿಯಮ 2014 ರಡಿ ಅನುಷ್ಠಾನಗೊಳಿಸಲು ಸಕಾಲ ಮಿಷನ್‌ಗೆ ಮಾನವ ಸಂಪನ್ಮೂಲಗಳನ್ನು (02 ವಾಹನ ಚಾಲಕರು ಹಾಗೂ 03 ಗ್ರೂಪ್ ಡಿ) ಎರಡು ವರ್ಷಗಳ ಅವಧಿಗೆ ನೀಡಲು ಇ-ಪ್ರೊಕ್ಯೂರ್ಮೆಂಟ್ ವಿಧಾನದಲ್ಲಿ ಇ-ಆಡಳಿತ ಇಲಾಖೆಯ ವೆಬ್‌ಸೈಟ್ http://www.eproc.karnataka.gov.in ಮುಖಾಂತರ ಅರ್ಹ ಟೆಂಡರ್‌ದಾರರಿಂದ (1) ತಾಂತ್ರಿಕ ಬಿಡ್ (2) ದರದ ಬಿಡ್ ಎಂದು 2 ಭಾಗಗಳಾಗಿ ಅಲ್ಪಾವಧಿ ಟೆಂಡರನ್ನು ಆಹ್ವಾನಿಸಲಾಗಿದೆ.

ಟೆಂಡರ್ ಪ್ರಕ್ರಿಯೆ ಕೆಳಕಂಡಂತೆ ನಿಗದಿಪಡಿಸಲಾಗಿದೆ : (1) ಟೆಂಡರ್ ಕುರಿತಾದ ವಿಚಾರಣೆ/ ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕ ಮತ್ತು ವೇಳೆ: 08.07.2022, 17:30 Hours (2) ಟೆಂಡರ್ ಸ್ವೀಕೃತಿಯ ಕೊನೆಯ ದಿನಾಂಕ ಮತ್ತು ವೇಳೆ: 12.07.2022, 17:30 Hours. (3) ಟೆಕ್ನಿಕಲ್ ಬಿಡ್ ತೆರೆಯಲು ದಿನಾಂಕ ಮತ್ತು ವೇಳೆ: 13.07.2022, 17:30 Hours (4) ಫೈನಾನ್ಶಿಯಲ್ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ: 15.07.2022, 11:00 Hours. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: www.eproc.karnataka.gov.in

ಸಹಿ/-
ಆಡಳಿತಾಧಿಕಾರಿಗಳು ಹಾಗೂ ಟೆಂಡರ್ ಆಹ್ವಾನ ಪ್ರಾಧಿಕಾರ
ಸಕಾಲ ಮಿಷನ್,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ)
ಕರ್ನಾಟಕ ಸರ್ಕಾರ

ವಾ.ಸಾ.ಸಂ.ಇ/ವಾಪ್ರ/1216/ಆಕಾರ್/22-23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, ಬ್ಯಾಟರಾಯನಪುರ ವಿಭಾಗ, ಸಂಖ್ಯೆ 2152/20, ಡಿಫೆನ್ಸ್ ಕಾಲೋನಿ, ಬೆಂಗಳೂರು ಜಲಮಂಡಳಿ ಟ್ಯಾಂಕ್ ರಸ್ತೆ, ಸಹಕಾರನಗರ, ಬೃ.ಬೆಂ.ಮ.ಪಾಲಿಕೆ ಕಚೇರಿ, ಬ್ಯಾಟರಾಯನಪುರ, ಬೆಂಗಳೂರು - 560 092

ಸಂಖ್ಯೆ: ಕಾಪಾಅ/ಬ್ಯಾಪು/ಬೃಬೆಂಮಪಾ/ಇ-ಪ್ರೊಕ್/10/2022-23 ದಿನಾಂಕ: 04.07.2022

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) - (ದ್ವಿಲಕೋಟೆ ಪದ್ಧತಿ)
(ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಬ್ಯಾಟರಾಯನಪುರ ವಿಭಾಗ, ಬೃ.ಬೆಂ.ಮ.ಪಾಲಿಕೆ ಬೆಂಗಳೂರು ಇವರ ಪರವಾಗಿ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿ-ಗಳಿಗೆ ಟೆಂಡರನ್ನು ಆಹ್ವಾನಿಸಿದ್ದಾರೆ. ಸ್ಟ್ಯಾಂಡರ್ಡ್ ಟೆಂಡರ್ ದಾಖಲೆ ಕೆಡಬ್ಲ್ಯೂ-4.

ಕ್ರ ಸಂ	ಕಾಮಗಾರಿಗಳ ಹೆಸರ	ಟೆಂಡರಿಗಿಟ್ಟ ಮೊತ್ತ (₹. ಲಕ್ಷಗಳಲ್ಲಿ)	ಇಎಂಡಿ (₹. ಲಕ್ಷಗಳಲ್ಲಿ)
1.	ಪ್ಯಾಕೇಜ್ ಸಂಖ್ಯೆ 01 (5 ಕಾಮಗಾರಿಗಳನ್ನು ಒಳಗೊಂಡಿದೆ)	1000.00	15.00
2.	ಪ್ಯಾಕೇಜ್ ಸಂಖ್ಯೆ 02 (5 ಕಾಮಗಾರಿಗಳನ್ನು ಒಳಗೊಂಡಿದೆ)	1000.00	15.00
3.	ಪ್ಯಾಕೇಜ್ ಸಂಖ್ಯೆ 03 (5 ಕಾಮಗಾರಿಗಳನ್ನು ಒಳಗೊಂಡಿದೆ)	1100.00	15.00
4.	ಪ್ಯಾಕೇಜ್ ಸಂಖ್ಯೆ 04 (3 ಕಾಮಗಾರಿಗಳನ್ನು ಒಳಗೊಂಡಿದೆ)	900.00	13.50
5.	ಪ್ಯಾಕೇಜ್ ಸಂಖ್ಯೆ 05 (3 ಕಾಮಗಾರಿಗಳನ್ನು ಒಳಗೊಂಡಿದೆ)	1000.00	15.00
6.	ಪ್ಯಾಕೇಜ್ ಸಂಖ್ಯೆ 06 (14 ಕಾಮಗಾರಿಗಳನ್ನು ಒಳಗೊಂಡಿದೆ)	1500.00	15.00
7.	ಪ್ಯಾಕೇಜ್ ಸಂಖ್ಯೆ 07 (7 ಕಾಮಗಾರಿಗಳನ್ನು ಒಳಗೊಂಡಿದೆ)	1000.00	15.00

ಟೆಂಡರ್ ವೇಳಾಪಟ್ಟಿ: (1) ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ **26.07.2022**ರ ಸಂಜೆ **4:00** ಗಂಟೆಯವರೆಗೆ. (2) ಬಿಡ್ ಪೂರ್ವಬಾವಿ ಸಭೆಯನ್ನು ಕಾರ್ಯಪಾಲಕ ಅಭಿಯಂತರರ ಕಚೇರಿ, (ಬ್ಯಾಟರಾಯನಪುರ ವಿಭಾಗ) ಇಲ್ಲಿ ದಿನಾಂಕ: **19.07.2022**ರ ಸಂಜೆ **4:00** ಗಂಟೆಗೆ ನಡೆಸಲಾಗುವುದು. (3) ಬಿಡ್‌ಗಳನ್ನು ದಿನಾಂಕ: **27.07.2022**ರ ಬೆಳಿಗ್ಗೆ **11:00** ಗಂಟೆಯ ನಂತರ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://eproc.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/- ಕಾರ್ಯಪಾಲಕ ಅಭಿಯಂತರರು
ಬ್ಯಾಟರಾಯನಪುರ ವಿಭಾಗ

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ನಾಳೆಯವರೆಗೆ ರಾಜ್ಯದ ಕರಾವಳಿಯಲ್ಲಿ ಭಾರಿ ವರ್ಷಧಾರೆಯ ಮುನ್ಸೂಚನೆ

ಮುಂದುವರಿದ ಭಾರಿ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಕೊಡಗು ಹಾಗೂ ಕರಾವಳಿ ಜಿಲ್ಲೆಗಳಲ್ಲಿ ಮಂಗಳವಾರ ಎಡೆಬಿಡದೆ ಮಳೆ ಸುರಿದಿದೆ. ಧಾರವಾಡ, ಬೆಳಗಾವಿ, ವಿಜಯನಗರ, ಬಾಗಲಕೋಟೆ, ಗದಗ, ಹಾವೇರಿ ಜಿಲ್ಲೆಗಳಲ್ಲಿಯೂ ಉತ್ತಮ ಮಳೆಯಾಗಿದೆ. ಕೆಲವೆಡೆ ಕೃಷಿ ಚಟುವಟಿಕೆಗಳು ಗರಿಗೆದರಿವೆ.

ಕೊಡಗು ಜಿಲ್ಲೆಯಲ್ಲಿ ಬುಧವಾರವೂ ಭಾರಿ ಮಳೆಯಾಗುವ ಮುನ್ನೆಚ್ಚರಿಕೆಯನ್ನು ನೀಡಲಾಗಿದೆ. ಕೊಡಗು, ಉಡುಪಿ, ದಕ್ಷಿಣ ಕನ್ನಡ ಹಾಗೂ ಉತ್ತರ ಕನ್ನಡ ಜಿಲ್ಲೆಯ ಶಾಲಾ, ಕಾಲೇಜುಗಳಿಗೆ ಬುಧವಾರ ರಜೆ ಘೋಷಿಸಲಾಗಿದೆ. ಚಿಕ್ಕಮಗಳೂರು ಜಿಲ್ಲೆಯ ಚಿಕ್ಕಮಗಳೂರು, ಮೂಡಿಗೆರೆ, ಕೊಪ್ಪ, ಶೃಂಗೇರಿ, ಕಳಸ ಹಾಗೂ ಎನ್.ಆರ್.ಪುರ ತಾಲ್ಲೂಕುಗಳ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಇದೇ 9ರ ವರೆಗೆ ರಜೆ ಘೋಷಿಸಲಾಗಿದೆ. ಜುಲೈ 7ರವರೆಗೆ ರಾಜ್ಯದ ಕರಾವಳಿಯಲ್ಲಿ ಭಾರಿ ಮಳೆಯಾಗುವ ಸಾಧ್ಯತೆಯಿದ್ದು, 'ಆರೆಂಜ್ ಅಲರ್ಟ್' ನೀಡಲಾಗಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಸಮುದ್ರ ಮತ್ತಷ್ಟು ಪ್ರಕ್ಷುಬ್ಧಗೊಂಡಿದೆ. ಕಾರವಾರ, ಮಾಜಾಳಿ, ಗೋಕರ್ಣ, ಕುಮಟಾ, ಹೊನ್ನಾವರ ಭಾಗದಲ್ಲಿ ಭಾರಿ ಗಾತ್ರದ ಅಲೆಗಳು ದಡಕ್ಕೆ ಅಪ್ಪಳಿಸುತ್ತಿವೆ. ನೇತ್ರಾವತಿ ನದಿಯ ನೀರಿನ ಮಟ್ಟ ಹೆಚ್ಚುತ್ತಿರುವುದರಿಂದ ನದಿಪಾತ್ರದ ಗ್ರಾಮಸ್ಥರು ಆತಂಕದಲ್ಲಿದ್ದಾರೆ. ಕಲ್ಲಡ್ಕ-ಕಾಞಂಗಾಡ್ ಅಂತರರಾಜ್ಯ ಹೆದ್ದಾರಿಯ ಸಾರಡ್ಕ ಚೆಕ್‌ಪೋಸ್ಟ್ ಬಳಿ ಗುಡ್ಡ ಕುಸಿತದಿಂದ ಕರ್ನಾಟಕ- ಕೇರಳ ನಡುವಿನ ಸಂಚಾರ ಮೊಟಕುಗೊಂಡಿತ್ತು.

ಕೊಡಗು ಜಿಲ್ಲೆಯಾದ್ಯಂತ ಸೋಮವಾರ ರಾತ್ರಿ ಹಾಗೂ ಮಂಗಳವಾರ ದಿನವಿಡೀ ಭಾರಿ ಗಾಳಿಯೊಂದಿಗೆ ಮಳೆಯಾಗಿದೆ. ತಲಕಾವೇರಿ- ಭಾಗಮಂಡಲ ರಸ್ತೆಯಲ್ಲಿ ಬಂಡೆಯೊಂದು ರಸ್ತೆಗೆ ಉರುಳಿ ಬಿದ್ದಿದೆ. ಮಡಿಕೇರಿ- ಮಂಗಳೂರು ರಸ್ತೆಯಲ್ಲಿ ಮೊಣ್ಣಂಗೇರಿ ಸಮೀಪ ಕುಸಿದ ಮಣ್ಣನ್ನು ತೆರವುಗೊಳಿಸಲಾಗಿದೆ. ಹಾರಂಗಿ ಜಲಾಶಯದಿಂದ 12,866 ಕ್ಯುಸೆಕ್‌ನಷ್ಟು ನೀರನ್ನು ನದಿಗೆ ಬಿಡಲಾಗುತ್ತಿದೆ. ದಾವಣಗೆರೆ, ಚಿತ್ರದುರ್ಗ, ಶಿವಮೊಗ್ಗ ಜಿಲ್ಲೆಗಳಲ್ಲೂ ಮಳೆಯಾಗಿದೆ. ಗಾಜನೂರಿನ ತುಂಗಾ ಜಲಾಶಯ ಭರ್ತಿಯಾಗಿದ್ದು, 44 ಸಾವಿರ ಕ್ಯುಸೆಕ್ ನಷ್ಟು ನೀರನ್ನು ನದಿಗೆ ಬಿಡಲಾಗಿದೆ. ಮಲೆನಾಡು, ಹಾಸನ ಜಿಲ್ಲೆಯಲ್ಲೂ ಉತ್ತಮ ಮಳೆಯಾಗಿದೆ.

ಕಲ್ಯಾಣ ಕರ್ನಾಟಕದ ಕಲಬುರಗಿ, ಯಾದಗಿರಿ ಬೀದರ್, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಯ ವಿವಿಧೆಡೆ ಮಳೆಯಾಗಿದೆ.

ದಾವಣಗೆರೆ ಜಿಲ್ಲೆಯಾದ್ಯಂತ ಹದಮಳೆಯಾಗುತ್ತಿದ್ದು ಹರಿಹರ ತಾಲೂಕಿನ ದೇವರಬೆಳಕೆರೆ ಗ್ರಾಮದ ಹೊರವಲಯದಲ್ಲಿ ರೈತ ಮಹಿಳೆಯರು ಮೆಕ್ಕೆಜೋಳ ಪೈರಿಗೆ ಗೊಬ್ಬರ ಹಾಕಿದರು —ಪ್ರಜಾವಾಣಿ ಚಿತ್ರ/ ಸತೀಶ ಬಡಿಗೇರ್

'ಮುಂದಿನ ಐದು ದಿನ ಮಳೆ ಚುರುಕು'

ನವದೆಹಲಿ (ಪಿಟಿಐ): ಮಧ್ಯ ಭಾರತದಲ್ಲಿ ಕಡಿಮೆ ಒತ್ತಡ ಸೃಷ್ಟಿಯಾಗಿರುವುದರಿಂದ ಕರ್ನಾಟಕದ ಕರಾವಳಿ ಸೇರಿ ಆಂಧ್ರಪ್ರದೇಶ, ತೆಲಂಗಾಣ ಹಾಗೂ ಒಡಿಶಾ ರಾಜ್ಯಗಳಲ್ಲಿ ನೈರುತ್ಯ ಮುಂಗಾರು ಮಳೆ ಚುರುಕು ಪಡೆದಿದೆ. ಮುಂಗಾರು ಬೆಳೆಗಳ ಬಿತ್ತನೆಯ ಸಮಯಕ್ಕೆ ಸಮೃದ್ಧ ಮಳೆಯಾಗುತ್ತಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಮಂಗಳವಾರ ಹೇಳಿದೆ.

ಮಧ್ಯ ಭಾರತ ಮತ್ತು ಪಶ್ಚಿಮ ಕರಾವಳಿಯಲ್ಲಿ ಮುಂದಿನ ಐದು ದಿನಗಳವರೆಗೆ ಮುಂಗಾರು ಮಳೆಯು ಚುರುಕಾಗಿರಲಿದೆ. ಆದರೆ, ದೇಶದ ವಾಯವ್ಯ ಭಾಗಗಳಲ್ಲಿ ಬುಧವಾರದಿಂದ ಋತುವಿನಂತೆ ಮಳೆಯಾಗುವ ನಿರೀಕ್ಷೆಯಿದೆ ಎಂದು ಮಾಹಿತಿ ನೀಡಿದೆ.

ಮುಂಬೈನಲ್ಲಿ ಭಾರಿ ಮಳೆ

ಮುಂಬೈ(ಪಿಟಿಐ): ಮುಂಬೈ ಮತ್ತು ಸಮೀಪ ಪ್ರದೇಶಗಳಲ್ಲಿ ಮಂಗಳವಾರ ಭಾರಿ ಮಳೆಯಾಗಿದ್ದು, ಹಲವೆಡೆ ರೈಲು ಹಳಿಗಳು ಹಾಗೂ ತಗ್ಗು ಪ್ರದೇಶಗಳು ಜಲಾವೃತವಾಗಿವೆ.

ರಸ್ತೆಗಳಲ್ಲಿ ಮಳೆ ನೀರು ನಿಂತಿದ್ದ ಕಾರಣ ವಿವಿಧೆಡೆ ವಾಹನ ಸಂಚಾರಕ್ಕೆ ತೊಡಕುಂಟಾಗಿತ್ತು. ರೈಲುಗಳ ಸಂಚಾರವೂ ವಿಳಂಬವಾಗಿತ್ತು ಎಂದು ಅಧಿಕಾರಿಗಳು ಹೇಳಿದ್ದಾರೆ.

ಮಂಗಳವಾರ ಬೆಳಿಗ್ಗೆ 8 ಗಂಟೆಗೆ ಕೊನೆಗೊಂಡಂತೆ 24 ಗಂಟೆಗಳ ಅವಧಿಯಲ್ಲಿ ದಕ್ಷಿಣ ಮುಂಬೈನಲ್ಲಿ ಸರಾಸರಿ 95.81 ಮಿ.ಮೀ. ಮಳೆಯಾಗಿದೆ. ಇದೇ ಅವಧಿಯಲ್ಲಿ ಪೂರ್ವ ಮತ್ತು ಪಶ್ಚಿಮ ಉಪನಗರಗಳಲ್ಲಿ ಕ್ರಮವಾಗಿ 115.09 ಮಿ.ಮೀ ಹಾಗೂ 116.73 ಮಿ.ಮೀ ಮಳೆಯಾಗಿದೆ ಎಂದೂ ವಿವರಿಸಿದ್ದಾರೆ.

ಮಳೆ ಪರಿಸ್ಥಿತಿ ಪರಿಶೀಲಿಸಿದ ಮುಖ್ಯಮಂತ್ರಿ ಏಕನಾಥ ಶಿಂಧೆ, 'ಪ್ರವಾಹ ಉಂಟಾಗಬಹುದಾದ ಸ್ಥಳಗಳಿಂದ 3,500 ಮಂದಿಯನ್ನು ಸುರಕ್ಷಿತ ಪ್ರದೇಶಗಳಿಗೆ ಸ್ಥಳಾಂತರಿಸಲಾಗಿದೆ' ಎಂದು ಹೇಳಿದ್ದಾರೆ.

ಕಾಮೆಡ್‌-ಕೆ ಫಲಿತಾಂಶ: ಕರ್ನಾಟಕದ ಮೇಲುಗೈ

ಬೆಂಗಳೂರು: ಎಂಜಿನಿಯರಿಂಗ್ ಕಾಲೇಜುಗಳ ಪ್ರವೇಶಕ್ಕೆ ಕಾಮೆಡ್-ಕೆ ನಡೆಸಿದ್ದ ಪರೀಕ್ಷೆಯ ಫಲಿತಾಂಶ ಮಂಗಳವಾರ ಪ್ರಕಟಗೊಂಡಿದ್ದು, ಮೊದಲ 10 ರ‍್ಯಾಂಕ್‌ಗಳಲ್ಲಿ ಐದು ಬೆಂಗಳೂರಿನ ಪಾಲಾಗಿವೆ.

ತಮಿಳುನಾಡು ಹೊಸೂರಿನ ಎ.ವೆಂಕಟ್ ಪ್ರಥಮ, ಬೆಂಗಳೂರಿನ ವಿಶಾಲ್ ಬೈಸಾನಿ ದ್ವಿತೀಯ, ಅಪೂರ್ವ್ ಟಂಡನ್ ತೃತೀಯ ರ‍್ಯಾಂಕ್ ಪಡೆದಿದ್ದಾರೆ. ಮೊದಲ 100 ರ‍್ಯಾಂಕ್‌ಗಳಲ್ಲಿ 52 ರ‍್ಯಾಂಕ್‌ಗಳನ್ನು ಗಳಿಸುವ ಮೂಲಕ ಕರ್ನಾಟಕದ ಅಭ್ಯರ್ಥಿಗಳು ಮೇಲುಗೈ ಸಾಧಿಸಿದ್ದಾರೆ.

ದೇಶದ 154 ನಗರಗಳ 230 ಪರೀಕ್ಷಾ ಕೇಂದ್ರಗಳಲ್ಲಿ ಜೂನ್ 19ರಂದು ಆನ್‌ಲೈನ್ ಮೂಲಕ ಪರೀಕ್ಷೆ ನಡೆದಿತ್ತು. 61,635 ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದು, 57,387 (21,108 ಕರ್ನಾಟಕ, 36278 ಕರ್ನಾಟಕೇತರ) ಅಭ್ಯರ್ಥಿಗಳು ಪರೀಕ್ಷೆ ಬರೆದಿದ್ದರು.

ಅರ್ಹ ಅಭ್ಯರ್ಥಿಗಳ ರ‍್ಯಾಂಕ್ ಕಾರ್ಡ್‌ಗಳನ್ನು ರಚಿಸಲಾಗಿದೆ. ಕಾಮೆಡ್-ಕೆ ವೆಬ್‌ಸೈಟ್ www.comedk.orgನ ಅರ್ಜಿದಾರರ ಲಾಗಿನ್‌ನಲ್ಲಿ ಅಭ್ಯರ್ಥಿಗಳಿಗೆ ಮಾಹಿತಿ ಲಭ್ಯವಾಗಲಿದೆ. ಆನ್‌ಲೈನ್ ಮೋಡ್‌ನಲ್ಲಿ ಕೌನ್ಸೆಲಿಂಗ್ ನಡೆಸಲಾಗುವುದು. ಅಭ್ಯರ್ಥಿಗಳು ತಮ್ಮ ಲಾಗಿನ್ ಮೂಲಕ ದಾಖಲೆಗಳ ಸ್ಕ್ಯಾನ್ ಮಾಡಿದ ಪ್ರತಿಗಳನ್ನು ಅಪ್‌ಲೋಡ್ ಮಾಡಬೇಕು. ನಂತರ ದಾಖಲೆಗಳನ್ನು ಪರಿಣತ ಪರಿಶೀಲನಾ ಅಧಿಕಾರಿಗಳ ಸಮಿತಿ ಪರಿಶೀಲಿಸುತ್ತದೆ. ಕೌನ್ಸೆಲಿಂಗ್ ವೇಳಾಪಟ್ಟಿಯನ್ನು ಶೀಘ್ರ ಪ್ರಕಟಿಸಲಾಗುವುದು ಎಂದು ಕಾಮೆಡ್-ಕೆ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳು ಕರ್ನಾಟಕ ಸಾಮಾನ್ಯ ಪ್ರವೇಶ ಪರೀಕ್ಷೆಗೆ (ಕೆಸಿಇಟಿ) ಸೇರಲು ಸಮ್ಮತಿ ನೀಡಿದ್ದು, ಇದು ಕಾಮೆಡ್-ಕೆ ಪರೀಕ್ಷೆಯ ಕೊನೆಯ ಫಲಿತಾಂಶವಾಗಿದೆ.

ಸ್ಪೈಸ್‌ಜೆಟ್‌ನ 2 ವಿಮಾನಗಳಲ್ಲಿ ತಾಂತ್ರಿಕ ದೋಷ

ನವದೆಹಲಿ/ಕರಾಚಿ (ಪಿಟಿಐ): ಸ್ಪೈಸ್‌ಜೆಟ್ ಸಂಸ್ಥೆಗೆ ಸೇರಿದ ಎರಡು ವಿಮಾನಗಳಲ್ಲಿ ಮಂಗಳವಾರ ತಾಂತ್ರಿಕ ದೋಷ ಕಂಡುಬಂದಿದೆ. ಕಳೆದ 17 ದಿನಗಳಲ್ಲಿ ತಾಂತ್ರಿಕ ವೈಫಲ್ಯಕ್ಕೆ ಸಂಬಂಧಿಸಿದ ಏಳು ಪ್ರಕರಣಗಳು ಸಂಸ್ಥೆಯ ವಿಮಾನಗಳಲ್ಲಿ ಕಂಡುಬಂದಿದ್ದು, ಆತಂಕ ವ್ಯಕ್ತವಾಗಿದೆ.

ಮಂಗಳವಾರ ನಡೆದ ಮೊದಲ ಪ್ರಕರಣದಲ್ಲಿ ಇಂಧನ ಸೂಚಕದಲ್ಲಿನ ಲೋಪದಿಂದಾಗಿ ಇಂಧನ ಪ್ರಮಾಣ ಕಡಿಮೆ ಇದೆ ಎಂದು ತೋರಿಸಿದೆ. ಹೀಗಾಗಿ, ದೆಹಲಿಯಿಂದ ದುಬೈಗೆ ತೆರಳುತ್ತಿದ್ದ ಬೋಯಿಂಗ್ 737 ಮ್ಯಾಕ್ಸ್ ವಿಮಾನವು ಕರಾಚಿ ವಿಮಾನ ನಿಲ್ದಾಣದಲ್ಲಿ ಇಳಿದಿದೆ. ಪರಿಶೀಲನೆ ನಡೆಸಿದಾಗ ಟ್ಯಾಂಕ್‌ನಲ್ಲಿ ಸಮರ್ಪಕ ಇಂಧನವಿದ್ದುದು ಗೊತ್ತಾಗಿದೆ. ವಿಮಾನದಲ್ಲಿ ಸುಮಾರು 100 ಪ್ರಯಾಣಿಕರಿದ್ದರು.

ಇನ್ನೊಂದೆಡೆ ಸ್ಪೈಸ್‌ಜೆಟ್‌ನ ಕ್ಯೂ400 ವಿಮಾನ 23,000 ಕಿ.ಮೀ. ಎತ್ತರದಲ್ಲಿ ಹಾರಾಟ ನಡೆಸಿದ್ದಾಗ ಕಿಟಕಿ ಗಾಜಿನಲ್ಲಿ ಬಿರುಕು ಕಾಣಿಸಿದೆ. ಕಾಂಡ್ಲಾ–ಮುಂಬೈ ವಿಮಾನದಲ್ಲಿ ಈ ಘಟನೆ ನಡೆದಿದ್ದು, ಆದ್ಯತೆ ಮೇರೆಗೆ ವಿಮಾನವನ್ನು ಮುಂಬೈ ನಿಲ್ದಾಣದಲ್ಲಿ ಇಳಿಸಲಾಗಿದೆ.

ಇಂದಿನ ಎರಡೂ ಪ್ರಕಣಗಳು ಸೇರಿದಂತೆ ಒಟ್ಟು ಏಳು ಪ್ರಕರಣಗಳ ಕುರಿತು ಡಿಜಿಸಿಎ ತನಿಖೆ ನಡೆಸುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನ್ಯಾಯಮೂರ್ತಿಗೆ ಬೆದರಿಕೆ: ಸರ್ಕಾರಕ್ಕೆ ರಾಹುಲ್ ತರಾಟೆ

ನವದೆಹಲಿ (ಪಿಟಿಐ): 'ಕರ್ನಾಟಕದಲ್ಲಿರುವ ಬಿಜೆಪಿ ಸರ್ಕಾರದ ಭ್ರಷ್ಟಾಚಾರವನ್ನು ಬಯಲುಗೊಳಿಸಿದ ಹೈಕೋರ್ಟ್ ನ್ಯಾಯಮೂರ್ತಿಯೊಬ್ಬರಿಗೆ ಬೆದರಿಕೆ ಒಡ್ಡಲಾಗಿದೆ. ಒಂದರ ನಂತರ ಒಂದರಂತೆ ಸಂಸ್ಥೆಗಳನ್ನು ಬಿಜೆಪಿ ನೆಲಸಮ ಮಾಡುತ್ತಿದೆ. ನಿರ್ಭೀತರಾಗಿ ತಮ್ಮ ಕರ್ತವ್ಯ ನಿರ್ವಹಿಸುತ್ತಿರುವವರ ಜತೆಗೆ ನಾವೆಲ್ಲರೂ ನಿಲ್ಲಬೇಕಿದೆ' ಎಂದು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಮಂಗಳವಾರ ಹೇಳಿದ್ದಾರೆ.

ಭ್ರಷ್ಟಾಚಾರ ತಡೆ ಘಟಕಕ್ಕೆ (ಎಸಿಬಿ) ಸಂಬಂಧಿಸಿದ ಭ್ರಷ್ಟಾಚಾರ ಪ್ರಕರಣದ ವಿಚಾರಣೆ ನಡೆಸಿದ ಕರ್ನಾಟಕ ಹೈಕೋರ್ಟ್‌ನ ನ್ಯಾಯಮೂರ್ತಿ ಎಚ್.ಪಿ. ಸಂದೇಶ್ ಅವರು ತಮಗೆ ವರ್ಗಾವಣೆಯ ಬೆದರಿಕೆ ಇದೆ ಎಂದು ಸೋಮವಾರ ಹೇಳಿದ್ದರು. ಎಸಿಬಿ ಸಂಗ್ರಹ ಕೇಂದ್ರವಾಗಿದೆ ಎಂದು ಹೇಳಿದ್ದಕ್ಕೆ ತಮಗೆ ವರ್ಗಾವಣೆಯ ಬೆದರಿಕೆ ಒಡ್ಡಲಾಗಿದೆ ಎಂದು ಸಂದೇಶ್ ಹೇಳಿರುವುದನ್ನು ರಾಹುಲ್ ಉಲ್ಲೇಖಿಸಿದ್ದಾರೆ. ಕೋರ್ಟ್ ಕಲಾಪದ ವಿಡಿಯೊವನ್ನು ಕೂಡ ಹಂಚಿಕೊಂಡಿದ್ದಾರೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿಕೆ

ಉದ್ಯೋಗ ಸೃಷ್ಟಿಗಾಗಿ ಉದ್ಯೋಗ ನೀತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸ ಉದ್ಯೋಗ ನೀತಿಯಲ್ಲಿ ಹೆಚ್ಚಿನ ಉದ್ಯೋಗಗಳ ಸೃಷ್ಟಿಗೆ ಆದ್ಯತೆ ನೀಡಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಲಹೆ ನೀಡಿದ್ದು, ಈ ನೀತಿಯನ್ನು ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆಗೆ ಮಂಡಿಸುವಂತೆಯೂ ಅಧಿಕಾರಿಗಳಿಗೆ ಸೂಚಿಸಿದರು.

ಈ ನೀತಿಯು ಕೌಶಲಗಳಿಂದ ಕೂಡಿದ ಮಾನವ ಸಂಪನ್ಮೂಲದ ಸೃಜನೆಗೆ ಪೂರಕವಾಗಿರಬೇಕು. ಹೆಚ್ಚು ಉದ್ಯೋಗ ಸೃಷ್ಟಿಸುವ ಸಂಸ್ಥೆಗಳಿಗೆ ಪ್ರೋತ್ಸಾಹ ನೀಡಬೇಕು ಹಾಗೂ ಉದ್ಯಮ ವಲಯದಲ್ಲಿ ಬೇಡಿಕೆಯಲ್ಲಿರುವ ಕೌಶಲ ತರಬೇತಿಗೂ ಆದ್ಯತೆ ನೀಡಬೇಕು ಎಂದು ಉದ್ಯೋಗ ನೀತಿ ಕುರಿತು ಮಂಗಳವಾರ ಹಿರಿಯ ಅಧಿಕಾರಿಗಳ ಸಭೆಯಲ್ಲಿ ತಿಳಿಸಿದರು.

ರಾಜ್ಯ ಮಟ್ಟದ ಒಪ್ಪಿಗೆ ಸಮಿತಿಯಲ್ಲಿ ಅನುಮೋದನೆಯಾದ ಯೋಜನೆಗಳು ನಿಗದಿತ ಅವಧಿಯಲ್ಲಿ ಜಾರಿಗೊಂಡಿವೆಯೇ? ಇಂತಹ ಕೈಗಾರಿಕೋದ್ಯಮಗಳು ತಮಗೆ ಹಂಚಿಕೆಯಾಗಿರುವ ಭೂಮಿಯನ್ನು ಬಳಸಿಕೊಂಡಿವೆಯೇ ಎಂಬ ಬಗ್ಗೆ ವರದಿ ಸಲ್ಲಿಸಬೇಕು ಮತ್ತು ನಿಗದಿತ ಅವಧಿಯಲ್ಲಿ ಜಾರಿಯಾಗದ ಯೋಜನೆಗಳಿಗೆ ಹಂಚಿಕೆಯಾದ ಭೂಮಿಯನ್ನು ಹಿಂಪಡೆಯಬೇಕು ಎಂದು ಅವರು ಕೈಗಾರಿಕಾ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

ರಾಷ್ಟ್ರೀಯ ಶಿಕ್ಷಣ ನೀತಿಯಡಿ ಶಾಲಾ ಹಂತದಲ್ಲಿಯೇ ತಾಂತ್ರಿಕ ತರಬೇತಿ ನೀಡುವ ಟೆಕ್ನಿಕಲ್ ಸ್ಕೂಲ್‌ಗಳನ್ನು ಸ್ಥಾಪಿಸುವಂತೆಯೂ ಸಲಹೆ ನೀಡಿದ ಅವರು, ಮೊದಲ ಹಂತದಲ್ಲಿಯೇ ಪ್ರಾಯೋಗಿಕವಾಗಿ ತಲಾ ನಾಲ್ಕು ಪ್ರೌಢಶಾಲೆ ಹಾಗೂ ಪಿಯು ಕಾಲೇಜುಗಳಲ್ಲಿ ಈ ಶಿಕ್ಷಣ ನೀಡುವಂತೆ ನಿರ್ದೇಶನ ನೀಡಿದರು.

50 ವರ್ಷ ಮೇಲ್ಪಟ್ಟ ಮಹಿಳಾ ಕೈದಿಗಳ ಬಿಡುಗಡೆ: ಕೇಂದ್ರದ ನಿರ್ಧಾರ

ನವದೆಹಲಿ (ಪಿಟಿಐ): ಸ್ವಾತಂತ್ರ್ಯ ಅಮೃತಮಹೋತ್ಸವದ ಅಂಗವಾಗಿ 50 ವರ್ಷ ಮೇಲ್ಪಟ್ಟ ಮಹಿಳಾ ಹಾಗೂ ತೃತೀಯ ಲಿಂಗಿ ಕೈದಿಗಳನ್ನು ಸನ್ನಡತೆ ಆಧಾರದಲ್ಲಿ ಅವಧಿಗೂ ಮುನ್ನವೇ ಬಿಡುಗಡೆ ಮಾಡಲು ಕೇಂದ್ರ ಸರ್ಕಾರ ತೀರ್ಮಾನಿಸಿದೆ.

60 ವರ್ಷ ಮೇಲ್ಪಟ್ಟ ಪುರುಷ ಮತ್ತು ಅಂಗವಿಕಲ ಕೈದಿಗಳನ್ನೂ ಸೆರೆವಾಸದಿಂದ ಮುಕ್ತರನ್ನಾಗಿಸಲು ತೀರ್ಮಾನಿಸಲಾಗಿದೆ. ಈಗಾಗಲೇ ಶಿಕ್ಷೆಯ ಅವಧಿ ಪೂರೈಸಿದ್ದು, ದಂಡ ಮೊತ್ತ ಪಾವತಿಸಲಾಗದೆ ಜೈಲಿನಲ್ಲಿರುವ ಬಡ ಮತ್ತು ನಿರ್ಗತಿಕ ಕೈದಿಗಳ ದಂಡ ಮೊತ್ತ ಸಂಪೂರ್ಣವಾಗಿ ಮನ್ನಾ ಮಾಡಲೂ ನಿರ್ಧರಿಸಲಾಗಿದೆ.

ಅರ್ಹ ಕೈದಿಗಳನ್ನು ಮೂರು ಹಂತಗಳಲ್ಲಿ (2022ರ ಆಗಸ್ಟ್ 15, 2023ರ ಜನವರಿ 26 ಮತ್ತು ಆಗಸ್ಟ್ 15) ಬಿಡುಗಡೆ ಮಾಡುವಂತೆ ಗೃಹಸಚಿವಾಲಯ ಎಲ್ಲಾ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ನಿರ್ದೇಶಿಸಿದೆ.

'ಮರಣದಂಡನೆ ಹಾಗೂ ಜೀವಾವಧಿ ಶಿಕ್ಷೆಗೆ ಗುರಿಯಾಗಿರುವ, ಉಗ್ರ ಕೃತ್ಯ, ಅತ್ಯಾಚಾರ, ಹಣ ಅಕ್ರಮ ವರ್ಗಾವಣೆ, ವರದಕ್ಷಿಣೆ ಕಿರುಕುಳ, ಮಾನವ ಕಳ್ಳಸಾಗಾಣೆ, ರಾಷ್ಟ್ರೀಯ ಭದ್ರತಾ ಕಾಯ್ದೆ, ಶಸ್ತ್ರಾಸ್ತ್ರಗಳ ಅಕ್ರಮ ಸಂಗ್ರಹ ಪ್ರಕರಣಗಳಡಿ ಜೈಲು ಸೇರಿರುವವರಿಗೆ ಈ ಯೋಜನೆ ಅನ್ವಯವಾಗುವುದಿಲ್ಲ' ಎಂದು ಗೃಹ ಸಚಿವಾಲಯ ಹೇಳಿದೆ.

'ಶಿಕ್ಷೆಯ ಪ್ರಮಾಣದ ಅರ್ಧದಷ್ಟು ಅವಧಿಯನ್ನು ಜೈಲಿನಲ್ಲಿ ಕಳೆದಿರುವ 18 ರಿಂದ 21 ವರ್ಷದೊಳಗಿನ ಕೈದಿಗಳ ವಿರುದ್ಧ ಇತರ ಯಾವುದೇ ಕ್ರಿಮಿನಲ್ ಪ್ರಕರಣ ಇಲ್ಲದಿದ್ದರೆ ಅವರನ್ನೂ ಬಿಡುಗಡೆ ಮಾಡಬಹುದು' ಎಂದಿದೆ.

ಶಾಲಾ ಮಕ್ಕಳಿಗೆ ಶೂ, ಸಾಕ್ಸ್ ಇಲ್ಲ!

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- 50 ಲಕ್ಷ ಮಕ್ಕಳು ಶೂ, ಸಾಕ್ಸ್‌ನಿಂದ ವಂಚಿತ
- 6.15 ಲಕ್ಷ ಮಕ್ಕಳಿಗೆ ಸಿಗದ 'ಸೈಕಲ್ ಭಾಗ್ಯ'
- ಹಣದ ಕೊರತೆ ಮುಂದಿಟ್ಟ ಸರ್ಕಾರ

ಬೆಂಗಳೂರು: ಈ ಬಾರಿಯೂ ಸರ್ಕಾರಿ ಶಾಲೆಯ ಮಕ್ಕಳಿಗೆ ಸೈಕಲ್, ಶೂ, ಸಾಕ್ಸ್ ವಿತರಣೆ ಇಲ್ಲ. ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಅನುದಾನ ಮೀಸಲಿಡದೇ ಇರುವುದರಿಂದ ಈ ಯೋಜನೆಗಳನ್ನು ಕೈ ಬಿಡಲು ಶಿಕ್ಷಣ ಇಲಾಖೆ ನಿರ್ಧರಿಸಿದೆ.

8ನೇ ತರಗತಿಯ ವಿದ್ಯಾರ್ಥಿಗಳಿಗೆ ಸೈಕಲ್, 1ರಿಂದ 10ನೇ ತರಗತಿಯ ವಿದ್ಯಾರ್ಥಿಗಳಿಗೆ ಶೂ, ಸಾಕ್ಸ್ ವಿತರಿಸಲಾಗುತ್ತಿತ್ತು. ಸೈಕಲ್ ವಿತರಣೆಯನ್ನು 2019–20ರಿಂದಲೇ ನಿಲ್ಲಿಸಲಾಗಿದೆ. ಆದರೆ, ಈ ಹಿಂದಿನ ಎರಡು ಶೈಕ್ಷಣಿಕ ವರ್ಷಗಳಲ್ಲಿ (2020–21, 2021–22) ಶೂ, ಸಾಕ್ಸ್ ವಿತರಿಸಿಲ್ಲ.

ಸರ್ಕಾರಿ ಶಾಲೆಗಳಲ್ಲಿ ಒಂದರಿಂದ 10ರವರೆಗಿನ ತರಗತಿಗಳಲ್ಲಿ ಕಲಿಯುವ ಸುಮಾರು 50 ಲಕ್ಷ ಮಕ್ಕಳು ಶೂ, ಸಾಕ್ಸ್‌ನಿಂದ ವಂಚಿತರಾದರೆ, ಎಂಟನೇ ತರಗತಿಯಲ್ಲಿ ಓದುತ್ತಿರುವ ಸುಮಾರು 6.15 ಲಕ್ಷ ಮಕ್ಕಳಿಗೆ 'ಸೈಕಲ್ ಭಾಗ್ಯ' ಇಲ್ಲವಾಗಿದೆ.

'ಶೂ, ಸಾಕ್ಸ್ ಯೋಜನೆಗೆ ಪ್ರತಿವರ್ಷ ಸುಮಾರು ₹ 140 ಕೋಟಿ ವೆಚ್ಚ ತಗಲುತ್ತಿತ್ತು. ಬಜೆಟ್‌ನಲ್ಲಿ ಪ್ರತ್ಯೇಕವಾಗಿ ಹಣ ನಿಗದಿಪಡಿಸದೇ ಇರುವುದರಿಂದ ಈ ಸಾಲಿನಲ್ಲೂ (2022–23) ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಮಕ್ಕಳಿಗೆ ಶೂ, ಸಾಕ್ಸ್ ವಿತರಿಸದಿರಲು ನಿರ್ಧರಿಸಲಾಗಿದೆ' ಎಂದು ಶಿಕ್ಷಣ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ಸರ್ಕಾರಿ ಶಾಲೆಗಳಿಗೆ ಮಕ್ಕಳನ್ನು ಆಕರ್ಷಿಸಲು ಮತ್ತು ಖಾಸಗಿ ಶಾಲೆಗಳಿಗೆ ಪೈಪೋಟಿ ನೀಡುವ ಉದ್ದೇಶದಿಂದ ಪ್ರತಿ ವಿದ್ಯಾರ್ಥಿಗೆ ತಲಾ ಒಂದು ಜೊತೆ ಶೂ ಮತ್ತು ಎರಡು ಜೊತೆ ಸಾಕ್ಸ್ ನೀಡುವ ಯೋಜನೆಯನ್ನು ರಾಜ್ಯ ಸರ್ಕಾರ 2016ರಲ್ಲಿ ಆರಂಭಿಸಿತ್ತು.

'2019–20ನೇ ಸಾಲಿನಲ್ಲಿ ಕೊನೆಯದಾಗಿ ಈ ಯೋಜನೆಯಡಿ ಅನುದಾನ ಬಿಡುಗಡೆ ಆಗಿತ್ತು. ಹೀಗಾಗಿ, ಆ ವರ್ಷ ಶೂ, ಸಾಕ್ಸ್ ವಿತರಿಸಲಾಗಿದೆ. ಆದರೆ, ನಂತರ ಎರಡು ವರ್ಷ (2020–21, 2021–22) ಹಣ ಮೀಸಲಿಡದ ಕಾರಣ ವಿತರಣೆ ನಡೆದಿಲ್ಲ. ಕೋವಿಡ್ ಕಾರಣದಿಂದ ಆ ಎರಡೂ ವರ್ಷ ಶಾಲೆಗಳು ಕಾರ್ಯನಿರ್ವಹಿಸಿಲ್ಲ. ಈ ಬಾರಿ ಕೂಡಾ ಆರ್ಥಿಕ ಇಲಾಖೆ ಹಣ ನೀಡಿಲ್ಲ. ಹೀಗಾಗಿ ಯೋಜನೆಯನ್ನು ಕೈಬಿಡಲಾಗಿದೆ. 2019–20ರಲ್ಲಿ 1ರಿಂದ 5ನೇ ತರಗತಿಗೆ ₹ 265, 6ರಿಂದ 8ನೇ ತರಗತಿಗೆ ₹ 295, 9 ಮತ್ತು 10ನೇ ತರಗತಿಯ ಮಕ್ಕಳಿಗೆ ₹ 325ರಂತೆ ಶೂ ವೆಚ್ಚವನ್ನು ಸರ್ಕಾರ ಭರಿಸುತ್ತಿತ್ತು' ಎಂದೂ ಅಧಿಕಾರಿ ಹೇಳಿದರು.

'ಉಚಿತ ಸೈಕಲ್ ವಿತರಣೆ ಯೋಜನೆಯನ್ನು ರಾಜ್ಯ ಸರ್ಕಾರ 2006–07ನಲ್ಲಿ ಆರಂಭಿಸಿತ್ತು. ವಿದ್ಯಾರ್ಥಿಗಳು ಶಾಲೆಯಿಂದ ಹೊರಗುಳಿಯದಂತೆ ತಡೆಯಲು ಈ ಯೋಜನೆಯನ್ನು ಪರಿಚಯಿಸಲಾಗಿತ್ತು. ರಾಜ್ಯ ಸರ್ಕಾರದ ಈ ಮಹತ್ವಾಕಾಂಕ್ಷಿ ಯೋಜನೆಯು ನಂತರ ವರ್ಷಗಳಲ್ಲಿ ನಡೆಯುತ್ತಾ ಬಂದಿತ್ತು. ಆದರೆ, ಕೆಲವು ವರ್ಷಗಳಲ್ಲಿ ಟೆಂಡರ್ ಪ್ರಕ್ರಿಯೆ ವಿಳಂಬದ ಕಾರಣಕ್ಕೆ ಶೈಕ್ಷಣಿಕ ಸಾಲಿನ ಅರ್ಧ ಅವಧಿ ಮುಗಿದ ಬಳಿಕ ಮಕ್ಕಳಿಗೆ ತಲುಪುತ್ತಿತ್ತು. 2018-19ರಲ್ಲಿ ಪ್ರತಿ ಬಾಲಕರಿಗೆ ತಲಾ ₹ 3,457, ಬಾಲಕಿಯರಿಗೆ ತಲಾ ₹ 3,674 ವೆಚ್ಚದಲ್ಲಿ ಸೈಕಲ್ ವಿತರಿಸಲಾಗಿತ್ತು' ಎಂದೂ ಅವರು ವಿವರಿಸಿದರು.

75 ಸ್ವಾತಂತ್ರ್ಯದ ಅಮೃತ ಮಹೋತ್ಸವ

ಸಮಾಜ ಕಲ್ಯಾಣ ಇಲಾಖೆ



ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ಹಸಿರು ಕ್ರಾಂತಿಯ ಹರಿಕಾರ,
ಭಾರತದ ಮಾಜಿ ಉಪ ಪ್ರಧಾನಮಂತ್ರಿಗಳಾದ
ಡಾ|| ಬಾಬು ಜಗಜೀವನ ರಾಂ ರವರ
36ನೇ ಪುಣ್ಯ ಸ್ಮರಣೆ ಪ್ರಯುಕ್ತ ಪ್ರತಿಮೆಗೆ ಮಾಲಾರ್ಪಣೆ

ದಿನಾಂಕ: 06.07.2022 ಬುಧವಾರ, ಬೆಳಗ್ಗೆ 10:00 ಗಂಟೆಗೆ
ಸ್ಥಳ: ವಿಧಾನ ಸೌಧದ ಪಶ್ಚಿಮ ದ್ವಾರ, ಬೆಂಗಳೂರು

ಡಾ|| ಬಾಬು ಜಗಜೀವನ ರಾಂ ಅವರ ಪ್ರತಿಮೆಗೆ
ಸನ್ಮಾನ್ಯ ಮುಖ್ಯಮಂತ್ರಿಗಳಾದ
ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಮತ್ತು
ಮಾನ್ಯ ಸಮಾಜ ಕಲ್ಯಾಣ ಹಾಗೂ
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರಾದ
ಶ್ರೀ ಕೋಟ ಶ್ರೀನಿವಾಸ ಪೂಜಾರಿ ಅವರಿಂದ
ಮಾಲಾರ್ಪಣೆ ಮತ್ತು ಗೌರವ ಸಮರ್ಪಣೆ

"ದೇಶದ ಪ್ರಗತಿಯಲ್ಲಿ ನಮ್ಮ ಪ್ರಗತಿಯಿದೆ;
ಅದರ ಉದ್ಧಾರದಲ್ಲೇ ನಮ್ಮ ಉದ್ಧಾರವಿದೆ;
ಅದರ ವಿಮೋಚನೆಯಲ್ಲೇ, ನಮ್ಮ ವಿಮೋಚನೆಯಿದೆ."
-ಡಾ|| ಬಾಬು ಜಗಜೀವನ ರಾಂ

ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಎಸ್. ಬೊಮ್ಮಾಯಿ ಮತ್ತು ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿ ಅವರು 'ಕಲ್ಯಾಣ ಮಿತ್ರ ಏಕೀಕೃತ ಎಸ್.ಸಿ./ಎಸ್.ಟಿ. ಸಹಾಯವಾಣಿ' ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ

"ನಮ್ಮ ವೈವಿಧ್ಯಮಯ ಸಂಸ್ಕೃತಿಯ ಶ್ರೇಷ್ಠ ಪರಂಪರೆಯನ್ನು ಗೌರವಿಸುವುದು ಮತ್ತು ರಕ್ಷಿಸುವುದು"
– ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಕರ್ನಾಟಕ ವಾರ್ತೆ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ



EXAM DH ಪ್ರಜಾವಾಣಿ MASTERMIND™
ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹599 ₹399ಕ್ಕೆ ಮಾತ್ರ
ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ.... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ-ಮಿತ್ರ
ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ
www.exammastermind.comಗೆ ಭೇಟಿ ಕೊಡಿ

ಗಾಳಿಯಿಂದ ನೀರಿನ ಕೊಯ್ಲು!

ಅಮೃತೇಶ್ವರಿ ಬಿ.

ಮೂರ್ನಾಲ್ಕು ವರ್ಷಗಳಿಂದಲೂ ಮಳೆಗಾಲದಲ್ಲಿ ವರುಣನ ಅಬ್ಬರವನ್ನು ನೋಡಿದ್ದೀರಿ. ಇದರೊಂದಿಗೆ ಅಕಾಲಿಕ ಮಳೆಯೂ ಸಾಕಷ್ಟು ಅನನುಕೂಲಗಳನ್ನು ತಂದೊಡ್ಡಿದ್ದು ನಿಮಗೆಲ್ಲಾ ಗೊತ್ತೇ ಇದೆ. ಪ್ರವಾಹ, ಭೂಕುಸಿತಗಳ ಬಗ್ಗೆಯಂತೂ ಹೇಳುವುದೇ ಬೇಡ. ಭೂಮಿಯ ಶೇ.71 ಭಾಗ ನೀರಿದೆ ಎನ್ನುವುದು ಪ್ರಾಥಮಿಕ ಶಾಲೆಯಲ್ಲಿಯೇ ತಿಳಿದ ವಿಷಯ. ಎಲ್ಲೆಲ್ಲೂ ಮಳೆಯೋ ಮಳೆ, ನೀರೋ ನೀರು! ಹೀಗಿರುವಾಗ ನೀರಿಗೇನು ಬರ ಎಂದೆನಿಸುತ್ತದೆ ಅಲ್ಲವೆ? ಆದರೆ ಕುಡಿಯುವ ನೀರಿನ ಅಭಾವ ದಿನೇದಿನೇ ಹೆಚ್ಚಾಗುತ್ತಿದೆ.

> ಭೂಮಿಯ ಮುಕ್ಕಾಲು ಭಾಗ ನೀರಿನಿಂದಲೇ ತುಂಬಿದೆ. ಹೀಗಿದ್ದರೂ, ಕುಡಿಯುವ ನೀರಿನ ಅಭಾವ ದಿನೇ ದಿನೇ ಹೆಚ್ಚುತ್ತಿದೆ. ಶುದ್ಧವಾದ ಕುಡಿಯುವ ನೀರು ಸಿಗದೆ ಮನುಕುಲ ಪರದಾಡುವ ಪರಿಸ್ಥಿತಿ ಎದುರಾಗುವ ಅಪಾಯ ಇದೆ. ವಾತಾವರಣದಲ್ಲಿರುವ ತೇವಾಂಶದಿಂದಲೇ ನಮಗೆ ಬೇಕಾದ ನೀರು ಸಿಗುವಂತಾದರೆ ಹೇಗೆ?...

ಶುದ್ಧವಾದ ನೀರು ಎಲ್ಲರಿಗೂ ಸಿಗುವಂತಾಗಬೇಕು ಎಂಬುದು ನಮ್ಮ ಸುಸ್ಥಿರ ಅಭಿವೃದ್ಧಿಯ ಗುರಿಗಳಲ್ಲೊಂದೂ ಹೌದು. ಈ ನಿಟ್ಟಿನಲ್ಲಿ ಸಮುದ್ರದ ಉಪ್ಪುನೀರನ್ನು ತಿಳಿಯಾಗಿಸುವುದು, ಕೊಳಚೆ ನೀರಿನ ಸಂಸ್ಕರಣೆ, ರಿವರ್ಸ್ ಆಸ್ಮೋಸಿಸ್ – ಹೀಗೆ ಸಾಕಷ್ಟು ತಂತ್ರಗಳನ್ನು ಬಳಸಿ ಶುದ್ಧಜಲದ ಅಭಾವವನ್ನು ನಿವಾರಿಸಲು ಪ್ರಯತ್ನಗಳು ನಡೆದಿವೆ. ಆದರೆ ಇವೆಲ್ಲವೂ ನೀರಿನ ಮೂಲದಿಂದ ದೂರದಲ್ಲಿರುವ ಪ್ರದೇಶಗಳಿಗೆ ನೀರು ಪೂರೈಸಲಾರವು. ಹಾಗಾದರೆ ನೀರಿನ ಮೂಲಗಳಿಂದ ದೂರದಲ್ಲಿರುವವರಿಗೆ ನೀರನ್ನು ಒದಗಿಸುವುದು ಹೇಗೆ? ಅದಕ್ಕೆ ವಿಜ್ಞಾನಿಗಳು ಬಳಸಿರುವ ತಂತ್ರವೇ 'ಗಾಳಿಯಲ್ಲಿನ ನೀರಿನ ಕೊಯ್ಲು!' ನಮ್ಮ ಸುತ್ತಲಿನ ವಾತಾವರಣದ ಗಾಳಿಯಲ್ಲಿಯೂ ತೇವಾಂಶವಿರುತ್ತದೆ. ಇದನ್ನೇ ಹೊರತೆಗೆದು ನೀರನ್ನು ಪೂರೈಸಿಕೊಂಡರೆ ಹೇಗೆ ಎನ್ನುವುದೇ ಟೆಕ್ಸಾಸ್ ವಿಶ್ವವಿದ್ಯಾನಿಲಯದ ವಿಜ್ಞಾನಿಗಳಾದ ಜ್ಯುಹುವ ಯು ಮತ್ತು ತಂಡದವರ ಯೋಜನೆ.

ವಾತಾವರಣದಲ್ಲಿ ನೀರು ಮಂಜಿನ ರೂಪದಲ್ಲಿಯೂ ಇರುತ್ತದೆ, ಆವಿಯ ರೂಪದಲ್ಲಿಯೂ ಇರುತ್ತದೆ. ಗಾಳಿಯಲ್ಲಿರುವ ನೀರಿನಂಶಕ್ಕಿಂತ ಮಂಜನ್ನೇ ಹೊರತೆಗೆಯುವುದು ಸುಲಭವಲ್ಲವೇ ಎಂದು ಅನ್ನಿಸಬಹುದು. ಅಂತೆಯೇ ಮಂಜಿನ ಹನಿಗಳನ್ನೂ ಕೊಯ್ಲು ಮಾಡಿ ನೋಡಿದ್ದಾರೆ ನಮ್ಮ ವಿಜ್ಞಾನಿಗಳು. ಆದರೆ ಉಷ್ಣತೆ ಹೆಚ್ಚಿರುವ ಪ್ರದೇಶಗಳಲ್ಲಿ ಇದು ಸಾಧ್ಯವಿಲ್ಲ. ಏಕೆಂದರೆ ಅಲ್ಲಿ ಮಂಜುಗಟ್ಟುವುದಿರಲಿ, ಗಾಳಿಯಲ್ಲಿ ಇರುವ ನೀರೂ ಅತ್ಯಲ್ಪ. ಈ ನೀರಾವಿಯನ್ನೇ ಬಳಕೆಗೆ ಯೋಗ್ಯವಾದ ನೀರನ್ನಾಗಿಸುವುದೇ ಜ್ಯುಹುವ ಯು ಮತ್ತು ತಂಡದವರ ಪ್ರಯತ್ನ. ಮೊದಲಿಗೆ ಜಿಯೊಲೈಟುಗಳು ಮತ್ತು ಸಿಲಿಕಾ ಜೆಲ್‌ಗಳನ್ನು ಹೀರುಕಾರಕಗಳಾಗಿ ಬಳಸಿ ನೀರು ಪಡೆಯುವ ಪರೀಕ್ಷೆ ನಡೆಸಿದ್ದಾರೆ. ಆದರೆ ಇವುಗಳು ನೀರನ್ನು ಹೀರಿಕೊಳ್ಳುವ ಪ್ರಮಾಣವೂ ಕಡಿಮೆ ಹಾಗೂ ಹೀರಿಕೊಂಡ ನೀರನ್ನು ಸುಲಭವಾಗಿ ಬಿಟ್ಟುಕೊಡುವುದೂ ಇಲ್ಲ ಮತ್ತು ಅದಕ್ಕೆ ಬೇಕಾಗುವ ಶಕ್ತಿಯೂ ಹೆಚ್ಚಂತೆ. ಮುಂದೆ, ಲೋಹ-ಸಾವಯವ ಮಾದರಿಯನ್ನು ರೂಪಿಸಿ ನೀರಾವಿಯನ್ನು ಹೀರಿಕೊಳ್ಳಲು ಇಟ್ಟಾಗ, ಹೆಚ್ಚು ನೀರನ್ನೇ ಸಂಗ್ರಹಿಸುವಲ್ಲಿ ಯಶಸ್ವಿಯಾಗಿದ್ದಾರೆ. ಈಗ ಸಿದ್ಧಪಡಿಸಿರುವ ಮತ್ತೊಂದು ವಿಧಾನವೇ ಈ ಪಾಲಿಮರ್ ಜೆಲ್‌ಗಳು. ಇವುಗಳಿಗೆ ನೀರನ್ನು ಹಿಡಿದಿಡುವ ಉತ್ತಮ ಕ್ಷಮತೆಯೂ ಇದೆ ಹಾಗೂ ನೀರಿನೊಂದಿಗೆ ನಮ್ಮ ಅನುಕೂಲಕ್ಕೆ ತಕ್ಕಂತೆ ವರ್ತಿಸುವ ಹಾಗೆ ರೂಪಿಸಿಕೊಳ್ಳಬಲ್ಲವಾಗಿದ್ದರಿಂದ, ಕಡಿಮೆ ಆರ್ದ್ರತೆಯಿರುವ ಜಾಗಗಳಲ್ಲೂ ಹೆಚ್ಚಿನ ಪ್ರಮಾಣದ ನೀರನ್ನು ಒದಗಿಸುತ್ತವೆಯಂತೆ. ಸುಲಭವಾದ ಎರಕ ಹೊಯ್ದು, ಅಗ್ಗದ ಜೈವಿಕ ವಸ್ತುಗಳಾದ ಕೆಸುವಿನ ಗೆಡ್ಡೆಯಂತಹ ಕೊಂಜಾಕ್ ಗಿಡದ ನಾರು ಗ್ಲುಕೋಮನ್ನನ್, ಹೈಡ್ರಾಕ್ಸಿಪ್ರೊಪೈಲ್ ಸೆಲ್ಯುಲೋಸು ಮತ್ತು ಹೈಗ್ರೋಸ್ಕೋಪಿಕ್, ಅಂದರೆ ನೀರನ್ನು ಹೀರಿಕೊಳ್ಳಬಲ್ಲಂತಹ ಲಿಥಿಯಂ ಕ್ಲೋರೈಡ್ ಉಪ್ಪು – ಇವೆಲ್ಲವನ್ನೂ ಬಳಸಿ ಎರಕ ಹೊಯ್ಯಲಾದಂಥವು. ಹಾಗಾಗಿ ಇವು ಬೇರೆಲ್ಲಾ ವಿಧಾನಗಳಿಗಿಂತಲೂ ಉತ್ತಮ ಹಾಗೂ ವಿಶೇಷ ಎಂಬುದು ವಿಜ್ಞಾನಿಗಳ ಅಭಿಪ್ರಾಯ.

ನೀರನ್ನು ಎಲ್ಲರಿಗೂ ಎಲ್ಲಡೆಯೂ ಸಮಾನವಾಗಿ ದೊರಕುವಂತೆ ಮಾಡುವ ಇದೊಂದು ಸುಸ್ಥಿರವಾದ ವಿಧಾನವೇ ಸರಿ. ಆದರೆ ಆರ್ದ್ರತೆ ಶೇ.30 ಅಥವಾ ಅದಕ್ಕಿಂತಲೂ ಕಡಿಮೆಯಿರುವ ಸ್ಥಳಗಳಲ್ಲಿ ನೀರುಹೀರುಕಾರಕಗಳು ಹೆಚ್ಚು ನೀರನ್ನು ಹೀರಿಕೊಳ್ಳುವುದು ಕಷ್ಟ. ಮರುಭೂಮಿಗಳಲ್ಲಿ ಅರ್ದ್ರತೆ ಬಹುತೇಕ ಶೂನ್ಯವಿರುತ್ತದೆ. ಮೈಸೂರಿನಂತಹ ಊರುಗಳಲ್ಲಿ ಸುಮಾರು ಶೇ.70ರಷ್ಟಿರುತ್ತದೆ. ಜ್ಯುಹುವ ಯು ಮತ್ತು ತಂಡದವರು ಅಭಿವೃದ್ಧಿಪಡಿಸಿರುವ ಸೂಪರ್ ಹೈಗ್ರೋಸ್ಕೋಪಿಕ್ ಪಾಲಿಮರ್ ಫಿಲಂಗಳು ಹೆಚ್ಚು ಕ್ಷಮತೆಯುಳ್ಳಂಥವು ಹಾಗೂ ತಮ್ಮ ತೂಕದ ಅರ್ಧದಷ್ಟು ನೀರನ್ನು ಹೀರಿಕೊಳ್ಳುವ ಸಾಮರ್ಥ್ಯವಿರುವಂಥವು. ಇವು ಶೇ. 15ರಿಂದ 30ರಷ್ಟು ಆರ್ದ್ರತೆ ಇರುವಲ್ಲಿಯೂ ಹೆಚ್ಚು ನೀರನ್ನು, ಅಂದರೆ 0.64-0.96 gg-1 ಅಷ್ಟನ್ನು ಹೀರಿಕೊಳ್ಳಬಲ್ಲುವಂತೆ. ಹಾಳೆಗಳಲ್ಲಿ 20-50 ಮೈಕ್ರೋಮೀಟರಿನಷ್ಟು ಸೂಕ್ಷ್ಮಗಾತ್ರದ ರಂಧ್ರಗಳಿರುತ್ತವೆ. ಕ್ರಮವಾಗಿ ಜೋಡಣೆಯಾಗಿರುವ ಈ ರಂಧ್ರಗಳೇ ನೀರನ್ನು ಸಮರ್ಥವಾಗಿ ಹೀರಿಕೊಳ್ಳಲು ನೆರವಾಗುವವು. ಈ ರೀತಿಯ ರಚನೆಗೆಂದೇ ಗ್ಲುಕೋಮನ್ನನ್ ಸ್ಟಾರ್ಚ್ ಪುಡಿಯನ್ನು ಬಳಸಿಕೊಳ್ಳಲಾಗಿದೆ. ಹಾಳೆಗಳನ್ನು ಗಾಳಿಯಲ್ಲಿ ತೆರೆದಿಟ್ಟಾಗ ನೀರನ್ನು ಹೀರಿಕೊಂಡಿರುತ್ತವೆ. ನಂತರ ಇವನ್ನು ಬಿಸಿ ಮಾಡಿದಾಗ ನೀರನ್ನು ಬಿಟ್ಟುಕೊಡುತ್ತವೆ. ಹೀಗೆ ಸಂಗ್ರಹಿಸಿದ ನೀರನ್ನು ಸಂಸ್ಕರಿಸಿ, ಶುದ್ಧೀಕರಿಸಿದರೆ ಬಳಕೆಗೆ ಯೋಗ್ಯವಾದ ನೀರು ಸಿಕ್ಕಂತಾಯಿತು.

ಹಾಳೆಗಳಲ್ಲಿರುವ ತಾಪಸಂವೇದಿ ಹೈಡ್ರಾಕ್ಸಿಪ್ರೊಪೈಲ್ ಸೆಲ್ಯುಲೋಸು, ತಣ್ಣಗಿದ್ದಾಗ ನೀರನ್ನು ಹೀರಿಕೊಂಡು, ಬಿಸಿಯಾದಾಗ ಹೀರಿಕೊಂಡಿರುವನೀರನ್ನುಬಿಟ್ಟುಕೊಡುತ್ತದೆ.ಹಾಳೆಗಳಿಂದ ಬೇರೆಯಾದ ನೀರನ್ನು ಪಾತ್ರೆಯಲ್ಲಿ ಸಂಗ್ರಹಿಸಿಕೊಳ್ಳುತ್ತಾರೆ. ಈ ಹಾಳೆಗಳಲ್ಲಿ ನೀರನ್ನು ಹೀರಿಕೊಳ್ಳುವ ಹಾಗೂ ಹೊರಹಾಕುವ ಪ್ರಕ್ರಿಯೆ ಅತ್ಯಂತ ವೇಗವಾಗಿ ನಡೆಯುತ್ತದೆ. ಹತ್ತು ನಿಮಿಷಗಳಿಗೆ ಒಂದರಂತೆ, ದಿನಕ್ಕೆ 14ರಿಂದ 24 ಬಾರಿ ಈ ಕ್ರಿಯೆಯು ಜರುಗಬಲ್ಲುದು. ಹೀಗೆ ಈ ಕ್ರಿಯೆ ವೇಗವಾಗಿ ನಡೆಯುತ್ತದಾದ್ದರಿಂದ, ಒಂದು ದಿನದಲ್ಲಿ ಕಡಿಮೆ ಆರ್ದ್ರತೆಯಿರುವ ಪ್ರದೇಶದಲ್ಲಿ ಸುಮಾರು 5.8 LKg-1 ಹಾಗೂ ಹೆಚ್ಚು ಆರ್ದ್ರತೆಯುಳ್ಳ ಕಡೆ ದಿನಕ್ಕೆ 13.3 LKg-1ನಷ್ಟು ನೀರನ್ನು ಪಡೆಯಲು ಸಾಧ್ಯವಾಗುತ್ತದಂತೆ.

ಪಾಲಿಮರ್ ಹಾಳೆಗಳು

ಸೂಪರ್ ಹೈಗ್ರೋಸ್ಕೋಪಿಕ್ ಪಾಲಿಮರ್ ಹಾಳೆಗಳನ್ನು ತಯಾರಿಸುವುದೂ ಸುಲಭವೇ. ಕೊಂಜಾಕ್ ಗ್ಲುಕೋಮನ್ನನ್ ನಾರು, ಹೈಡ್ರಾಕ್ಸಿಪ್ರೊಪೈಲ್ ಸೆಲ್ಯುಲೋಸು ಮತ್ತು ಲೀಥಿಯಂ ಕ್ಲೋರೈಡು – ಇವುಗಳನ್ನು ಹದವಾಗಿ ಬೆರೆಸಿ ಅಚ್ಚಿಗೆ ತುಂಬಿಸುವುದು. ಎರಡೇ ನಿಮಿಷದಲ್ಲಿ ಜೆಲ್ ಸಿದ್ಧವಾಗುತ್ತದೆ. ಅಚ್ಚಿನ ಸಹಿತ ಜೆಲ್ ಅನ್ನು ಫ್ರೀಜರ್‌ನಲ್ಲಿಟ್ಟು ನೀರಿನಂಶವನ್ನು ತೆಗೆದರೆ (ಫ್ರೀಜ್ ಡ್ರೈಯಿಂಗ್) ಗಾಳಿಯಿಂದ ನೀರು ಸೇದಲು ಪಾಲಿಮರ್ ಹಾಳೆ ಸಿದ್ಧ. ಇವನ್ನು ಬೇಕಾದ ಗಾತ್ರ ಹಾಗೂ ಆಕಾರದಲ್ಲಿಯೂ ತಯಾರಿಸಿಕೊಳ್ಳಬಹುದು. ಈ ಕ್ರಿಯೆಯು ಉತ್ತಮವಾಗಿ ಜರುಗುತ್ತದೆಯೇ ಎಂದು ನೋಡಲು ಸುಮಾರು 100 ಮೈಕ್ರೋಮೀಟರಿನಷ್ಟು ದಪ್ಪವಿರುವ ಹಾಳೆಗಳನ್ನು ಬಳಸಿ ಪ್ರಯೋಗಿಸಲಾಗಿದೆ.

ಈ ಹಾಳೆಗಳು ಎಷ್ಟರ ಮಟ್ಟಿಗೆ ಹಾಗೂ ಎಷ್ಟು ಬೇಗನೆ ನೀರಾವಿಯನ್ನು ಹೀರಿಕೊಳ್ಳಬಲ್ಲವು ಎಂಬುದನ್ನು ಪರೀಕ್ಷಿಸಿದ್ದಾರೆ. ವಿವಿಧ ಆರ್ದ್ರತೆಯಿರುವ ಗಾಳಿಯನ್ನು ನಿರಂತರವಾಗಿ ಹರಿಸಿ ನೋಡಿದ್ದಾರೆ. ನೀರಾವಿಯ ಒತ್ತಡವು ಪಾಲಿಮರ್ ಒಳಗಿನ ಒತ್ತಡಕ್ಕಿಂತ ಹೆಚ್ಚಾಗಿರುವುದರಿಂದ ರಂಧ್ರಗಳ ಮೂಲಕ ಹಾದುಹೋಗಿ ಪಾಲಿಮರ್ ಒಳಗೆ ಸಂಗ್ರಹವಾಗಿರುವುದನ್ನು ಹಾಗೂ ನಂತರ ಹಾಳೆಗಳು ಹಿಗ್ಗುವುದನ್ನೂ ಗಮನಿಸಿದ್ದಾರೆ. ಈ ಹಾಳೆಗಳನ್ನು 60 ಡಿಗ್ರಿ ಸೆಂ. ಉಷ್ಣತೆಯಲ್ಲಿ ಕಾಯಿಸಿದಾಗ ಹೀರಿಕೊಂಡಿರುವ ಸುಮಾರು ಶೇ.70ರಷ್ಟು ನೀರು ಹೊರಬಂದಿದೆಯಂತೆ. ಇಂತಹ ಒಂದು ಕಿಲೋಗ್ರಾಂ ಹಾಳೆಗಳು ಒಂದು ಗಂಟೆಯಲ್ಲಿ 1.65L ನೀರನ್ನು ಸಂಗ್ರಹಿಸಬಲ್ಲದಂತೆ.

ಗಾಳಿಯಲ್ಲಿರುವ ತೇವಾಂಶದಿಂದ ನೀರನ್ನು ಪಡೆಯುವ ಬೇರೆ ವಿಧಾನಗಳಿಗಿಂತ ಈ ಸೂಪರ್ ಹೈಗ್ರೋಸ್ಕೋಪಿಕ್ ಪಾಲಿಮರ್ ಹಾಳೆಗಳು ಅಗ್ಗ, ಪರಿಸರ ಸ್ನೇಹಿ, ತಯಾರಿಸುವುದೂ ಸುಲಭ, ಬಳಸುವುದೂ ಸುಲಭ. ಹಾಗಾಗಿ ಇವು ಉಷ್ಣಪ್ರದೇಶಗಳಲ್ಲಿ ಹೆಚ್ಚು ಉಪಯುಕ್ತವಾಗಬಲ್ಲವು ಹಾಗೂ ಹೆಚ್ಚು ಬೇಡಿಕೆಗೆ ಬರಬಹುದು ಎನ್ನುವ ಆಶಯ ಜ್ಯುಹುವ ಯು ಮತ್ತು ತಂಡದವರದ್ದು.

ಈ ಸಂಶೋಧನೆಯು ಇತ್ತೀಚೆಗೆ 'ನೇಚರ್ ಕಮ್ಯುನಿಕೇಷನ್ಸ್' ಪತ್ರಿಕೆಯಲ್ಲಿ ವರದಿಯಾಗಿದೆ. ಸಂಶೋಧನೆಯ ಮೂಲ ಇಲ್ಲಿದೆ: https://doi.org/10.1038/s41467-022-30505-2

ಒಗಟು ಬಿಡಿಸಿದ ಎ.ಐ.

ಕ್ಷಮಾ. ವಿ. ಭಾನುಪ್ರಕಾಶ್

'**ಬೆರಳು** ತೋರಿಸಿದರೆ ಹಸ್ತ ನುಂಗುವುದು' ಎಂಬ ಮಾತು ಅನ್ವಯವಾಗುವುದು ಅತಿ ಬುದ್ಧಿಮತ್ತೆಯಿರುವವರಿಗೆ ಮಾತ್ರವಲ್ಲ; ಅದು ಕೃತಕ ಬುದ್ಧಿಮತ್ತೆಗೂ ಸೂಕ್ತವಾಗುತ್ತದೆ ಎಂಬುದು ಇಂದಿನ ಸತ್ಯ!

'ಆರ್ಟಿಫಿಶಿಯಲ್ ಇಂಟೆಲಿಜೆನ್ಸ್' (ಎ.ಐ.) ಅಥವಾ 'ಕೃತಕ ಬುದ್ಧಿಮತ್ತೆ' ಎಂಬ ಆವಿಷ್ಕಾರವು ಜಗತ್ತನ್ನು 360 ಡಿಗ್ರಿ ಬದಲಾಯಿಸಲು ತಯಾರಿದೆ ಎಂಬುದು ನಮಗೆಲ್ಲಾ ದಿನನಿತ್ಯದ ಆಗುಹೋಗುಗಳಿಂದ ಗೋಚರಿಸುತ್ತಲೇ ಇದೆ. ಸೌರಮಂಡಲದ ರಹಸ್ಯಗಳನ್ನು ಪದರಪದರವಾಗಿ ಅರ್ಥೈಸಿಕೊಳ್ಳುವುದರಿಂದ ಮೊದಲ್ಗೊಂಡು ಅಡುಗೆ ಮನೆಯ ಕೆಲಸಗಳನ್ನು ಸಲೀಸಾಗಿಸುವವರೆಗೆ, ಗೇಮಿಂಗ್ ಅನುಭೂತಿಯನ್ನು ಮತ್ತೊಂದು ಮಜಲಿಗೆ ಕೊಂಡೊಯ್ಯುವುದರಿಂದ ಮೊದಲ್ಗೊಂಡು ದೇಶ ದೇಶಗಳ ಬಾಂಧವ್ಯ ಬೆಸೆಯುವವರೆಗೆ – ಹೀಗೆ ಎಲ್ಲೆಡೆಯೂ ಕೃತಕ ಬುದ್ಧಿಮತ್ತೆಯ ಕೈಚಳಕವನ್ನು ಕಾಣಬಹುದಾಗಿದೆ. 'ಆಡು ಮುಟ್ಟದ ಸೊಪ್ಪಿಲ್ಲ, ಎ.ಐ. ಇಲ್ಲದ ಕ್ಷೇತ್ರವಿಲ್ಲ' ಎಂಬುದು ಈಗ ಚಾಲ್ತಿಯಲ್ಲಿರುವ ಹೊಸ ಗಾದೆ!

ವಿಜ್ಞಾನಿಗಳು ಕೃತಕ ಬುದ್ಧಿಮತ್ತೆಯನ್ನು ಅನ್ವಯಿಸುವ ಮೊದಲು, ತಮ್ಮ ಸಂಶೋಧನೆಗೆ ಅವಶ್ಯಕತೆ ಇರುವ ಮೂಲಭೂತ ಜ್ಞಾನವನ್ನು ಅದಕ್ಕೆ ಕಲಿಸಬೇಕಾಗುತ್ತದೆ. ಹೀಗೆ, ಕಂಪ್ಯೂಟರ್ ಸಾಮ್ರಾಜ್ಯದ ವಿವಿಧ ಭಾಷೆಗಳನ್ನೂ, ಅಕ್ಷರಶಃ ಆಳವಾದ ಕಲಿಕೆಯನ್ನೂ ಅದಕ್ಕೆ ಪರಿಚಯಿಸಿದ ನಂತರ, ತಮ್ಮ ತಮ್ಮ ಕ್ಷೇತ್ರಕ್ಕೆ ಕೃತಕ ಬುದ್ಧಿಮತ್ತೆಯ ಅನ್ವಯಿಕೆ ಸಾಧ್ಯ. ಮೂಲಭೂತ ಕಲಿಕೆಯಲ್ಲಿ ಸೈ ಎನಿಸಿಕೊಂಡ ಈ ತಂತ್ರಜ್ಞಾನಕ್ಕೆ ಭೌತವಿಜ್ಞಾನ-ರಸಾಯನವಿಜ್ಞಾನಗಳನ್ನು ಕಲಿಸಿ, ಹಲವು ದಶಕಗಳಿಂದ ತಲೆಚಚ್ಚಿಕೊಂಡರೂ ಪರಿಹಾರ ದೊರೆಯದಿದ್ದ ಸಮಸ್ಯೆಗೆ ಪರಿಹಾರ ಕಂಡುಕೊಂಡಿದ್ದಾರೆ, ವಿಜ್ಞಾನಿಗಳು!

ಯಾವುದೇ ತಂತ್ರಜ್ಞಾನವನ್ನೂ ಅಭಿವೃದ್ಧಿಪಡಿಸುವುದು ಒಂದು ಹಂತದ ಆವಿಷ್ಕಾರವಾದರೆ, ಆ ತಂತ್ರಜ್ಞಾನವನ್ನು ಮತ್ತಷ್ಟು ಸುಧಾರಣೆಗೆ ಒಳಪಡಿಸಿ, ಅದರಿಂದ ವಿವಿಧ ಅನ್ವಯಿಕೆಗಳನ್ನು ಸಾಧ್ಯವಾಗಿಸುವುದು ಮುಂದುವರಿದ ಹಂತವಾಗಿರುತ್ತದೆ. ಡ್ಯೂಕ್ ವಿಶ್ವವಿದ್ಯಾಲಯದ ಸಂಶೋಧಕರು, 'ಮೆಟಾ ಮೆಟೀರಿಯಲ್ಸ್' ಎಂಬ ವಿಶಿಷ್ಟ ವಸ್ತುಗಳ ಸಂಯೋಜನೆಯನ್ನು ಅರಿಯಲು ಕೃತಕ ಬುದ್ಧಿಮತ್ತೆಯನ್ನು ಬಳಸಿದ್ದಾರೆ. ಮೆಟಾ ಮೆಟೀರಿಯಲ್ಸ್ ಎಂಬ ವಸ್ತುಗಳು ಸಂಪೂರ್ಣವಾಗಿ ಕೃತಕ ಸಂಶ್ಲೇಷಣೆಯಿಂದ ತಯಾರಾದ ವಸ್ತುಗಳಾಗಿದ್ದು, ಸಿಲಿಕಾನ್‌ನಂತಹ ಧಾತುಗಳ ಬಳಕೆಯಿಂದ ಇವನ್ನು ಮಾಡಲಾಗಿರುತ್ತದೆ. ಇವುಗಳ ಗುಣವಿಶೇಷಗಳು ಪ್ರಮುಖವಾಗಿ ಇವುಗಳಲ್ಲಿರುವ ಅಣುಗಳ ಭೌತಿಕ ಸಂಯೋಜನೆಯ ಮೇಲೆ ಆಧಾರಿತವೇ ಹೊರತು ರಾಸಾಯನಿಕತೆಯ ಮೇಲಲ್ಲ. ಹೀಗಿರುವಾಗ, ಇವುಗಳೊಳಗೆ ಇರುವ ಘಟಕಗಳ ಆಣ್ವಿಕ ನೆಲೆಗಟ್ಟಿನ ರಚನೆಯನ್ನು ತಿಳಿದುಕೊಳ್ಳಬೇಕಾದದ್ದು, ಬಹುಮುಖ್ಯವಾಗಿರುತ್ತದೆ. ಆ ನೆಲೆಗಟ್ಟಿನಲ್ಲಿ ಕೃತಕಬುದ್ಧಿಮತ್ತೆಯ ಬಳಕೆಯು ಅತ್ಯಂತ ಸಮರ್ಪಕ ಎನ್ನುತ್ತಾರೆ, ಡ್ಯೂಕ್ ವಿ.ವಿ.ಯ ಸಂಶೋಧಕರು.

ಲೊರೆಂಟ್ಸ್ ಹೆಸರಿನ ಮಾದರಿಯನ್ನು ಬಳಸಲಾದ ಈ ಸಂಶೋಧನೆಯಲ್ಲಿ, ಮೊದಲಿಗೆ ಈ ಮಾದರಿಯ ನಿಯತಾಂಕಗಳನ್ನು, ವಿಶೇಷತೆಗಳನ್ನು ಕೃತಕ ಬುದ್ಧಿಮತ್ತೆಯ ಬೌದ್ಧಿಕ ಜಾಲಕ್ಕೆ ಕಲಿಸಬೇಕಾಗಿತ್ತು. ಅದು ಅಂದುಕೊಂಡಕ್ಕಿಂತ ಕಠಿಣ ಕೆಲಸವಾಗಿದ್ದು, ಅದಕ್ಕಾಗಿ ಹೊಸ ಬಗೆಯ ಕ್ರಮಾವಳಿಗಳನ್ನು ರಚಿಸಬೇಕಾಯ್ತು; ಆದರೆ, ಕಲಿಕೆಯ ನಂತರ ಸಿಕ್ಕ ಫಲಿತಾಂಶ ಮಾತ್ರ ಉತ್ಕೃಷ್ಟವಾಗಿತ್ತು. ಮೆಟಾ ಮೆಟೀರಿಯಲ್‌ಗಳ ಹಾಗೂ ವಿದ್ಯುತ್ಕಾಂತೀಯ ಕ್ಷೇತ್ರದ ನಡುವಿನ ಕ್ರಿಯಾತ್ಮಕತೆಯನ್ನೂ, ಜೊತೆಗೆ ಇದಕ್ಕೂ, ಮೆಟಾವಸ್ತುಗಳ ಒಳಗಿನ ಆಣ್ವಿಕ ರಚನೆಗೂ ಇರುವ ಸಂಬಂಧವನ್ನು ಎ.ಐ. ಅತ್ಯಂತ ನಿಖರತೆಯಿಂದ ಕಂಡುಹಿಡಿದು, ವಿಶ್ಲೇಷಿಸಿದೆ. ಇದಕ್ಕೂ ಮುನ್ನ ಬಳಸಲಾದ ಎಲ್ಲಾ ವಿಧಾನಗಳಿಗಿಂತ ಇದು ಅತ್ಯಂತ ಸಮರ್ಪಕ ಎನ್ನುತ್ತಾರೆ, ಇದನ್ನು ಅನುಮೋದಿಸುವ ಇತರ ಭೌತವಿಜ್ಞಾನಿಗಳು ಕೂಡ. ಹೀಗೆ ದೊರೆತ ಫಲಿತಾಂಶವು ಮತ್ತಷ್ಟು ಹೊಸ ತಾಂತ್ರಿಕ ಸುಧಾರಣೆಗಳಿಗೆ ಎಡೆ ಮಾಡಿಕೊಡುವುದು ಖಚಿತ.

ಇದೇ ರೀತಿ, ಕೃತಕ ಬುದ್ಧಿಮತ್ತೆಗೆ ರಸಾಯನವಿಜ್ಞಾನವನ್ನು ಬೋಧಿಸಿ, ಪ್ರೊಟೀನ್‌ಗಳ ವರ್ತನೆಯನ್ನು, ಅದರಲ್ಲೂ ಮುಖ್ಯವಾಗಿ 'ಪ್ರೊಟೀನ್ ಮಡಚುವಿಕೆ'(ಪ್ರೊಟೀನ್ ಫೋಲ್ಡಿಂಗ್)ಯನ್ನು ನಿಖರವಾಗಿ ಅರ್ಥೈಸಿಕೊಂಡಿದ್ದಾರೆ ವಿಜ್ಞಾನಿಗಳು; ಪ್ರೊಟೀನ್‌ಗಳು ನಮ್ಮ ಜೀವಕೋಶಗಳ ಅವಿಭಾಜ್ಯ ಅಂಗ! ಈ ಜೀವರಾಸಾಯನಿಕ ಸಂಯುಕ್ತ ಕಣಗಳು ಇಲ್ಲದಿಲ್ಲಲ್ಲಿ, ಭೂಮಿಯ ಮೇಲೆ ಜೀವಿಯ ಉಗಮ, ಅಸ್ತಿತ್ವ - ಇದ್ಯಾವುದೂ ಸಾಧ್ಯವೇ ಇಲ್ಲ. ಇಂತಹ ಪ್ರಮುಖ ಸಂಯುಕ್ತ ಕಣಗಳು ಹಲವು ಬಗೆಯ ಅಮೈನೋ ಆಮ್ಲಗಳಿಂದ ತಯಾರಾಗಿರುತ್ತವೆ; ಪ್ರೊಟೀನ್‌ಗಳು ಈ ಅಮೈನೋ ಆಮ್ಲ ಘಟಕಗಳ ಸರಪಳಿಯಂತಿದ್ದು, ಅದರ ಕಾರ್ಯನಿರ್ವಹಣೆಗೆ ಕರೆ ಬಂದಾಗ, ತನ್ನನ್ನು ತಾನು ನಿರ್ದಿಷ್ಟ ಬಗೆಯಲ್ಲಿ ಮಡಚಿಕೊಂಡು ಕಾರ್ಯ ಸನ್ನದ್ಧವಾಗುತ್ತದೆ. ಹೀಗೆ ಮಡಚಿಕೊಂಡಾಗ ಮಾತ್ರ, ಪ್ರತಿ ಪ್ರೊಟೀನ್‌ಗೂ ನಿಖರವಾಗಿ ನೀಡಲಾದ ಕೆಲಸ, ಸಾಧ್ಯವಾಗುತ್ತದೆ. ಈ ಮಡಚುವಿಕೆಯಲ್ಲಿ ಏನಾದರೂ ಲೋಪವಾದಲ್ಲಿ, ಆ ಪ್ರೊಟೀನ್ ನಡೆಸಬೇಕಿದ್ದ ಕೆಲಸ ನಿಂತಂತೆಯೇ! ಹೀಗಿರುವಾಗ, ಬಹುಮುಖ್ಯವಾದ ಜೀವರಾಸಾಯನಿಕ ಸಂಯುಕ್ತದ ಬಹುಮುಖ್ಯ ಪ್ರಕ್ರಿಯೆಯ ಬಗ್ಗೆ ತಿಳಿದುಕೊಳ್ಳಲೇಬೇಕಲ್ಲವೇ?

ಸೂಕ್ಷ್ಮಜೀವಾಣುವಿಜ್ಞಾನ, ಆಣ್ವಿಕ ಜೀವವಿಜ್ಞಾನ, ಜೈವಿಕ ತಂತ್ರಜ್ಞಾನದಲ್ಲಿ ಎಷ್ಟೇ ಮುಂದುವರೆದರೂ, ಪ್ರೊಟೀನ್ ಫೋಲ್ಡಿಂಗ್‌ನ ಬಗ್ಗೆ ಹಲವು ಸವಾಲುಗಳಿಗೆ ಉತ್ತರ ಸಿಕ್ಕಿರಲಿಲ್ಲ. ಇಂತಹ ಪ್ರಮುಖ ವಿದ್ಯಮಾನವನ್ನು ಸರಿಯಾಗಿ ಅರ್ಥೈಸಿಕೊಂಡರೆ ಅನೇಕ ಅನುವಂಶಿಕ ತೊಂದರೆಗಳಿಗೆ, ಕ್ಯಾನ್ಸರ್‌ನಂತಹ ಮಾರಕ ಅನಾರೋಗ್ಯಗಳಿಗೆ ಪರಿಹಾರ ಕಂಡುಹಿಡಿಯುವುದು ಸುಲಭ. ಈ ನಿಟ್ಟಿನಲ್ಲಿ ಹಲವಾರು ದಶಕಗಳಿಂದ ಕಾರ್ಯಪ್ರವೃತ್ತರಾಗಿದ್ದ ವಿಜ್ಞಾನಿಗಳಿಗೆ, ಕೃತಕಬುದ್ಧಿಮತ್ತೆಯು ಮೊದಲಿಗೆ ನೆರವಾದದ್ದು 2016ರಲ್ಲಿ. ಗೂಗಲ್‌ನ ಸಹಕಾರದಿಂದ ಅಭಿವೃದ್ಧಿ ಪಡಿಸಲಾದ 'ಡೀಪ್‌ಮೈಂಡ್'ನ ಮೂಲಕ ತಯಾರಾದದ್ದು 'ಆಲ್ಫಫೋಲ್ಡ್'. ಈ 'ಆಲ್ಫಫೋಲ್ಡ್'ನ ಮೂಲಕ ಜೀವರಾಸಾಯನಿಕ ಸವಾಲುಗಳಿಗೆ, ಅದರಲ್ಲೂ ಮುಖ್ಯವಾಗಿ ಪ್ರೊಟೀನ್‌ಗಳ ಸಂರಚನೆ, ಮಡಚುವಿಕೆ, ಕಾರ್ಯನಿರ್ವಹಣೆಗಳ ಬಗೆಗಿದ್ದ ಸಮಸ್ಯೆಗಳಿಗೆ ಉತ್ತರ ಕಂಡುಕೊಳ್ಳುವ ಪ್ರಯತ್ನ ಜಾರಿಯಲ್ಲಿತ್ತು; ಇದರ ಮುಂದುವರಿದ ಭಾಗವಾಗಿ ಅಭಿವೃದ್ಧಿಯಾದ ಹೊಸ ಆವೃತ್ತಿ 'ಆಲ್ಫಫೋಲ್ಡ್ 2', ಮತ್ತಷ್ಟು ಜಾಣತನದ ಊಟೆ. ಈ ಹೊಸ ಬಗೆಯ ಕೃತಕ ಬುದ್ಧಿಮತ್ತೆ ಜಾಲವು, ರಸಾಯನವಿಜ್ಞಾನವನ್ನು ಎಷ್ಟರ ಮಟ್ಟಿಗೆ ಕಲಿಯಿತೆಂದರೆ, ಅದು ಯೋಚಿಸುವುದೇ ಒಬ್ಬ ನಿಷ್ಣಾತ ಪ್ರಾಧ್ಯಾಪಕನಂತೆ, ಒಬ್ಬ ಪ್ರಚಂಡ ರಸಾಯನವಿಜ್ಞಾನಿಯಂತೆ! ಈ ಆಳವಾದ ಜ್ಞಾನವನ್ನು ಅನ್ವಯಿಸಿ ಈಗ ಅನೇಕ ಪ್ರೊಟೀನ್‌ಗಳ ಜಾತಕ ಬಯಲಾಗಿದೆ ಮತ್ತು ಮಡಚುವಿಕೆಯ ನಿಖರ ರೂಪುರೇಷೆ ಅರಿವಿಗೆ ನಿಲುಕುತ್ತಿದೆ.

ಸುಮಾರು ಅರ್ಧ ಶತಮಾನಕ್ಕೂ ಹೆಚ್ಚು ಸಮಯ ವಿಜ್ಞಾನಿಗಳ ತಲೆಕೆಡಿಸಿದ್ದ ಈ ಒಗಟಿಗೆ, ಆರ್ಟಿಫಿಶಿಯಲ್ ಇಂಟೆಲಿಜೆನ್ಸ್‌ನ ಆಸರೆ ದೊರೆತು, ಉತ್ತರ ಕಾಣುತ್ತಿದೆ. ಜಟಿಲ ಒಗಟನ್ನು ಬಿಡಿಸಿದ ಈ ಕೃತಕ ಬುದ್ಧಿಮತ್ತೆಯೇ ಇಷ್ಟು ಅದ್ಭುತವಾದರೆ, ಇದಕ್ಕೆ ಪೂರಕ ಕ್ರಮಾವಳಿಗಳನ್ನು, ತಂತ್ರಾಂಶಗಳನ್ನು ಬರೆದ, ಅನ್ವಯಿಸಿದ, ಅದಕ್ಕೆ ಶುದ್ಧವಿಜ್ಞಾನವನ್ನು ಕಲಿಸಿದ ವಿಜ್ಞಾನಿಗಳು ಮತ್ತಿನ್ನೆಷ್ಟು ಚತುರರಿರಬಹುದು ಊಹಿಸಿಕೊಳ್ಳಿ! ಇಂತಹ ವಿಜ್ಞಾನದ ಸಾಗರದಲ್ಲಿ ಈಜುವ, ತೇಲುವ ನಮಗೆ ಈ ವಿಜ್ಞಾನಿಗಳೇ ಅಂಬಿಗರು. ಇವರನ್ನು ನಂಬಿ, ಹೊಸ ಸಾಧ್ಯತೆಗಳಿಗೆ ಎದುರು ನೋಡುವ ಪಾತ್ರ ನಮ್ಮದು!

ಮನೆ ಮನೆಯಲ್ಲೂ ವೈಫೈ ರೌಟರ್

ಅವಿನಾಶ್ ಬಿ.

ಮನೆಮನೆಗಳಲ್ಲಿ ಸ್ಮಾರ್ಟ್ ಸಾಧನಗಳ ಬಳಕೆ ಹೆಚ್ಚಾದಂತೆ ಅಂತರ್ಜಾಲ ಸಂಪರ್ಕದ ಅನಿವಾರ್ಯತೆಗಳು ಕೂಡ ಹೆಚ್ಚಾಗತೊಡಗಿವೆ. ಪರಿಣಾಮವಾಗಿ ಈಗ ಮನೆಗಳಲ್ಲಿ ಬ್ರಾಡ್‌ಬ್ಯಾಂಡ್ ಬಳಕೆಯೂ ವೃದ್ಧಿಯಾಗಿದೆ. ವೈರ್ ಮೂಲಕ ಬರುವ ಅಂತರ್ಜಾಲ ವ್ಯವಸ್ಥೆಯನ್ನು ಮನೆಯೊಳಗಿರುವ ಎಲ್ಲ ಸ್ಮಾರ್ಟ್ ಸಾಧನಗಳಿಗೆ ಸಂಪರ್ಕಿಸಿದರೆ ಕೆಲಸ ಸುಲಭವಾಗುತ್ತದೆ. ಇಂಥ ಸನ್ನಿವೇಶದಲ್ಲಿ ನಾವು ಇತ್ತೀಚೆಗೆ ಹೆಚ್ಚಾಗಿ ಕೇಳುತ್ತಿರುವ ಶಬ್ದವೇ 'ವೈಫೈ ರೌಟರ್' ಅಥವಾ 'ರೂಟರ್'. ಇದರ ಉಪಯೋಗ ಏನು, ಬಳಕೆ ಹೇಗೆ ಎಂಬ ಮಾಹಿತಿ ಇಲ್ಲಿದೆ.

ಏನಿದು ವೈಫೈ ರೌಟರ್?

'ರೌಟರ್' (ಅಮೆರಿಕನ್ ಉಚ್ಚಾರ) ಅಥವಾ 'ರೂಟರ್' (ಬ್ರಿಟಿಷ್ ಉಚ್ಚಾರ) ಎಂಬುದೊಂದು ಸ್ಮಾರ್ಟ್ ಸಾಧನ. ಈ ಲೇಖನದ ವ್ಯಾಪ್ತಿಯಲ್ಲಿ ಇದನ್ನು ವಿವರಿಸುವುದಾದರೆ, ನಮ್ಮ ಮನೆಗೆ ಲಭ್ಯವಾಗುವ ಅಂತರ್ಜಾಲದ ರೇಡಿಯೊ ತರಂಗಗಳನ್ನು (ವೈಫೈ) ವಿವಿಧ ಸಾಧನಗಳಿಗೆ ನಿಸ್ತಂತುವಾಗಿ ವಿತರಿಸಿ, ನಿರ್ದಿಷ್ಟ ವ್ಯಾಪ್ತಿಯಲ್ಲಿ ಅಂತರ್ಜಾಲದಲ್ಲಿ ದತ್ತಾಂಶ (ಡೇಟಾ) ವಿನಿಮಯಕ್ಕೆ ಅನುಕೂಲ ಮಾಡಿಕೊಡುವ ಪುಟ್ಟ ಸಾಧನ. ವೈಫೈ ರೌಟರ್ ಅನ್ನು WLAN (ವೈರ್‌ಲೆಸ್ ಲೋಕಲ್ ಏರಿಯಾ ನೆಟ್‌ವರ್ಕ್) ಎಂದೂ ಕರೆಯಲಾಗುತ್ತದೆ.

ಸಾಮಾನ್ಯವಾಗಿ ಅಂತರ್ಜಾಲ ಸೇವದಾತರಿಂದ (ಇಂಟರ್ನೆಟ್ ಸರ್ವಿಸ್ ಪ್ರೊವೈಡರ್‌ಗಳು) ನಾವು ಕೇಬಲ್ ಮೂಲಕವಾಗಿ ಬರುವ ಬ್ರಾಡ್‌ಬ್ಯಾಂಡ್ ಸಂಪರ್ಕ ಪಡೆದಾಗ, ಅವರೇ ಮಾಡೆಮ್ ಎಂಬ ಸಾಧನವೊಂದನ್ನು ಒದಗಿಸುತ್ತಾರೆ. ಅದರಲ್ಲಿಯೇ ಈ ರೌಟರ್ ವ್ಯವಸ್ಥೆ ಅಡಕವಾಗಿರುತ್ತದೆ. ಮಾಡೆಮ್‌ಗೆ ಬರುವ ಅಂತರ್ಜಾಲದ ರೇಡಿಯೊ ತರಂಗಗಳನ್ನು ಅದರಲ್ಲಿರುವ ರೌಟರ್ ಅನಾಯಾಸವಾಗಿ ವೈಫೈ ವ್ಯವಸ್ಥೆಯ ಮೂಲಕ ಹಂಚುತ್ತದೆ.

ಅಂತರ್ಜಾಲಕ್ಕೆ ಸಂಪರ್ಕಿಸುವುದಕ್ಕಾಗಿ ಈ ರೌಟರ್‌ಗೊಂದು ಹೆಸರು ಮತ್ತು ಪಾಸ್‌ವರ್ಡ್ ಇರುತ್ತದೆ. ಈ ಮೂಲಕ ಅದು ದುರ್ಬಳಕೆಯಾಗದಂತೆ ರಕ್ಷಿಸಿಕೊಳ್ಳಬಹುದು. ರೌಟರ್ ಎಂಬ ಪುಟ್ಟ ಸಾಧನದಲ್ಲಿ ಇನ್‌ಪುಟ್ ಸಾಕೆಟ್, ಕೆಲವು LAN ಔಟ್‌ಪುಟ್ ಪೋರ್ಟ್‌ಗಳು, ಆಂಟೆನಾಗಳು ಹಾಗೂ ಕೆಲವು ಬಟನ್‌ಗಳಿರುತ್ತವೆ.

ಮನೆಯಲ್ಲಿ ಹೇಗೆ ಉಪಯೋಗ?

ಒಂದು ಮನೆಯಲ್ಲಿ ಕುಟುಂಬದ ಎಲ್ಲ ಸದಸ್ಯರಲ್ಲಿಯೂ ಸ್ಮಾರ್ಟ್‌ಫೋನ್ ಇರುವುದು ಈಗ ಸಾಮಾನ್ಯ. ಅಲ್ಲದೆ ಒಂದು ಡೆಸ್ಕ್‌ಟಾಪ್ ಕಂಪ್ಯೂಟರ್, ಸ್ಮಾರ್ಟ್ ಟಿವಿ, ಸ್ಮಾರ್ಟ್ ವಾಚ್, ಟ್ಯಾಬ್ಲೆಟ್, ಲ್ಯಾಪ್‌ಟಾಪ್ ಕೂಡ ಹೆಚ್ಚಿನ ಮನೆಗಳಲ್ಲಿರುತ್ತವೆ. ಇನ್ನು ಕೆಲವರ ಮನೆಯಲ್ಲಿ ಸಿಸಿಟಿವಿ, ಪ್ರಿಂಟರ್, ಸ್ಮಾರ್ಟ್ ರೆಫ್ರಿಜರೇಟರ್, ಸ್ಮಾರ್ಟ್ ಮೈಕ್ರೋವೇವ್ ಒವೆನ್, ವೈರ್‌ಲೆಸ್ ಸ್ಪೀಕರ್/ಹೋಂ ಥಿಯೇಟರ್ ಸಿಸ್ಟಂ, ಸ್ಮಾರ್ಟ್ ಫ್ಯಾನ್, ಸ್ಮಾರ್ಟ್ ಬಲ್ಬ್ - ಮುಂತಾದ ಅತ್ಯಾಧುನಿಕ ಗ್ಯಾಜೆಟ್‌ಗಳೂ ಇರಬಲ್ಲವು. ಇವೆಲ್ಲವನ್ನೂ ಮೊಬೈಲ್ ಫೋನ್‌ನಲ್ಲಿರುವ ಇಂಟರ್ನೆಟ್ ಡೇಟಾದ ಮೂಲಕ ಸಂಪರ್ಕಿಸುವುದು ಅಸಾಧ್ಯ. ಪ್ರತಿಯೊಂದಕ್ಕೂ ರೀಚಾರ್ಜ್ ಮಾಡುವುದು ದುಬಾರಿ.

ಇವೆಲ್ಲವನ್ನೂ ನಿಸ್ತಂತು (ವೈರ್‌ಲೆಸ್) ಆಗಿ ಸಂಪರ್ಕಿಸುವುದರಿಂದ, ಎಲ್ಲ ಗ್ಯಾಜೆಟ್‌ಗಳಿಗೆ ಪ್ರತ್ಯೇಕ ಸಿಮ್ ಕಾರ್ಡ್ ಖರೀದಿಸಿ, ಅದಕ್ಕೆ ಮಾಸಿಕ, ವಾರ್ಷಿಕ ಶುಲ್ಕ ಪಾವತಿಸಬೇಕಾಗಿರುವುದಿಲ್ಲ. ಇತ್ತೀಚೆಗೆ ಒಳ್ಳೆಯ ವೇಗದ ಕೇಬಲ್ ಮೂಲಕ ದೊರೆಯುವ ಬ್ರಾಡ್‌ಬ್ಯಾಂಡ್ ಸಂಪರ್ಕಗಳು ಸ್ಪರ್ಧಾತ್ಮಕ ದರದಲ್ಲಿ ದೊರೆಯುವ ಕಾರಣದಿಂದಾಗಿ, ಮಾಸಿಕ ₹500ರ ಆಸುಪಾಸಿನಲ್ಲಿ ಕನಿಷ್ಠ 10ರಿಂದ 15 ಸ್ಮಾರ್ಟ್‌ಫೋನ್ ಮತ್ತಿತರ ಗ್ಯಾಜೆಟ್‌ಗಳನ್ನು ಅಂತರ್ಜಾಲಕ್ಕೆ ಸಂಪರ್ಕಿಸಬಹುದಾಗಿದೆ. ಮನೆಯಲ್ಲಿರುವಾಗ ಇದು ಭರ್ಜರಿ ಉಪಯೋಗಕ್ಕೆ ಬರುತ್ತದೆ. ಹೊರಗೆ ಹೋಗಬೇಕಾದಾಗ ಮಾತ್ರ ಕನಿಷ್ಠ ಡೇಟಾ ರೀಚಾರ್ಜ್ ಮಾಡಿಸಿಕೊಂಡರೆ ಹೆಚ್ಚಿನ ಹಣ ಉಳಿತಾಯ ಮಾಡಬಹುದು.

ಗಮನಿಸಬೇಕಾಗಿರುವುದು

ಅಂತರ್ಜಾಲದಲ್ಲಿ ತೀರಾ ಹೆಚ್ಚು ಕೆಲಸ ಇರುತ್ತದೆ, ಹೆಚ್ಚಿನ ತರಂಗಾಂತರಗಳ ಅಗತ್ಯವಿದೆ ಎಂದಾದರೆ, ಕೆಲಸ ಸುಲಲಿತವಾಗಿ ಸಾಗಲು LAN ಅಥವಾ ಲೋಕಲ್ ಏರಿಯಾ ನೆಟ್‌ವರ್ಕ್ ಎಂಬ ಕೇಬಲ್ ಬಳಸಿಯೇ ರೌಟರ್ ಮತ್ತು ಕಂಪ್ಯೂಟರ್ ಸಂಪರ್ಕಿಸುವುದು ಸೂಕ್ತ. ಏಕೆಂದರೆ, ವೈಫೈ ಯಾವತ್ತಿದ್ದರೂ ನಂಬಲರ್ಹವಾಗಿರುವುದಿಲ್ಲ ಮತ್ತು ವೈಫೈ ಸಂಪರ್ಕಕ್ಕೆ ಅದರದ್ದೇ ಆದ ಇತಿಮಿತಿಗಳಿರುತ್ತವೆ. ಕೇಬಲ್ ಮೂಲಕ ಸಂಪರ್ಕಿಸಿದರೆ ಅಂತರ್ಜಾಲದ ವೇಗವೂ ಹೆಚ್ಚಿರುತ್ತದೆ. ಸ್ಮಾರ್ಟ್ ಟಿವಿಗೂ ಲ್ಯಾನ್ ಕೇಬಲ್ ಮೂಲಕವೇ ಸಂಪರ್ಕಿಸಿದರೆ ಟಿವಿ, ಒಟಿಟಿ ಅಥವಾ ಯೂಟ್ಯೂಬ್‌ನಂಥ ಚಾನೆಲ್‌ಗಳನ್ನು ಅಡಚಣೆರಹಿತವಾಗಿ ವೀಕ್ಷಿಸಬಹುದು.

ಅಂತರ್ಜಾಲ ಸೇವಾದಾತರು ಒದಗಿಸುವ ಮಾಡೆಮ್‌ಗಳಲ್ಲಿ ಕೆಲವು ಹಳತಾಗಿ, ಈಗಿನ ಬೇಡಿಕೆಗಳಿಗೆ ತಕ್ಕಂತೆ ಕೆಲಸ ಮಾಡಲಾರವು. ಅಂಥವರು ಹೊಸ ರೌಟರ್ ಖರೀದಿಸಬಹುದು. ಗೃಹ ಬಳಕೆಗೆ, ಕಚೇರಿ ಅಥವಾ ದೊಡ್ಡ ಅಪಾರ್ಟ್‌ಮೆಂಟ್ ಬಳಕೆಯ ಸಾಮರ್ಥ್ಯಗಳಿಗೆ ತಕ್ಕಂತೆ ಸೂಕ್ತವಾಗುವ ರೌಟರ್ ಆಯ್ಕೆ ಮಾಡಿಕೊಳ್ಳಬಹುದು.



ರೌಟರ್‌ಗಳಲ್ಲಿ ವೈವಿಧ್ಯ

ವೈಫೈ ಕೆಲಸ ಮಾಡುವುದು ರೇಡಿಯೊ ತರಂಗಗಳಿಂದ. ಸಾಮಾನ್ಯವಾಗಿ 2.4 ಗಿಗಾಹರ್ಟ್ಸ್ ಹಾಗೂ 5 ಗಿಗಾಹರ್ಟ್ಸ್ ಎಂಬ ಎರಡು ತರಂಗಾಂತರದ ವೇಗ ಬಳಸಲಾಗುತ್ತದೆ. ಸಿಂಗಲ್ ಬ್ಯಾಂಡ್‌ನಲ್ಲಿ ಕಡಿಮೆ ಎಂದರೆ 2.4Ghz ವೇಗ ಇದ್ದು, ವ್ಯಾಪ್ತಿ ಹೆಚ್ಚಿರುತ್ತದೆ. ಇದರ ಜೊತೆಗೆ, 5Ghz ಬ್ಯಾಂಡ್ ಇರುವ ರೌಟರ್‌ಗಳನ್ನು ಡ್ಯುಯಲ್ ಬ್ಯಾಂಡ್ ರೌಟರ್ ಎಂದು ಕರೆಯಲಾಗುತ್ತದೆ. ಇದರಲ್ಲಿ ವೇಗ ಜಾಸ್ತಿ, ಆದರೆ ವ್ಯಾಪ್ತಿ ಕಿರಿದು. ಎರಡೂ ಇರುವ ಡ್ಯುಯಲ್ ಬ್ಯಾಂಡ್ ರೌಟರ್‌ಗಳೇ ಈಗ ಹೆಚ್ಚು ಚಾಲ್ತಿಯಲ್ಲಿವೆ. ಅದೇ ರೀತಿ, ರೌಟರ್‌ನಲ್ಲಿ ಆಂಟೆನಾಗಳು ಹೆಚ್ಚಿದ್ದರೆ, ಅಂತರ್ಜಾಲದ ಸಿಗ್ನಲ್‌ಗಳು ಗೋಡೆ ಮತ್ತಿತರ ಅಡಚಣೆಗಳನ್ನು ದಾಟಿ ನಿರ್ದಿಷ್ಟ ಗ್ಯಾಜೆಟ್‌ಗಳನ್ನು ತಲುಪಲು ಅನುಕೂಲ.

ಕೆಲವು ರೌಟರ್‌ಗಳಲ್ಲಿ ಯುಎಸ್‌ಬಿ ಪೋರ್ಟ್ ಇರುತ್ತದೆ. ಅದರ ಮೂಲಕ ನೀವೊಂದು ಪೋರ್ಟೆಬಲ್ ಹಾರ್ಡ್ ಡ್ರೈವ್ ಅಥವಾ ಕಂಪ್ಯೂಟರನ್ನು ಸಂಪರ್ಕಿಸಿದರೆ, ವೈಫೈ ಸಂಪರ್ಕದ ಮೂಲಕವಾಗಿ ಎಲ್ಲ ಗ್ಯಾಜೆಟ್‌ಗಳಿಂದಲೂ ಈ ಹಾರ್ಡ್ ಡ್ರೈವ್‌ನಲ್ಲಿ ಶೇಖರವಾಗಿರುವ ಫೈಲ್‌ಗಳನ್ನು ನೋಡಬಹುದು, ಇಲ್ಲವೇ ತಿದ್ದುಪಡಿ ಮಾಡಬಹುದು. ಇದು ಒಂದು ರೀತಿಯಲ್ಲಿ ಸರ್ವರ್ ಕಂಪ್ಯೂಟರ್ ಆಗಿ ಕೆಲಸ ಮಾಡುತ್ತದೆ. ಚಿತ್ರ, ವಿಡಿಯೊ, ಆಡಿಯೊ ಮತ್ತಿತರ ಫೈಲ್‌ಗಳನ್ನು ಪರಸ್ಪರ ಹಂಚಿಕೊಳ್ಳಲು ಇದು ಅನುಕೂಲ.



ಪಿಎಸ್ಐ ಅಕ್ರಮ • ಹೈಕೋರ್ಟ್ ನ್ಯಾಯಮೂರ್ತಿ ನೇತೃತ್ವದಲ್ಲಿ ತನಿಖೆ ನಡೆಸಿ: ಸಿದ್ದರಾಮಯ್ಯ

‘ವಿಜಯೇಂದ್ರ, ಅಶ್ವತ್ಥನಾರಾಯಣ ಭಾಗಿ’

ಪ್ರಜಾವಾಣಿ ವಾರ್ತೆ

ಸಿದ್ದರಾಮಯ್ಯ

ಬೆಂಗಳೂರು: ‘ಪಿಎಸ್ಐ ನೇಮಕಾತಿ ಹಗರಣದಲ್ಲಿ ಯಡಿಯೂರಪ್ಪ ಅವರ ಮಗ ವಿಜಯೇಂದ್ರ ಮತ್ತು ಸಚಿವ ಅಶ್ವತ್ಥನಾರಾಯಣ ಭಾಗಿಯಾಗಿದ್ದಾರೆಂಬ ಆರೋಪವಿದೆ. ಅವರಿಗೆ ರಕ್ಷಣೆ ನೀಡುತ್ತಿರುವ ಮುಖ್ಯಮಂತ್ರಿ ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕು’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆಗ್ರಹಿಸಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಜೊತೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಈ ಹಗರಣವನ್ನು ಹೈಕೋರ್ಟ್ ನ್ಯಾಯಮೂರ್ತಿ ಮೇಲುಸ್ತುವಾರಿಯಲ್ಲಿ ನ್ಯಾಯಾಂಗ ತನಿಖೆಗೆ ಒಪ್ಪಿಸಬೇಕು’ ಎಂದರು.

‘ಹಗರಣ ವಿಚಾರವನ್ನು ಸದನದಲ್ಲಿ ಪ್ರಸ್ತಾಪಿಸಿದಾಗ ಮುಖ್ಯಮಂತ್ರಿ, ಗೃಹ ಸಚಿವರು ನಮ್ಮ ಮೈಮೇಲೆ ಬಂದರು. ಯಾವುದೇ ಭ್ರಷ್ಟಾಚಾರ, ಅವ್ಯವಹಾರ ನಡೆದಿಲ್ಲವೆಂದು ಆರಗ ಜ್ಞಾನೇಂದ್ರ ವೀರಾವೇಶದಿಂದ ಉತ್ತರಿಸಿದ್ದರು. ಈಗ ಎಡಿಜಿಪಿಯನ್ನು ಬಂಧಿಸಿ ತಮ್ಮ ಬೆನ್ನು ತಾವೇ ತಟ್ಟಿಕೊಳ್ಳುತ್ತಿರುವ ಗೃಹ ಸಚಿವರು ಏನೆಂದು ಉತ್ತರಿಸುತ್ತಾರೆ’ ಎಂದು ಪ್ರಶ್ನಿಸಿದರು.

‘ವಿಧಾನಸಭೆ ಮೂಲಕ ಸುಳ್ಳು ಹೇಳಿದವರು ಮಂತ್ರಿಯಾಗಿ ಮುಂದುವರಿಯಲು ಅರ್ಹರೇ ಎಂದು ಜನ ಪ್ರಶ್ನಿಸುತ್ತಿದ್ದಾರೆ. ಇಂಥ ಸಚಿವರನ್ನು ಮಂತ್ರಿ ಮಂಡಲದಲ್ಲಿ ಇಟ್ಟುಕೊಂಡು ಅವರ ಮೂಲಕ ಬೇಜವಾಬ್ದಾರಿ, ಅಸಂಬದ್ಧ, ಸುಳ್ಳು ಹೇಳಿಕೆಯನ್ನು ಮುಖ್ಯಮಂತ್ರಿ ಕೊಡಿಸುತ್ತಿದ್ದಾರೆ. ಸರ್ಕಾರದ ಉದ್ದೇಶ ಇಡೀ ಪ್ರಕರಣವನ್ನು ಮುಚ್ಚಿ ಹಾಕುವುದಾಗಿತ್ತು’ ಎಂದು ದೂರಿದರು.

ಸಚಿವ ಅಶ್ವತ್ಥನಾರಾಯಣ ಅವರ ಕಡೆಯ ಐವರು ಅಕ್ರಮವಾಗಿ ಆಯ್ಕೆಯಾಗಿದ್ದಾರೆ. ಅವರ ಸಂಬಂಧಿಕರೂ ಬಂಧನಕ್ಕೆ ಒಳಗಾಗಿದ್ದಾರೆ. ಸಿಐಡಿಯವರು ಅಶ್ವತ್ಥನಾರಾಯಣ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತಾರಾ? ಒಬ್ಬ ಅಭ್ಯರ್ಥಿಗೆ ₹30 ಲಕ್ಷದಿಂದ ₹1 ಕೋಟಿವರೆಗೂ ವಸೂಲಿ ಮಾಡಿದ್ದಾರೆ. ಈ ಹಣ ಯಾರ್‍ಯಾರ ಜೇಬಿಗೆ ಹೋಗಿದೆ? ಯಾವ ಮಂತ್ರಿಗೆ ಹೋಗಿದೆ? ಮುಖ್ಯಮಂತ್ರಿಗೆ ಹೋಗಿದೆಯಾ? ಇವೆಲ್ಲ ಗೊತ್ತಾಗಬೇಕಲ್ಲವೇ? ಎಂದರು.

‘ಸರ್ಕಾರದ ನಿರ್ದೇಶನ ಇಲ್ಲದೆ ಎಡಿಜಿಪಿ ಅವರು ಒಎಂಆರ್ ಶೀಟ್ ಇಷ್ಟು ರಾಜಾರೋಷವಾಗಿ ತಿದ್ದುಪಡಿ ಮಾಡಲು ಸಾಧ್ಯವೇ? ನೂರಾರು ಕೋಟಿ ರೂಪಾಯಿ ಲಂಚ ಪಡೆಯಲು ಸಾಧ್ಯವೇ? ಈ ಹಿಂದೆ ನಡೆದಿರುವ ಎಫ್‌ಡಿಎ, ತೋಟಗಾರಿಕೆ, ಪಶು ಸಂಗೋಪನೆ, ಲೋಕೋಪಯೋಗಿ ಹಾಗೂ ಸಹಾಯಕ ಪ್ರಾಧ್ಯಾಪಕ ಹುದ್ದೆಗಳಿಗೆ ನಡೆದ ನೇಮಕಾತಿ ಬಗ್ಗೆಯೂ ತನಿಖೆಯಾಗಬೇಕು’ ಎಂದು ಅವರು ಒತ್ತಾಯಿಸಿದರು.

‘ರಾಜೀನಾಮೆ ಕೇಳುವ ನೈತಿಕತೆ ಕಾಂಗ್ರೆಸ್ಸಿಗಿಲ್ಲ’

ಬೆಂಗಳೂರು: ‘ಪಿಎಸ್ಐ ನೇಮಕಾತಿ ಪ್ರಕರಣದಲ್ಲಿ ಗೃಹ ಸಚಿವರ ರಾಜೀನಾಮೆ ಕೇಳಲು ಕಾಂಗ್ರೆಸ್ಸಿಗೆ ನೈತಿಕ ಹಕ್ಕಿಲ್ಲ. ಕಾಂಗ್ರೆಸ್ಸಿನವರು ಅಧಿಕಾರದಲ್ಲಿ ಇದ್ದಿದ್ದರೆ ಈ ಪ್ರಕರಣವನ್ನು ವ್ಯವಸ್ಥಿತವಾಗಿ ಮುಚ್ಚಿ ಹಾಕುತ್ತಿದ್ದರು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, ‘ಹಗರಣ ನಡೆದಿರುವುದು ಗಮನಕ್ಕೆ ಬಂದ ತಕ್ಷಣವೇ ಪ್ರಾಥಮಿಕ ತನಿಖೆ ಮಾಡಿಸಿ, ಸಿಐಡಿಗೆ ವಹಿಸಲಾಗಿದೆ. ಪ್ರಾಮಾಣಿಕವಾಗಿ, ದಕ್ಷತೆಯಿಂದ ಗೃಹ ಸಚಿವರು ಕೆಲಸ ಮಾಡಿದ್ದಾರೆ. ಅವರ ಪ್ರಾಮಾಣಿಕತೆ ಮತ್ತು ದಕ್ಷತೆ ಇರುವುದರಿಂದಲೇ ಅಕ್ರಮ ಹೊರಬಂದಿದೆ’ ಎಂದರು.

‘ಕಾಂಗ್ರೆಸ್‌ನವರ ಅವಧಿಯಲ್ಲಿ ಪಿಎಸ್ಐ ನೇಮಕಾತಿ ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆಯಾಗಿತ್ತು. ಹಿರಿಯ ಪೊಲೀಸ್ ಅಧಿಕಾರಿ ಆರೋಪಿಯಾಗಿದ್ದರು. ಬಂಧನ ದೂರದ ಮಾತು, ಅವರ ವಿಚಾರಣೆಯನ್ನೂ ಮಾಡಲಿಲ್ಲ. ಯಾವುದೇ ಮುಲಾಜಿಗೆ ಒಳಗಾಗದೆ ತನಿಖೆ ನಡೆಸಲು ಮುಕ್ತ ಸ್ವಾತಂತ್ರ್ಯ ನೀಡಿದ್ದರಿಂದಲೇ ಎಡಿಜಿಪಿ ಬಂಧನದಂಥ ದಿಟ್ಟ ಕ್ರಮವನ್ನು ಪೊಲೀಸ್ ಅಧಿಕಾರಿಗಳು ತೆಗೆದುಕೊಂಡಿದ್ದಾರೆ’ ಎಂದರು.

ರಾಜೀನಾಮೆ ನೀಡದಿದ್ದರೆ ವಜಾಗೊಳಿಸಿ– ಡಿಕೆಶಿ

ಡಿ.ಕೆ. ಶಿವಕುಮಾರ್

‘ಈ ಹಗರಣದ ನೈತಿಕ ಹೊಣೆ ಹೊತ್ತು ಮುಖ್ಯಮಂತ್ರಿ ಮತ್ತು ಗೃಹ ಸಚಿವರು ರಾಜೀನಾಮೆ ನೀಡದಿದ್ದರೆ ರಾಜ್ಯಪಾಲರೇ ಸರ್ಕಾರವನ್ನು ವಜಾಗೊಳಿಸಬೇಕು’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆಗ್ರಹಿಸಿದರು.

‘ಈ ಅಕ್ರಮಕ್ಕಾಗಿ ಸರ್ಕಾರವೇ ಅಂಗಡಿ ತೆರೆದಿತ್ತು. ಪಿಎಸ್ಐ ಹುದ್ದೆ ಕೊಳ್ಳಲು ಯುವಕರು ಹೋಗಿದ್ದರು. ಅಂಗಡಿ ತೆಗೆಯದಿದ್ದರೆ ಯುವಕರು ಹೋಗುತ್ತಿದ್ದರೇ? ಈ ಅಂಗಡಿ ಯಾರದ್ದು ಎಂಬ ತನಿಖೆ ಆಗಬೇಕು. ಆದರೆ, ಸರ್ಕಾರ ಈ ಅಕ್ರಮದಲ್ಲಿ ಶಾಮೀಲಾಗಿ ಕೇವಲ ಖರೀದಿ ಮಾಡಿದವರನ್ನು ಬಂಧಿಸಿ, ದೊಡ್ಡವರನ್ನು ಬಿಟ್ಟಿದೆ’ ಎಂದು ಆರೋಪಿಸಿದರು.

‘ಕೋರ್ಟ್ ಹೇಳಿತೆಂದು ಈ ಹಗರಣದಲ್ಲಿ ಎಡಿಜಿಪಿಯನ್ನು ಬಂಧಿಸಲಾಗಿದೆ. ಯಾವುದೇ ವಿಚಾರಣೆ ಮಾಡಬೇಕಾದರೆ, ಅವರ ಹೇಳಿಕೆ, ಅವರ ಕೆಳ ಅಧಿಕಾರಿಗಳ ಹೇಳಿಕೆ, ಸರಿಯಾಗಿದೆಯೇ ಇಲ್ಲವೇ? ಎಂದು ಸುದೀರ್ಘ ಚರ್ಚಿಸಿ, ದಾಖಲಾತಿ ಸಂಗ್ರಹಿಸಿದ ನಂತರ ವೈದ್ಯಕೀಯ ಪರೀಕ್ಷೆಗೆ ಕಳುಹಿಸುವುದು ವಾಡಿಕೆ. ಆದರೆ, ಬಂಧಿಸಿದ ಅರ್ಧ ಗಂಟೆಯಲ್ಲಿ ಎಡಿಜಿಪಿಯನ್ನು ಆರೋಗ್ಯ ಪರೀಕ್ಷೆಗೆ ಕಳುಹಿಸಲಾಗಿದೆ. ಅವರ ಬಂಧನ ನ್ಯಾಯಾಂಗ ಮತ್ತು ಜನರ ಕಣ್ಣೊರೆಸುವ ತಂತ್ರ’ ಎಂದು ದೂರಿದರು.

ಐಎಎಸ್ ಅಧಿಕಾರಿ ಮಂಜುನಾಥ್ ಮನೆಯಲ್ಲಿ ಎಸಿಬಿ ಶೋಧ

ಬೆಂಗಳೂರು: ಭೂ ಒಡೆತನಕ್ಕೆ ಸಂಬಂಧಿಸಿದ ವ್ಯಾಜ್ಯವೊಂದರಲ್ಲಿ ಅನುಕೂಲಕರ ಆದೇಶ ನೀಡಲು ₹ 5 ಲಕ್ಷ ಲಂಚ ಪಡೆದ ಆರೋಪದ ಮೇಲೆ ಬಂಧಿತರಾಗಿ ನ್ಯಾಯಾಂಗ ಬಂಧನದಲ್ಲಿರುವ ಐಎಎಸ್ ಅಧಿಕಾರಿ ಜೆ. ಮಂಜುನಾಥ್ ಅವರ ಮನೆ ಮೇಲೆ ಮಂಗಳವಾರ ದಾಳಿಮಾಡಿದ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ), ಶೋಧ ನಡೆಸಿತು.

ಬೆಂಗಳೂರು ನಗರ ಜಿಲ್ಲಾಧಿಕಾರಿ ಹುದ್ದೆಯಲ್ಲಿದ್ದ ಅವಧಿಯಲ್ಲಿ ಲಂಚ ಪಡೆದ ಆರೋಪ ಮಂಜುನಾಥ್ ಮೇಲಿದೆ. ಮೇ 21ರಂದು ಜಿಲ್ಲಾಧಿಕಾರಿ ಕಚೇರಿಯ ಉಪ ತಹಶೀಲ್ದಾರ್ ಮಹೇಶ್ ಮತ್ತು ನ್ಯಾಯಾಲಯ ವಿಭಾಗದ ಸಹಾಯಕ ಚೇತನಕುಮಾರ್ ಅಲಿಯಾಸ್ ಚಂದ್ರು ಎಂಬುವವರನ್ನು ಎಸಿಬಿ ಬಂಧಿಸಿತ್ತು. ಇದೇ ಪ್ರಕರಣದಲ್ಲಿ ಮಂಜುನಾಥ್ ಅವರನ್ನು ಸೋಮವಾರ ಬಂಧಿಸಿದ್ದು, ಅವರು ನ್ಯಾಯಾಂಗ ಬಂಧನದಲ್ಲಿದ್ದಾರೆ.

ನ್ಯಾಯಾಲಯದಿಂದ ಶೋಧನಾ ವಾರೆಂಟ್ ಪಡೆದು ಯಶವಂತಪುರದಲ್ಲಿರುವ ಮಂಜುನಾಥ್ ಅವರ ಫ್ಲ್ಯಾಟ್ ಮೇಲೆ ಮಂಗಳವಾರ ಬೆಳಿಗ್ಗೆ ದಾಳಿಮಾಡಿದ ಎಸಿಬಿ ಅಧಿಕಾರಿಗಳು, ರಾತ್ರಿಯವರೆಗೂ ಶೋಧ ನಡೆಸಿದರು. ಕೆಲವು ಮಹತ್ವದ ದಾಖಲೆಗಳನ್ನು ಅಧಿಕಾರಿಯ ನಿವಾಸದಿಂದ ವಶಪಡಿಸಿಕೊಂಡಿದ್ದು, ಪರಿಶೀಲಿಸಲಾಗುತ್ತಿದೆ ಎಂದು ತನಿಖಾ ಸಂಸ್ಥೆ ಹೇಳಿದೆ.

ಪ್ರಜಾವಾಣಿ

ಬೇಕಾಗಿದ್ದಾರೆ

ಉಪಸಂಪಾದಕ/ವರದಿಗಾರ

ಪ್ರಜಾವಾಣಿ ಬಳಗವನ್ನು ಸೇರಬೇಕೆಂಬ ನಿಮ್ಮ ಕನಸು ನನಸಾಗಲು ಇದೊಂದು ಸದವಕಾಶ. ಅರ್ಜಿ ಸಲ್ಲಿಸುವ ಅಭ್ಯರ್ಥಿಗಳಿಗೆ ಪತ್ರಿಕೋದ್ಯಮ ಮತ್ತು ಬರವಣಿಗೆಯಲ್ಲಿ ಆಸಕ್ತಿ ಇರಬೇಕು. ಪ್ರಚಲಿತ ವಿಷಯ, ಸಾಹಿತ್ಯ, ಕಲೆ, ಸಂಸ್ಕೃತಿ, ವಿಜ್ಞಾನ, ಅರ್ಥಶಾಸ್ತ್ರ, ಕಾನೂನು, ಇತಿಹಾಸ ಮತ್ತು ರಾಜಕೀಯ ವಿಷಯಗಳಲ್ಲಿ ಹೆಚ್ಚಿನ ಜ್ಞಾನ ಇರಬೇಕು. ಸಾಮಾಜಿಕ ಜಾಲತಾಣಗಳ ಬಳಕೆಯಲ್ಲಿ ಆಸಕ್ತಿ ಇರಬೇಕು. ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದ ಮಾಡುವ ಕೌಶಲವನ್ನು ಹೊಂದಿರಬೇಕು. ಯಾವುದೇ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿರಬೇಕು. 30 ವರ್ಷ ಮೀರದ, ಮಾಧ್ಯಮ ಕ್ಷೇತ್ರದಲ್ಲಿ ಎರಡರಿಂದ ಐದು ವರ್ಷ ಅನುಭವ ಇರುವವರು ಈ ಹುದ್ದೆಗೆ ಅರ್ಜಿ ಸಲ್ಲಿಸಬಹುದು.

ಅಭ್ಯರ್ಥಿಗಳು ತಮ್ಮ ಹೆಸರು, ವಿಳಾಸ, ಜನ್ಮ ದಿನಾಂಕ, ವಿದ್ಯಾರ್ಹತೆ ಮತ್ತು ಅನುಭವದ ವಿವರಗಳೊಂದಿಗೆ ಕನ್ನಡದಲ್ಲಿ ಬರೆದ ಅರ್ಜಿಯನ್ನು ಕೆಳಗಿನ ವಿಳಾಸಕ್ಕೆ ಕಳುಹಿಸಬೇಕು. ಇ–ಮೇಲ್ ಕೂಡ ಮಾಡಬಹುದು. ಅರ್ಜಿ ಸಲ್ಲಿಸಲು ಜುಲೈ 13 ಕೊನೆಯ ದಿನ. **ಲಕೋಟೆ ಮೇಲೆ ಹುದ್ದೆಯ ಹೆಸರು ಬರೆಯಬೇಕು.**

ವಿ.ಸೂ: ದೇಶದ ಯಾವುದೇ ಸ್ಥಳದಲ್ಲಿ ಕೆಲಸ ಮಾಡಲು ಸಿದ್ಧ ಇರುವವರು ಮಾತ್ರ ಮೇಲಿನ ಹುದ್ದೆಗಳಿಗೆ ಅರ್ಜಿ ಸಲ್ಲಿಸಬೇಕು.

ಇ–ಮೇಲ್ ವಿಳಾಸ: **careers@prajavani.co.in**
ಅಂಚೆ ವಿಳಾಸ: **ಮ್ಯಾನೇಜರ್ (ನೇಮಕಾತಿ)**
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ.
ನಂ 75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು – 560001

ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಸಭೆ ಇಂದು

ಮೇಕೆದಾಟು ಡಿಪಿಆರ್: ಸಿಕ್ಕಿತೇ ಒಪ್ಪಿಗೆ?

• ಮಂಜುನಾಥ ಹೆಬ್ಬಾರ್

ನವದೆಹಲಿ: ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ (ಸಿಡಬ್ಲ್ಯೂಎಂಎ) ಸಭೆ ನವದೆಹಲಿಯಲ್ಲಿ ಬುಧವಾರ (ಜುಲೈ 6) ನಡೆಯಲಿದೆ. ಮೇಕೆದಾಟು ಬಳಿ ಸಮತೋಲನ ಜಲಾಶಯ ನಿರ್ಮಿಸುವ ಉದ್ದೇಶ ಹೊಂದಿರುವ ವಿಸ್ತೃತ ಯೋಜನಾ ವರದಿಗೆ (ಡಿಪಿಆರ್) ಸಭೆಯಲ್ಲಿ ಅನುಮೋದನೆ ಸಿಗುವ ವಿಶ್ವಾಸದಲ್ಲಿ ಕರ್ನಾಟಕ ಸರ್ಕಾರ ಇದೆ.

ಮೇಕೆದಾಟು ಯೋಜನೆಯ ಡಿಪಿಆರ್‌ಗೆ ಕಾವೇರಿ ನದಿ ನಿರ್ವಹಣಾ ಪ್ರಾಧಿಕಾರವೇ ಅನುಮೋದನೆ ನೀಡಬೇಕು ಎಂದು ಕೇಂದ್ರ ಜಲ ಆಯೋಗ ಈ ಹಿಂದೆಯೇ ಷರತ್ತು ವಿಧಿಸಿತ್ತು. ಪ್ರಾಧಿಕಾರವು ಈಗಾಗಲೇ ಐದು ಸುತ್ತಿನ ಸಭೆಗಳನ್ನು ನಡೆಸಿದೆ. ಬುಧವಾರ ನಡೆಯುವ ಸಭೆಯಲ್ಲಿ ಕರ್ನಾಟಕ, ತಮಿಳುನಾಡು, ಪುದುಚೇರಿ ಮತ್ತು ಕೇರಳ ರಾಜ್ಯಗಳ ಹಾಗೂ ಕೇಂದ್ರ ಸರ್ಕಾರದ ಅಧಿಕಾರಿಗಳು ಭಾಗವಹಿಸಲಿದ್ದಾರೆ. ಸಭೆಯನ್ನು ಈ ಮೊದಲು ಜೂನ್ 16ಕ್ಕೆ ನಿಗದಿ ಮಾಡಲಾಗಿತ್ತು. ಬಳಿಕ ಜೂನ್ 23ಕ್ಕೆ ಮುಂದೂಡಲಾಗಿತ್ತು. ತಮಿಳುನಾಡು ಸರ್ಕಾರದ ಮನವಿಯ ಮೇರೆಗೆ ಸಭೆಯನ್ನು ಜುಲೈ 6ಕ್ಕೆ ನಿಗದಿ ಮಾಡಲಾಯಿತು.

ಮೇಕೆದಾಟು ಯೋಜನೆಯ ಬಗ್ಗೆ ಚರ್ಚಿಸದಂತೆ ಪ್ರಾಧಿಕಾರಕ್ಕೆ ನಿರ್ದೇಶನ ನೀಡುವಂತೆ ಕೋರಿ ತಮಿಳುನಾಡು ಸರ್ಕಾರವು ಸುಪ್ರೀಂ ಕೋರ್ಟ್ ಮೊರೆ ಹೋಗಿದೆ. ಜತೆಗೆ, ‘ಮೇಕೆದಾಟು ಯೋಜನೆ ಚರ್ಚೆಗೆ ತೆಗೆದುಕೊಳ್ಳದಂತೆ ಪ್ರಾಧಿಕಾರಕ್ಕೆ ತಡೆ ನೀಡಬೇಕು. ಈ ವಿಚಾರದಲ್ಲಿ ಮಧ್ಯಪ್ರವೇಶಿಸಬೇಕು’ ಎಂದು ಆಗ್ರಹಿಸಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಜೂನ್‌ನಲ್ಲಿ ಪತ್ರ ಬರೆದಿದ್ದಾರೆ.

ಈ ನಡುವೆ, ಕೇಂದ್ರ ಜಲಶಕ್ತಿ ಸಚಿವ ಗಜೇಂದ್ರ ಸಿಂಗ್ ಶೆಖಾವತ್ ಅವರನ್ನು ಭೇಟಿ ಮಾಡಿರುವ ಕರ್ನಾಟಕ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ, ಡಿಪಿಆರ್‌ಗೆ ಒಪ್ಪಿಗೆ ನೀಡುವಂತೆ ಒತ್ತಡ ಹೇರಿದ್ದಾರೆ.

ಯೋಜನೆ ಅನುಷ್ಠಾನಕ್ಕಾಗಿ ಬಜೆಟ್‌ನಲ್ಲಿ ₹1 ಸಾವಿರ ಕೋಟಿ ಮೀಸಲಿಡಲಾಗಿದೆ. ವಿಧಾನಸಭಾ ಚುನಾವಣಾ ದಿನಾಂಕ ಘೋಷಣೆಗೆ ಮುನ್ನ ಯೋಜನೆಗೆ ಚಾಲನೆ ನೀಡಬೇಕು ಎಂದು ಕರ್ನಾಟಕ ಸರ್ಕಾರದ ಯೋಚನೆ. ಯೋಜನೆಗೆ ತ್ವರಿತ ಅನುಮೋದನೆ ನೀಡಿದರೆ ಬಿಜೆಪಿಗೆ ರಾಜಕೀಯವಾಗಿ ಲಾಭವಾಗಲಿದೆ ಎಂಬುದನ್ನು ಮುಖ್ಯಮಂತ್ರಿ ಅವರು ಕೇಂದ್ರ ಸಚಿವರ ಗಮನಕ್ಕೆ ತಂದಿದ್ದಾರೆ ಎಂದು ಕರ್ನಾಟಕ ಸರ್ಕಾರದ ಮೂಲಗಳು ಹೇಳಿವೆ.

ಮೇಕೆದಾಟು ಯೋಜನೆಯನ್ನು ಕರ್ನಾಟಕ ಸರ್ಕಾರವು ನಿಯಮ ಉಲ್ಲಂಘಿಸಿ ಕೈಗೆತ್ತಿಕೊಂಡಿದೆ ಎಂಬ ಪತ್ರಿಕಾ ವರದಿಯೊಂದನ್ನು ಆಧರಿಸಿ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ (ಎನ್‌ಜಿಟಿ) ಚೆನ್ನೈ ಪೀಠವು 2021ರ ಮೇ 21ರಂದು ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡಿತ್ತು. ಜತೆಗೆ, ಮೇಕೆದಾಟು ಸ್ಥಳ ಪರಿಶೀಲನೆಗಾಗಿ ಸಮಿತಿಯೊಂದನ್ನು ರಚಿಸಿ ಆದೇಶ ನೀಡಿತ್ತು. ಈ ಆದೇಶವನ್ನು ಪ್ರಶ್ನಿಸಿ ಕರ್ನಾಟಕ ಸರ್ಕಾರವು ಜೂನ್ 9ರಂದು ಮೇಲ್ಮನವಿ ಸಲ್ಲಿಸಿತ್ತು. ‘ಮೇಕೆದಾಟು ಯೋಜನೆಯನ್ನು ಪ್ರಶ್ನಿಸಿ ತಮಿಳುನಾಡು ಸಲ್ಲಿಸಿರುವ ಅರ್ಜಿಯ ವಿಚಾರಣೆ ಸುಪ್ರೀಂ ಕೋರ್ಟ್‌ನಲ್ಲಿ ಬಾಕಿ ಇರುವಾಗ ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡು ವಿಚಾರಣೆ ನಡೆಸುವ ಅಧಿಕಾರ ಎನ್‌ಜಿಟಿಗೆ ಇಲ್ಲ’ ಎಂದು 2021ರ ಜೂನ್ 17ರಂದು ಸುಪ್ರೀಂ ಕೋರ್ಟ್ ಆದೇಶ ಹೊರಡಿಸಿತ್ತು. ಈ ಆದೇಶವನ್ನು ಪ್ರಶ್ನಿಸಿ ತಮಿಳುನಾಡು ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದೆ.

ಕರ್ನಾಟಕ ಸರ್ಕಾರದ ವಾದವೇನು?

ಸುಪ್ರೀಂಕೋರ್ಟ್ ಆದೇಶದ ಮೇರೆಗೆ ಕಾವೇರಿ ನದಿ ನೀರಿನಲ್ಲಿ ಕರ್ನಾಟಕದ ಪಾಲಿನ 4.75 ಟಿಎಂಸಿ ಅಡಿ ನೀರು ಬಳಕೆ ಮಾಡಿಕೊಳ್ಳಲು ಡಿಪಿಆರ್ ಸಿದ್ಧಪಡಿಸಲಾಗಿದೆ. ಈ ನೀರನ್ನು ಬೆಂಗಳೂರಿನ ಜನರಿಗೆ ಕುಡಿಯುವ ನೀರು ಪೂರೈಸಲು ಬಳಸಲಾಗುವುದು. ತಮಿಳುನಾಡಿಗೆ ಹಂಚಿಕೆಯಾದ ನೀರನ್ನು ಚಾಚೂ ತಪ್ಪದೆ ಬಿಡಲಾಗುತ್ತಿದೆ. ಆದರೆ, ಕರ್ನಾಟಕದ ಪಾಲಿನ ನೀರು ಬಳಸಿಕೊಳ್ಳಲು ತಮಿಳುನಾಡು ಸರ್ಕಾರ ಅಡ್ಡಿ ಮಾಡುತ್ತಿರುವುದು ಸರಿಯಲ್ಲ. ಬೆಂಗಳೂರಿನಲ್ಲಿ 30 ರಾಜ್ಯಗಳ ಜನರು ಮತ್ತು ವಿದೇಶಿ ಪ್ರಜೆಗಳು ನೆಲೆಸಿದ್ದಾರೆ. ಸುಮಾರು 1.30 ಕೋಟಿ ಜನ ವಾಸವಿದ್ದಾರೆ. ಹೀಗಾಗಿ, ಯೋಜನೆಗೆ ಆಕ್ಷೇಪ ಎತ್ತಿರುವುದು ಸರಿಯಲ್ಲ.

ತಮಿಳುನಾಡು ಸರ್ಕಾರದ ವಾದವೇನು?

ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಸಭೆಯಲ್ಲಿ ಮೇಕೆದಾಟು ಬಗ್ಗೆ ಚರ್ಚಿಸುವ ನಿರ್ಧಾರವೇ ಆಘಾತಕಾರಿ ಮತ್ತು ಕಾನೂನುಬಾಹಿರ. ಈ ವಿಚಾರ ಸುಪ್ರೀಂ ಕೋರ್ಟ್‌ನಲ್ಲಿರುವಾಗ ಚರ್ಚಿಸಲು ಪ್ರಾಧಿಕಾರಕ್ಕೆ ಅಧಿಕಾರವಿಲ್ಲ. ಇದು ನ್ಯಾಯಾಂಗ ನಿಂದನೆಯಾಗಲಿದೆ. ಇದರ ವಿರುದ್ಧವೂ ಸುಪ್ರೀಂ ಕೋರ್ಟ್‌ನಲ್ಲಿ ಹೋರಾಟ ನಡೆಸಲಾಗುವುದು. ಕಾವೇರಿ ನದಿಗೆ ಅಡ್ಡಲಾಗಿ ಅಣೆಕಟ್ಟೆ ನಿರ್ಮಾಣಕ್ಕೆ ಅವಕಾಶ ನೀಡುವುದಿಲ್ಲ.

ಜಮೀರ್ ಬಂಗಲೆ, ಕಚೇರಿ: ಎಸಿಬಿ ದಾಳಿ

ಒಂದನೇ ಪುಟದಿಂದ

ಪ್ರತಿಭಟನೆ: ಜಮೀರ್ ಅವರ ಮನೆ, ಕಚೇರಿಗಳ ಮೇಲೆ ಎಸಿಬಿ ದಾಳಿ ನಡೆದಿರುವುದು ತಿಳಿಯುತ್ತಿದ್ದಂತೆ ನೂರಾರು ಮಂದಿ ಅವರ ಬೆಂಬಲಿಗರು ಕಂಟೋನ್ಮೆಂಟ್ ಬಳಿಯ ಶಾಸಕರ ನಿವಾಸದತ್ತ ದೌಡಾಯಿಸಿದರು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ದ್ವೇಷದ ರಾಜಕೀಯದ ಭಾಗವಾಗಿ ದಾಳಿ ನಡೆದಿದೆ ಎಂದು ಆರೋಪಿಸಿ ಪ್ರತಿಭಟನೆ ನಡೆಸಿದರು.

‘ಎಸಿಬಿ ದಾಳಿ ನಿರಂತರ ಪ್ರಕ್ರಿಯೆ’: ‘ಭ್ರಷ್ಟಾಚಾರಕ್ಕೆ ಸಂಬಂಧಿಸಿದ ಆರೋಪಗಳು ಬಂದಾಗ ಎಸಿಬಿ ಅಧಿಕಾರಿಗಳು ದಾಳಿ ನಡೆಸಿ, ತನಿಖೆ ಮಾಡುವುದು ನಿರಂತರ ಪ್ರಕ್ರಿಯೆ. ಅದಕ್ಕೆ ಕಾಂಗ್ರೆಸ್ ರಾಜಕೀಯ ಬಣ್ಣ ನೀಡುವುದು ಸರ್ವೇಸಾಮಾನ್ಯ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

‘ಬಾಕಿ ಇರುವ ಪ್ರಕರಣಗಳ ತನಿಖೆ ನಡೆಸುವಂತೆ ಹೈಕೋರ್ಟ್ ನಿರ್ದೇಶನ ನೀಡಿದೆ. ಸಾಕ್ಷ್ಯದ ಆಧಾರದಲ್ಲಿ ಎಸಿಬಿ ತನಿಖೆ ನಡೆಸುತ್ತಿದೆ. ಪ್ರತಿಭಟನೆ ಮಾಡಿ, ತನಿಖೆಗೆ ಅಡ್ಡಿಪಡಿಸುವುದು ಸರಿಯಲ್ಲ’ ಎಂದರು.

ಸಜೀವ ಗುಂಡು ಪತ್ತೆ

ಜಮೀರ್ ಪರವಾನಗಿ ಹೊಂದಿರುವ ರಿವಾಲ್ವರ್ ಹೊಂದಿದ್ದಾರೆ. ಅದಕ್ಕೆ ಬಳಸುವ 24 ಸಜೀವ ಗುಂಡುಗಳು ಅವರ ಬಳಿ ಇದ್ದವು. ಅವುಗಳನ್ನು ತನಿಖಾ ತಂಡ ಪರಿಶೀಲನೆ ನಡೆಸಿದೆ. ಪರವಾನಗಿ ಇರುವ ಕಾರಣ ಅದನ್ನು ಅವರಿಗೆ ಮರಳಿಸಲಾಗಿದೆ ಎಂಬ ಮಾಹಿತಿ ಲಭ್ಯವಾಗಿದೆ.

ಶೋಧಕ್ಕೆ ಸಹಕರಿಸಿದ ಜಮೀರ್: ಎಸಿಬಿ ಅಧಿಕಾರಿಗಳು ಶೋಧಕ್ಕಾಗಿ ಮನೆಯ ಬಾಗಿಲು ಬಡಿದಾಗ ಜಮೀರ್ ಅಹಮ್ಮದ್ ಮನೆಯಲ್ಲೇ ಇದ್ದರು. ಶೋಧನಾ ವಾರೆಂಟ್‌ಗೆ ಸಹಿ ಮಾಡಿದ ಅವರು, ಶೋಧಕ್ಕೆ ಸಂಪೂರ್ಣ ಸಹಕಾರ ನೀಡಿದರು ಎಂದು ಮೂಲಗಳು ತಿಳಿಸಿವೆ.

ಪ್ರಜಾವಾಣಿ DH DECCAN HERALD
ಡಿಎಚ್–ಪಿವಿ ಬಡ ವಿದ್ಯಾರ್ಥಿಗಳ ಶೈಕ್ಷಣಿಕ ನಿಧಿ
ದೇಣಿಗೆ ಕೊಟ್ಟವರ ವಿವರ

ಸಂ	ಹೆಸರು, ವಿಳಾಸ	ದೇಣಿಗೆ ₹ಗಳಲ್ಲಿ
1	**ವಸುಮತಿ,** ಬೆಂಗಳೂರು	20,000
2	**ಮುರಳೀಧರ ಜಿ,** ನಂ.11/2,4ನೇ ಮುಖ್ಯ ರಸ್ತೆ, 13ನೇ ಕ್ರಾಸ್, ವಿದ್ಯಾರಣ್ಯಪುರಂ, ಮೈಸೂರು	20,000
3	**ಮಂಜುಳಾದೇವಿ ಜಿ.,** ಬೆಂಗಳೂರು	20,000
4	**ಕೆ.ವಿಜಯಕುಮಾರ್,** ನಂ .37–38,ಕೌಸ್ತುಭ, ಸಪ್ತಗಿರಿ ಲೇಔಟ್,2ನೇ ಹಂತ, ಚನ್ನಸಂದ್ರ, ಕಾಡುಗೋಡಿ ಪೋಸ್ಟ್, ಬೆಂಗಳೂರು	10,000
5	**ಪ್ರೇಮಸುಧಾ ಎಂ.ಎಸ್.,** ನಂ.531136, ಜಯಭೀಮಾ, 6ನೇ ಕ್ರಾಸ್, ಕೆ.ಎಸ್.ಎನ್.ರಸ್ತೆ, ಲಕ್ಷ್ಮಣಪ್ಪ ಗಾರ್ಡನ್, ಬನಶಂಕರಿ 3ನೇ ಹಂತ, ಬೆಂಗಳೂರು	10,000
6	**ಶಶಿಧರ ಬಿ.ಎ.,** ನಂ.57, 4ನೇ ಕ್ರಾಸ್, 6ನೇ ಮೇನ್, ನವೋದಯನಗರ, ಜೆ.ಪಿ.ನಗರ 7ನೇ ಹಂತ, ಬೆಂಗಳೂರು	10,000
7	**ರಾಘವೇಂದ್ರ ಬಿ.** ,ಎಸ್–01, ಪರ್ಲ್ ಅಪಾರ್ಟ್‌ಮೆಂಟ್ಸ್, 5ನೇ ಕ್ರಾಸ್, ಎಂ.ಆರ್.ಗಾರ್ಡನ್, ಆರ್.ಟಿ.ನಗರ, ಬೆಂಗಳೂರು	10,000
8	**ಜಿ.ಶ್ರೀನಿವಾಸಮೂರ್ತಿ,** ನಂ.27, ಮಾತೃಕೃಪಾ, 2ನೇ ಮೇನ್, ವಿಜ್ಞಾನನಗರ, ಬೆಂಗಳೂರು	10,000
9	**ನಿಂಬಣ್ಣ ಸೋಡಾ,** ನೇಕಾರ ಕಾಲೊನಿ, ಓಲ್ಡ್ ಟೌನ್, ಹಗರಿಬೊಮ್ಮನಹಳ್ಳಿ, ವಿಜಯನಗರ ಜಿಲ್ಲೆ	5,001
10	**ರಾಘವೇಂದ್ರ ಲಿಂಗಪ್ಪ,** ಕುಂದಲಹಳ್ಳಿ, ಬೆಂಗಳೂರು	5,000
11	**ರಮಾನಂದ ಬಿ.ಎಸ್.,** ನಂ. 156–ಸಿ,7ನೇ ಕ್ರಾಸ್, 9ನೇ ಮೇನ್, ಬಿಇಎಂಎಲ್ ಲೇಔಟ್, 3ನೇ ಹಂತ, ಆರ್.ಆರ್.ನಗರ, ಬೆಂಗಳೂರು	4,000
12	**ಸಿದ್ಧಯ್ಯ ಕೆ.,** ನಂ.10, 6ನೇ ಬ್ಲಾಕ್, 1ನೇ ಮಹಡಿ, ಬಿಇಎಲ್ ಲೇಔಟ್, ವಿದ್ಯಾರಣ್ಯಪುರ, ಬೆಂಗಳೂರು	2,001
13	**ವೇಣುಗೋಪಾಲ ಟಿ.ವಿ.,** ಆರ್.ಟಿ.ನಗರ, ಬೆಂಗಳೂರು	2,001
14	**ಭಿಕ್ಕು ಗೋಪಾಲ ಶೆಟ್ಟಿ,** ಬೆಂಗಳೂರು	2,000
15	**ಪವಿತ್ರಾ ಎನ್.ರಾಯ್ಕರ್,** ಸುಬ್ರಹ್ಮಣ್ಯ ಕೃಪಾ, 60 ಅಡಿ ಮುಖ್ಯರಸ್ತೆ, 1ನೇ ಹಂತ, ಮೂರ್ತಿ ಸೈಕಲ್ ಶಾಪ್ ಹತ್ತಿರ, ವಿನೋಬಾನಗರ, ಶಿವಮೊಗ್ಗ	2,000
16	**ಪ್ರಸನ್ನ ರಾಮಸ್ವಾಮಿ,** ನಂ. 35, 9ನೇ ಮೇನ್, 2ನೇ ಕ್ರಾಸ್, ಆದಿತ್ಯನಗರ, ವಿದ್ಯಾರಣ್ಯಪುರ, ಬೆಂಗಳೂರು	2,000
17	**ಸುಜಾತಾ ಮಂಜುನಾಥ್,** 2ನೇ ಕ್ರಾಸ್, ಜೆ.ಸಿ.ಆರ್. ಬಡಾವಣೆ ಶ್ರೀಗುರು ಕೊಟ್ಟೂರೇಶ್ವರ ನಿಲಯ, ಚಿತ್ರದುರ್ಗ	2,000
18	**ಪ್ರಕಾಶ್‌ಬಾಬು ಎಸ್.,** ನಂ.579, ದೊಡ್ಡ ಒಕ್ಕಲಗೇರಿ, ಇರ್ವಿನ್ ರಸ್ತೆ, ಮೈಸೂರು	2,000
19	**ದಿನೇಶ ಜೆ.ವಿ.,** ನಂ.1080, 8ನೇ ಕ್ರಾಸ್, ಬನಶಂಕರಿ 1ನೇ ಹಂತ, ಬೆಂಗಳೂರು	2,000
20	**ಶ್ರೀನಿವಾಸ ಎಂ.ಎಸ್.,** ನಂ.9, 1ನೇ ಕ್ರಾಸ್, ಕೆಂಪಣ್ಣ ಬ್ಲಾಕ್, ಶೇಷಾದ್ರಿಪುರಂ ಮುಖ್ಯ ರಸ್ತೆ, ಬೆಂಗಳೂರು	2,000
21	**ಎಚ್.ಶಿವಕುಮಾರಸ್ವಾಮಿ,** ನಂ. 119/9, ಕಿತ್ತನಹಳ್ಳಿ, ಬೆಂಗಳೂರು	1,501
22	**ಟಿ.ಬಾಲಯ್ಯ,** ನಂ.7–4–80, ಗಾಜಗಾರಪೇಟೆ, ರಾಯಚೂರು	1,275
23	**ಕೃಷ್ಣಪ್ಪ ಬಿ.,** ಸರಕನೂರು, ನೆಲವಾಗಿಲು ಪೋಸ್ಟ್, ಹೊಸಕೋಟೆ	1,125
24	**ಶಂಕರ್ ಜಿ.,** 157/3, 7ನೇ ಕ್ರಾಸ್, 3ನೇ ಮೇನ್, ಚಾಮರಾಜಪೇಟೆ, ಬೆಂಗಳೂರು	1,100
25	**ಕೊಡಕ್ಕಲ್ ಶಿವಪ್ರಸಾದ್,** ಶಿವನಾಗ, 1ನೇ ಕ್ರಾಸ್, ಎನ್‌ಇಎಂ ಹೈಸ್ಕೂಲ್ ಎದುರು, ಗುಂಡಪ್ಪ ಶೆಡ್, ಶಿವಮೊಗ್ಗ	1,001
26	**ರಿತುಪಮಾ ಆರ್.,** ತವನಂದಿ, ಸೊರಬ ತಾಲ್ಲೂಕು, ಶಿವಮೊಗ್ಗ ಜಿಲ್ಲೆ	1,000
27	**ಎ.ಕೆ.ಅಪಸಂಗಿ,** ನಂ. 2487, ಇ ಬ್ಲಾಕ್, 13ನೇ ಮುಖ್ಯರಸ್ತೆ, 9ನೇ ಬಿ ಕ್ರಾಸ್, ಸಹಕಾರನಗರ, ಬೆಂಗಳೂರು	1,000
	ಇದುವರೆಗೆ ಸಂಗ್ರಹವಾದ ಮೊತ್ತ	5,73,755

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	113.80	27,302	2,916
ಹಾರಂಗಿ	2,859	2,854.37	9,497	12,866
ಕಬಿನಿ	2284.00	2262.70	14,700	1000
ಹೇಮಾವತಿ	2,922	2,910.54	9,464	250
ಲಿಂಗನಮಕ್ಕಿ	1,819	1762.10	39,262	903.96
ಸೂಪಾ (ಮೀ)	564	538.30	1,194	8,131
ಮಾಣಿ	594	572.98	8,066	-
ತುಂಗಭದ್ರಾ	1,633	1,615.69	22,536	257
ಮಲಪ್ರಭಾ	2079.5	2,053.30	194	194
ಘಟಪ್ರಭಾ	2175	2,089.76	3,490	7,096
ಭದ್ರಾ	186	158.6	30,167	133
ಆಲಮಟ್ಟಿ (ಮೀ)	519.6	513.37	12,684	451
ನಾರಾಯಣಪುರ (ಮೀ)	492.25	491.01	233.10	84.10

*ನೆಲಮಟ್ಟದಿಂದ

ಚಂದ್ರಶೇಖರ ಗುರೂಜಿ ಹತ್ಯೆ

ಒಂದನೇ ಪುಟದಿಂದ

ಗುರೂಜಿ ಆಪ್ತರಾಗಿದ್ದರು: ಕೆಲ ವರ್ಷಗಳ ಹಿಂದೆ ಚಂದ್ರಶೇಖರ ಗುರೂಜಿ ಅವರು ವಾಸ್ತು ಕುರಿತು ‘ಸರಳ ಜೀವನ’ ಟಿ.ವಿ ಚಾನೆಲ್ ಆರಂಭಿಸಿದ್ದರು. ಮಹಾಂತೇಶ ಹುಬ್ಬಳ್ಳಿಯಲ್ಲಿದ್ದ ಚಾನೆಲ್‌ನ ಕೇಂದ್ರ ಕಚೇರಿಯ ಹೆಡ್ ಆಗಿ ಮತ್ತು ಮಂಜುನಾಥ್ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದರು.

‘ಚಾನೆಲ್‌ನಲ್ಲಿದ್ದ ಮಹಿಳಾ ಉದ್ಯೋಗಿ ವನಜಾಕ್ಷಿ ಹಾಗೂ ಮಹಾಂತೇಶ ಅವರ ಮದುವೆಯನ್ನು ಗುರೂಜಿ ಅವರೇ ಮಾಡಿಸಿದ್ದರು. ದಂಪತಿ ಆಪ್ತರಾಗಿದ್ದ ಕಾರಣ, ಗುರೂಜಿ ತಮ್ಮ ಕೆಲವು ಆಸ್ತಿಯನ್ನು ಅವರ ಹೆಸರಿಗೆ ನೋಂದಣಿ ಮಾಡಿಸಿದ್ದರು. ಆರೋಪಿಗಳಿಬ್ಬರೂ ಚಾನೆಲ್ ಹೆಸರಿನಲ್ಲಿ ವಂಚಿಸಿದ ಆರೋಪದ ಮೇಲೆ, 2016ರಲ್ಲಿ ಇಬ್ಬರನ್ನೂ ಕೆಲಸದಿಂದ ಕಿತ್ತು ಹಾಕಿದ್ದರು’.

‘ನಂತರ ಮಹಾಂತೇಶ ಹೆಸರಿನಲ್ಲಿದ್ದ ಆಸ್ತಿ ಮಾರಾಟಕ್ಕೆ ಸಂಬಂಧಿಸಿದಂತೆ ಇವರಿಬ್ಬರ ನಡುವೆ ಭಿನ್ನಾಭಿಪ್ರಾಯ ಉಂಟಾಗಿತ್ತು. ಆಸ್ತಿಯನ್ನು ಮರಳಿಸುವಂತೆ ಮಹಾಂತೇಶ ಅವರ ಮೇಲೆ ತೀವ್ರ ಒತ್ತಡ ಹೇರಿದ್ದರು. ಇದೇ ಕಾರಣಕ್ಕಾಗಿ ಕೊಲೆ ನಡೆದಿರಬಹುದು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಒಂದೇ ಕಡೆ ವಾಸ: ಗುರೂಜಿ ಹಾಗೂ ಮಹಾಂತೇಶ ಅವರು ಹುಬ್ಬಳ್ಳಿಯ ಗೋಕುಲ್ ರಸ್ತೆಯ ಒಂದೇ ಅಪಾರ್ಟ್‌ಮೆಂಟ್‌ನಲ್ಲಿ ವಾಸವಾಗಿದ್ದರು. ಮಹಾಂತೇಶ ಮನೆ ನಂಬರ್ 308, ಗುರೂಜಿ ಮನೆ ನಂಬರ್ 008 ಎಂದು ಪೊಲೀಸರು ತಿಳಿಸಿದ್ದಾರೆ.

‘ಎಲ್ಲಾ ಆಯಾಮಗಳಿಂದಲೂ ಪ್ರಕರಣವನ್ನು ತನಿಖೆ ನಡೆಸಲಾಗುತ್ತಿದ್ದು, ಸದ್ಯದಲ್ಲೇ ಕೃತ್ಯಕ್ಕೆ ನಿಖರವಾದ ಕಾರಣ ಗೊತ್ತಾಗಲಿದೆ’ ಎಂದು ಹುಬ್ಬಳ್ಳಿ–ಧಾರವಾಡ ನಗರ ಪೊಲೀಸ್ ಕಮಿಷನರ್ ಲಾಭೂರಾಮ್ ಸುದ್ದಿಗಾರರಿಗೆ ತಿಳಿಸಿದರು.

ಅಂತ್ಯಕ್ರಿಯೆ ಇಂದು: ಚಂದ್ರಶೇಖರ ಗುರೂಜಿ ಅವರ ಅಂತ್ಯಕ್ರಿಯೆ ಬುಧವಾರ ಹುಬ್ಬಳ್ಳಿಯ ಸುಳ್ಳ ರಸ್ತೆಯಲ್ಲಿರುವ ಕುಟುಂಬದ ಹೊಲದಲ್ಲಿ ನಡೆಸಲು ಕುಟುಂಬದವರು ನಿರ್ಧರಿಸಿದ್ದಾರೆ.

‘ಬೆಳಿಗ್ಗೆ 10ಕ್ಕೆ ಗುರೂಜಿ ಅವರ ಪಾರ್ಥಿವ ಶರೀರವನ್ನು ಹೊಲದಲ್ಲೇ ಸಾರ್ವಜನಿಕರ ದರ್ಶನಕ್ಕೆ ಇಡಲಾಗುತ್ತದೆ. ನಂತರ ಮಧ್ಯಾಹ್ನ 1ಕ್ಕೆ ಅಂತ್ಯಕ್ರಿಯೆ ನೆರವೇರಿಸಲಾಗುವುದು’ ಎಂದು ಗುರೂಜಿ ಅವರ ಆಪ್ತರಾದ ಬಿಜೆಪಿ ಮುಖಂಡ ಮೋಹನ ಲಿಂಬಿಕಾಯಿ ತಿಳಿಸಿದರು.

ಗುರೂಜಿ ಹತ್ಯೆ; ಎಫ್‌ಐಆರ್‌ನಲ್ಲಿ ಏನಿದೆ?

‘ಸರಳ ವಾಸ್ತು ಸಂಸ್ಥೆಯಲ್ಲಿ ಅವ್ಯವಹಾರ ನಡೆಸಿದ್ದ ಕಾರಣಕ್ಕೆ ಮಹಾಂತೇಶ ಅವರನ್ನು ಚಂದ್ರಶೇಖರ ಗುರೂಜಿ ಕೆಲಸದಿಂದ ತೆಗೆದಿದ್ದರು. ಆ ಸಿಟ್ಟಿನಿಂದ ಹುಬ್ಬಳ್ಳಿ ಗೋಕುಲ ರಸ್ತೆ, ಜೆಸಿ ನಗರದಲ್ಲಿ ಗುರೂಜಿ ನಿರ್ಮಿಸಿರುವ ಅಪಾರ್ಟ್‌ಮೆಂಟ್‌ನಲ್ಲಿ ಪಾರ್ಕಿಂಗ್‌ಗೆ ಜಾಗ ಕೊಟ್ಟಿರಲಿಲ್ಲ ಹಾಗೂ ಸೋಲಾರ್ ವ್ಯವಸ್ಥೆ ಅಳವಡಿಕೆ ಮಾಡಿಲ್ಲ ಎಂದು ಮಹಾಂತೇಶ ಧಾರವಾಡ ಗ್ರಾಹಕರ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದರು. ಪ್ರಕರಣ ಹಿಂಪಡೆಯಲು ಗುರೂಜಿ ಅವರಲ್ಲಿ ಹಣ ಕೇಳುತ್ತಿದ್ದರು. ಆಗಾಗ ಜೀವ ಬೆದರಿಕೆ ಹಾಕಿ ಮಾನಸಿಕ ಹಿಂಸೆ ನೀಡುತ್ತಿದ್ದರು. ಹಣ ನೀಡದ ಹಿನ್ನೆಲೆಯಲ್ಲಿ ಹಾಗೂ ಕೆಲಸದಿಂದ ತೆಗೆದು ಹಾಕಿದ್ದರಿಂದ ಹತ್ಯೆ ಮಾಡಿದ್ದಾರೆ’ ಎಂದು ಗುರೂಜಿ ಅವರ ಸಹೋದರನ ಮಗ ಸಂಜಯ್ ಅಂಗಡಿ ವಿದ್ಯಾನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಇದೇ 10ಕ್ಕೆ ರಾಜ್ಯಕ್ಕೆ ದ್ರೌಪದಿ ಮುರ್ಮು

ಬೆಂಗಳೂರು: ಬಿಜೆಪಿ ನೇತೃತ್ವದ ಎನ್‌ಡಿಎ ರಾಷ್ಟ್ರಪತಿ ಅಭ್ಯರ್ಥಿ ದ್ರೌಪದಿ ಮುರ್ಮು ಅವರು ಇದೇ 10 ರಂದು ಮತ ಯಾಚನೆಗೆ ರಾಜ್ಯಕ್ಕೆ ಬರಲಿದ್ದು, ಜನಪ್ರತಿನಿಧಿಗಳ ಜೊತೆ ಸಭೆಗಳಲ್ಲಿ ಭಾಗವಹಿಸುವರು ಎಂದು ಬಿಜೆಪಿ ರಾಜ್ಯ ಉಪಾಧ್ಯಕ್ಷ ನಿರ್ಮಲ್‌ಕುಮಾರ್ ಸುರಾನ ತಿಳಿಸಿದ್ದಾರೆ. ಮತ ಯಾಚನೆಯ ಉದ್ದೇಶದಿಂದ ದ್ರೌಪದಿಯವರು ವಿವಿಧ ರಾಜ್ಯಗಳಲ್ಲಿ ಪ್ರವಾಸ ಆರಂಭಿಸಿದ್ದಾರೆ. ರಾಜ್ಯದಲ್ಲಿ ಜೆಡಿಎಸ್ ಕೂಡಾ ದ್ರೌಪದಿ ಅವರಿಗೆ ಬೆಂಬಲ ವ್ಯಕ್ತಪಡಿಸಿದೆ.

ಸುಧಾ, ಮಯೂರ ಓದಿರಿ

THE KARNATAKA STATE CRICKET ASSOCIATION (KSCA)
M. Chinnaswamy Stadium, Cubbon Road, Bangalore - 560 001.

TENDER NOTIFICATION

The KSCA invites sealed tenders for the following works at KSCA Hubli and Belgaum from GST compliant Contractors/Dealers who have completed similar works as follows: For work (a) KSEI class 1 electrical contractors for work (b) authorized dealers and (c) civil contractors.

1. Name of work (a) Proposed restaurant kitchen at KSCA Hubli. (HVAC, Electrical and PHE). Estimated Cost - Rs. 44.46 Lakhs plus taxes, EMD Rs. 45,000/- , Cost of tender form- Rs.2500/- plus GST (Non Refundable).
(b) Proposed restaurant kitchen at KSCA Belgaum. (HVAC, Electrical and PHE). Estimated Cost - Rs.52.57 Lakhs plus taxes, EMD Rs. 53,000/- Cost of tender form- Rs.10,000/- plus GST (Non Refundable).
2 Issue of tender form : 06-07-2022 to 20-07-2022
3 Pre-Bid meeting : 21-07-2022 by 12 p.m.
4 Last date of submission of filled tenders forms. : 26-07-2022 before 4:30 p.m.
5 Date of opening of tender: 5 p.m. on 26-07-2022. In case of delay, Contractors / Dealers would be informed.
6 Completion of work by : 45 days from the date of work order.

Tender documents may be obtained from the Office of the KSCA, by submitting a requisition in the company's letter head addressed to Hon. Secretary KSCA, between 11.00 a.m. to 5.00 p.m. on any working day. For any clarification on please contact Mr.H.A.Venkatesh Prasad, AGM Civil Engineering Dept, and Mobile No. 9945604515 /8150900022

Hon. Secretary
KSCA

(ಲೋಕೋಪಯೋಗಿ ಇಲಾಖೆ)
ಧಾರವಾಡ ವಿಭಾಗ, ಧಾರವಾಡ
ಕಾರ್ಯನಿರ್ವಾಹಕ ಇಂಜನೀಯರವರ ಕಛೇರಿ, ಲೋಕೋಪಯೋಗಿ ಇಲಾಖೆ, ಧಾರವಾಡ ವಿಭಾಗ, ಧಾರವಾಡ.

ಕ್ರಸಂ : ಕಾನಿಇಂಧಾ/ಪಿಬಿ–1/ಗುತ್ತಿಗೆ / 2022–23 / 2170 ದಿನಾಂಕ : – 02/07/2022.

I.F.T – KW –3
ಟೆಂಡರ ಪ್ರಕಟಣೆ

ಇ–ಪ್ರೊಕ್ಯೂರಮೆಂಟ್ ಟೆಂಡರ ಪ್ರಕಟಣೆ (ಸ್ಟ್ಯಾಂಡರ್ಡ ಡಾಕ್ಯುಮೆಂಟ್ ಮುಖಾಂತರ) ಕರ್ನಾಟಕ ರಾಜ್ಯಪಾಲರ ಪರವಾಗಿ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಗುತ್ತಿಗೆದಾರರಿಂದ ಈ ಕೆಳಗಿನ ಕಾಮಗಾರಿಗಳಿಗಾಗಿ – e-Proc– , ಸ್ಟ್ಯಾಂಡರ್ಡ ಡಾಕ್ಯುಮೆಂಟ್ ಮುಖಾಂತರ ಟೆಂಡರನ್ನು ಆಹ್ವಾನಿಸಲಾಗಿದೆ. ಅರ್ಹ ಸಿವಿಲ್ ಗುತ್ತಿಗೆದಾರರು ಇ–ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ www.eproc.karnataka.gov.in ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ ಮಾಹಿತಿ ಪಡೆಯಬಹುದು. ಕಾಮಗಾರಿಗಳ ಇನ್ನುಳಿದ ವಿವರಗಳು ಈ ಕೆಳಗಿನಂತಿವೆ.

ಕ್ರ ಸಂ.	ಕಾಮಗಾರಿಗಳ ಹೆಸರು	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ	ಭರ್ತಿ ಮಾಡಿದ ಟೆಂಡರ ಸ್ವೀಕರಿಸುವ ದಿನಾಂಕ	ತಾಂತ್ರಿಕ ಬಿಡ್ ತೆರೆಯುವ ದಿನಾಂಕ	ಆರ್ಥಿಕ ಬಿಡ್ ತೆರೆಯುವ ದಿನಾಂಕ
1	2	3	4		6
	ಲೆಕ್ಕ ಶೀರ್ಷಿಕೆ 3054				
2	Improvements to road by Flood damage from SH-73 Jublee circle to SH – 28 (Dasanakoppa Cross) in Dharwad taluka (CH. 0.247 to 0.510). (Work Indent No. 154075).	85.00	13/07/2022	14/07/2022	15/07/2022
3	Improvements to road by Flood damage from Saptapur Tollnaka (KCD Circle) to Chakra ghatta (SH-28) in Dharwad taluka (CH.0.247 to 0.385). (Work Indent No.154 076).	71.00	13/07/2022	14/07/2022	15/07/2022

ಸಹಿ/– (ಶ್ರೀ. ಟಿ.ಎಸ್. ಮುರಳೀಧರ)
ಕಾರ್ಯನಿರ್ವಾಹಕ ಇಂಜನೀಯರರು ಲೋಕೋಪಯೋಗಿ ಇಸಲಾಖೆ,
ಧಾರವಾಡ ವಿಭಾಗ, ಧಾರವಾಡ.

ವಾ.ಸಾ.ಇ/ಧಾ/306/2022–23/ದೇಶಪಾಂಡೆಪಬ್ಲಿಸಿಟಿ

ಕೋವಿಡ್–19 – ಗಾಬರಿಯಾಗಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ–ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರ ಕಚೇರಿ
ಪಂಚಾಯತರಾಜ್ ಇಂಜಿನೀಯರಿಂಗ್ ವಿಭಾಗ, ಹಾವೇರಿ

ಸಂ/ಪಂ.ರಾ.ಇಂ./ವಿ.ಹಾ/ಪಿ.ಬಿ–4/ಟೆಂಡರ್/2022–23/1537 ದಿನಾಂಕ:02–07–2022.

(ಟೆಂಡರ್ ಪ್ರಕಟನೆ 1 ಮತ್ತು 2ನೇ ಕರೆ)
(E-Gok ಇ–ಪ್ರಾಕ್ಯೂರ್‌ಮೆಂಟ್ ಮುಖಾಂತರ ಮಾತ್ರ)

ವಿವಿಧ ಲೆಕ್ಕ ಶೀರ್ಷಿಕೆಯಡಿ ಮಂಜೂರುಗೊಂಡ ಹಾನಗಲ್ಲ ರಾಣೇಬೆನ್ನೂರು/ಬ್ಯಾಡಗಿ ತಾಲೂಕಿನ ಕಾಮಗಾರಿಗಳಿಗೆ ಈ ಕೆಳಕಂಡಂತೆ ಟೆಂಡರ್ ಆಹ್ವಾನಿಸಲಾಗಿದೆ.

1) ಬಾಳಂಬೀಡ – ಕಾಲ್ವೆಯಲ್ಲಾಪುರಕ್ಕೆ (I.No 91105/call–2 (2) ಆಲದಕಟ್ಟಿ– ಹೊಂಕಣ ರಸ್ತೆಯಿಂದ ಬಾಳಂಬೀಡ –ಸುರಳೇಶ್ವರ(I.No 91189) call–2 (3) ಹಾನಗಲ್ಲ–ಹಾವೇರಿ ರಸ್ತೆಯಲ್ಲಿ ಹಾವಣಗಿ ಕ್ರಾಸಿನಿಂದ ಬಾಳಂಬೀಡ –ಸರಳೇಶ್ವರ (I.No 91194) call–2 (4) ಹರಿಹರ–ಸಮ್ಮಸಗಿ ರಸ್ತೆಯ ಚಿಕ್ಕಾಂಶಿಯಿಂದ ಶಂಕ್ರಿಕೊಪ್ಪ (I.No 91204) /call–2 (5) ಹಾನಗಲ್ಲ ಗೊಟಗೋಡಿ – ಹುಣಶೆಟ್ಟಿಕೊಪ(I.No 91225) call–2 6) ಯತ್ತಿನಹಳ್ಳಿ ಎಂ.ಟಿ ಗ್ರಾಮದಿಂದ ಪುರಪುಂಡಿಕೊಪ್ಪ(I.No 91227 SC)/call–2 (7) ಕೆಲವರಕೊಪ್ಪ – ಘಾಳಪೂಜಿ(I. No 91231 ST calli-2 (8) ಮಕರವಳ್ಳಿ – ಗೊಂದಿ (I.No 91233)call–2 (9) ಹಾನಗಲ್ಲ –ಬೊಮ್ಮನಹಳ್ಳಿ ರಸ್ತೆಯಿಂದ ಹನುಮಸಾಗರ ಮತ್ತು ನೆಲ್ಲಿಕೊಪ್ಪ ಮಾರ್ಗವಾಗಿ ತಡಸ ಗೊಂದಿ (I.No 91303 SC/call–2) (10) ತಿಳವಳ್ಳಿ ಗ್ರಾಮದಿಂದ ಕಿರವಾಡಿ–ಯತ್ತಿನಹಳ್ಳಿ(I.No 91304) call–2 (11) ಮಲಗುಂದ ಗ್ರಾಮದ ವೀರಭದ್ರೇಶ್ವರ ದೇವಸ್ಥಾನದಿಂದ ಕೋಡಿ ಆಲದಮರದವರೆಗೆ (I.No 91305) call–2 (12) ಡೊಳ್ಳೇಶ್ವರ ಕ್ರಾಸ್‌ನಿಂದ ಅಂಬಾ ಭವಾನಿ ದೇವಸ್ಥಾನ (I.No 91306)/call–2 (13) ಕೂಡಲ ಗ್ರಾಮದ ಜಯಣ್ಣ ಸಂಗನಗೌಡ್ರ ಮನೆಯಿಂದ ಪ್ರಾಥಮಿಕ ಶಾಲೆಯ ಮುಖ್ಯ ರಸ್ತೆ (I.No 91054) call–2 (14) ಕ್ಯಾಸನೂರ ಗ್ರಾಮದ ಶಿವಪ್ಪ ನಾಗಪ್ಪ ದಡ್ಡಿಕೊಪ್ಪ ಮನೆಯಿಂದ ಕುಮಾರೇಶ್ವರ ದೇವಸ್ಥಾನ (I.No 91055)call–2 (15) ಬೈಲವಾಳ–ಆರೇಗೊಪ್ಪ ಗ್ರಾಮದ ಅಂಬೇಡ್ಕರ ಭವನದಿಂದ ಯಲ್ಲವ್ವ ಹರಿಜನ ಮನೆ(.No 91056 SC) call-2 (16) ತಿಳವಳ್ಳಿ ಗ್ರಾಮದ ಪಿ.ಡಬ್ಲ್ಯೂಡಿ ರಸ್ತೆಯಿಂದ ಮಠದ (I.No 91091) call–2 (17) ಕೂಸನೂರು ಗ್ರಾಮದ ಪಾದಗಟ್ಟಿಯಿಂದ ಮಾರುತಿ ದೇವಸ್ಥಾನ(I.No 91093) call–2 (18) ಅಡೂರು ಗ್ರಾಮದಲ್ಲಿ ನೂರಸಾಬ ಮನೆಯಿಂದ ಭಜಂತ್ರಿಯವರ ಮನೆ(I.No 91097)/call–2 (19) ಯರೇಕುಪಿ ಗ್ರಾಮದ ವಿವರ ಕಾಲೋನಿಯಗಳಲ್ಲಿ ಸಿಸಿ ರಸ್ತೆ ಪಕ್ಕಾಗಟಾರ (ಬಕಾ) (I.No 91612) (20) ಸರವಂದ ಗ್ರಾಮದ ವಿವಿಧ ಕಾಲೋನಿಯಗಳಲ್ಲಿ ಸಿ.ಸಿ ರಸ್ತೆ ಪಕ್ಕಾಗಟಾರ (ಬ.ಕಾ) (I.No 91613) (21)ಮೋಟೆಬೆನ್ನೂರ–ಅಳಲಗೇರಿ ಕೂಡು ರಸ್ತೆಯಿಂದ ಬನ್ನಿಹಟ್ಟಿಯವರ ತೋಟದವರೆಗಿನ ರಸ್ತೆ (I.No 91614)SC

1) ಇ–ಪ್ರಕ್ಯೂರಮೆಂಟ್ ಮೂಲಕ ಟೆಂಡರಗಳನ್ನು ಡೌನಲೋಡ್ ಮಾಡುವ ದಿನಾಂಕ : 02–07–2022
2) ಇ–ಪ್ರಕ್ಯೂರಮೆಂಟ್ ಮೂಲಕ ಭರ್ತಿಮಾಡಿದ ಟೆಂಡರಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ : 11–07–2022 16:00 ಗಂಟೆವರೆಗೆ
3) ಇ–ಪ್ರೋಕ್ಯೂರಮೆಂಟ್ ತಾಂತ್ರಿಕ ಮತ್ತು ಆರ್ಥಿಕ ಬಿಡ್ ತೆರೆಯುವ (ಸಾಧ್ಯವಾದಲ್ಲಿ ದಿನಾಂಕ (ಕ್ರಸಂ 1, 6 ರಿಂದ 18ಕ್ಕೆ ಆರ್ಥಿಕ ಬಿಡ್)& (ಕ್ರಸಂ 2 ರಿಂದ 5ಕ್ಕೆ ತಾಂತ್ರಿಕ ಬಿಡ್) : 12–07–2022 17:00 ಗಂಟೆಗೆ
4) ಇ–ಪ್ರೊಕ್ಯೂರಮೆಂಟ್ ತಾಂತ್ರಿಕ ಮತ್ತು ಆರ್ಥಿಕ ಬಿಡ್ ತೆರೆಯುವ (ಸಾಧ್ಯವಾದಲ್ಲಿ) ದಿನಾಂಕ (ಕ್ರಸಂ 2 ರಿಂದ 5ಕ್ಕೆ ಆರ್ಥಿಕ ಬಿಡ್) : 15–07–2022 11:00 ಗಂಟೆಗೆ

ಟೆಂಡರ್ ನಲ್ಲಿಯ ನಿಬಂಧನೆಗಳನ್ನು ಹಾಗೂ ಷರತ್ತುಗಳ ವಿವರಗಳನ್ನು E-Gok-ಇ–ಪ್ರಕ್ಯೂರ್‌ಮೆಂಟ್ ಪ್ಲಾಟ್ ಫಾರಂನಲ್ಲಿ www.eproc.karnataka.gov.in ರಲ್ಲಿ ಪಡೆಯಬಹುದು ಹಾಗೂ ವಿಭಾಗ ಕಚೇರಿಯಲ್ಲಿ ಹೆಚ್ಚಿನ ಮಾಹಿತಿಯಲ್ಲಿಪಡೆಯತಕ್ಕದ್ದು.

ಸಹಿ/–
ಕಾರ್ಯನಿರ್ವಾಹಕ ಇಂಜಿನೀಯರ್,
ಪಂ.ರಾ.ಇಂ.ವಿಭಾಗ, ಹಾವೇರಿ

ವಾ.ಸಾ.ಇ/ಧಾ/133/2022–23/ದೇಶಪಾಂಡೆಪಬ್ಲಿಸಿಟಿ

ಸುಭಾಷಿತ

ಮನದಲ್ಲಿ ನೆನೆವಂಗೆ ಮನೆಯೇನು ಮಠವೇನು, ಮನದಲ್ಲಿ ನೆನೆಯದಿರುವವನು ದೇಗುಲದ ಕೊನೆಯಲ್ಲಿದ್ದೇನು?

-ಸರ್ವಜ್ಞ

ನಾಟಕ ಪ್ರದರ್ಶನಕ್ಕೆ ಅಡ್ಡಿ ಕಿಡಿಗೇಡಿಗಳಿಗೆ ಕಡಿವಾಣ ಅಗತ್ಯ

'ಜತೆಗಿರುವನು ಚಂದಿರ' ನಾಟಕ ಪ್ರದರ್ಶನಕ್ಕೆ ಶಿವಮೊಗ್ಗ ಜಿಲ್ಲೆಯ ಆನವಟ್ಟಿಯಲ್ಲಿ ಎದುರಾಗಿರುವ ವಿರೋಧವು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕುವ ಪ್ರಯತ್ನ ಹಾಗೂ ಧಾರ್ಮಿಕ ಸಾಮರಸ್ಯ ಪರಂಪರೆಗೆ ಧಕ್ಕೆ ಉಂಟುಮಾಡುವಂತಹುದು. 'ಮುಸ್ಲಿಂ ಪ್ರಧಾನ ಕಥಾಹಂದರ ಹೊಂದಿದೆ' ಎನ್ನುವ ಕಾರಣಕ್ಕಾಗಿ ಬಜರಂಗದಳ ಹಾಗೂ ಆರ್‌ಎಸ್‌ಎಸ್ ಕಾರ್ಯಕರ್ತರು ನಾಟಕ ಪ್ರದರ್ಶನಕ್ಕೆ ಅಡ್ಡಿಪಡಿಸಿದ್ದಾರೆ. 'ದೇಶದಲ್ಲಿ ಹಿಂದೂ– ಮುಸ್ಲಿಂ ಗಲಾಟೆ ನಡೆಯುತ್ತಿರುವಾಗ ಮುಸ್ಲಿಮರೇ ಪ್ರಧಾನವಾಗಿರುವ ನಾಟಕ ಪ್ರದರ್ಶನ ಸರಿಯಲ್ಲ' ಎನ್ನುವುದು ಪ್ರತಿಭಟಿಸಿರುವ ಸಂಘಟನೆಗಳ ಕಾರ್ಯಕರ್ತರ ವಾದ. 'ನಾಟಕವನ್ನು ಸಂಪೂರ್ಣ ನೋಡಿದ ನಂತರ ಚರ್ಚಿಸಿ' ಎನ್ನುವ ಸಂಘಟಕರ ವಿನಂತಿಯನ್ನು ಒಪ್ಪದ ಪ್ರತಿಭಟನಕಾರರು, ನಾಟಕ ನೋಡಲು ಬಂದ ಪ್ರೇಕ್ಷಕರನ್ನು ರಂಗಮಂದಿರದಿಂದ ಒತ್ತಾಯಪೂರ್ವಕವಾಗಿ ಹೊರಗೆ ಕಳಿಸಿದ್ದಾರೆ. ಮಾರ್ಚ್‌ ತಿಂಗಳಲ್ಲಿ ನಡೆದ ಶಿವಮೊಗ್ಗದ ಮಾರಿಕಾಂಬಾ ಜಾತ್ರೆಯಲ್ಲಿ ಮುಸ್ಲಿಂ ವ್ಯಾಪಾರಿಗಳಿಗೆ ದೇವಸ್ಥಾನದ ಪರಿಸರದಲ್ಲಿ ಮಳಿಗೆ ಹಾಕಲು ಅವಕಾಶ ನಿರಾಕರಿಸಲಾಗಿತ್ತು. ಈಗ, ಶಿವಮೊಗ್ಗ ಪರಿಸರದಲ್ಲಿ ಮುಸ್ಲಿಮರ ವಿರುದ್ಧದ ಅಸಹನೆಯ ಮತ್ತೊಂದು ನಿದರ್ಶನವು ನಾಟಕ ಪ್ರದರ್ಶನಕ್ಕೆ ವಿರೋಧದ ರೂಪದಲ್ಲಿ ವ್ಯಕ್ತವಾಗಿದೆ. ಬೇಕರಿಯಲ್ಲಿ ಕೆಲಸ ಮಾಡುವ ವ್ಯಕ್ತಿ ಹಾಗೂ ಆತನ ಕುಟುಂಬದ ಕಥೆಯನ್ನೊಳಗೊಂಡ ನಾಟಕ 'ಜತೆಗಿರುವನು ಚಂದಿರ'. ಸಾಹಿತ್ಯ ಮತ್ತು ಸಂಗೀತ ಹದವಾಗಿ ಮಿಳಿತಗೊಂಡಿರುವ ಈ ರಂಗಕೃತಿ, ದೇಶದ ಏಕತೆಗೆ ಪೂರಕವಾಗಿರುವುದನ್ನು ಅನೇಕ ಸಹೃದಯರು ಗುರುತಿಸಿದ್ದಾರೆ. ಭಾರತೀಯರೆಲ್ಲರೂ ಒಂದೇ ಎನ್ನುವ ಸಂದೇಶವನ್ನು ಸಾರುವ ನಾಟಕ ಪ್ರದರ್ಶನಕ್ಕೆ ಅಡ್ಡಿ ಉಂಟುಮಾಡಿರುವುದನ್ನು ಗಮನಿಸಿದರೆ, ಸಮಾಜದಲ್ಲಿ ಒಡಕು ಉಂಟು ಮಾಡುವುದು ಪ್ರತಿಭಟನಕಾರರ ಉದ್ದೇಶ ಎಂದು ಭಾವಿಸಬೇಕಾಗುತ್ತದೆ. ಸೃಜನಶೀಲ ಕಲಾಕೃತಿಯೊಂದನ್ನು ಮುಸ್ಲಿಂ ಪ್ರಧಾನ ಅಥವಾ ಹಿಂದೂ ಪ್ರಧಾನ ಎಂದು ನೋಡುವುದು ಸರಿಯಾದ ಸಾಮಾಜಿಕ ನಡವಳಿಕೆಯಲ್ಲ, ಕಲಾಸ್ವಾದನೆಯ ರೀತಿಯೂ ಅಲ್ಲ. ಧರ್ಮದ ಹೆಸರಿನಲ್ಲಿ ನಡೆಯುವ ವಿಭಜನೆಗಳ ಅಪಾಯಕಾರಿ ಪ್ರಯತ್ನಗಳು ಸಂವಿಧಾನದ ಮೂಲ ಆಶಯಗಳಿಗೆ ವಿರುದ್ಧವಾದವು.

ಸಮಾಜವನ್ನು ವಿಭಜಿಸುವ ಪ್ರಯತ್ನಗಳನ್ನು ಮೊಳಕೆಯಲ್ಲೇ ಚಿವುಟದಿದ್ದರೆ, ಸೃಜನಶೀಲ ಚಟುವಟಿಕೆಗಳನ್ನು ಹತ್ತಿಕ್ಕುವ ಪ್ರಯತ್ನಗಳು ಮರುಕಳಿಸಲು ಅವಕಾಶ ಕಲ್ಪಿಸಿದಂತೆ ಆಗುತ್ತದೆ

ಅಮೆರಿಕದ ನಾಟಕಕಾರ ಜೋಸೆಫ್ ಸ್ಟೀನ್ ಅವರ 'ಫಿಡ್ಲರ್ ಆನ್ ದಿ ರೂಫ್' ನಾಟಕವನ್ನು 'ಜತೆಗಿರುವನು ಚಂದಿರ' ಹೆಸರಿನಲ್ಲಿ ಕನ್ನಡಕ್ಕೆ ಜಯಂತ ಕಾಯ್ಕಿಣಿ ರೂಪಾಂತರಿಸಿದ್ದಾರೆ. ಕಳೆದ ಇಪ್ಪತ್ತು ವರ್ಷಗಳಲ್ಲಿ ಈ ನಾಟಕದ ನೂರಾರು ಪ್ರದರ್ಶನಗಳು ರಾಜ್ಯದ ವಿವಿಧ ಭಾಗಗಳಲ್ಲಿ ನಡೆದಿವೆ. ಸಾವಿರಾರು ಸಹೃದಯರು ರಂಗಪ್ರಯೋಗಗಳನ್ನು ನೋಡಿ ಮೆಚ್ಚಿಕೊಂಡಿದ್ದಾರೆ. ಈವರೆಗೆ ನಾಟಕ ನೋಡಿದ ಯಾರೊಬ್ಬರೂ ರಂಗಕೃತಿಯ ಬಗ್ಗೆ ವಿರೋಧ ವ್ಯಕ್ತಪಡಿಸಿಲ್ಲ. ಈಗ ಇದ್ದಕ್ಕಿದ್ದಂತೆ ಅಸಹನೆಯ ರೂಪದಲ್ಲಿ ನಾಟಕಕ್ಕೆ ವಿರೋಧ ಎದುರಾಗಿದೆ. ಕೆಲವರ ಈ ಅಸಹನೆಯನ್ನು ಮುಸ್ಲಿಂ ವಿರೋಧದ ರೂಪದಲ್ಲಷ್ಟೇ ನೋಡದೆ, ಆರೋಗ್ಯಕರ ಸಮಾಜಕ್ಕೆ ಎದುರಾಗಿರುವ ಕಂಟಕದಂತೆ ಪರಿಗಣಿಸಬೇಕು. ಈ ಘಟನೆಯನ್ನು ನಾಟಕವೊಂದರ ಪ್ರದರ್ಶನಕ್ಕೆ ಉಂಟಾದ ಅಡ್ಡಿ ಅಥವಾ ಲೇಖಕರೊಬ್ಬರ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಉಂಟಾದ ಧಕ್ಕೆ ಎಂದಷ್ಟೇ ಭಾವಿಸುವಂತಿಲ್ಲ. ಇದು ಸಮಾಜದಲ್ಲಿ ಧಾರ್ಮಿಕ ಅಸಹಿಷ್ಣುತೆಯನ್ನು ಮೂಡಿಸಲು ಕೆಲವರು ಪ್ರಯತ್ನಿಸುತ್ತಿರುವುದರ ಸಂಕೇತ. ಧರ್ಮ, ಜಾತಿ ಹಾಗೂ ಭಾಷೆಯ ನೆಪದಲ್ಲಿ ಸಮಾಜವನ್ನು ವಿಭಜಿಸುವ ಪ್ರಯತ್ನಗಳು ನಡೆಯುತ್ತಿವೆ. ಇಂಥ ಪ್ರಯತ್ನಗಳನ್ನು ಮೊಳಕೆಯಲ್ಲೇ ಚಿವುಟದೆ ಹೋದರೆ, ಬೇರೆ ಬೇರೆ ಕಾರಣಗಳೊಡ್ಡಿ ಸೃಜನಶೀಲ ಚಟುವಟಿಕೆಗಳನ್ನು ಹತ್ತಿಕ್ಕುವ ಪ್ರಯತ್ನಗಳು ಮತ್ತೆ ಮತ್ತೆ ನಡೆಯಲು ಅವಕಾಶ ಕಲ್ಪಿಸಿದಂತಾಗುತ್ತದೆ.

ಕರ್ನಾಟಕದ ರಂಗಭೂಮಿ ತನ್ನ ಪ್ರಬುದ್ಧತೆ ಹಾಗೂ ಪ್ರಯೋಗಶೀಲ ಗುಣದಿಂದಾಗಿ ದೇಶದ ಗಮನಸೆಳೆದಿದೆ. ಜಾತ್ಯತೀತ ಪರಂಪರೆಯನ್ನು ಹೊಂದಿರುವ ಕರ್ನಾಟಕದ ರಂಗಭೂಮಿ, ಸಾಮಾಜಿಕ ಜಾಗೃತಿಯ ಉದ್ದೇಶಕ್ಕಾಗಿಯೂ ಬಳಕೆಯಾಗಿದೆ. ಈ ಉದಾತ್ತ–ಸೌಹಾರ್ದ ಪರಂಪರೆಗೆ ಆನವಟ್ಟಿಯ ಘಟನೆ ಕಪ್ಪುಚುಕ್ಕಿಯಂತಿದೆ. ಯಾವುದನ್ನು ಪ್ರದರ್ಶಿಸಬೇಕು, ಯಾವುದನ್ನು ಪ್ರದರ್ಶಿಸಬಾರದು ಎಂದು ನಿರ್ಬಂಧ ಹೇರುವವರನ್ನು ಹಾಗೂ ರಂಗಭೂಮಿಗೆ ಸೆನ್ಸಾರ್ ಹೇರಲು ಹವಣಿಸುವವರನ್ನು ಸಾಂಸ್ಕೃತಿಕ ವಲಯ ಗಂಭೀರವಾಗಿ ಪರಿಗಣಿಸಬೇಕು. 'ಜತೆಗಿರುವನು ಚಂದಿರ' ನಾಟಕ ಪ್ರದರ್ಶನಕ್ಕೆ ಎದುರಾದ ವಿರೋಧವನ್ನು ಪ್ರಜಾಪ್ರಭುತ್ವ ವ್ಯವಸ್ಥೆಯ ಬಗ್ಗೆ ನಂಬಿಕೆಯುಳ್ಳ ಎಲ್ಲರೂ ಒಕ್ಕೊರಲಿನಿಂದ ಖಂಡಿಸಬೇಕು. ಸಾಮಾಜಿಕ ಸೌಹಾರ್ದವನ್ನು ಕದಡುವ ಇಂಥ ಪ್ರಯತ್ನಗಳು ನಡೆದಾಗ ಮುಖ್ಯಮಂತ್ರಿ ಹಾಗೂ ಗೃಹಮಂತ್ರಿ ತಕ್ಷಣ ಪ್ರತಿಕ್ರಿಯಿಸುವುದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಗತ್ಯ. ಸಣ್ಣಪುಟ್ಟ ಘಟನೆಗಳೆಂದು ನಿರ್ಲಕ್ಷಿಸುವುದು ಅಥವಾ ಮೌನವಾಗಿ ಉಳಿಯುವುದು, ಸಮಾಜಘಾತುಕ ಶಕ್ತಿಗಳು ಬಲಗೊಳ್ಳಲು ಪ್ರೇರಣೆ ನೀಡಿದಂತಾಗುತ್ತದೆ. ಕಾನೂನನ್ನು ಕೈಗೆತ್ತಿಕೊಂಡು ಜನಸಾಮಾನ್ಯರಲ್ಲಿ ಆತಂಕ ಹಾಗೂ ತಪ್ಪು ತಿಳಿವಳಿಕೆ ಮೂಡಿಸಲು ಪ್ರಯತ್ನಿಸುವವರ ವಿರುದ್ಧ ಸರ್ಕಾರ ಕಠಿಣ ಕಾನೂನುಕ್ರಮ ಜರುಗಿಸಬೇಕು. ಆನವಟ್ಟಿ ಪ್ರಕರಣಕ್ಕೆ ಸಂಬಂಧಿಸಿದಂತೆ ಸರ್ಕಾರ ಸ್ವಯಂಪ್ರೇರಿತವಾಗಿ ಪ್ರಕರಣ ದಾಖಲಿಸುವ ಮೂಲಕ, ಧರ್ಮದ ಹೆಸರಿನಲ್ಲಿ ಸಾಮಾಜಿಕ ಸೌಹಾರ್ದ ಕದಡಲು ಪ್ರಯತ್ನಿಸುವವರಿಗೆ ಎಚ್ಚರಿಕೆಯ ಕಠಿಣ ಸಂದೇಶ ರವಾನಿಸಬೇಕು.

ದಿನದ ಟ್ವೀಟ್

ಬದಲಾವಣೆ ಆಗಬೇಕಾದರೆ...

ನ್ಯಾಯಮೂರ್ತಿ ಸಂದೇಶ್ ಅಂತಹವರು ನಮಗೆ ಹೆಚ್ಚಿನ ಸಂಖ್ಯೆಯಲ್ಲಿ ಬೇಕು. ಕೆಳ ಹಂತದಿಂದ ಮೇಲಿನ ಹಂತದವರೆಗೂ ಇಡೀ ಸರ್ಕಾರ ಭ್ರಷ್ಟವಾಗಿದೆ. ಇದರ ವಿರುದ್ಧ ಹೋರಾಡುವವರಿಗೆ ಜನರು ಒಗ್ಗೂಡಿ ಸಂಪೂರ್ಣ ಬೆಂಬಲ ನೀಡದ ವಿನಾ ಯಾವ ಬದಲಾವಣೆಯೂ ಆಗದು.

ರಾಜೇಶ್, ವಕೀಲ

ಕಿಡಿನುಡಿ

ಭಾರತದಲ್ಲಿ 'ಭಯೋತ್ಪಾದನೆ' ಆರೋಪಕ್ಕೆ ಗುರಿಯಾದ ಅತ್ಯಂತ ಹಿರಿಯ ವ್ಯಕ್ತಿ, 84 ವರ್ಷದ ಹೋರಾಟಗಾರ ಸ್ಟ್ಯಾನ್ ಸ್ವಾಮಿ ಅವರನ್ನು ಸೆರೆಮನೆಗೆ ಕಳುಹಿಸಲಾಯಿತು, ಪ್ರಾಥಮಿಕ ಆರೋಗ್ಯ ಸೌಲಭ್ಯ ಮತ್ತು ಜಾಮೀನನ್ನೂ ನಿರಾಕರಿಸಲಾಯಿತು, ಅವರು 2021ರ ಜುಲೈ 5 ರಂದು ಸಾವಿಗೀಡಾದರು. ಇದು, ವ್ಯವಸ್ಥೆಯೇ ಮಾಡಿದ ಹತ್ಯೆ. ನ್ಯಾಯಾಲಯವು ಅವರನ್ನು ದೋಷಮುಕ್ತಗೊಳಿಸುವ ಮೂಲಕ ಅವರ ಆತ್ಮಕ್ಕೆ ಶಾಂತಿ ಸಿಗುವಂತೆ ಮಾಡಬೇಕು.

ಕವಿತಾ ಶ್ರೀವಾಸ್ತವ, ಮಾನವ ಹಕ್ಕು ಕಾರ್ಯಕರ್ತೆ

25 ವರ್ಷಗಳ ಹಿಂದೆ

ಭಾನುವಾರ, 6-7-1997

• ಲಾಲೂ ನೇತೃತ್ವದ ಹೊಸ ಪಕ್ಷ ರಾಷ್ಟ್ರೀಯ ಜನತಾದಳ ಉದಯ

ನವದೆಹಲಿ, ಜುಲೈ 5 (ಪಿಟಿಐ, ಯುಎನ್‌ಐ)– ಲಾಲೂ ಪ್ರಸಾದ್ ಯಾದವ್ ಮತ್ತು ಅವರ ಬೆಂಬಲಿಗರು ಇಂದು 'ರಾಷ್ಟ್ರೀಯ ಜನತಾದಳ' ಎಂಬ ಹೊಸ ಪಕ್ಷವನ್ನು ಘೋಷಿಸಿದ್ದರಿಂದಾಗಿ ಜನತಾದಳ ನಿರೀಕ್ಷೆಯಂತೆ ಇಬ್ಭಾಗವಾಯಿತು. ಲಾಲೂ ಪ್ರಸಾದ್ ನೂತನ ಪಕ್ಷದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ದೆಹಲಿಯಲ್ಲಿ ಇಂದು ನಡೆದ ಪರ್ಯಾಯ ಸಮಾವೇಶದಲ್ಲಿ ಹೊಸ ಪಕ್ಷದ ರಚನೆಯನ್ನು ಪ್ರಕಟಿಸಲಾಯಿತು. ಲಾಲೂ ಅವರ ಹೆಸರನ್ನು ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ತಮಿಳುನಾಡಿನ ಪ್ರತಿನಿಧಿಯೊಬ್ಬರು ಸೂಚಿಸಿದಾಗ ಸಮಾವೇಶ ಒಕ್ಕೊರಲಿನಿಂದ ಅದಕ್ಕೆ ಸಮ್ಮತಿಯನ್ನು ಸೂಚಿಸಿತು. ಸಮಾವೇಶವನ್ನು ಲಾಲೂ ಪ್ರಸಾದ್ ಉದ್ಘಾಟಿಸಿದರು.

50 ವರ್ಷಗಳ ಹಿಂದೆ

ಗುರುವಾರ, 6-7-1972

• ಹಿಂದಿನ ಸರ್ಕಾರಕ್ಕೆ ಮಸಿ ಬಳಿಯುವ ಯತ್ನ: ಹೆಗಡೆ ಖಂಡನೆ

ಬೆಂಗಳೂರು, ಜುಲೈ 5– 'ಕೆಲವು ಮಂತ್ರಿಗಳು ಹಿಂದಿನ ಸರ್ಕಾರದ ಮೇಲೆ ಬಸಿ ಬಳಿಯುವ ಒಂದೇ ಕಾರ್ಯಕ್ರಮವನ್ನು ಇರಿಸಿಕೊಂಡಿದ್ದಾರೆ' ಎಂದು ಟೀಕಿಸಿದ ಮಾಜಿ ಹಣಕಾಸು ಸಚಿವ ಶ್ರೀ ರಾಮಕೃಷ್ಣ ಹೆಗಡೆ ಅವರು, 'ಹಿಂದಿನ ಸರ್ಕಾರ ಭ್ರಷ್ಟಾಚಾರ, ಅನೀತಿಯ ಕಾರ್ಯಗಳನ್ನೇ ನಡೆಸಿದೆ ಎಂದು ಈಗಿನ ಸರ್ಕಾರ ಭಾವಿಸಿದರೆ, ಹಿಂದಿನ ಸರ್ಕಾರದ ಎಲ್ಲ ಕೆಲಸ ಕಾರ್ಯಗಳ ಬಗ್ಗೆ ನ್ಯಾಯಾಂಗ ತನಿಖೆ ನಡೆಸಲಿ' ಎಂದು ಸವಾಲು ಹಾಕಿದರು.

• ಶರಾವತಿ ಕರ್ಮಕಾಂಡ: ದುರುದ್ದೇಶ ಪೂರಿತ ಹೇಳಿಕೆಯೆಂದು ವೀರೇಂದ್ರ

ಬೆಂಗಳೂರು, ಜುಲೈ 5– ಶರಾವತಿ 'ಕರ್ಮಕಾಂಡ'ದ ವಿಚಾರದಲ್ಲಿ ಸಚಿವ ಶ್ರೀ ಚನ್ನಬಸಪ್ಪ ಅವರು ಮಾಡಿದ ಕೋಲಾಹಲಕಾರಿ ಹೇಳಿಕೆ ಮೈಸೂರಿನ ಎಂಜಿನಿಯರುಗಳನ್ನು ಮತ್ತು ಹಿಂದಿನ ಸರ್ಕಾರವನ್ನು ಅವಹೇಳನ ಮಾಡುವ ದುರುದ್ದೇಶದಿಂದ ಕೂಡಿದೆಯೆಂದು ಸಂಸ್ಥಾ ಕಾಂಗ್ರೆಸ್‌ನ ಪ್ರದೇಶ ಸಮಿತಿ ಅಧ್ಯಕ್ಷ ಹಾಗೂ ಮಾಜಿ ಮುಖ್ಯಮಂತ್ರಿ ವೀರೇಂದ್ರ ಪಾಟೀಲರು ಆಪಾದಿಸಿ, ಜನತೆಯ ಮನಸ್ಸಿನಲ್ಲಿ ಉಂಟಾಗಿರುವ ತಪ್ಪು ಅಭಿಪ್ರಾಯ ಹೋಗಲಾಡಿಸಲು ನ್ಯಾಯಾಂಗ ತನಿಖೆ ಆಗಬೇಕೆಂದು ಒತ್ತಾಯ ಮಾಡಿದರು.

ಸುಪ್ರೀಂ ಕೋರ್ಟಿನ ನ್ಯಾಯಮೂರ್ತಿಯೊಬ್ಬರ ನೇತೃತ್ವದಲ್ಲಿ ಶರಾವತಿಯಂತಹ ಕೆಲಸದಲ್ಲಿ ನುರಿತ ಒಬ್ಬಿಬ್ಬ ಎಂಜಿನಿಯರಿಂಗ್ ತಜ್ಞರನ್ನೊಳಗೊಂಡ ವಿಚಾರಣಾ ಆಯೋಗ ರಚಿತವಾಗಬೇಕೆಂದು ಅವರು ಪತ್ರಿಕಾ ಗೋಷ್ಠಿಯಲ್ಲಿ ಸಲಹೆ ಮಾಡಿದರು.

ಮಲೆನಾಡು, ಕರಾವಳಿಯ ಬಹುತೇಕ ಭೂಕುಸಿತಗಳು ಮಾನವನಿರ್ಮಿತ ಎನ್ನುತ್ತವೆ ಅಧ್ಯಯನಗಳು

ಬಿರಿದ ಭೂಮಿ, ಕುಸಿದ ಬದುಕು!

ವಿಶ್ಲೇಷಣೆ

ಡಾ. ಕೇಶವ ಎಚ್. ಕೊರ್ಸೆ

ಕಳೆದ ಮಳೆಗಾಲದಲ್ಲಿ ಉತ್ತರ ಕನ್ನಡದ ಕಾಳಿ ನದಿ ಕಣಿವೆಯ ಕಳಚೆ ಗ್ರಾಮವು ಭೂಕುಸಿತದಲ್ಲಿ ಕೊಚ್ಚಿ ಹೋಯಿತು. ಕುಸಿದ ಗುಡ್ಡಗಳ ಮಣ್ಣಿನಡಿಯಲ್ಲಿ ಜನ ಪ್ರಾಣ ತೆತ್ತರು, ಜಾನುವಾರುಗಳು ಕಣ್ಮರೆಯಾದವು. ಮನೆ-ಕೊಟ್ಟಿಗೆ, ಗದ್ದೆ-ತೋಟಗಳ ಮೇಲೆ ನೂರಾರು ಅಡಿ ಮಣ್ಣಿನರಾಶಿ ಬಿತ್ತು. ಬೆಳಗಾಗುವುದರಲ್ಲಿ ಎಲ್ಲ ಕಳೆದುಕೊಂಡಿದ್ದ ಹಲವಾರು ಕುಟುಂಬಗಳು, ಕೆಸರಲ್ಲಿ ಹುದುಗಿಹೋಗಿದ್ದ ತಮ್ಮದೇ ನೆಲದಿಂದ ಭಾರವಾದ ಹೆಜ್ಜೆಗಳನ್ನಿಡುತ್ತ, ಉಟ್ಟಬಟ್ಟೆಯಲ್ಲಿ ಸಮೀಪದ ಯಲ್ಲಾಪುರ ಪಟ್ಟಣಕ್ಕೆ ನಿರಾಶ್ರಿತರಾಗಿ ಸಾಗಿದರು.

ಅಂದಿನಿಂದ ಇಂದಿನವರೆಗೆ, ಅದೆಷ್ಟೋ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳ ಭೇಟಿ, ಮಾಧ್ಯಮಗಳಲ್ಲಿ ವರದಿ, ನಷ್ಟ ಅಂದಾಜಿಸುವ ಸಮೀಕ್ಷೆಗಳು, ಪುನರ್ವಸತಿ ಪ್ರಸ್ತಾವ, ಪರಿಹಾರದ ಆಶ್ವಾಸನೆ- ಎಲ್ಲ ಜರುಗುತ್ತಿವೆ. ಆದರೆ, ಕಳಚೆ ಊರಿನವರಿಗೆ ಈವರೆಗೆ ಸಿಕ್ಕಿದ್ದೇನು? ಈ ಮುಂಗಾರಿನ ಆರಂಭದಲ್ಲಿ ಜಿಲ್ಲಾ ಆಡಳಿತದಿಂದ ಬಂದ, 'ನಿಮ್ಮ ಮನೆ-ಜಮೀನು ಭೂಕುಸಿತದ ಸಾಧ್ಯತೆಯಿರುವ ಪ್ರದೇಶದಲ್ಲಿ ಇರುವುದರಿಂದ ಮಳೆಗಾಲದಲ್ಲಿ ಸುರಕ್ಷಿತ ಪ್ರದೇಶಕ್ಕೆ ಸ್ಥಳಾಂತರಗೊಳ್ಳಬೇಕು' ಎಂಬ ಒಕ್ಕಣೆಯ ಸೂಚನಾಪತ್ರ ಮಾತ್ರ!

ಕಳಚೆ ಗ್ರಾಮದ ಭೂಕುಸಿತದಂಥ ದುರ್ಘಟನೆಗಳು ಮಲೆನಾಡು ಹಾಗೂ ಕರಾವಳಿಯಲ್ಲಿ ಜರುಗತೊಡಗಿ ದಶಕವೇ ಸಂದಿದೆ. ಭಾರಿಮಳೆ, ಭೂಕುಸಿತ, ಜೀವಹಾನಿ, ಆಸ್ತಿನಷ್ಟ, ಸರ್ಕಾರದಿಂದ ಪರಿಹಾರದ ಮಾತು- ಪ್ರತೀ ಮಳೆಗಾಲದಲ್ಲೂ ಇದೇ ಘಟನಾಚಕ್ರ! ಭೂಕುಸಿತದ ವ್ಯಾಪ್ತಿ ಮತ್ತು ತೀವ್ರತೆ ಮಾತ್ರ ಐದು ವರ್ಷಗಳಿಂದ ಹೆಚ್ಚುತ್ತಲೇ ಇದೆ. ಸಹ್ಯಾದ್ರಿ ತಪ್ಪಲಿನ ಜನಸಮುದಾಯಗಳು ಮಳೆಗಾಲವೆಂದರೆ ಬೆದರುವಷ್ಟು ಪರಿಸ್ಥಿತಿ ಈಗ ಬಿಗಡಾಯಿಸುತ್ತಿದೆ. ಇದಕ್ಕೆ ಸಮಗ್ರ ಪರಿಹಾರೋಪಾಯ ಕೈಗೊಳ್ಳಬೇಕಿದ್ದ ಸರ್ಕಾರ ಮಾತ್ರ ಮೇಘಸ್ಫೋಟ, ಭೂಕಂಪ, ಪರಿಹಾರದ ಪ್ಯಾಕೇಜ್‌ನಂತಹ ಶಬ್ದಗಳಲ್ಲೇ ಮುಳುಗಿ, ತನ್ನ ಅಯೋಮಯ ಆಡಳಿತದ ಗೊಂದಲವನ್ನು ಜನರ ಮೇಲೂ ಹೇರುತ್ತ ಕಾಲ ತಳ್ಳುತ್ತಿದೆ!

ಸಹ್ಯಾದ್ರಿಯಲ್ಲಿ ವ್ಯಾಪಕವಾಗುತ್ತಿರುವ ಭೂಕುಸಿತಗಳನ್ನು ಅಭ್ಯಸಿಸಿರುವ ದೇಶದ ವೈಜ್ಞಾನಿಕ ಲೋಕಕ್ಕೆ, ಇದರ ಕಾರಣಗಳು ಈಗಾಗಲೇ ಅರಿವಾಗಿವೆ. ದೆಹಲಿಯ ರಾಷ್ಟ್ರೀಯ ಭೂಕಂಪನ ಮಾಹಿತಿ ಕೇಂದ್ರ ಹಾಗೂ ಹೈದರಾಬಾದಿನ ರಾಷ್ಟ್ರೀಯ ಭೂಗರ್ಭ ಸಂಶೋಧನಾ ಸಂಸ್ಥೆಯು ಪಶ್ಚಿಮಘಟ್ಟದಲ್ಲಿ ಭೂಕಂಪದ ಸಾಧ್ಯತೆಗಳನ್ನು ಆಳವಾಗಿ ಪರಿಶೀಲಿಸಿವೆ. ಹವಾಮಾನ ವೈಪರೀತ್ಯ, ಅಕಾಲಿಕ ಮಳೆ ಹಾಗೂ ಭೂಕುಸಿತಗಳ ಕುರಿತು ಉಪಗ್ರಹ ಆಧಾರಿತ ದೂರಸಂವೇದಿ ತಂತ್ರಜ್ಞಾನ ಬಳಸಿಕೊಂಡು ಇಸ್ರೊ ನಿಖರ ಮಾಹಿತಿ ಒದಗಿಸುತ್ತಿದೆ. ಭಾರತೀಯ ಭೂಗರ್ಭಶಾಸ್ತ್ರ ಸರ್ವೇಕ್ಷಣಾ ಸಂಸ್ಥೆಯು ದೇಶದೆಲ್ಲೆಡೆಯ ಭೂಕುಸಿತ ಸಾಧ್ಯತೆಯ ಪ್ರದೇಶಗಳ ನಕ್ಷೆ ತಯಾರಿಸಿದೆ. ಜೊತೆಗೆ, ಭೂಕುಸಿತದ ಮುನ್ಸೂಚನಾ ತಂತ್ರಜ್ಞಾನವನ್ನೂ ಅಭಿವೃದ್ಧಿಪಡಿಸುತ್ತಿದೆ. ಇವನ್ನೆಲ್ಲ ಬಳಸಿಕೊಂಡು, ಕರ್ನಾಟಕ ರಾಜ್ಯ ನೈಸರ್ಗಿಕ ಪ್ರಕೋಪ ಉಸ್ತುವಾರಿ ಕೇಂದ್ರವು ಭೂಕುಸಿತವೂ ಸೇರಿದಂತೆ ಪ್ರಕೃತಿ ವಿಕೋಪಗಳನ್ನು ನಿರ್ವಹಿಸಲು ರಾಜ್ಯ ಸರ್ಕಾರ ಹಾಗೂ ಜಿಲ್ಲಾ ಆಡಳಿತಗಳಿಗೆ ಮಾರ್ಗದರ್ಶನ ಮಾಡುತ್ತಿದೆ.

ಕೊಡಗಿನ 2018ರ ಭೂಕುಸಿತಗಳ ನಂತರ, ಅವನ್ನು ಸಮರ್ಥವಾಗಿ ನಿರ್ವಹಿಸಲು ಸಮಗ್ರ ಕಾರ್ಯನೀತಿ ಕೈಗೊಳ್ಳುವಂತೆ ಸರ್ಕಾರವನ್ನು ಹಲವಾರು ತಜ್ಞರು, ರೈತ ಸಂಘಟನೆಗಳ ಪ್ರತಿನಿಧಿಗಳು ಹಾಗೂ ನೀತಿ ನಿರೂಪಕರು ಒತ್ತಾಯಿಸಿದ್ದರು. ಹೀಗಾಗಿ, ಸರ್ಕಾರವು 2020ರಲ್ಲಿ ಕರ್ನಾಟಕ ಜೀವವೈವಿಧ್ಯ ಮಂಡಳಿಯ ಅಧ್ಯಕ್ಷರ ನೇತೃತ್ವದಲ್ಲಿ ಉನ್ನತ ಮಟ್ಟದ ತಜ್ಞ ಸಮಿತಿಯೊಂದನ್ನು ರಚಿಸಿತ್ತು. ಮೇಲೆ ಪ್ರಸ್ತಾಪಿಸಿದ ಸಂಶೋಧನಾ ಸಂಸ್ಥೆಗಳ ಜೊತೆಗೆ ಭಾರತೀಯ ವಿಜ್ಞಾನ ಮಂದಿರದ ವಿಜ್ಞಾನಿಗಳು, ವಿವಿಧ ವಿಷಯತಜ್ಞರು ಹಾಗೂ ಹಿರಿಯ ಅಧಿಕಾರಿಗಳು ಸಮಿತಿಯ ಸದಸ್ಯರಾಗಿದ್ದರು. ವಿಸ್ತೃತ ಕ್ಷೇತ್ರಾಧ್ಯಯನ, ಜನಾಭಿಪ್ರಾಯ ಸಂಗ್ರಹ ಹಾಗೂ ಸಂಶೋಧನಾ ಮಾಹಿತಿಗಳ ಕ್ರೋಡೀಕರಣ- ಇವೆಲ್ಲವನ್ನೂ ಆಧರಿಸಿ ರೂಪಿಸಿದ ಸಮಗ್ರ ವರದಿಯನ್ನು ಆ ಸಮಿತಿಯು 2021ರ ಮೇ ತಿಂಗಳಿನಲ್ಲಿ ಸರ್ಕಾರಕ್ಕೆ ಸಲ್ಲಿಸಿತು. ಈಗ ಅದರ ಅನುಷ್ಠಾನವಾಗಬೇಕಿದೆ.

ಮೂರು ಮುಖ್ಯ ಪ್ರಶ್ನೆಗಳಿಗೆ ಈ ವರದಿಯಲ್ಲಿನ ಉತ್ತರಗಳೇನೆಂದು ಇಲ್ಲಿ ಸಂಕ್ಷಿಪ್ತವಾಗಿ ಪರಿಶೀಲಿಸೋಣ. ಮೊದಲಿನದು, ಈ ಭೂಕುಸಿತಗಳಿಗೆ ಭೂಕಂಪ ಕಾರಣವೇ ಎಂಬುದು. ಇಲ್ಲವೆನ್ನುತ್ತಾರೆ ವಿಜ್ಞಾನಿಗಳು. ಭೂಕಂಪದ ಸಾಧ್ಯತೆಯಿರುವ ದೇಶದ ಪ್ರದೇಶಗಳನ್ನೆಲ್ಲ ನಿಖರವಾಗಿ ಈಗಾಗಲೇ ನಕ್ಷೆ ಮಾಡಲಾಗಿದ್ದು, ರಾಜ್ಯದ ಪಶ್ಚಿಮಘಟ್ಟವು ಸುರಕ್ಷಿತ ವಲಯದಲ್ಲಿದೆ. ಭೂಮಿ ಕುಸಿಯುವಷ್ಟು ಭೂಕಂಪ ಇಲ್ಲಿ ಆಗುವುದಿಲ್ಲ; ಹೀಗಾಗಿ ಭಯಪಡಬೇಕಿಲ್ಲ.

ಎರಡನೆಯದು, ಇತ್ತೀಚೆಗೆ ಕೊಡಗಿನಲ್ಲಿ ಬಹಳ ಸಲ ಅನುಭವಕ್ಕೆ ಬಂದ ಭೂಕಂಪನ ಎಂಥದ್ದು? ಹಿಂದೆಯೂ ಘಟಿಸಿರುವ ಈ ತೆರನ ಸಂದರ್ಭಗಳಿಗೆ, ಸಹ್ಯಾದ್ರಿಶಿಖರಗಳ ಭೂಗರ್ಭದಾಳದಲ್ಲಿರುವ ಮೆತ್ತನೆ ಪ್ರದೇಶಗಳು ಹಾಗೂ ಅಲ್ಲಿನ ಶಿಲಾವಲಯಗಳ ಬಿರುಕುಗಳು ಕಾರಣ ಎನ್ನಬೇಕು. ಅವು ಸಹಜವಾಗಿ ಆಗಾಗ ಕುಸಿದಾಗ, ಸಣ್ಣಪ್ರಮಾಣದಲ್ಲಿ ಭೂಮಿ ಕಂಪಿಸುತ್ತದೆ. ಕಂಪನದ ಜೊತೆಗೆ, ಕೆಲವೊಮ್ಮೆ ಸ್ಫೋಟದ ಶಬ್ದವೂ ಕೇಳುವುದಿದೆ.

ಭೂಮಿಯಾಳದಲ್ಲಿ ಮಣ್ಣು ಪುಡಿಯಾಗಿ ಅಥವಾ ಪ್ರಾಣಿ-ಸಸ್ಯಜನ್ಯ ಅವಶೇಷಗಳ ಕೊಳೆಯುವಿಕೆಯಿಂದಾಗಿ ಕೆಲವೊಮ್ಮೆ ಖಾಲಿ ರಂಧ್ರಗಳು ನಿರ್ಮಾಣವಾಗಿರುತ್ತವೆ. ಭಾರಿ ಮಳೆಯಲ್ಲಿ ಮೇಲ್ಭಾಗದ ಹಸಿಮಣ್ಣು ನೆಲದಾಳದಲ್ಲಿರುವ ಈ ನಿರ್ವಾತ ರಂಧ್ರಗಳ (Cavities) ಮೇಲೆ ಕುಸಿದಾಗ, ಸ್ಫೋಟದ ಶಬ್ದ ಒಮ್ಮೆಲೆ ಹೊರಹೊಮ್ಮುವುದು! ಆದರೆ, ಈ ಕಂಪನ ಹಾಗೂ ಶಬ್ದಗಳಿಂದ ಮಾತ್ರವೇ ಭೂಕುಸಿತವಾಗದು ಎನ್ನುತ್ತಾರೆ ವಿಜ್ಞಾನಿಗಳು.

ಅಂತಿಮವಾಗಿ ಮುಖ್ಯ ಪ್ರಶ್ನೆ, ಇಲ್ಲಿನ ಭೂಕುಸಿತಗಳಿಗೆ ಕಾರಣಗಳೇನು? ಉತ್ತರ ಸ್ಪಷ್ಟವಿದೆ. ಸಹ್ಯಾದ್ರಿಯ ಮೇಲ್ಮಣ್ಣಿನಲ್ಲಿ ಹೆಚ್ಚಾಗಿ ದೊರಕುವುದು ಬಸಾಲ್ಟ್ ಬಿರಿದು ನಿರ್ಮಾಣವಾದ ಗುಂಡುಕಲ್ಲುಗಳು. ಜೊತೆಗೆ, ತೀರಾ ಸಡಿಲವಾದ ಜಂಬಿಟ್ಟಿಗೆ ಮಣ್ಣು ಮತ್ತು ಸುಣ್ಣದಕಲ್ಲಿನ ರೀತಿಯ ರೂಪಾಂತರಶಿಲೆಯ ಮಿಶ್ರಣ. ಆಳದಲ್ಲಿ ಇದನ್ನು ಹೊತ್ತುನಿಂತ ಗ್ರಾನೈಟ್ ಸ್ತರವು ಗಟ್ಟಿಯಾಗಿದ್ದರೂ, ಎರೆಮಣ್ಣಿನ ಈ ಮೇಲ್ಪದರು ಮಾತ್ರ ಸಡಿಲವಾಗಿದೆ. ಹೊರಗೆ ಆವರಿಸಿರುವ ಕಾಡಿನ ಹಸಿರುಪದರು, ಗಿಡಮರಗಳ ಬೇರಿನಜಾಲ ಮತ್ತು ಕೊಳೆತ ಜೀವಜನ್ಯ ವಸ್ತುಗಳೆಲ್ಲ ಸೇರಿ ಸೃಷ್ಟಿಸಿದ ನೈಸರ್ಗಿಕ ರಕ್ಷಣಾಪೊರೆ ಮಾತ್ರ ಈ ಸಡಿಲ ಮಣ್ಣನ್ನು ಗಟ್ಟಿಯಾಗಿ ಬೆಸೆದಿಟ್ಟಿದೆ.

ಆದರೆ, ಪಶ್ಚಿಮಘಟ್ಟದ ಶೇ 96ಕ್ಕೂ ಹೆಚ್ಚಿನ ಭೂಕುಸಿತಗಳು ಈ ಮೇಲ್ಮಣ್ಣಿನ ಕವಚ ನಾಶವಾಗಿದ್ದರಿಂದಲೇ ಘಟಿಸುತ್ತಿವೆ. ಅರಣ್ಯನಾಶದ ಜೊತೆಗೆ, ಗಣಿಗಳು, ಹೆದ್ದಾರಿ, ರೈಲುಮಾರ್ಗ, ಕಟ್ಟಡ ನಿರ್ಮಾಣ, ಕೃಷಿ ವಿಸ್ತರಣೆ ಇತ್ಯಾದಿಗಳಿಗಾಗಿ ಗುಡ್ಡಗಳನ್ನು ಎಲ್ಲೆಂದರಲ್ಲಿ ಲಂಬಕೋನದಲ್ಲಿ ಕತ್ತರಿಸುತ್ತಿರುವುದೇ ಇದಕ್ಕೆ ಕಾರಣ. ಕಾನನದ ಹಸಿರುಹೊದಿಕೆಯನ್ನು ತೆಗೆದಾಗ ಮೇಲ್ಮಣ್ಣು ಸವಕಳಿಯಾಗಿ, ಮಳೆನೀರು ಒಮ್ಮೆಲೆ ಆಳಕ್ಕಿಳಿದು ಭೂಪದರುಗಳು ಕುಸಿಯತೊಡಗುತ್ತವೆ. ಹವಾಮಾನ ಬದಲಾವಣೆಯಿಂದಾಗಿ ಒಂದೇ ದಿನದಲ್ಲಿ ನೂರು-ಇನ್ನೂರು ಮಿ.ಮೀ. ಮಳೆ ಸುರಿಯುವ ಸಂದರ್ಭಗಳು ಇತ್ತೀಚೆಗೆ ಹೆಚ್ಚುತ್ತಿದ್ದು, ಅಂಥ ಭಾರಿ ಮಳೆಯೇ ಭೂಕುಸಿತಕ್ಕೆ ಮೊದಲ ಪ್ರಚೋದನೆಯೇನೋ ಹೌದು. ಆದರೆ, ಬಿದ್ದ ಮಳೆನೀರನ್ನು ತಡೆಯುವ ಹಾಗೂ ಹಿಡಿದಿಡುವ ಮೇಲ್ಮಣ್ಣಿನ ಸಾಮರ್ಥ್ಯವನ್ನೆಲ್ಲ ಭೂಸ್ವರೂಪದ ಅವೈಜ್ಞಾನಿಕ ಪರಿವರ್ತನೆಯು ನಾಶ ಮಾಡಿರುವುದು ಹಾಗೂ ನೆಲ-ಜಲ ನಿರ್ವಹಣೆಯೇ ಮೂಲ ಕಾರಣಗಳೆಂಬುದು ವಿಜ್ಞಾನಿಗಳ ಖಚಿತ ಅಭಿಪ್ರಾಯ.

ಸೂಕ್ಷ್ಮ ಸಹ್ಯಾದ್ರಿಯನ್ನು ಸೂಕ್ತ ನೆಲ-ಜಲ ಬಳಕೆ ನೀತಿಗೆ ಈಗಲಾದರೂ ಒಳಪಡಿಸಬೇಕಿದೆ. ಮಲೆನಾಡು-ಕರಾವಳಿಯಲ್ಲಿ ಸಾಗಿರುವ ಅರಣ್ಯ ಅತಿಕ್ರಮಣ ಹಾಗೂ ಕಾಡುನಾಶಕ್ಕೆ ತಡೆ ಬೀಳಬೇಕಿದೆ. ಅಡವಿ ಕಡಿದು ಶುಂಠಿ, ರಬ್ಬರ್, ಅಕೇಶಿಯಾ, ಗೇರು ಬೆಳೆಸುವ 'ವಾಣಿಜ್ಯಕೃಷಿ' ನಿಲ್ಲಬೇಕಿದೆ. ಮಿತಿಮೀರಿ ಭಾರಿ ಯಂತ್ರಗಳನ್ನು ಬಳಸಿ ಗುಡ್ಡಗಳನ್ನೆಲ್ಲ ಕತ್ತರಿಸುತ್ತಿರುವ ವಿನಾಶಕಾರಿ ಯೋಜನೆಗಳನ್ನು ನಿರ್ಬಂಧಿಸಲೇಬೇಕಿದೆ.

ಜೀವಜಲ ತರುವ ಮಳೆಗಾಲವೇ ಜೀವಕ್ಕೆ ಕುತ್ತು ತರುವಂತಾಗಿದ್ದು, ನೆಲ-ಜಲ ನಿರ್ವಹಣಾ ನೀತಿಯ ತೀವ್ರ ಕುಸಿತದಿಂದಾಗಿ ಮಾತ್ರ. ಸರ್ಕಾರ ಎಚ್ಚೆತ್ತುಕೊಂಡೀತೇ? ಏಕೆಂದರೆ, ಇದೀಗ ಮತ್ತೆ ಮಳೆ ಹೊಯ್ಯುತಿದೆ!

ಲೇಖಕ: ನಿರ್ದೇಶಕ, ಸಂರಕ್ಷಣಾ ಜೀವಶಾಸ್ತ್ರ ಮತ್ತು ಸುಸ್ಥಿರ ಅಭಿವೃದ್ಧಿ ಅಧ್ಯಯನ ಕೇಂದ್ರ, ಶಿರಸಿ

ಚುರುಮುರಿ

ಕಲಹ ಸಮೀಕ್ಷೆ

• ಮಣ್ಣೆ ರಾಜು

'ಚುನಾವಣೆಗೆ ಮುನ್ನ ಆಂತರಿಕ ಸಮೀಕ್ಷೆ ನಡೆಸಿ ಹೈಯೆಸ್ಟ್ ಮಾರ್ಕ್ಸ್ ಪಡೆಯುವ ಪಕ್ಷ ಅಧಿಕಾರಕ್ಕೆ ಬರುವ ಸಾಧ್ಯತೆ ಇದೆಯಾ?' ಸುದ್ದಿ ಓದಿ ಸುಮಿ ಕೇಳಿದಳು.

'ಸಮೀಕ್ಷೆಗಳು ಉಲ್ಟಾ ಆಗುತ್ತವೆ. ನಮ್ಮ ಪಕ್ಷವೇ ಅಧಿಕಾರಕ್ಕೆ ಬರುತ್ತೆ ಅಂತ ಕುಮಾರಣ್ಣ ತಮ್ಮ ಸಮೀಕ್ಷೆ ಪ್ರಕಟಿಸಿದ್ದಾರೆ' ಅಂದ ಶಂಕ್ರಿ.

'ಅವರ ಪಕ್ಷದ ಸಮೀಕ್ಷೆಯನ್ನು ಅವರೇ ಮಾಡಿಕೊಂಡು ಗ್ರೇಸ್ ಮಾರ್ಕ್ಸ್ ಹಾಕಿಕೊಂಡು ಅಂಕಪಟ್ಟಿ ಸಿದ್ಧ ಮಾಡಿಕೊಳ್ಳೋ ಬದಲು ಕಾಂಗ್ರೆಸ್ ಸಮೀಕ್ಷೆಯನ್ನು ಬಿಜೆಪಿ, ಬಿಜೆಪಿ ಸಮೀಕ್ಷೆಯನ್ನು ಜೆಡಿಎಸ್ ಮಾಡಿದರೆ ನಿಖರ ಫಲಿತಾಂಶ ದೊರೆಯಬಹುದು ಕಣ್ರೀ'.

'ಆಂತರಿಕ ಸಮೀಕ್ಷೆ ಮಾಡಿದರೆ ಸಾಲದು, ಪಕ್ಷಗಳ ಆಂತರಿಕ ಕಲಹಗಳ ಸಮೀಕ್ಷೆಯೂ ಆಗಬೇಕಾಗುತ್ತದೆ. ಮಂತ್ರಿ, ಮುಖ್ಯಮಂತ್ರಿ ಸ್ಥಾನಕ್ಕೆ ಕಾಲ್ತೊಡಕಾಗಿದ್ದಾರೆಂದು ಒಬ್ಬರನ್ನೊಬ್ಬರು ಕಾಲೆಳೆಯುವುದು, ಯಾರ್‍ಯಾರು ಪಕ್ಷದಿಂದ ಕಾಲ್ಕೀಳುವರು, ಪರ ಪಕ್ಷದಿಂದ ಬಂದು ಪಕ್ಷ ಸೇರ್ಪಡೆಯಾಗುವವರ ಕಾಲ್ಗುಣವೇನು... ಇವೆಲ್ಲದರ ಲೆಕ್ಕಾಚಾರವೂ ಚುನಾವಣೆ ರಿಸಲ್ಟ್‌ಗೆ ಕೌಂಟಾಗಬಹುದು'.

'ಸದ್ಯ, ಇಂಥಾ ಸಮೀಕ್ಷೆ ಆಧಾರದ ಮೇಲೆ ಸರ್ಕಾರ ರಚನೆ ಮಾಡಲು ಅವಕಾಶವಿಲ್ಲ. ಚುನಾವಣೆ ನಡೆದು ಪಕ್ಷಗಳ, ನಾಯಕರ ಭವಿಷ್ಯ ಬರೆಯುವ ಭಾಗ್ಯ ಮತದಾರರಿಗೆ ಉಳಿದಿದೆ'.

'ಅದೇನು ಭಾಗ್ಯವೋ, ಮತದಾರರು ಮತಗಟ್ಟೆಗೆ ಬಂದು ಮತ ಚಲಾಯಿಸಲು ಆಸಕ್ತಿ ತೋರುತ್ತಿಲ್ಲ. 50-60 ಪರ್ಸೆಂಟ್ ಮತದಾನವಾದರೆ ಹೆಚ್ಚು ಎನ್ನುವಂತಾಗಿದೆ. ಇದರಿಂದ ಚುನಾವಣೆ ಆಶಯ ಸಫಲವಾಗದು'.

'ಅಭ್ಯರ್ಥಿಗಳು ಮನೆಮನೆಗೆ ಹೋಗಿ ಕರಪತ್ರ ಕೊಟ್ಟು, ಕೈ ಮುಗಿದರೂ ಮತ ಹಾಕಲು ಬರದಿದ್ದರೆ ಬಲವಂತ ಮಾಡಲಾಗುತ್ತಾ?'

'ಹೀಗೇ ಆದರೆ, ಜನರ ಮನೆ ಬಾಗಿಲಿಗೆ ಸರ್ಕಾರದ ಸೇವೆ ಎನ್ನುವಂತೆ, ಮತದಾರರ ಮನೆ ಬಾಗಿಲಿಗೆ ಹೋಗಿ ಅವರ ಮತ ಸಂಗ್ರಹಿಸಿ ತಂದು ಚುನಾವಣೆ ನಡೆಸುವ ಪರಿಸ್ಥಿತಿ ಬಂದರೂ ಬರಬಹುದು...' ಶಂಕ್ರಿ ಬೇಸರ ವ್ಯಕ್ತಪಡಿಸಿದ.

ಸಂಗತ

ಮುದ್ದು ಪ್ರಾಣಿ: ಅರಿವಿನ ಕೊರತೆ...

ಮಾನವ, ಪ್ರಾಣಿ ಮತ್ತು ಪರಿಸರದ ಮೂರೂ ಸ್ವಾಸ್ಥ್ಯಗಳನ್ನು ಒಂದಾಗಿ ಪರಿಗಣಿಸಿ ಪರಿಹಾರ ಹುಡುಕುವ 'ಒನ್ ಹೆಲ್ತ್' ಪರಿಕಲ್ಪನೆಯನ್ನು ಬಲಗೊಳಿಸುವುದು ಇಂದಿನ ಅನಿವಾರ್ಯ

• ಡಾ. ಮುರಳೀಧರ ಕಿರಣಕೆರೆ

'ಎಷ್ಟು ಹೇಳಿದ್ರೂ ಕೇಳಲ್ಲ, ಮೂರು ಹೊತ್ತೂ ಈ ನಾಯಿನ ಹಿಡ್ಕಂಡು ಮುದ್ದು ಮಾಡ್ತಿರ್ತಾಳೆ. ಇವ್ಳಿಗೆ ಏನಾದ್ರು ಕಾಯ್ಲೆ ಬಂದ್ರೆ ಅಂತ ನಂಗೆ ಯೋಚ್ನೆ ಸರ್. ನೀವೇ ಬುದ್ಧಿ ಹೇಳಿ' ತಮ್ಮ ಆತಂಕವನ್ನು ನನ್ನ ಮುಂದಿಟ್ಟಿದ್ದರು ಆ ಹುಡುಗಿಯ ತಾಯಿ. ಹಾಗಂತ ಅವರ ಮಗಳು ತೀರಾ ಸಣ್ಣವಳೇನೂ ಅಲ್ಲ, ಹೈಸ್ಕೂಲಿಗೆ ಹೋಗುತ್ತಿದ್ದಾಳೆ. ನಾಯಿಯನ್ನು ಅತಿಯಾಗಿ ಮುದ್ದಿಸುವುದರಿಂದ ಆಗುವ ಅಪಾಯಗಳ ಬಗ್ಗೆ ತಿಳಿಹೇಳಿದಾಗ ಅವಳಮ್ಮನ ಮೊಗದಲ್ಲಿ ಸಮಾಧಾನದ ಗೆರೆಗಳು. ಹೌದು, ಹೆಚ್ಚು ಕಮ್ಮಿ ಇಂಥದ್ದೇ ದೂರುಗಳು ನಾನು ಚಿಕಿತ್ಸೆಗೆಂದು ಹೋದೆಡೆಯಲ್ಲೆಲ್ಲಾ ಸಾಮಾನ್ಯ.

ಬಹುತೇಕ ಜಾನುವಾರು ಮಾಲೀಕರು, ಮುದ್ದುಪ್ರಾಣಿಗಳ ಒಡೆಯರಿಗೆ ಪ್ರಾಣಿಗಳಿಂದ ಬರಬಹುದಾದ ಕಾಯಿಲೆಗಳು, ಕಂಟಕಗಳ ಕುರಿತಾಗಿ ಅರಿವು ಕಡಿಮೆ. ಸರಿಯಾದ ತಿಳಿವಳಿಕೆಯಿಲ್ಲದೆ ಹತ್ತಾರು ಆರೋಗ್ಯ ಸಮಸ್ಯೆಗಳನ್ನು ತಂದುಕೊಳ್ಳುತ್ತಿದ್ದಾರೆ. ಕೆಲವರು ತಮ್ಮ ಸಾಕುಪ್ರಾಣಿಗಳು ಅನಾರೋಗ್ಯಕ್ಕೆ ತುತ್ತಾದಾಗ ತಮಗೂ ಕಾಯಿಲೆ ಅಂಟಬಹುದೆಂಬ ಹೆದರಿಕೆಯಿಂದ ಶುಶ್ರೂಷೆ ಮಾಡಲು ಹಿಂದೇಟು ಹಾಕುವುದೂ ಉಂಟು. ಕೊರೊನಾ ಸೋಂಕಿನ ಸಮಯದಲ್ಲಿ ರೋಗಾಣುಗಳು ನಾಯಿಗಳಿಂದಲೂ ಹರಡಬಹುದು ಎಂಬ ತಪ್ಪು ಕಲ್ಪನೆಯಿಂದಾಗಿ ತಾವು ಸಾಕಿದ ಮುದ್ದು ಪ್ರಾಣಿಗಳನ್ನು ಬೀದಿಗಟ್ಟಿದವರ ಸಂಖ್ಯೆಯೂ ದೊಡ್ಡದಿತ್ತು!

ಪ್ರಾಣಿಗಳಿಂದ ಮಾನವನಿಗೆ ಹರಡಬಹುದಾದ ಕಾಯಿಲೆಗಳೇ ಪ್ರಾಣಿಜನ್ಯ ರೋಗಗಳು ಅಥವಾ ಮಿಗ- ಮಾನವ ವ್ಯಾಧಿಗಳು. ಪಶು, ಪಕ್ಷಿ, ಕೀಟಗಳಿಂದ ಮಾನವನಿಗೆ ಸೋಂಕು ರೋಗಗಳು ಹರಡುವಂತೆ ಮನುಜನೂ ಹಲವು ಕಾಯಿಲೆಗಳನ್ನು ಪಶುಗಳಿಗೆ ದಾಟಿಸಬಲ್ಲ. ಜುಲೈ 6, ವಿಶ್ವ ಪ್ರಾಣಿಜನ್ಯ ರೋಗ ದಿವಸ. ಶ್ರೇಷ್ಠ ಸೂಕ್ಷ್ಮಾಣುಜೀವಿ ತಜ್ಞ ಲೂಯಿಸ್ ಪ್ಯಾಶ್ಚರ್ ಮನುಕುಲಕ್ಕೆ ಮಹತ್ತರ ಕೊಡುಗೆ ನೀಡಿದ್ದು 1885ರ ಇದೇ ದಿನ. ತಾವೇ ಸಂಶೋಧಿಸಿದ ಲಸಿಕೆಯನ್ನು ಹುಚ್ಚುನಾಯಿಯಿಂದ ತೀವ್ರ ಕಡಿತಕ್ಕೊಳಗಾದ ಜೋಸೆಫ್ ಮೆಸ್ಟರ್ ಎಂಬ ಬಾಲಕನಿಗೆ ನೀಡುವುದರ ಮೂಲಕ ಮಾರಕ ರೇಬೀಸ್ ರೋಗದಿಂದ ಆ ಹುಡುಗನನ್ನು ರಕ್ಷಿಸುವಲ್ಲಿ ಅವರು ಯಶಸ್ವಿಯಾದರು. ಇದು ಹುಚ್ಚುನಾಯಿ ಕಾಯಿಲೆ ಎಂಬ ಭಯಾನಕ ಪ್ರಾಣಿಜನ್ಯ ರೋಗದ ವಿರುದ್ಧದ ಮೊದಲ ಲಸಿಕಾ ಪ್ರಯೋಗವೂ ಹೌದು.

ಮಾನವನ ಸೋಂಕು ರೋಗಗಳಲ್ಲಿ ಶೇ 60ಕ್ಕೂ ಅಧಿಕ ಕಾಯಿಲೆಗಳಿಗೆ ಪ್ರಾಣಿಗಳೇ ಮೂಲ. ಅದರಲ್ಲೂ ಹೊಸದಾಗಿ ಕಾಣಿಸಿಕೊಳ್ಳುತ್ತಿರುವ ಬಹುತೇಕ ವ್ಯಾಧಿಗಳಿಗೂ ಪಶುಗಳಿಗೂ ಸಂಬಂಧವಿದೆ. ಎರಡು ವರ್ಷಗಳಿಂದ ಜನಜೀವನವನ್ನು ಹೈರಾಣಾಗಿಸಿ ಅಪಾರ ಸಾವು, ಸಂಕಟಗಳಿಗೆ ಕಾರಣವಾದ ಕೊರೊನಾ ವೈರಾಣುಗಳು ಬಾವಲಿ, ಪ್ಯಾಂಗೋಲಿನ್‌ನಿಂದ ಬಂದಿರಬಹುದೆಂದು ಬಲವಾಗಿ ನಂಬಲಾಗಿದೆ. ಕೊರೊನಾ ತುಸು ನಿಯಂತ್ರಣಕ್ಕೆ ಬಂದಿದೆಯೆಂದು ಅನಿಸುತ್ತಿರುವ ಈ ಹೊತ್ತಿನಲ್ಲಿ 'ಮಂಗನ ಸಿಡುಬು' ಎಂಬ ಮತ್ತೊಂದು ಸಾಂಕ್ರಾಮಿಕ ರೋಗ ಮಂಗಗಳಿಂದ ಮಾನವನಿಗೆ ಹರಡುತ್ತಿರುವುದು ಪತ್ತೆಯಾಗಿದೆ. ಅದರಲ್ಲೂ ಯುರೋಪ್‌ನಲ್ಲಿ ಈ ಎರಡು ವಾರಗಳಲ್ಲಿ ಮಂಕಿಪಾಕ್ಸ್ ಪ್ರಕರಣಗಳ ಸಂಖ್ಯೆಯಲ್ಲಿ ಮೂರು ಪಟ್ಟು ಏರಿಕೆಯಾಗಿದ್ದು ಕಳವಳ ಹೆಚ್ಚಿಸಿದೆ.

ಲಕ್ಷಾಂತರ ಸಂಖ್ಯೆಯಲ್ಲಿ ಮಾನವ ಬಲಿ ಪಡೆದ ಪ್ಲೇಗ್ ಸೇರಿದಂತೆ ಇಲಿಜ್ವರ, ಕ್ಷಯ, ಆಂಥ್ರಾಕ್ಸ್, ಸಾಲ್ಮೊನೆಲ್ಲಾ ವ್ಯಾಧಿ, ಕೋಳಿಶೀತ ಜ್ವರ, ಮಂಗನಕಾಯಿಲೆ, ಹಂದಿ ಜ್ವರ, ಬಾವಲಿ ಜ್ವರ, ಬ್ರುಸೆಲ್ಲಾ, ಎಬೋಲ, ಬೆಕ್ಕುಗಳಿಂದ ಹರಡುವ ಟಾಕ್ಸೊಪ್ಲಾಸ್ಮವಲ್ಲದೆ ಪಶುಗಳ ಶಿಲೀಂಧ್ರ, ಲಾಡಿಹುಳ, ಕೊಕ್ಕೆಹುಳ ಬಾಧೆಗಳು ಸೇರಿದಂತೆ ಇನ್ನೂರಕ್ಕೂ ಅಧಿಕ ಪ್ರಮುಖ ಪ್ರಾಣಿಜನ್ಯ ರೋಗಗಳನ್ನು ಗುರುತಿಸಲಾಗಿದೆ.

ಪರಿಸರಮಾಲಿನ್ಯ, ಕಾಡು ನಾಶ, ಮಾನವ ಅತಿಕ್ರಮಣ, ಕಿರಿದಾದ ಆವಾಸಸ್ಥಾನ, ಆಹಾರ, ಮೇವಿನ ಕೊರತೆ, ತಾಪಮಾನದ ಏರಿಕೆ, ಋತುಚಕ್ರದ ವ್ಯತ್ಯಯಗಳು ಹತ್ತಾರು ಅಪಾಯಗಳನ್ನು ತಂದೊಡ್ಡುತ್ತಿವೆ. ಹೊಸ ಹೊಸ ರೋಗಗಳ ಜೊತೆಗೆ ಹಳೆಯ ಕಾಯಿಲೆಗಳೂ ಬೇರೊಂದು ರೂಪದಲ್ಲಿ ಮರುಕಳಿಸುತ್ತಾ ಸವಾಲು ಎಸೆಯುತ್ತಿವೆ.

ಸಾಕುಪ್ರಾಣಿಗಳ ಜೊತೆಗೆ ವಾಸದ ಶೆಡ್‌ಗಳ ಸ್ವಚ್ಛತೆ, ಶುದ್ಧ ನೀರು, ಮೇವಿನ ಪೂರೈಕೆ, ಕಾಲಕಾಲಕ್ಕೆ ಲಸಿಕೆ ಹಾಕುವುದು, ಜಂತುನಾಶಕ ಔಷಧ ನೀಡಿಕೆ, ಹಾಲನ್ನು ಕಾಯಿಸಿ ಬಳಸುವುದು, ಮಾಂಸ, ಮೊಟ್ಟೆಯಂತಹ ಆಹಾರ ಪದಾರ್ಥಗಳನ್ನು ಚೆನ್ನಾಗಿ ಬೇಯಿಸಿ ಉಪಯೋಗಿಸುವುದು, ಮುದ್ದು ಪ್ರಾಣಿಗಳು ಅಡುಗೆ ಮನೆ, ಮಲಗುವ ಕೋಣೆಗಳಿಗೆ ಬರುವುದನ್ನು ನಿರ್ಬಂಧಿಸುವುದು, ಪ್ರಾಣಿಗಳ ಸಂಪರ್ಕದ ನಂತರ ಕೈಕಾಲುಗಳನ್ನು ಚೆನ್ನಾಗಿ ತೊಳೆದುಕೊಳ್ಳುವುದು, ಪರಿಸರದ ನೈರ್ಮಲ್ಯ ಕಾಯ್ದುಕೊಳ್ಳುವಿಕೆ, ತ್ಯಾಜ್ಯಗಳ ಸೂಕ್ತ ವಿಲೇವಾರಿಯಂತಹ ಕ್ರಮಗಳು ಪಶುಜನ್ಯ ಕಾಯಿಲೆಗಳ ಸರಪಣಿಯನ್ನು ತುಂಡರಿಸಲು ಸಹಕಾರಿ.

ಮಾನವ, ಪ್ರಾಣಿ ಮತ್ತು ಪರಿಸರದ ಆರೋಗ್ಯ ಒಂದಕ್ಕೊಂದು ಪೂರಕ. ಒಂದರ ಅನಾರೋಗ್ಯ ಮತ್ತೊಂದನ್ನು ತೀವ್ರವಾಗಿ ಬಾಧಿಸಬಲ್ಲದು. ಈ ಮೂರೂ ಸ್ವಾಸ್ಥ್ಯಗಳನ್ನು ಒಂದಾಗಿ ಪರಿಗಣಿಸಿ ಪರಿಹಾರ ಹುಡುಕುವ 'ಒನ್ ಹೆಲ್ತ್' ಪರಿಕಲ್ಪನೆಯನ್ನು ಬಲಗೊಳಿಸುವುದು ಇಂದಿನ ಅನಿವಾರ್ಯ. ವೈದ್ಯಕೀಯ, ಪಶುವೈದ್ಯಕೀಯ ಮತ್ತು ಪರಿಸರ ಪರಿಣತರು, ವಿಜ್ಞಾನಿಗಳು, ಕ್ಷೇತ್ರ ಮಟ್ಟದ ಕಾರ್ಯಕರ್ತರು ಒಗ್ಗೂಡಿ, ಪರಸ್ಪರ ಸಮನ್ವಯದಿಂದ ಕಾರ್ಯತತ್ಪರರಾದಾಗ ಮಾತ್ರ ಇಂತಹ ಪ್ರಾಣಿಜನ್ಯ ರೋಗಗಳ ನಿಯಂತ್ರಣ ಸಾಧ್ಯ.

ಲೇಖಕ: ಮುಖ್ಯ ಪಶುವೈದ್ಯಾಧಿಕಾರಿ ಸರ್ಕಾರಿ ಪಶು ಆಸ್ಪತ್ರೆ, ತೀರ್ಥಹಳ್ಳಿ

ವಾಚಕರ ವಾಣಿ

ಸರ್ವಾಧಿಕಾರಿ ಧೋರಣೆ ಸಲ್ಲ

ಒಂದು ಸ್ವಸ್ಥ ಸಮಾಜ, ಸ್ವಸ್ಥ ಪರಿಸರ ನಿರ್ಮಾಣದಲ್ಲಿ ಕಲಾವಿದರು- ಕಲೆ, ಸಾಹಿತಿಗಳು- ಸಾಹಿತ್ಯ ಪ್ರಮುಖವಾದ ಪಾತ್ರವನ್ನು ವಹಿಸುತ್ತಾ ಬಂದಿವೆ. ಸ್ವಾತಂತ್ರ್ಯ ಹೋರಾಟವೂ ಸೇರಿದಂತೆ ಇದುವರೆಗಿನ ಯಾವುದೇ ಹೋರಾಟಕ್ಕೆ ಸಂಬಂಧಿಸಿದಂತೆ ವಿರೋಧ ಪಕ್ಷದ ಸ್ಥಾನದಲ್ಲಿ ನಿಂತು, ಸಮಾಜದ ಹಿತಕ್ಕೆ ಪೂರಕವಾಗಿ ಕೆಲಸ ಮಾಡುವವರು ಕಲಾವಿದರು, ಸಾಹಿತಿಗಳು. ಸದಾ ವಿರೋಧ ಪಕ್ಷದ ಸ್ಥಾನದಲ್ಲಿ ನಿಂತು ಕೆಲಸ ಮಾಡುವ ರಂಗಭೂಮಿ ಎಲ್ಲ ಕಾಲಕ್ಕೂ ಪ್ರತಿಭಟನೆಯ ಅಸ್ತ್ರವಾಗಿದೆ.

ಜನಪರವಾಗಿ, ಜೀವಪರವಾಗಿ, ಪರಿಸರಪರವಾಗಿ ಸದಾ ಕೆಲಸ ಮಾಡುವ ವಿವಿಧ ಕಲಾ ಪ್ರಕಾರಗಳು ಸಾಂಸ್ಕೃತಿಕವಾಗಿ ಜೀವಂತವಾಗಿ ಇರಬೇಕಾಗುತ್ತದೆ. ಆದರೆ ಇವು ನಿಷ್ಕ್ರಿಯವಾಗುತ್ತಿದ್ದು, ಅಕಾಡೆಮಿಗಳು ಪ್ರೋತ್ಸಾಹದ ಕೊರತೆ ಎದುರಿಸುತ್ತಿವೆ. ನಾಟಕಗಳನ್ನು ಪ್ರತಿಬಂಧಿಸುವ ಕೆಲಸ ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನ ಆನವಟ್ಟಿಯಲ್ಲಿ ಇತ್ತೀಚೆಗೆ ನಡೆದಿರುವುದು ಖಂಡನೀಯ. ಜೋಸೆಫ್ ಸ್ಟೀನ್ ಅವರ ಮೂಲ ನಾಟಕವನ್ನು ಜಯಂತ್ ಕಾಯ್ಕಿಣಿ ಅವರು ಕನ್ನಡಕ್ಕೆ ರೂಪಾಂತರಿಸಿರುವ 'ಜತೆಗಿರುವನು ಚಂದಿರ' ನಾಟಕ ಪ್ರದರ್ಶನಕ್ಕೆ ಕೆಲವರು ಅಡ್ಡಿಪಡಿಸಿರುವುದು ಸರ್ವಾಧಿಕಾರದ ಧೋರಣೆಯಾಗಿದೆ. ತಪ್ಪಿತಸ್ಥರ ಮೇಲೆ ಸರ್ಕಾರ ಕ್ರಮ ಜರುಗಿಸಬೇಕು. ನಾಟಕ ಅಥವಾ ಅಭಿವ್ಯಕ್ತಿಯು ಸದಾ ಸ್ವತಂತ್ರವಾಗಿ ಇರಬೇಕು.

ಡಾ. ಎ.ಆರ್.ಗೋವಿಂದ ಸ್ವಾಮಿ ನಾಯಕ್, ದೇವರಾಜ್, ವೆಂಕಟರಾಜು, ಶ್ರೀನಾಥ್, ಬೆಂಗಳೂರು

ವಿದ್ಯುತ್‌ಚಾಲಿತ ವಾಹನ ಮೇಳ: ಜಿಲ್ಲೆಗೂ ಬರಲಿ

ಬೆಂಗಳೂರಿನಲ್ಲಿ 'ಬೆಸ್ಕಾಂ' ವತಿಯಿಂದ ಇತ್ತೀಚೆಗೆ ನಡೆದ ವಿಭಾಗ ಮಟ್ಟದ ಮೂರು ದಿನಗಳ ವಿದ್ಯುತ್‌ಚಾಲಿತ ವಾಹನಗಳ ಪ್ರದರ್ಶನ ಹಾಗೂ ಮಾರಾಟ ಮೇಳದಲ್ಲಿ ಲಕ್ಷಾಂತರ ಜನ ಭಾಗವಹಿಸಿ, ವಿದ್ಯುತ್‌ಚಾಲಿತ ವಾಹನಗಳ ಬಳಕೆ ಮತ್ತು ನಿರ್ವಹಣೆಯ ಬಗ್ಗೆ ಸಮಗ್ರ ಮಾಹಿತಿ ಪಡೆದರು; ಸ್ಥಳದಲ್ಲೇ ವಿವಿಧ ಮಾದರಿಯ ನೂರಾರು ವಾಹನಗಳ ಮುಂಗಡ ಬುಕಿಂಗ್ ಕೂಡ ಆಗಿದೆ ಎಂದು ವರದಿಯಾಗಿದೆ.

ಸರ್ಕಾರ ಇಂತಹ ಮೇಳಗಳನ್ನು ಜಿಲ್ಲಾ ಕೇಂದ್ರಗಳಲ್ಲೂ ನಡೆಸಬೇಕು. ವಿದ್ಯುತ್‌ಚಾಲಿತ ವಾಹನಗಳ ಬಳಕೆಯ ಬಗ್ಗೆ ರಾಜ್ಯವ್ಯಾಪಿ ಜನರಿಗೆ ಅರಿವು ಮೂಡಿಸಿ ಹೆಚ್ಚೆಚ್ಚು ವಿದ್ಯುತ್‌ಚಾಲಿತ ವಾಹನಗಳನ್ನು ಬಳಸುವಂತೆ ಉತ್ತೇಜಿಸಬೇಕು. ಅದಕ್ಕೆ ಬೇಕಾಗುವ ಮೂಲ ಸೌಕರ್ಯಗಳಾದ ಚಾರ್ಜಿಂಗ್ ಪಾಯಿಂಟ್ ಹಾಗೂ ಸರ್ವಿಸ್ ಸ್ಟೇಷನ್‌ಗಳನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಬೇಕು. ಇದರಿಂದ ವಾಯುಮಾಲಿನ್ಯ ಕಡಿಮೆಯಾಗಬಹುದು. ಜೊತೆಗೆ ಪೆಟ್ರೋಲ್ ಹಾಗೂ ಡೀಸೆಲ್‌ಗೂ ಬೇಡಿಕೆ ಕಡಿಮೆಯಾಗಬಹುದು.

ಭಾಸ್ಕರ್ ಶೆಟ್ಟಿ, ಹಾಸನ

ಅತ್ಯಂತ ಬರ್ಬರ ಕೃತ್ಯ

ಸರಳ ವಾಸ್ತುಶಾಸ್ತ್ರದೊಂದಿಗೆ ಜನರಿಗೆ 'ಅದೃಷ್ಟದ ಮನೆ'ಯ ದಾರಿ ತೋರಿಸುತ್ತಿದ್ದ ವಾಸ್ತುಶಾಸ್ತ್ರಜ್ಞ ಚಂದ್ರಶೇಖರ ಗುರೂಜಿ ಬರ್ಬರವಾಗಿ ಹತ್ಯೆಗೀಡಾಗಿದ್ದು ದುರದೃಷ್ಟಕರ. ಗುರೂಜಿ ಅವರ ಬದುಕು ಕೊಲೆಯಲ್ಲಿ ಪರ್ಯವಸಾನಗೊಂಡಿರುವುದು ದುಃಖದ ವಿಷಯ.

ಹಾಡಹಗಲೇ ಜನರ ಸಮ್ಮುಖದಲ್ಲಿ ಪ್ರಮುಖ ವ್ಯಕ್ತಿಯೊಬ್ಬರನ್ನು ಸುಲಭವಾಗಿ ಇರಿದು ಕೊಲ್ಲುವುದು ಎಷ್ಟೊಂದು ಸರಳ? ಕೊಲೆಯಾದ ಕೆಲವೇ ಗಂಟೆಗಳಲ್ಲಿ ಆರೋಪಿಗಳ ಹೆಡೆಮುರಿ ಕಟ್ಟಿದ ನಮ್ಮ ಪೊಲೀಸರ ಕಾರ್ಯದಕ್ಷತೆ ಮೆಚ್ಚುವಂಥದ್ದು.

ನಾರಾಯಣರಾವ ಕುಲಕರ್ಣಿ, ಹಿರೇಅರಳಿಹಳ್ಳಿ, ಯಲಬುರ್ಗಾ

ನಾಚಿಕೆಗೇಡಿನ ಸಂಗತಿ

ಪಿಎಸ್‌ಐ ನೇಮಕಾತಿ ಅಕ್ರಮ ಮತ್ತು ಭ್ರಷ್ಟಾಚಾರಕ್ಕೆ ಸಂಬಂಧಿಸಿದ ಪ್ರತ್ಯೇಕ ಪ್ರಕರಣಗಳಲ್ಲಿ ಎಡಿಜಿಪಿ ಅಮ್ರಿತ್ ಪೌಲ್ ಹಾಗೂ ಐಎಎಸ್ ಅಧಿಕಾರಿ ಜೆ. ಮಂಜುನಾಥ್ ಅವರನ್ನು ಬಂಧಿಸಿರುವ ಸುದ್ದಿ ಓದಿ (ಪ್ರ.ವಾ., ಜುಲೈ 5) ವ್ಯವಸ್ಥೆಯ ಬಗೆಗೆ ಬಹಳ ಬೇಸರವಾಯಿತು. ಅಪಾರ ಅಧಿಕಾರ ಮತ್ತು ಸವಲತ್ತುಗಳೊಂದಿಗೆ ಕೈತುಂಬ ಸಂಬಳ ಸಿಗುತ್ತಿದ್ದರೂ ಇಂತಹ ಪ್ರಭಾವಿ ಅಧಿಕಾರಿಗಳು ಲಂಚಕ್ಕೆ ಕೈಯೊಡ್ಡುವುದು ನಾಚಿಕೆಗೇಡಿನ ಸಂಗತಿ. ಇವರ ಬಂಧನವು ಉಳಿದವರಿಗೆ ಗಟ್ಟಿ ಸಂದೇಶ ರವಾನಿಸಲಿ.

ವೈ.ಎನ್.ನಾಗರಾಜ, ಬೆಂಗಳೂರು

ಶಿಕ್ಷಕರಿಗೆ ದಾನಿಗಳ ಶೋಧ ಕಾರ್ಯ!

'ಕಲಿಕಾ ಚೇತರಿಕೆ' ಕಾರ್ಯಕ್ರಮಕ್ಕೆ ಬೇಕಾದಂತಹ ಬೋಧನಾ ಸಾಮಗ್ರಿಯ ಪೂರೈಕೆಗೆ ಅನುದಾನದ ಕೊರತೆಯಾಗಿರುವ ಸುದ್ದಿ ಓದಿ ಬೇಸರವಾಯಿತು (ಪ್ರ.ವಾ., ಜೂನ್ 30). ಅಲ್ಲದೆ ಕಲಿಕಾ ಚೇತರಿಕೆಯ ಹಾಳೆಗಳನ್ನು ಜೆರಾಕ್ಸ್ ಮಾಡಿಸಲು ಸ್ವತಃ ಶಿಕ್ಷಕರೇ ದಾನಿಗಳ ಬಳಿ ಹಣ ಸಂಗ್ರಹಿಸಬೇಕು ಎಂದು ಸುತ್ತೋಲೆ ಹೊರಡಿಸಿರುವುದು ವಿಷಾದನೀಯ. ಶಿಕ್ಷಕರನ್ನು ಜನಗಣತಿಯಿಂದ ಚುನಾವಣಾ ಕರ್ತವ್ಯದವರೆಗೆ ದುಡಿಸಿಕೊಳ್ಳುತ್ತಿದ್ದಾರೆ. ಈಗ ದಾನಿಗಳನ್ನು ಪತ್ತೆ ಮಾಡುವ ಕೆಲಸವನ್ನೂ ಅವರಿಗೆ ಹೆಚ್ಚುವರಿಯಾಗಿ ಹೊರಿಸಿ, ಅವರ ಬೆನ್ನು ಬಾಗುವಂತೆ ಮಾಡಿರುವುದು ತರವಲ್ಲ. ಪತ್ತೆ ಕಾರ್ಯದಲ್ಲಿ ವಿಫಲರಾದ ಶಿಕ್ಷಕರು ಜೆರಾಕ್ಸ್‌ಗೆ ಬೇಕಾಗುವ ಹಣವನ್ನು ತಮ್ಮ ಜೇಬಿನಿಂದಲೇ ಭರಿಸಬೇಕಂತೆ!

ಪ್ರತಿಮೆಗಳಿಗೆ, ಭವನಗಳಿಗೆ ಸಾವಿರಾರು ಕೋಟಿ ರೂಪಾಯಿ ಖರ್ಚು ಮಾಡುತ್ತಿರುವ ಉದಾಹರಣೆಗಳು ಕಣ್ಣಮುಂದೆಯೇ ಇವೆ. ಹೀಗಿರುವಾಗ, ಭವಿಷ್ಯದಲ್ಲಿ ಉತ್ತಮ ಸಮಾಜ ನಿರ್ಮಾಣದಂತಹ ಮಹತ್ಕಾರ್ಯ ಸಾಧಿಸಲು ಇರುವ ಏಕೈಕ ಮಾರ್ಗವಾದಂತಹ ಶಿಕ್ಷಣ ಕ್ಷೇತ್ರಕ್ಕೆ ಹಣವನ್ನು ನೀಡದೆ ಸರ್ಕಾರ ನುಣುಚಿಕೊಳ್ಳುತ್ತಿರುವುದನ್ನು ನೋಡಿದರೆ ಆಶ್ಚರ್ಯವಾಗುತ್ತದೆ.

ಗುಣಮಟ್ಟದ ಶಿಕ್ಷಣವನ್ನು ಇಂದಿನ ಮಕ್ಕಳಿಗೆ ಒದಗಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಬೇಕು. ಇಂದು ನಾವು ಎಚ್ಚೆತ್ತುಕೊಳ್ಳದಿದ್ದರೆ ಇತಿಹಾಸ ನಮ್ಮನ್ನು ಎಂದಿಗೂ ಕ್ಷಮಿಸುವುದಿಲ್ಲ.

ಈರಣ್ಣ ಎನ್.ವಿ., ನಾರಾಯಣಪುರ, ಶಿರಾ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಮಾನವರಹಿತ ಯುದ್ಧವಿಮಾನ ನಿರ್ಮಾಣದತ್ತ ಮತ್ತೊಂದು ಹೆಜ್ಜೆ...

ಮಾನವರಹಿತ ಯುದ್ಧವಿಮಾನದ (ಡ್ರೋನ್ ಮಾದರಿ) ಮೊದಲ ಪರೀಕ್ಷೆಯನ್ನು ಚಿತ್ರದುರ್ಗದ ವಿಮಾನ ಪರೀಕ್ಷಾ ಕೇಂದ್ರದಲ್ಲಿ ನಡೆಸಲಾಗಿದೆ. ಸಂಪೂರ್ಣವಾಗಿ ದೇಶೀಯವಾಗಿ ಅಭಿವೃದ್ಧಿಪಡಿಸಿದ ಈ ಯುದ್ಧವಿಮಾನದ ಪರೀಕ್ಷೆ ಯಶಸ್ವಿಯಾಗಿದೆ ಮತ್ತು ಅತ್ಯಂತ ನಿಖರವಾಗಿ ನಡೆದಿದೆ. ರೇಡಾರ್ ಕಣ್ಣಿಗೆ ಕಾಣಿಸದ, ಅತ್ಯಂತ ದಕ್ಷವಾಗಿ ಕಾರ್ಯನಿರ್ವಹಿಸಬಲ್ಲ ಮಾನವರಹಿತ ಯುದ್ಧವಿಮಾನ ತುಕಡಿ ರಚನೆಗೆ ಕಾಲ ಸನ್ನಿಹಿತವಾಗಿದೆ ಎಂಬುದನ್ನು ಮೊದಲ ಪರೀಕ್ಷೆಯು ಸಾರಿ ಹೇಳಿದೆ

ಯುದ್ಧವಿಮಾನದ ಕಿರು ಮಾದರಿ

ಪ್ರಜಾವಾಣಿ ವಾರ್ತೆ

ಮಾನವರಹಿತ ಯುದ್ಧವಿಮಾನಗಳ ಪ್ರಾಯೋಗಿಕ ಪರೀಕ್ಷೆಯಲ್ಲಿ ಒಂದು ಹೆಜ್ಜೆ ಮುಂದಿಡಲಾಗಿದೆ. ರಕ್ಷಣಾ ಸಂಶೋಧನೆ ಹಾಗೂ ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ನೇತೃತ್ವದಲ್ಲಿ ಅಭಿವೃದ್ಧಿಪಡಿಸಲಾದ ತಂತ್ರಜ್ಞಾನವನ್ನು ಜುಲೈ 1ರಂದು ಚಿತ್ರದುರ್ಗದ ಸಮೀಪದ ಡಿಆರ್‌ಡಿಒ ಕೇಂದ್ರದಲ್ಲಿ ಪರೀಕ್ಷೆಗೆ ಒಳಪಡಿಸಲಾಗಿದೆ. ಪೈಲಟ್‌ಗಳ ನೆರವಿಲ್ಲದೇ ಸ್ವತಂತ್ರವಾಗಿ ಹಾರಾಟ ನಡೆಸುವ ಸಾಮರ್ಥ್ಯದ ಈ ತಂತ್ರಜ್ಞಾನವನ್ನು ಮೊದಲ ಬಾರಿಗೆ ಭಾರತ ಪ್ರಯೋಗಿಸಿದೆ.

ಈ ಪ್ರಾಯೋಗಿಕ ಪರೀಕ್ಷೆಗೆ ಬಳಕೆಯಾದ ತಂತ್ರಜ್ಞಾನ ಸಂಪೂರ್ಣ ದೇಶೀಯವಾದದ್ದು ಎಂದು ರಕ್ಷಣಾ ಸಚಿವಾಲಯ ಹೇಳಿದೆ. ಈ ಯುದ್ಧವಿಮಾನದಲ್ಲಿ ಬಳಸಲಾಗಿರುವ ತಂತ್ರಜ್ಞಾನವನ್ನು ಸ್ಟೆಲ್ತ್ ವಿಂಗ್ ಫ್ಲೈಯಿಂಗ್ ಟೆಸ್ಟ್‌ಬೆಡ್ ಅಥವಾ 'ಸ್ವಿಫ್ಟ್' ಎಂದು ಕರೆಯಲಾಗಿದೆ. ಟೇಕ್‌ಆಫ್, ಹಾರಾಟ, ಗೊತ್ತುಪಡಿಸಿದ ಗುರಿಯತ್ತ ಪ್ರಯಾಣ, ಲ್ಯಾಂಡಿಂಗ್ ಕಾರ್ಯಗಳನ್ನು ಈ ವಿಮಾನ ಸ್ವತಂತ್ರವಾಗಿ ನಿರ್ವಹಿಸುತ್ತದೆ. ರೇಡಾರ್‌ಗಳ ಕಣ್ತಪ್ಪಿಸಿ ಹಾರಾಟ ನಡೆಸುವ ಸಾಮರ್ಥ್ಯ ಹಾಗೂ ಅತಿವೇಗವಾಗಿ ಲ್ಯಾಂಡಿಂಗ್ ಈ ತಂತ್ರಜ್ಞಾನದ ಮುಖ್ಯ ಲಕ್ಷಣ. ಇವುಗಳ ಕಾರ್ಯಕ್ಷಮತೆಯನ್ನು ಪರಿಶೀಲಿಸಲಾಗಿದೆ. ಸ್ವಿಫ್ಟ್ ತಂತ್ರಜ್ಞಾನ ಬಳಸಿ ಮಾನವರಹಿತ ಬಾಂಬರ್ ಯುದ್ಧವಿಮಾನ 'ಘಾತಕ್' ಅನ್ನು ಅಭಿವೃದ್ಧಿಪಡಿಸಲಾಗುವುದು. ಮೊದಲನೇ ಪರೀಕ್ಷೆ ಯಶಸ್ವಿಯಾಗಿದೆ. ಇಂತಹ ಇನ್ನೂ ಹತ್ತು ಪ್ರಯೋಗಗಳ ಬಳಿಕ ಸ್ವಿಫ್ಟ್ ತಂತ್ರಜ್ಞಾನದ ಸಾಮರ್ಥ್ಯ ಖಚಿತಪಡಲಿದೆ. ಇಲ್ಲಿನ ಫಲಿತಾಂಶಗಳನ್ನು ಆಧರಿಸಿ ಘಾತಕ್‌ಗೆ ಸ್ಪಷ್ಟ ರೂಪ ನೀಡಲಾಗುವುದು.

ರೇಡಾರ್‌ಗೆ ಕಾಣಿಸದ (ಸ್ಟೆಲ್ತ್), ಮಾನವರಹಿತ ಯುದ್ಧವಿಮಾನಗಳನ್ನು ಅಭಿವೃದ್ಧಿಪಡಿಸುವ ಕಾರ್ಯಕ್ರಮಕ್ಕೆ 2009ರಲ್ಲೇ ಬುನಾದಿ ಹಾಕಲಾಗಿತ್ತು. ಇದಕ್ಕಾಗಿ ರಕ್ಷಣಾ ಸಚಿವಾಲಯವು 'ಅಟೊನಾಮಸ್ ಅನ್‌ಮ್ಯಾನ್ಡ್ ರಿಸರ್ಚ್ ವೆಹಿಕಲ್-ಔರಾ' ಎಂಬ ಕಾರ್ಯಕ್ರಮವನ್ನು ಹಾಕಿಕೊಳ್ಳಲಾಗಿತ್ತು. ರೇಡಾರ್‌ಗಳ ಕಣ್ತಪ್ಪಿಸಿ, ಶತ್ರುಪಾಳಯಕ್ಕೆ ನುಗ್ಗಿ ದಾಳಿ ನಡೆಸಿ ವಾಪಸಾಗುವ ಸಾಮರ್ಥ್ಯವಿರುವ ಮಾನವರಹಿತ ಯುದ್ಧವಿಮಾನಗಳನ್ನು ತಯಾರಿಸುವುದು ಈ ಕಾರ್ಯಕ್ರಮದ ಗುರಿಯಾಗಿತ್ತು.

ರೇಡಾರ್‌ಗಳ ಕಣ್ಣಿಗೆ ಬೀಳದೇ ಇರಲು ಇಂತಹ ಯುದ್ಧವಿಮಾನಗಳಿಗೆ ಭಾರಿ ವೇಗದಲ್ಲಿ ಹಾರಾಟ ನಡೆಸುವ ಸಾಮರ್ಥ್ಯವಿರಬೇಕಿತ್ತು. ಅಲ್ಲದೆ, ಹಾರಾಟದ ವೇಳೆ ತರಂಗಗಳನ್ನು ಉತ್ಪಾದಿಸದೇ ಇರುವಂತಹ ವಿನ್ಯಾಸ ಈ ವಿಮಾನಗಳಿಗೆ ಇರಬೇಕಿತ್ತು. ಜತೆಗೆ ರೇಡಾರ್‌ಗಳು ಹೊರಡಿಸುವ ತರಂಗಗಳನ್ನು ಪ್ರತಿಫಲಿಸದೇ ಇರುವಂತಹ ವಸ್ತುವಿನಲ್ಲಿ ಅದರ ದೇಹವನ್ನು ರೂಪಿಸಬೇಕಿತ್ತು. ಇವೆಲ್ಲವುಗಳ ಒಟ್ಟಿಗೆ, ಸಂಪೂರ್ಣ ಮಾನವರಹಿತವಾಗಿ ಕಾರ್ಯನಿರ್ವಹಿಸುವ ತಂತ್ರಜ್ಞಾನದ ಅವಶ್ಯಕತೆ ಇತ್ತು. ಇವೆಲ್ಲವನ್ನೂ ದೇಶೀಯವಾಗಿ ಅಭಿವೃದ್ಧಿಪಡಿಸುವ ಗುರಿ ಹಾಕಿಕೊಂಡಿದ್ದರಿಂದ, 2023ರ ವೇಳೆಗೆ ಮೊದಲ ಔರಾ ಹಾರಾಟ ನಡೆಸಲಿದೆ ಎಂದು ಅಂದಾಜಿಸಲಾಗಿತ್ತು.

2015-16ರಲ್ಲಿ ಕೇಂದ್ರ ಸರ್ಕಾರವು ಈ ಯೋಜನೆಯ ಹೆಸರನ್ನು ಬದಲಿಸಿತು. ಔರಾವನ್ನು 'ಘಾತಕ್' ಎಂದು ಮರುನಾಮಕರಣ ಮಾಡಲಾಯಿತು. ಈ ಯೋಜನೆಯನ್ನು ಕಾರ್ಯಗತಗೊಳಿಸಲು ದೇಶದ ರಕ್ಷಣಾ ವಲಯದ ಹಲವು ಸಂಸ್ಥೆಗಳು ಮತ್ತು ಐಐಟಿ ಕಾನ್ಪುರ ಜಂಟಿಯಾಗಿ ಕೆಲಸ ಮಾಡುತ್ತಿವೆ. ಐಐಟಿ-ಕಾನ್ಪುರ, ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ ಅಧೀನ ಸಂಸ್ಥೆಗಳಾದ ಏರೊನಾಟಿಕಲ್ ಡೆವಲಪ್‌ಮೆಂಟಲ್ ಎಸ್ಟಾಬ್ಲಿಷ್‌ಮೆಂಟ್ ಮತ್ತು ಡೆಹ್ರಾಡೂನಿನ ಡಿಫೆನ್ಸ್ ಎಲೆಕ್ಟ್ರಾನಿಕ್ಸ್ ಲ್ಯಾಬೊರೇಟರಿ ಈ ಕಾರ್ಯಕ್ರಮಕ್ಕಾಗಿ ದುಡಿಯುತ್ತಿವೆ.

ಶತ್ರುವಿನ ಗಡಿಯೊಳಗೆ ನುಗ್ಗಿ, ನಿರ್ದಿಷ್ಟ ದಾಳಿಯಂತಹ ಕಾರ್ಯಾಚರಣೆಗಳನ್ನು ನಡೆಸಲು ಇಂತಹ ಮಾನವರಹಿತ ಯುದ್ಧವಿಮಾನಗಳು ನೆರವಾಗುತ್ತವೆ. ಇವು ಸೈನಿಕರ ಜೀವಹಾನಿಯನ್ನು ತಪ್ಪಿಸುತ್ತವೆ. ಇದು ಈ ವಿಮಾನಗಳಿಂದ ಆಗುವ ಅತ್ಯಂತ ಮಹತ್ವದ ಅನುಕೂಲ. ಜತೆಗೆ, ಇಂತಹ ಕಾರ್ಯಾಚರಣೆಯ ನಿಖರತೆ ಮತ್ತು ಯಶಸ್ಸಿನ ಸಾಧ್ಯತೆಗಳನ್ನು ಹೆಚ್ಚಿಸುತ್ತದೆ. ಹೀಗಾಗಿ ಇದು ದೇಶದ ರಕ್ಷಣಾ ಕ್ಷೇತ್ರದಲ್ಲಿ ಅತ್ಯಂತ ಮಹತ್ವದ ಕಾರ್ಯಕ್ರಮಗಳಲ್ಲಿ ಒಂದಾಗಿದೆ ಎಂದು ವಿಶ್ಲೇಷಿಸಲಾಗಿದೆ.

ಅಮೆರಿಕ, ಚೀನಾದಲ್ಲಿವೆ ಸ್ಟೆಲ್ತ್ ಯುದ್ಧವಿಮಾನ

ಭಾರತ ಅಭಿವೃದ್ಧಿಪಡಿಸುತ್ತಿರುವ ಘಾತಕ್ ಮಾದರಿಯ ರೇಡಾರ್ ಕಣ್ತಪ್ಪಿಸಿ ಸಾಗುವ ಮಾನವ ರಹಿತ ಯುದ್ಧವಿಮಾನಗಳನ್ನು ಅಮೆರಿಕ, ಚೀನಾ ಮೊದಲಾದ ದೇಶಗಳು ಈಗಾಗಲೇ ಹೊಂದಿವೆ. ಚೀನಾ ಬಳಿ ಸಿಎಚ್-7 ಹಾಗೂ ಜಿಜೆ-11 ಹೆಸರಿನ ಯುದ್ಧವಿಮಾನಗಳಿವೆ. ಅಮೆರಿಕದ ಬಳಿ ಲಾಕ್‌ಹೀಡ್ ಮಾರ್ಟಿನ್ ಕಂಪನಿ ಅಭಿವೃದ್ಧಿಪಡಿಸಿದ ಆರ್‌ಕ್ಯೂ-170, ಆರ್‌ಕ್ಯೂ-180 ವಿಮಾನಗಳಿವೆ. ರಷ್ಯಾ ಬಳಿ ಇದೇ ಸಾಮರ್ಥ್ಯದ ಎಸ್‌ಯು-70 ಒಖೊಟನಿಕ್ ಬಿ ಯುದ್ಧವಿಮಾನವಿದೆ. ಚೀನಾ ಅಭಿವೃದ್ಧಿಪಡಿಸಿರುವ ಎಚ್‌ಕ್ಯೂ-9/ಪಿ ವಾಯುರಕ್ಷಣಾ ವ್ಯವಸ್ಥೆಯ ಕಣ್ತಪ್ಪಿಸಿ ಸಾಗುವ ಸಾಮರ್ಥ್ಯ ಘಾತಕ್ ಹಾಗೂ ಈ ಸ್ವರೂಪದ ಮಾನವರಹಿತ ಯುದ್ಧವಿಮಾನಗಳಿಗೆ ಇದೆ.

ರೇಡಾರ್ ಕಣ್ತಪ್ಪಿಸುವ ವಿನ್ಯಾಸ

15,000 ಕೆ.ಜಿ. ಒಟ್ಟು ತೂಕ

2,000 ಕೆ.ಜಿ. ತೂಕದಷ್ಟು ಬಾಂಬ್ ಅಥವಾ ಕ್ಷಿಪಣಿಯನ್ನು ಹೊತ್ತೊಯ್ಯುವ ಸಾಮರ್ಥ್ಯ

30,000 ಅಡಿ ಎತ್ತರದವರೆಗೂ ಹಾರಾಟ ನಡೆಸುವ ಸಾಮರ್ಥ್ಯ

300 ಕಿ.ಮೀ. ವಿಮಾನ ಕಾರ್ಯಾಚರಣೆಯ ಗರಿಷ್ಠ ವ್ಯಾಪ್ತಿ

ರೇಡಾರ್‌ನ ಕಣ್ತಪ್ಪಿಸಿ ಹಾರಾಟ ನಡೆಸಲು ದೇಹದ ವಿನ್ಯಾಸ ಅತ್ಯಂತ ಮಹತ್ವದ ಅಂಶವಾಗಿದೆ. ಇಂತಹ ವಿಮಾನಗಳಲ್ಲಿ ರೋಟರಿ ಬ್ಲೇಡ್ ಎಂಜಿನ್, ಟರ್ಬೊಪ್ರಾಪ್ ಎಂಜಿನ್, ಬಾಹ್ಯ ಜೆಟ್ ಎಂಜಿನ್ ಅನ್ನು ಅಳವಡಿಸಿದರೆ, ಹಾರಾಟದ ಸಂದರ್ಭದಲ್ಲಿ ಈ ಎಂಜಿನ್‌ಗಳು ಹೊರಡಿಸುವ ತರಂಗಗಳನ್ನು ರೇಡಾರ್‌ಗಳು ಸುಲಭವಾಗಿ ಪತ್ತೆಹಚ್ಚಿಬಿಡುತ್ತವೆ. ಹೀಗಾಗಿ ವಿಮಾನದ ದೇಹದೊಳಗೇ ಅಂತರ್ಗತವಾಗುವಂತೆ ಎಂಜಿನ್ ಅನ್ನು ಕೂರಿಸಬೇಕು. ಈ ವಿಮಾನಕ್ಕಾಗಿ ಅಭಿವೃದ್ಧಿಪಡಿಸಿರುವ ತಂತ್ರಜ್ಞಾನಗಳು ಮತ್ತು ವಿನ್ಯಾಸಗಳ ವಿವರ ಹೀಗಿದೆ

ಕಾರ್ಬನ್ ಫೈಬರ್ ದೇಹ

ರೇಡಾರ್‌ಗಳು ಹೊರಡಿಸುವ ತರಂಗಗಳನ್ನು ಪ್ರತಿಫಲಿಸದೇ ಇರುವಂತಹ ವಸ್ತುವಿನಿಂದ ದೇಹವನ್ನು ನಿರ್ಮಿಸಬೇಕಿತ್ತು. ಈ ಯುದ್ಧವಿಮಾನದ ದೇಹವನ್ನು ಕಾರ್ಬನ್‌ಫೈಬರ್ ಫಲಕಗಳು ಮತ್ತು ಎಪೋಕ್ಸಿ ರೆಸಿನ್ ಬಳಸಿ ನಿರ್ಮಿಸಲಾಗಿದೆ. ಇವು ರೇಡಾರ್ ತರಂಗಗಳನ್ನು ಹೀರಿಕೊಳ್ಳುವ ಸಾಮರ್ಥ್ಯ ಹೊಂದಿವೆ. ಇದರ ತೂಕ ಕಡಿಮೆ ಇರುವ ಕಾರಣ, ವಿಮಾನದ ವೇಗ ಮತ್ತು ಇಂಧನ ದಕ್ಷತೆ ಹೆಚ್ಚುತ್ತದೆ

ವಿಮಾನದ ಹಿಂಬದಿಯಲ್ಲಿ ಯಾವುದೇ ಲಂಬ ರೆಕ್ಕೆಗಳು (ಸ್ಟೆಬಿಲೈಜರ್‌ಗಳು) ಇಲ್ಲ. ಇಂತಹ ವಿನ್ಯಾಸವು, ರೇಡಾರ್‌ಗೆ ಕಾಣಿಸದೇ ಹಾರಾಟ ನಡೆಸುವಲ್ಲಿ ನೆರವಾಗುತ್ತದೆ

ಸ್ವಿಫ್ಟ್ ತಂತ್ರಜ್ಞಾನದ ಪ್ರಯೋಗಕ್ಕೆ ಬಳಸಿಕೊಂಡ ಮಾದರಿ

ದೇಹದ ವಿನ್ಯಾಸ ಬಹುತೇಕ ಚಪ್ಪಟೆಯಾಗಿದೆ. ದೇಹ ಮತ್ತು ರೆಕ್ಕೆಗಳು ಕೂಡುವಲ್ಲಿ ಯಾವುದೇ ಉಬ್ಬು ಇರದಂತೆ ನೋಡಿಕೊಳ್ಳಲಾಗಿದೆ. ಹಾರಾಟದ ವೇಳೆ ವೇಗವನ್ನು ಹೆಚ್ಚಿಸಲು ಮತ್ತು ತರಂಗಗಳನ್ನು ಸೃಷ್ಟಿಸದೇ ಇರಲು ಈ ವಿನ್ಯಾಸವು ನೆರವಾಗುತ್ತದೆ. ಈ ಸ್ವರೂಪದ ರೆಕ್ಕೆಗಳಲ್ಲಿ ಹೆಚ್ಚು ಇಂಧನವನ್ನು ಸಂಗ್ರಹಿಸಲು ಸಾಧ್ಯವಾಗುತ್ತದೆ. ಇದರಿಂದ ಈ ವಿಮಾನಗಳ ಕಾರ್ಯಾಚರಣೆಯ ಶಕ್ತಿ ಹೆಚ್ಚುತ್ತದೆ

ಅಟೊನಾಮಸ್ ಫ್ಲೈಯಿಂಗ್ ವಿಂಗ್ ತಂತ್ರಜ್ಞಾನ

ಈ ವಿಮಾನವು ಸಂಪೂರ್ಣ ಸ್ವತಂತ್ರವಾಗಿ ಟೇಕ್‌ಆಫ್ ಆಗುವ ಮತ್ತು ಲ್ಯಾಂಡ್ ಆಗುವ ಸಾಮರ್ಥ್ಯವಿರುವ ಏವಿಯಾನಿಕ್ಸ್ ತಂತ್ರಜ್ಞಾನವನ್ನು ಹೊಂದಿದೆ. ಆಗಸದಲ್ಲಿರುವ ಗುರಿ ಮತ್ತು ನೆಲದ ಮೇಲಿರುವ ಗುರಿಯನ್ನು ನಿಗದಿ ಮಾಡಿಕೊಂಡು ದಾಳಿ ನಡೆಸುವ ಸಾಮರ್ಥ್ಯವೂ ಇದಕ್ಕಿದೆ. ಜತೆಗೆ, ತನ್ನ ಮೇಲಾಗುವ ದಾಳಿಯಿಂದ ತನ್ನನ್ನು ತಾನು ರಕ್ಷಿಸಿಕೊಳ್ಳುವ ಶಕ್ತಿಯೂ ಇದಕ್ಕಿದೆ. ಅಗತ್ಯ ಸಂದರ್ಭದಲ್ಲಿ ನಿಯಂತ್ರಣ ಕೊಠಡಿಯಲ್ಲಿರುವ ನಿರ್ವಾಹಕರು ವಿಮಾನವನ್ನು ಸಂಪೂರ್ಣವಾಗಿ ತಮ್ಮ ನಿಯಂತ್ರಣಕ್ಕೆ ತೆಗೆದುಕೊಳ್ಳುವ ಸವಲತ್ತೂ ಈ ತಂತ್ರಜ್ಞಾನದಲ್ಲಿದೆ

ಆಧಾರ: ಡಿಆರ್‌ಡಿಒ, ರಕ್ಷಣಾ ಸಚಿವಾಲಯ, ಪಿಐಬಿ, ಪಿಟಿಐ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 165

ವಿರಹಿರಾಮನಿಗೆ ನಮಿಸಿದ ಶಿವ

ಬ್ರಹ್ಮನು ಸತೀ ಮತ್ತು ಶಿವರ ಚರಿತ್ರೆಯನ್ನು ಮುಂದುವರೆಸುತ್ತಾನೆ. ಸತೀ-ಶಿವರು ಲೋಕಾಚಾರದಂತೆ ಬಹುಕಾಲ ವಿಹರಿಸಿದ ನಂತರ, ಸತೀದೇವಿಗೆ ಶಂಕರನ ವಿಯೋಗ ಬಂದಿತೆಂದು ಕೆಲವರು ಹೇಳುತ್ತಾರೆ. ಆದರೆ ಸದಾ ಸಂಯುಕ್ತರಾಗಿರುವ ಆದಿದಂಪತಿಗಳಾದ ಶಿವಸತಿಯರಿಗೆ 'ವಿಯೋಗ' ಎಂಬ ಶಬ್ದವೇ ಅರ್ಥಹೀನವಾದುದು. ಲೀಲಾಮಾನುಷರೂಪರಾದ ಸತೀಶಿವರು ಕೇವಲ ಲೀಲೆಗಾಗಿಯೇ ತಮ್ಮಲ್ಲಿ ವಿಯೋಗವನ್ನು ಉಂಟುಮಾಡಿಕೊಂಡರೆಂದು ಮಾತ್ರ ಹೇಳಬಹುದಾಗಿದೆ ಎಂದು ಬ್ರಹ್ಮನು ಅಭಿಪ್ರಾಯಪಡುತ್ತಾನೆ.

ಸತೀದೇವಿಯು ದಕ್ಷಬ್ರಹ್ಮನ ಯಾಗದಲ್ಲಿ ತನ್ನ ಪತಿಯಾದ ಶಂಕರನ ನಿಂದೆಯನ್ನು ಕೇಳಲಾರದೆ ದುಃಖದಿಂದ ಅಗ್ನಿಯಲ್ಲಿ ತನ್ನ ಶರೀರವನ್ನು ಬಿಟ್ಟು, ಮುಂದೆ ಆ ಸತಿಯೇ ಹಿಮವಂತನ ಪತ್ನಿಯಲ್ಲಿ ಪಾರ್ವತೀರೂಪದಿಂದ ಜನಿಸಿದಳು. ಸತೀದೇವಿಯಂತೆಯೇ ಪಾರ್ವತಿ ಸಹ ತಪಸ್ಸು ಮಾಡಿ, ಮತ್ತೆ ಶಿವನನ್ನು ವರಿಸಿದಳು ಎಂದು ಹೇಳುತ್ತಾನೆ ಬ್ರಹ್ಮ. ಆಗ ನಾರದಮುನಿ 'ಓ ತಂದೆಯೇ, ಪ್ರಾಣಪ್ರಿಯಳಾದ ಸತೀದೇವಿ ಯನ್ನು ಶಂಕರನು ಏಕೆ ತ್ಯಜಿಸಿದ? ನಿನ್ನ ಪುತ್ರನಾದ ದಕ್ಷನು ಯಜ್ಞದಲ್ಲಿ ಶಂಕರನನ್ನು ನಿಂದಿಸಲು ಕಾರಣವೇನು? ಸತೀದೇವಿಯಾದರೂ ಆ ಯಾಗಕ್ಕೆ ಹೋಗಿ ತನ್ನ ಶರೀರವನ್ನು ಹೇಗೆ ಬಿಟ್ಟಳು? ಇದೆಲ್ಲವನ್ನು ವಿಸ್ತರಿಸಿ ಹೇಳು' ಎಂದು ಕೋರುತ್ತಾನೆ.

'ಎಲೈ ನಾರದ, ಈ ಜಗತ್ತೆಲ್ಲವೂ ಶಿವನ ಲೀಲೆಯಿಂದಾದ ಮಾಯ ಪ್ರಪಂಚ. ಅವನು ಸೃಷ್ಟಿಸಹಜ ವಿಕಾರಗಳಿಲ್ಲದವನು. ಸತೀದೇವಿಯೂ ಅವನ ಸ್ವರೂಪಳಾದ ಆದಿಶಕ್ತಿ. ಶಿವಲೀಲೆಯನ್ನು ಶಿವನ ಹೊರತು ಬೇರಾರು ಪ್ರದರ್ಶಿಸಲಾರರು. ಏಕೆಂದರೆ ಆ ಶಿವನು ಪರಮಾತ್ಮ ಹಾಗೂ ಪರಬ್ರಹ್ಮಸ್ವರೂಪ. ಆ ಪರಮೇಶ್ವರನನ್ನು ನಾನೂ ಸೇರಿದಂತೆ ಹರಿ ಮೊದಲಾದ ದೇವತೆಗಳೂ ಮುನಿಗಳೂ ಸಿದ್ಧರೂ ಮಹಾತ್ಮರಾದ ಸನಕಾದಿಮುನಿಗಳೆಲ್ಲರೂ ಭಜಿಸುವರು. ಆದಿಶೇಷನು ಸದಾ ತನ್ನ ಸಾವಿರ ನಾಲಿಗೆಗಳಿಂದ ಶಿವನ ಯಶಸ್ಸನ್ನು ಗಾಯನ ಮಾಡುವನು. ಇಂತಹ ಅಪಾರ ಮಹಿಮೆಯುಳ್ಳ ಶಿವನ ಲೀಲೆಯಿಂದಲೇ ಜಗತ್ತೆಲ್ಲವೂ ಕಾಣಿಸುತ್ತಿದೆ' ಎಂದ ಬ್ರಹ್ಮ ಮತ್ತೆ ಶಿವಸತೀಯರ ಕಥೆಯನ್ನ ಹೇಳತೊಡಗುತ್ತಾನೆ.

ಒಮ್ಮೆ ಶಿವನು ನಂದಿಯನ್ನೇರಿ ಸತೀದೇವಿಯೊಡನೆ ಭೂಮಿಯನ್ನು ಸಂಚರಿಸುತ್ತಾ ದಂಡಕಾರಣ್ಯಕ್ಕೆ ಬರುತ್ತಾನೆ. ಅಲ್ಲಿನ ಪ್ರಕೃತಿ ಸೌಂದರ್ಯ ವನ್ನು ಸತೀದೇವಿಗೆ ತೋರಿಸಿ, ಆನಂದಿಸುತ್ತಿರುವಾಗ ರಾಮ ಕಾಣಿಸು ತ್ತಾನೆ. ರಾವಣನ ಮೋಸದಿಂದ ಅಪಹೃತಳಾದ ತನ್ನ ಪತ್ನಿ ಸೀತಾದೇವಿ ಯನ್ನು ಹುಡುಕುತ್ತಾ ಲಕ್ಷ್ಮಣನೊಡನೆ ರಾಮ ಸಂಚರಿಸುತ್ತಿದ್ದ. ಈ ಸಂದರ್ಭದಲ್ಲಿ ರಾಮ ತನ್ನ ಪತ್ನಿ ಸೀತೆಯನ್ನು ಕಾಣದೆ ದುಃಖಿತನಾಗಿ ಪ್ರಲಾಪಿಸುತ್ತಿದ್ದ. ಕಾಡಿನ ಮರ-ಗಿಡ, ಪ್ರಾಣಿ-ಪಕ್ಷಿಗಳನ್ನು 'ಸೀತೆಯನ್ನು ನೀವು ಕಂಡಿರಾ ಅವಳೆಲ್ಲಿದ್ದಾಳೆ?' ಎಂದು ಕೇಳುತ್ತಲಿದ್ದ.

ಅಯೋಧ್ಯಾನಗರದ ಸೂರ್ಯವಂಶದ ದಶರಥನೆಂಬ ರಾಜನ ಮಗನಾದ ರಾಮ ತನ್ನ ಪತ್ನಿ ಸೀತೆಯನ್ನು ಕಳೆದುಕೊಂಡು ವಿರಹದಿಂದ ದುಃಖಿತನಾಗಿ ಸಂಚರಿಸುತ್ತಲಿದ್ದ. ಇದನ್ನು ಕಂಡ ಆಪ್ತಕಾಮನಾದ ಶಿವನು, ಸೀತೆಯನ್ನು ಹುಡುಕುತ್ತಾ ಅರಣ್ಯದಲ್ಲಿ ಲಕ್ಷ್ಮಣನೊಡನೆ ಸಂಚರಿಸುತ್ತಿದ್ದ ರಾಮನಿಗೆ ನಮಸ್ಕಾರಮಾಡಿ, 'ಜಯಶೀಲನಾಗು' ಎಂದು ಹರಸಿ, ಮರೆಯಾದ. ಇದನ್ನು ನೋಡಿ ಸತೀದೇವಿಯು ತುಂಬಾ ಆಶ್ಚರ್ಯಗೊಂಡು, ಹೀಗೇಕೆ ಮಾಡಿದೆ ಎಂದು ಶಿವನನ್ನು ಪ್ರಶ್ನಿಸಿದಳು.

'ಓ ಪರಮೇಶ್ವರ, ನೀನು ದೇವದೇವನು, ಪರಬ್ರಹ್ಮಸ್ವರೂಪನು, ಸರ್ವೇಶ್ವರನು. ಇಂತಹ ನಿನ್ನನ್ನು ವಿಷ್ಣು ಬ್ರಹ್ಮ ಮೊದಲಾದ ದೇವತೆಗಳು ಸದಾ ಸೇವಿಸುವರು. ಜನ್ಮ ಮೊದಲಾದ ವಸ್ತುವಿಕಾರವಿಲ್ಲದ ಪರಮಾತ್ಮ ನಾದ ನಿನ್ನನ್ನೇ ಎಲ್ಲರೂ ನಮಸ್ಕರಿಸಬೇಕು, ಸೇವಿಸಬೇಕು, ಧ್ಯಾನಿಸ ಬೇಕು. ಅಂತಹ ಮಹಾಮಹಿಮನಾದ ನೀನು, ಕಾಡಿನಲ್ಲಿ ಸಂಚರಿಸು ತ್ತಿರುವ ಇಬ್ಬರು ಪುರುಷರಲ್ಲಿ ಕನ್ನೈದಿಲೆಯಂತೆ ನೀಲವರ್ಣದವನನ್ನು ನೋಡಿ ಸಂತೋಷಗೊಳ್ಳಲು ಕಾರಣವೇನು? ಭಕ್ತನಂತೆ ಅವನಿಗೆ ಏಕೆ ನಮಸ್ಕರಿಸಿದೆ? ಈ ಪುರುಷರೀರ್ವರು ಯಾರು? ಅವರು ಮಹಾವೀರರಿಗೆ ತಕ್ಕಂತೆ ಧನುಸ್ಸನ್ನು ಧರಿಸಿದ್ದಾರೆ. ಆದರೆ ದುಃಖದಿಂದ ಈ ವನದಲ್ಲಿ ಸಂಚರಿಸುತ್ತಿರುವಂತೆ ಕಾಣಿಸುತ್ತಿದೆ. ಇಂಥವರಿಗೆ ಸ್ವಾಮಿ ಯಾದ ನೀನು, ಸೇವಕನಂತೆ ಏಕೆ ನಮಸ್ಕರಿಸಿದೆ' ಎಂದು ಕೇಳಿದಳು. ಸತೀದೇವಿಯ ಮಾತುಗಳನ್ನು ಕೇಳಿ ಲೀಲಾಮಯನಾದ ಶಿವ ಮಂದಹಾಸವನ್ನು ಸೂಸಿದ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ನ್ಯಾಯಮೂರ್ತಿಗಳ ದಿರಿಸಿನಲ್ಲಿರುವ ವ್ಯಕ್ತಿಯೊಬ್ಬರು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಿಗೆ ಹಸ್ತಲಾಘವ ನೀಡಲು ಕೈಚಾಚುತ್ತಿರುವ ಚಿತ್ರವೊಂದು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. 'ಬಿಜೆಪಿ ನಾಯಕಿ ನೂಪುರ್ ಶರ್ಮಾ ವಿರುದ್ಧ ಹರಿಹಾಯ್ದಿದ್ದ ಸುಪ್ರೀಂ ಕೋರ್ಟ್ ನ್ಯಾಮೂರ್ತಿ ಜೆ.ಬಿ.ಪಾರ್ದೀವಾಲಾ ಅವರು ಸೋನಿಯಾ ಅವರ ಕೈಕುಲುಕುತ್ತಿದ್ದಾರೆ. ಬಿಜೆಪಿ ನಾಯಕರ ವಿರುದ್ಧ ಪಾರ್ದೀವಾಲಾ ಹರಿಹಾಯ್ದಿದ್ದು ಏಕೆ ಎಂಬುದು, ಈ ಚಿತ್ರ ನೋಡಿದ ನಂತರ ಅರ್ಥವಾಗುತ್ತಿದೆ' ಎಂಬ ವಿವರಣೆಯನ್ನು ಈ ಚಿತ್ರಕ್ಕೆ ನೀಡಲಾಗಿದೆ. ಫೇಸ್‌ಬುಕ್ ಮತ್ತು ಟ್ವಿಟರ್‌ನಲ್ಲಿ ಸಾವಿರಾರು ಬಾರಿ ಈ ಚಿತ್ರವನ್ನು ಹಂಚಿಕೊಳ್ಳಲಾಗಿದೆ.

'ಇದು ತಿರುಚಲಾದ ಮಾಹಿತಿ ಮತ್ತು ಸುಳ್ಳು ಸುದ್ದಿ' ಎಂದು ದಿ ಕ್ವಿಂಟ್ ತನ್ನ ಫ್ಯಾಕ್ಟ್‌ಚೆಕ್‌ನಲ್ಲಿ ಹೇಳಿದೆ. '2007ರಲ್ಲಿ ಕೆ.ಜಿ.ಬಾಲಕೃಷ್ಣನ್ ಅವರು ಸುಪ್ರೀಂ ಕೋರ್ಟ್‌ನ ಮುಖ್ಯನ್ಯಾಯಮೂರ್ತಿಯಾಗಿ ನೇಮಕವಾಗಿದ್ದರು. ಅವರ ಅಧಿಕಾರ ಸ್ವೀಕಾರ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಭಾಗಿಯಾಗಿದ್ದರು. ಬಾಲಕೃಷ್ಣನ್ ಅವರು ಸೋನಿಯಾ ಅವರಿಗೆ ಹಸ್ತಲಾಘವ ನೀಡಲು ಮುಂದಾಗುತ್ತಿರುವ ಚಿತ್ರವನ್ನು ಹಲವು ಪತ್ರಿಕೆಗಳು ಪ್ರಕಟಿಸಿದ್ದವು. ಈ ಚಿತ್ರವು ಈಗಲೂ ಗೆಟ್ಟಿ ಇಮೇಜಸ್‌ನಲ್ಲಿ ಲಭ್ಯವಿದೆ. ಈ ಚಿತ್ರವನ್ನು ಬಳಸಿಕೊಂಡು ಸುಳ್ಳು ಸುದ್ದಿ ಸೃಷ್ಟಿಸಲಾಗಿದೆ' ಎಂದು ದಿ ಕ್ವಿಂಟ್ ವಿವರಿಸಿದೆ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಆತ್ಮಲಾಭ

ತನುವ ತಣಿಸುವ ತುತ್ತು ಮನಕೆ ನಂಜಾದೀತು|
ಮನಮೋಹ ಜೀವಕ್ಕೆ ಗಾಳವಾದೀತು||
ಅನುಭವದ ಪರಿಣಾಮವೊಂದರಿಂದೊಂದಕ್ಕೆ|
ಗಣಿಸಾತ್ಮ ಲಾಭವನು - ಮಂಕುತಿಮ್ಮ-||665||

ಪದ-ಅರ್ಥ: ತನುವ = ದೇಹವ, ತಣಿಸುವ = ತೃಪ್ತಿಪಡಿಸುವ, ನಂಜಾದೀತು = ನಂಜು (ವಿಷ) + ಆದೀತು, ಪರಿಣಾಮವೊಂದರಿಂದೊಂದಕ್ಕೆ = ಪರಿಣಾಮ + ಒಂದರಿಂದ + ಒಂದಕ್ಕೆ, ಗಣಿಸಾತ್ಮ = ಗಣಿಸು + ಆತ್ಮ.

ವಾಚ್ಯಾರ್ಥ: ದೇಹವನ್ನು ತೃಪ್ತಿಪಡಿಸುವ ಆಹಾರ ಮನಸ್ಸಿಗೆ ವಿಷವಾದೀತು. ಮನಸ್ಸನ್ನು ಸೆಳೆದ ಮೋಹ ಜೀವಕ್ಕೆ ಅಪಾಯವನ್ನು ತಂದೀತು. ಅನುಭವದ ಪರಿಣಾಮ ಒಂದರಿಂದ ಮತ್ತೊಂದಕ್ಕೆ ಆಗುತ್ತದೆ. ಒಟ್ಟಿನಲ್ಲಿ ಆತ್ಮಲಾಭವನ್ನು ಪರಿಗಣಿಸು.

ವಿವರಣೆ: ಅವಳೊಬ್ಬ ಸುಂದರ ತರುಣಿ. ಬುದ್ಧಿವಂತೆ. ಆಕೆಯ ಮನಸ್ಸಿನಲ್ಲಿ ಸಿನಿಮಾ ನಟಿಯಾಗುವ ಕನಸು. ಅದಕ್ಕಾಗಿ ದೇಹ ದಂಡಿಸಿದಳು, ತರಬೇತಿಯನ್ನು ಪಡೆದಳು. ಪ್ರಖ್ಯಾತ ನಟನೊಡನೆ ನಟಿಸುವ ಯೋಗ ಕೂಡಿ ಬಂದಿತು. ಸಿನಿಮಾ ಯಶಸ್ವಿಯಾಯಿತು. ಈಗ ಅವಳೊಂದು ತಾರೆ. ಆಕೆಗೆ ಈಗ ಉಳಿದ ತಾರೆಯರೊಂದಿಗೆ ಸಂಪರ್ಕ, ಒಡನಾಟ. ಅವರ ಜೀವನಶೈಲಿ ಸೆಳೆಯಿತು. ಯಾರೋ ಒಬ್ಬರು ಆಕೆಗೆ ಮಾದಕ ವಸ್ತುಗಳನ್ನು ಪರಿಚಯಿಸಿದರು. ಅದರೊಂದಿಗೆ ಮದಿರೆ ಬಂದಿತು. ಆಕೆ ಅವುಗಳಿಗೆ ಶರಣಾದಳು. ಇಡೀ ದಿನ ಚೆನ್ನಾಗಿ ಕುಡಿದು, ಮಾದಕ ವಸ್ತುವನ್ನು ಸೇವಿಸಿದರೆ ಆಕೆಗೆ ಅದೇನು ಸುಖ? ಆಕಾಶದಲ್ಲಿ ತೇಲಿದ ಹಾಗೆ, ಕನಸಿನ ಲೋಕದಲ್ಲಿ ಈಜಾಡಿದ ಹಾಗೆ ಆಗುತ್ತಿತ್ತು. ಆಕೆ ತನ್ನ ದೇಹಕ್ಕೆ ತುಂಬ ತೃಪ್ತಿಯಾಗುತ್ತದೆ ಎಂದು ಭಾವಿಸಿದಳು. ಆದರೆ ಆಕೆಯ ಮನಸ್ಸು ಕುಸಿಯುತ್ತಿತ್ತು. ಖಿನ್ನತೆಗೆ ಜಾರಿದಳು. ಮನೋನಿಗ್ರಹ ಮರೆತು ಹೋಯಿತು. ವಿಷಣ್ಣತೆ ಮನೆ ಮಾಡಿ ಅದರಿಂದ ಹೊರಗೆ ಬರುವುದಕ್ಕೆ ವರ್ಷಗಳ ಕಾಲ ಒದ್ದಾಟವಾಯಿತು. ದೇಹಕ್ಕೆ ಒಳ್ಳೆಯದು ಎನ್ನಿಸಿದ್ದು ಮನಸ್ಸಿಗೆ ವಿಷವಾಗಿತ್ತು.

ಇದರ ವಿರುದ್ಧವೂ ಆಗುವುದು ಸಾಧ್ಯವಿದೆ. ಯಾವುದನ್ನು ಮನಸ್ಸು ಸೆಳೆಯುತ್ತದೋ, ಯಾವುದು ಅತ್ಯಂತ ಅಪ್ಯಾಯಮಾನವಾದದ್ದು ಎನ್ನಿಸುತ್ತದೋ, ಅದು ಜೀವಕ್ಕೆ ಕಂಟಕವಾಗಬಹುದು. ರಾವಣ ಪ್ರಚಂಡ, ಶಕ್ತಿವಂತ, ಜ್ಞಾನಿ, ಅದ್ಭುತ ಆಡಳಿತಗಾರ. ತಂಗಿ ಶೂರ್ಪನಖಿಯ ಮಾತು ಕೇಳಿ ಬಂದವನು ಸೀತೆಯ ಅಪರೂಪದ ಸೌಂದರ್ಯವನ್ನು ಕಂಡು ಬೆರಗಾದ, ಮನಸೋತ. ಸೀತೆಯ ರೂಪದ ಗಾಳಕ್ಕೆ ರಾವಣನ ಮನಸ್ಸು ಸಿಕ್ಕಿತು. ಕೊನೆಗದು ಅವನ ಪ್ರಾಣಹರಣಕ್ಕೆ ಕಾರಣವಾಯಿತು. ಹೀಗೆ ಹೆಣ್ಣು, ಹೊನ್ನು, ಮಣ್ಣು, ಕೀರ್ತಿಗಳು ಮನಸ್ಸನ್ನು ಎಳೆಯುತ್ತವೆ. ಅವು ಅತಿಯಾದಾಗ ಮನುಷ್ಯನನ್ನು ಪ್ರಪಾತಕ್ಕೇ ತಳ್ಳುತ್ತವೆ.

ಹೀಗೆಂದರೇನಾಯಿತು? ದೇಹದ ಅನುಭವ ಮನಸ್ಸಿನ ಮೇಲೆ ಪರಿಣಾಮವನ್ನು ಬೀರುತ್ತದೆ ಮತ್ತು ಮನಸ್ಸಿನ ಸೆಳೆತ ದೇಹವನ್ನು ದಂಡಿಸುತ್ತದೆ. ಆದರೆ ಈ ದೇಹ, ಮನಸ್ಸುಗಳ ವ್ಯವಹಾರದಲ್ಲಿ ಮನುಷ್ಯ ಶಾಶ್ವತವಾದ ಆತ್ಮವನ್ನು ಮರೆತೇ-ಬಿಡುತ್ತಾನೆ. ದೇಹದಲ್ಲಿ ಅನೇಕ ಕಾರ್ಯಗಳು ಸತತವಾಗಿ ನಡೆದಿವೆ. ರಕ್ತಚಲನ, ವಾಯುಚಲನ, ಪಚನ, ವಿಸರ್ಜನ, ಮೆದುಳಿನ ನಿಯಂತ್ರಣ, ಅದರ ಮೂಲಕ ಮನಸ್ಸಿನ ನಿಗ್ರಹ. ಈ ಎಲ್ಲ ಕಾರ್ಯಗಳು ನಡೆದಿರುವುದು ದೇಹದಲ್ಲಿರುವ ಶಕ್ತಿಯಿಂದ. ಆದರೆ ಆ ಶಕ್ತಿ ಅದೃಶ್ಯವಾಗಿದೆ. ಹುಡುಕಾಡಿದರೆ ಕಾಣಸಿಗದು. ಅದುವೇ ದೈವಶಕ್ತಿ. ದೇಹ, ಮನಸ್ಸುಗಳ ಕಾರ್ಯಗಳನ್ನು ಕಾಣಬೇಕು. ಆದರೆ ಅವುಗಳಿಗೆ ಕಾರಣವಾದ ಆತ್ಮಶಕ್ತಿಯನ್ನು ಪರಿಭಾವಿಸಬೇಕು. ದೇಹಲಾಭ ಮತ್ತು ಮನಸ್ಸಿನ ಲಾಭಗಳನ್ನು ಗಣಿಸುವಾಗ, ಮುಖ್ಯವಾಗಿ ಪರೀಕ್ಷೆ-ಮಾಡಬೇಕಾಗಿದ್ದು ಆತ್ಮಕ್ಕೆ ಆದ ಲಾಭ. ಅದರಿಂದಲೇ ಜೀವನದ ಊರ್ಜಿತ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಬುಧವಾರ ಜುಲೈ 6, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಆಷಾಢ ಶುಕ್ಲ ಸಪ್ತಮಿ ಗಂ. 19-49 ನಕ್ಷತ್ರ: ಉತ್ತರಫಲ್ಗುನಿ ಗಂ. 11-44 ಯೋಗ: ವರಿಯಾನ್ ಗಂ. 11-42, ಕರಣ: ಗರಜೆ ಗಂ. 07-44, ಮಿಥುನ ಮಾಸದ 21 ನೇ ದಿನ.

ರಾಹುಕಾಲ: ಮಧ್ಯಾಹ್ನ 12:00-01:30
ಸೂರ್ಯೋದಯ: 06-13 **ಸೂರ್ಯಾಸ್ತ:** 06-58
ಮುಸ್ಲಿಂ ದಿನಾಂಕ: 06 ಜುಲ್‌ಹಿಜಾ
ದಿನ ವಿಶೇಷ: ವಿವಸ್ವತ ಸಪ್ತಮಿ
ಅದೃಷ್ಟ ಸಂಖ್ಯೆ: 5, 9

ಮೇಷ: ಸಾಧನೆ ಹಾಗೂ ಅಭಿವೃದ್ಧಿ ಸಾಧಿಸುವ ದಿನವೆನಿಸಲಿದೆ. ಸಮಾಲೋಚಿಸಿ ಮಾಹಿತಿಗಳನ್ನು ಕಲೆಹಾಕಿ ಅಂತಿಮ ನಿರ್ಧಾರ ಕೈಗೊಳ್ಳುವುದು ಸೂಕ್ತ. ಕುಟುಂಬದಲ್ಲಿ ಸೌಖ್ಯ ನೆಮ್ಮದಿ ಇರುವುದು.

ವೃಷಭ: ಮಡದಿ, ಮಕ್ಕಳು, ಮನೆ ಮೇಲೆ ಹೆಚ್ಚಿನ ಗಮನ ಹರಿಸಬೇಕಾಗುವುದು. ವ್ಯವಸಾಯಗಾರರಿಗೆ ಕೃಷಿ ಕೆಲಸ ಕಾರ್ಯಗಳು ಹೆಚ್ಚಲಿವೆ. ಸಂಸ್ಥೆಯ ಮುಖಾಂತರ ಹೆಚ್ಚಿನ ತರಬೇತಿಗಾಗಿ ದೂರ ಪ್ರಯಾಣ.

ಮಿಥುನ: ರಾಜಕೀಯ ವಿದ್ಯಮಾನಗಳಿಂದಾಗಿ, ಸಾಮಾಜಿಕ ಕೆಲಸಗಳಿಗಾಗಿ ಓಡಾಟ ಅಧಿಕಗೊಳ್ಳುವುದು. ಹಣಕಾಸಿನ ಪರಿಸ್ಥಿತಿಯನ್ನು ಉತ್ತಮ ಪಡಿಸಿಕೊಳ್ಳುವಿರಿ. ಆರೋಗ್ಯ ಸದೃಢವಾಗಿರುತ್ತದೆ.

ಕರ್ಕಾಟಕ: ಕಾರ್ಯಗಳ ಒತ್ತಡದ ನಡುವೆ ಕುಟುಂಬದ ಸಮಸ್ಯೆಯತ್ತ ಗಮನ ನೀಡುವುದನ್ನು ಮರೆಯದಿರಿ. ಚಿತ್ರ ವಿತರಕರಿಗೆ ಹೆಚ್ಚಿನ ವರಮಾನ ಅಥವಾ ಪ್ರಶಸ್ತಿ, ಪುರಸ್ಕಾರ ದೊರೆಯುವ ಸಂಭವ.

ಸಿಂಹ: ಪ್ರಭಾವಶಾಲಿ ವ್ಯಕ್ತಿಯೊಂದಿಗಿನ ಭೇಟಿಯನ್ನು ತಳ್ಳಿಹಾಕದೆ ಅವರಿಂದ ನಿಮ್ಮ ವೃತ್ತಿ ಕ್ಷೇತ್ರಕ್ಕೆ ಲಾಭ ಉಂಟಾಗುವಂತೆ ನೋಡಿಕೊಳ್ಳುವ ಪ್ರಯತ್ನಮಾಡಿ.

ಕನ್ಯಾ: ಸಮೀಪವರ್ತಿಗಳ ಆಶ್ವಾಸನೆ ದೊರೆತು ಶುಭ ಕಾರ್ಯಗಳತ್ತ ಗಮನ ಹರಿಸುವಿರಿ. ಅಗತ್ಯ ವಸ್ತುಗಳ ಖರೀದಿಗೆ ಹಣ ವಿನಿಯೋಗ. ಕಲಾವಿದರಿಗೆ, ದಿನಗೂಲಿ ನೌಕರರಿಗೆ ಅನುಕೂಲಕರ ವಾತಾವರಣ.

ತುಲಾ: ನಿಮ್ಮ ಪ್ರಗತಿಯನ್ನು ಬಹಳಷ್ಟು ಜಾಗದಲ್ಲಿ ಪ್ರಶಂಸಿಸುತ್ತಿರುವುದರಿಂದ ಕಾರ್ಯ ಕ್ಷೇತ್ರದಲ್ಲಿ ಹುಮ್ಮಸ್ಸು. ಜೊತೆಗೆ ವೃತ್ತಿಪರ ಶತ್ರುಗಳ ಸಂಖ್ಯೆಯು ಗಗನ ಮುಟ್ಟಲಿದೆ.

ವೃಶ್ಚಿಕ: ಸಾಮಾಜಿಕ ಜೀವನದಲ್ಲಿ ಮತ್ತು ಭಾವನಾತ್ಮಕ ಸಂಬಂಧಗಳಲ್ಲಿ ಉತ್ತಮ ಪ್ರಗತಿ ಕಾಣುವಿರಿ. ವೃತ್ತಿ ಬದುಕಿನಲ್ಲಿ ನಿಮ್ಮ ಅನಿಸಿಕೆ ಅಭಿಪ್ರಾಯಗಳಿಗೆ ವಿರೋಧ ಬರಲಿದೆ. ವಿಶ್ವಾಸದಲ್ಲಿ ಸಲಹೆ ಸೂಚನೆ ನೀಡಬೇಡಿ.

ಧನು: ದೈವಾನುಗ್ರಹದಿಂದ ಸಾಹಸ ಕಾರ್ಯಗಳು ಕೈಗೂಡಿ ಬಹುಮಟ್ಟಿಗೆ ನಿರೀಕ್ಷಿತ ಫಲ. ಬರುವ ಅವಕಾಶಗಳನ್ನು ನಿಮ್ಮತ್ತ ತಿರುಗಿಸಿಕೊಂಡು ಸದುಪಯೋಗ ಪಡೆದುಕೊಳ್ಳುವುದು ನಿಮ್ಮ ಕೈಗೆ ಬಿಟ್ಟ ವಿಷಯಗಳಗಿರುತ್ತದೆ.

ಮಕರ: ದಾಂಪತ್ಯದಲ್ಲಿ ಅನ್ಯೋನ್ಯತೆಯ ಬದುಕನ್ನು ಕಾಪಾಡಿಕೊಳ್ಳುವುದು ನಿಮ್ಮ ಜವಾಬ್ದಾರಿ. ಸಂಘ ಸಂಸ್ಥೆಯಲ್ಲಿ ಜವಾಬ್ದಾರಿಯುತವಾದ ಸ್ಥಾನಮಾನ ಲಭ್ಯವಾಗುವುದು. ಹಿರಿಯರ ಆರೋಗ್ಯ ಉತ್ತಮವಾಗಿರುವುದು.

ಕುಂಭ: ಖರ್ಚುಗಳಿಗೆ ತಕ್ಕಂತೆ ಆದಾಯವಿರುವುದರಿಂದ ಸಮಾಧಾನಕರ ವಾತಾವರಣ. ಪಿತ್ರಾರ್ಜಿತ ಆಸ್ತಿಗೆ ಸಂಬಂಧಿಸಿದಂತೆ ಕೆಲವು ಸಮಸ್ಯೆಗಳು ಬಹಿರಂಗಗೊಂಡು ಸಹೋದರರಲ್ಲಿ ಭಿನ್ನಾಭಿಪ್ರಾಯ.

ಮೀನ: ಇಂದು ನ್ಯಾಯಮೂರ್ತಿಗಳಿಗೆ, ಆಡಳಿತಾಧಿಕಾರಿಗಳಿಗೆ ಸತ್ಫಲಗಳು ಸಿಗಲಿವೆ. ವ್ಯಾಪಾರ ವ್ಯವಹಾರಗಳ ಮಾರುಕಟ್ಟೆ ವಿಸ್ತರಿಸಲು ಬೇಕಾದ ತಯಾರಿ ಮಾಡಿಕೊಳ್ಳಿರಿ. ದೇಹದಲ್ಲಿ ವಾಯುಪೀಡೆಯಿಂದ ಕಿರಿಕಿರಿ.

ಪದಬಂಧ 5010

- ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ರಹಸ್ಯ ದಾರಿಯಿದು (4)
3.ತೊಡಕಾಗದ ಉಂಗಿ! (3)
5.ಮನದಲ್ಲಿಯೇ ಮಾಡಿದ ಸ್ನಾನ! (3)
7.ಒಮ್ಮಿಂದೊಮ್ಮೆ ನರ ಮಿಡಿದು ಉಂಟಾಗುವ ನೋವು (3)
8.ನಂಬಿಕೆ ದ್ರೋಹವಿದು (5)
11.ಹೀಗೆ ಕೋಪಗೊಳ್ಳು (3)
12.ಸೊಂಟದಿಂದ ಪ್ರಾರಂಭವಾದ ಕಂಪನ (3)
15.ವಸ್ತುಗಳನ್ನು ಸಂಗ್ರಹಿಸುವ ಸ್ಥಳ (3)
16.ಉಗ್ರವಾದ ಹೊಡೆದಾಟ (4)

ಮೇಲಿಂದ ಕೆಳಕ್ಕೆ
1.ಗುಲಾಬಿ ಹಿಡಿದಿರುವ ದಾಸ ಇಲ್ಲಿದ್ದಾನೆ (3)
2.ಬೆಲೆಬಾಳುವ ಮಣಿ (2)
3.ಅಡಚಣೆಯು ಹೀಗೆ ಬಂದಿದೆ (3)
4.ಚಿಲ್ಲರೆ ಹಣವಿದು (4)
6.ರೀತಿಯು ಉಲ್ಟಾಪಲ್ಟಾ ಕಾಣುತ್ತಿದೆಲ್ಲಾ? (3)
7.ಹರಾಜಿನಲ್ಲಿ ಹೆಚ್ಚಿನ ಬೆಲೆಗೆ ಸವಾಲು ಹಾಕುವುದು (5)
9.ತನಯ ಈ ರೀತಿ ಮಗ್ನ! (3)
10.ಕೃತಿಮ ಮಂದಹಾಸ (4)
11.ಅಜ್ಞನೇಕೋ ತಿರುಗಿ ನಿಂತಿದ್ದಾನಲ್ಲಾ? (3)
13.ಮೆಟ್ಟಿಲುಗಳುಳ್ಳ ಚೌಕಾಕರದ ಕೊಳ (3)
14.ಬಾಯಾರಿಕೆ ಹೀಗೆ ಬಂದಿದೆ (2)



5009ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಜಗಜಾಂತರ 4.ಸತ್ಯಾಗ್ರಹಿ 5.ಗಹನ 7.ಕಡಿತ 10.ನೆನಪು 12.ರಿಪೇರಿ 13.ಬಾಲರವಿ 15.ಪ್ರವಾಸಿಮಂದಿರ

ಮೇಲಿಂದ ಕೆಳಕ್ಕೆ:
1.ಅಜಗರ 2.ರಸ 3.ಬಹಿಷ್ಕಾರ 6.ನಡುಮನೆ 7.ಕದಪು 8.ತರಕಾರಿ 9.ನರಿಬಾಲ 11.ಹರಿಕಾರ 14.ವಿಪ್ರ

ಸುಡೊಕು 5396

				2		3		
3		6	5		8		1	
				7		2		6
	6				5			9
9		1		8			6	2
4			2			1		
		2	3		7		5	4
7	1					6		
5		3	4		2			1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5395 ಸುಡೊಕು

4	9	7	1	8	3	5	2	6
2	3	1	4	6	5	9	7	8
6	8	5	7	9	2	4	1	3
9	2	4	6	7	8	1	3	5
5	7	3	2	4	1	8	6	9
8	1	6	3	5	9	7	4	2
1	6	9	5	2	7	3	8	4
3	4	8	9	1	6	2	5	7
7	5	2	8	3	4	6	9	1

ಸಂವಿಧಾನ ಟೀಕಿಸಿದ ಸಚಿವ ಚೆರಿಯನ್

ನವದೆಹಲಿ/ತಿರುವನಂತಪುರ (ಪಿಟಿಐ): ಕೇರಳದ ಮೀನುಗಾರಿಕೆ ಮತ್ತು ಸಂಸ್ಕೃತಿ ಸಚಿವ ಸಜಿ ಚೆರಿಯನ್ ಅವರು ಸಂವಿಧಾನ ಕುರಿತು ಆಡಿರುವ ಮಾತುಗಳಿಗೆ ರಾಜಕೀಯ ಆಕ್ರೋಶ ವ್ಯಕ್ತವಾಗಿದ್ದು, ಅವರನ್ನು ಸಂಪುಟದಿಂದ ವಜಾಗೊಳಿಸಬೇಕೆಂದು ಪ್ರತಿಪಕ್ಷಗಳಾದ ಕಾಂಗ್ರೆಸ್, ಬಿಜೆಪಿ ಆಗ್ರಹಿಸಿವೆ.

ವಿವಾದದ ಬೆನ್ನಲ್ಲೇ ತಮ್ಮ ಹೇಳಿಕೆಗೆ ವಿಷಾದಿಸಿರುವ ಚೆರಿಯನ್, 'ಸುದ್ದಿ ಮಾಧ್ಯಮಗಳ ವರದಿಯಲ್ಲಿ ನನ್ನ ಮಾತು ತಿರುಚಲಾಗಿದೆ' ಎಂದು ದೂರಿದ್ದಾರೆ.

ಸ್ಥಳೀಯ ವಾಹಿನಿಗಳಲ್ಲಿ ಪ್ರಸಾರವಾದ ಚೆರಿಯನ್ ಭಾಷಣ ವಿವಾದಕ್ಕೀಡಾಗುತ್ತಿದ್ದಂತೆಯೇ, ಸೋಮವಾರ ಮಧ್ಯಾಹ್ನ ವಿಧಾನಸಭೆಯಲ್ಲಿ ಪ್ರತಿಕ್ರಿಯಿಸಿದ ಅವರು 'ನಾನು ಸಾಂವಿಧಾನಿಕ ಮೌಲ್ಯಗಳನ್ನು ಎತ್ತಿಹಿಡಿಯುವ ಸಾರ್ವಜನಿಕ ಸೇವಕ. ಎಂದಿಗೂ ಸಂವಿಧಾನ ಅವಮಾನಿಸುವ ಹಾಗೂ ಅದರ ವಿರುದ್ಧ ಮಾತನಾಡುವ ಉದ್ದೇಶ ಹೊಂದಿಲ್ಲ' ಎಂದರು.

ಪತ್ತನಂತಿಟ್ಟ ಜಿಲ್ಲೆಯ ಮಲ್ಲಪಳ್ಳಿ ಎಂಬಲ್ಲಿ ಇತ್ತೀಚೆಗೆ ನಡೆದಿದ್ದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ್ದ ಅವರು, 'ಅದ್ಭುತವಾಗಿ ರಚಿಸಲಾದ ಸಂವಿಧಾನವನ್ನು ಭಾರತ ಹೊಂದಿದೆ ಎಂದು ನಾವು ಹೇಳುತ್ತೇವೆ. ಆದರೆ, ನನ್ನ ಪ್ರಕಾರ, ಅದ್ಭುತವಾಗಿ ಈ ಸಂವಿಧಾನ ದೇಶದ ಬಹು ಜನರನ್ನು ಲೂಟಿ ಮಾಡಲು ನೆರವಾಗುವಂತಿದೆ' ಎಂದು ಹೇಳಿದ್ದರು.

ಸಚಿವರ ರಾಜೀನಾಮೆಗೆ ಕಾಂಗ್ರೆಸ್ ಮತ್ತು ಬಿಜೆಪಿ ಆಗ್ರಹಿಸಿವೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ವಿ.ಕೆ. ಅತ್ರೆ ಸಮಿತಿ ಶಿಫಾರಸು • ಸೆನೆಟ್– ಸಿಂಡಿಕೇಟ್ ಬದಲು ಅಕಾಡೆಮಿಕ್ ಸೆನೆಟ್

ವಿ.ವಿಗಳ ಸಾಂಸ್ಥಿಕ ರಚನೆಯೇ ಬದಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ ಅಧೀನದ ವಿಶ್ವವಿದ್ಯಾಲಯಗಳ ಸಾಂಸ್ಥಿಕ ರಚನೆಯಲ್ಲಿ ಬದಲಾವಣೆ, ಕುಲಪತಿಗಳ ನೇಮಕಕ್ಕೆ ಇನ್ನಷ್ಟು ಕಠಿಣ ನಿಯಮಾವಳಿಗಳು ಸೇರಿ ವಿಶ್ವವಿದ್ಯಾಲಯಗಳಿಗೆ ಸಮಗ್ರವಾಗಿ ಕಾಯಕಲ್ಪ ನೀಡುವ ಅಂಶಗಳನ್ನು ಒಳಗೊಂಡಿರುವ ವರದಿಯನ್ನು ವಿಜ್ಞಾನಿ ಡಾ.ವಾಸುದೇವ ಅತ್ರೆ (ವಿ.ಕೆ.ಅತ್ರೆ) ಅಧ್ಯಕ್ಷತೆಯ ಸಮಿತಿ ಸರ್ಕಾರಕ್ಕೆ ಸಲ್ಲಿಸಿದೆ.

'ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಮಸೂದೆ 2017' ಅನ್ನು ಪರಿಷ್ಕರಿಸುವ ಉದ್ದೇಶದಿಂದ ವರದಿಯನ್ನು ಪಡೆಯಲು ರಾಜ್ಯ ಸರ್ಕಾರ ಅತ್ರೆ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿತ್ತು. ಉನ್ನತ ಶಿಕ್ಷಣ ಇಲಾಖೆ ವರದಿಯ ಬಗ್ಗೆ ಸಾರ್ವಜನಿಕ ಚರ್ಚೆ ಮತ್ತು ಆಕ್ಷೇಪಣೆ ಸಲ್ಲಿಕೆಗಾಗಿ ವರದಿಯನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಿದೆ. ರಾಜ್ಯದ 24 ವಿಶ್ವವಿದ್ಯಾಲಯಗಳನ್ನು 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ (ಐಐಎಂ) ಮಾದರಿಯಲ್ಲಿ ಅಭಿವೃದ್ಧಿಪಡಿಸಲು ಸರ್ಕಾರ ಉದ್ದೇಶಿಸಿದೆ.

ವರದಿಯ ಪ್ರಮುಖ ಅಂಶಗಳು:

ಉನ್ನತ ಶಿಕ್ಷಣ ಸಂಸ್ಥೆಗಳು (ಹೈಯರ್ ಎಜುಕೇಷನ್ ಇನ್‌ಸ್ಟಿಟ್ಯೂಟ್ಸ್): ವಿಶ್ವವಿದ್ಯಾಲಯ ಅಥವಾ ಕಾಲೇಜನ್ನು 'ಉನ್ನತ ಶಿಕ್ಷಣ ಸಂಸ್ಥೆ' ಎಂದು ಕರೆಯಲಾಗುತ್ತದೆ. ಈ ಉನ್ನತ ಶಿಕ್ಷಣ ಸಂಸ್ಥೆಯಡಿ ಅಂತರ್ ಶಿಸ್ತೀಯ ವಿಶ್ವವಿದ್ಯಾಲಯಗಳು, ಕಾಲೇಜುಗಳು, ಉನ್ನತ ಶಿಕ್ಷಣ ಸಂಸ್ಥೆಯ ಕ್ಲಸ್ಟರ್‌ಗಳು, ಜ್ಞಾನ ಕೇಂದ್ರ ಇರುತ್ತವೆ.

ಉನ್ನತ ಶಿಕ್ಷಣ ಸಂಸ್ಥೆಗಳನ್ನು ಮೂರು ವಿಧವಾಗಿ ವರ್ಗೀಕರಿಸಲಾಗಿದೆ–

- 'ರಿಸರ್ಚ್ ಇಂಟೆನ್ಸಿವ್ ಯುನಿವರ್ಸಿಟೀಸ್' (ಆರ್‌ಐಯು)–ಇಲ್ಲಿ ಗಂಭೀರ ಸಂಶೋಧನೆಗಳಿಗೆ ಒತ್ತು ನೀಡಲಾಗುವುದು. ಬೋಧನೆ ಮತ್ತು ಸಂಶೋಧನೆಗಳಿಗೆ ಆದ್ಯತೆ.
- 'ಟೀಚಿಂಗ್ ಇಂಟೆನ್ಸಿವ್ ಯುನಿವರ್ಸಿಟೀಸ್' (ಟಿಐಯು)–ಈ ವಿಶ್ವವಿದ್ಯಾಲಯಗಳಲ್ಲಿ ಬೋಧನೆಗೆ ಪ್ರಧಾನ ಆದ್ಯತೆ ಇದ್ದರೂ ಸಂಶೋಧನೆಗಳಿಗೂ ಒತ್ತು ನೀಡಲಾಗುವುದು.
- ಸ್ವಾಯತ್ತ ಪದವಿ ಕಾಲೇಜುಗಳು– ಪದವಿಗಳನ್ನು ನೀಡುವುದರ ಜತೆ ಬೋಧನೆಗೆ ಹೆಚ್ಚಿನ ಆದ್ಯತೆ ನೀಡಲಾಗುವುದು.

ಸೆನೆಟ್, ಸಿಂಡಿಕೇಟ್ ಹೆಸರು ಬದಲು: ಹಲವು ದಶಕಗಳಿಂದ ಇದ್ದ ಸೆನೆಟ್, ಸಿಂಡಿಕೇಟ್, ಅಕಾಡೆಮಿಕ್ ಕೌನ್ಸಿಲ್‌ಗಳು ಇನ್ನು ಮುಂದೆ ಇರುವುದಿಲ್ಲ. ಇವುಗಳ ಹೆಸರನ್ನು ಬದಲಿಸಿ, 'ಅಕಾಡೆಮಿಕ್ ಸೆನೆಟ್' ಮತ್ತು 'ಬೋರ್ಡ್ ಆಫ್ ಗವರ್ನರ್ಸ್' ಎಂದು ಕರೆಯಲಾಗುವುದು. 'ಫ್ಯಾಕಲ್ಟಿ'ಗಳನ್ನು 'ಸ್ಕೂಲ್' ಎಂದೂ ಬದಲಿಸಲು ಸೂಚಿಸಲಾಗಿದೆ.

- ಎಲ್ಲ ಉನ್ನತ ಶಿಕ್ಷಣ ಸಂಸ್ಥೆಗಳು ಅಂತರ್ ಶಿಸ್ತೀಯ ಸಂಸ್ಥೆಯಾಗಿ ರೂಪುಗೊಳ್ಳಬೇಕು. ಆ ಬಳಿಕ ಆಸಕ್ತಿ ತಕ್ಕಂತೆ ವಿದ್ಯಾರ್ಥಿಗಳ ಸಂಖ್ಯೆಯನ್ನೂ ಹೆಚ್ಚಿಸಬೇಕು. 2040ರ ವೇಳೆಗೆ ಪ್ರತಿ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ 3,000 ತಲುಪಬೇಕು.
- ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್ ಮತ್ತು ಗಣಿತದ ಜತೆ ಮಾನವಿಕ ವಿಷಯಗಳನ್ನೂ ಅಳವಡಿಸಲಾಗುವುದು.
- ಈ ವರದಿಗೆ ಒಪ್ಪಿಗೆ ಸಿಕ್ಕಿ ವಿಧಾನಮಂಡಲದಲ್ಲಿ ಮಸೂದೆ ಅನುಮೋದನೆಗೊಂಡರೆ, ಕರ್ನಾಟಕ ವಿಶ್ವವಿದ್ಯಾಲಯಗಳ ಕಾಯ್ದೆ 2000, ಕನ್ನಡ ವಿಶ್ವವಿದ್ಯಾಲಯ ಕಾಯ್ದೆ 1991, ವಿಟಿಯು ಕಾಯ್ದೆ 1994, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯಗಳ ಕಾಯ್ದೆ 1992, ಡಾ.ಗಂಗೂಬಾಯಿ ಹಾನಗಲ್ ವಿಶ್ವವಿದ್ಯಾಲಯ 2009, ಸಂಸ್ಕೃತ ವಿಶ್ವವಿದ್ಯಾಲಯ ಕಾಯ್ದೆ 2009, ಜಾನಪದ ವಿಶ್ವವಿದ್ಯಾಲಯ ಕಾಯ್ದೆ 2011 ಮತ್ತು ಡಾ.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಕಾಯ್ದೆ 2018 ನಿಷ್ಕ್ರಿಯಗೊಳ್ಳಲಿದೆ.

ಕುಲಪತಿ ಇನ್ಮುಂದೆ ಸಿಇಒ!

ವಿಶ್ವವಿದ್ಯಾಲಯಗಳ ಕುಲಪತಿಗಳು 'ಮುಖ್ಯ ಕಾರ್ಯನಿರ್ವಾಹಕ ಮತ್ತು ಅಕಾಡೆಮಿಕ್ ಅಧಿಕಾರಿ'ಯಾಗಿ ಕಾರ್ಯನಿರ್ವಹಿಸಲಿದ್ದಾರೆ. ವಿಶ್ವವಿದ್ಯಾಲಯಕ್ಕೆ ಇವರದ್ದೇ ನಾಯಕತ್ವ. ವಿಶ್ವವಿದ್ಯಾಲಯದ ಮೇಲುಸ್ತುವಾರಿಯ ಜತೆಗೆ ಎಲ್ಲ ವ್ಯವಹಾರಗಳ ಮೇಲೂ ನಿಯಂತ್ರಣವನ್ನು ಹೊಂದಿರುತ್ತಾರೆ. ವಿವಿಧ ಅಧಿಕಾರಿಗಳ ನಿರ್ಣಯದ ಮೇಲೂ ಹಿಡಿತವಿರುತ್ತದೆ.

ಕುಲಪತಿ ಹುದ್ದೆಗೆ ನೇಮಕ ಆಗುವವರು ವಿಷಯದಲ್ಲಿ ಅತ್ಯುತ್ಕೃಷ್ಟ ಸಾಧನೆ ಮಾಡಿದವರಾಗಿರಬೇಕು, ಸಾಮರ್ಥ್ಯ, ಸಮಗ್ರತೆ, ನೈತಿಕತೆ, ಸಾಂಸ್ಥಿಕ ಬದ್ಧತೆ, ಆಡಳಿತ ಚಾಕಚಕ್ಯತೆ ಜತೆಗೆ ಯುಜಿಸಿ ನಿಗದಿಪಡಿಸಿರುವ ಮಾನದಂಡಕ್ಕೆ ಅನುಗುಣವಾಗಿರಬೇಕು.

ಕುಲಪತಿಯ ನೇಮಕದ ಅಧಿಕಾರ 'ಬೋರ್ಡ್ ಆಫ್ ಗವರ್ನರ್ಸ್' ಗೆ ಇರುತ್ತದೆ. ಬೋರ್ಡ್ ಆಫ್ ಗವರ್ನರ್ಸ್ ಇದಕ್ಕಾಗಿ ಶೋಧನಾ ಸಮಿತಿಯನ್ನು ರಚಿಸುತ್ತದೆ. ಶೋಧನಾ ಸಮಿತಿ ನೀಡುವ ಅಭ್ಯರ್ಥಿಗಳ ಪಟ್ಟಿಯಲ್ಲಿ ಒಬ್ಬರನ್ನು ಆಯ್ಕೆ ಮಾಡಲಾಗುತ್ತದೆ. ಹಾಲಿ ಕುಲಪತಿ ಅವಧಿ ಮುಗಿಯುವುದಕ್ಕೆ ಮೂರು ತಿಂಗಳ ಮೊದಲೇ ಶೋಧನಾ ಸಮಿತಿ ನೇಮಿಸಲಾಗುತ್ತದೆ. ಈ ಸಮಿತಿಯಲ್ಲಿ ಮೂವರು ಸದಸ್ಯರಿರುತ್ತಾರೆ.

ಖಾಸಗಿ ಟ್ಯೂಷನ್‌ಗೆ ನಿರ್ಬಂಧ

ವಿಶ್ವವಿದ್ಯಾಲಯಗಳು ಮತ್ತು ಅದಕ್ಕೆ ಸಂಯೋಜನೆಗೊಂಡ ಕಾಲೇಜು ಅಥವಾ ಶಿಕ್ಷಣ ಸಂಸ್ಥೆಗಳ ಅಧ್ಯಾಪಕ ಖಾಸಗಿ ಟ್ಯೂಷನ್ ನಡೆಸುವಂತಿಲ್ಲ. ಒಂದು ವೇಳೆ ಖಾಸಗಿ ಟ್ಯೂಷನ್ ನಡೆಸಿದರೆ ಅಂತಹವರ ವಿರುದ್ಧ ಶಿಸ್ತು ಕ್ರಮ ತೆಗೆದುಕೊಳ್ಳಲಾಗುವುದು.

ನೌಕರರ ಒಂದು ವಿಶ್ವವಿದ್ಯಾಲಯದಿಂದ ಮತ್ತೊಂದು ವಿಶ್ವವಿದ್ಯಾಲಯ ವರ್ಗಾವಣೆ ಮಾಡಲು ಅವಕಾಶ ಕಲ್ಪಿಸಲಾಗಿದೆ. ಆಡಳಿತಾತ್ಮಕ ಕಾರಣಗಳು ಮತ್ತು ಕೋರಿಕೆಯ ಮೇಲೆ ಯಾವುದೇ ವಿಶ್ವವಿದ್ಯಾಲಯಕ್ಕೂ ವರ್ಗಾವಣೆ ಮಾಡಬಹುದಾಗಿದೆ.

ಭಾವಪೂರ್ಣ ಶ್ರದ್ಧಾಂಜಲಿ

ಶ್ರೀಮತಿ ಬಿ. ನಾಗರತ್ನಮ್ಮ
ದಿ. ಎಸ್.ಸಿ. ಬೋರೇಗೌಡರವರ ಧರ್ಮಪತ್ನಿ, ನಿ. ಚೀಫ್ ಇಂಜಿನಿಯರ್, ಕರ್ನಾಟಕ ಸರ್ಕಾರ
ಜನನ : 10.11.1936 - ಮರಣ : 05-07-2022
ನಿಮ್ಮ ನೆನಪು ಸದಾ ನಮ್ಮ ಮನದಲ್ಲಿ ಹಸಿರಾಗಿದೆ ಹಾಗೂ ಅದು ನಮ್ಮೆಲ್ಲರ ಆತ್ಮದಲ್ಲಿ ನಿರಂತರವಾಗಿ ನೆನೆಪಿನಲ್ಲಿರುತ್ತದೆ. ನಿಮ್ಮ ದಿವ್ಯಾತ್ಮಕ್ಕೆ ಭಗವಂತನು ಚಿರಶಾಂತಿಯನ್ನು ಕರುಣಿಸಲೆಂದು ಪ್ರಾರ್ಥಿಸುತ್ತೇವೆ
ಶ್ರದ್ಧಾಂಜಲಿ ಕೋರುವವರು: ಕುಟುಂಬ ವರ್ಗದವರು ಹಾಗೂ ಬಂಧು-ಮಿತ್ರರು

Birthday Remembrance

B. Sreeramulu B.E
Though we miss you always, We miss you more today because it your birthday. You live in our hearts forever.
Subhadramma Sreeramulu & Family Members

25ನೇ ವರ್ಷದ ಪುಣ್ಯಸ್ಮರಣೆ

ಶ್ರೀ ಸಿ. ರಾಮಯ್ಯ
PWD ಮತ್ತು BBMP ಪ್ರಥಮ ದರ್ಜೆ ಗುತ್ತಿಗೆದಾರರು,
ಮಾಜಿ ಅಧ್ಯಕ್ಷರು, ಜಯಮಹಲ್ ಬ್ಲಾಕ್ ಕಾಂಗ್ರೆಸ್
ನಿಧನ: 06.07.1997
ಪುಲಿಕೇಶಿನಗರದ ಶಾಸಕರಾದ ಆರ್. ಅಖಂಡ ಶ್ರೀನಿವಾಸಮೂರ್ತಿರವರ ತಂದೆ,
ನೀವು ನಮ್ಮನ್ನು ಅಗಲಿ ಇಂದಿಗೆ 25 ವರ್ಷಗಳು,
ನಿಮ್ಮ ನೆನಪು ನಮಗೆ ಸದಾ ಸ್ಫೂರ್ತಿದಾಯಕ,
ನಿಮ್ಮ ಆದರ್ಶ ಜೀವನ ನಮಗೆ ಎಂದೆಂದೂ ಮಾರ್ಗದರ್ಶಕ
ನಿಮ್ಮ ಸವಿನೆನಪಿನಲ್ಲಿ
ಆರ್. ಅಖಂಡ ಶ್ರೀನಿವಾಸಮೂರ್ತಿ
ಶಾಸಕರು ಪುಲಿಕೇಶಿನಗರ, ಬೆಂಗಳೂರು.
ಮತ್ತು ಕುಟುಂಬದವರು

ನಾಲ್ಕನೇ ವರ್ಷದ ಸವಿನೆನಪು

ಶ್ರೀ ಎಂ. ಗೋವಪ್ಪ ನವರು
ಜನನ: 26.05.1948 – ನಿಧನ: 06.07.2018 ರಂದು
ಕಂಬದಹಳ್ಳಿ ಶಿಡ್ಲಘಟ್ಟ (ತಾ) ಚಿಕ್ಕಬಳ್ಳಾಪುರ (ಜಿ)
ನೀವು ನಮ್ಮನ್ನಗಲಿ ನಾಲ್ಕು ವರ್ಷ ಕಳೆದರೂ ನಿಮ್ಮ ಸೌಜನ್ಯ, ನಿಮ್ಮ ಸವಿನೆನಪು ನಮ್ಮ ಹೃದಯದಲ್ಲಿ ಅಚ್ಚಳಿಯದೇ ಉಳಿದಿದೆ.
ನಿಮ್ಮ ಆತ್ಮಕ್ಕೆ ಚಿರಶಾಂತಿ ಕೋರುವ,
ಪತ್ನಿ, ಮಕ್ಕಳು, ಅಳಿಯಂದಿರು ಹಾಗೂ ಕುಟುಂಬ ವರ್ಗದವರು.

LOOKING TO BUILD, BUY OR SELL A PROPERTY
Please refer Classifieds on Sunday

ಎಲ್ಗಾರ್ ಪ್ರಕರಣ: ಆರೋಪಿಗಳ ನಿರಶನ

ಮುಂಬೈ(ಪಿಟಿಐ): ಎಲ್ಗಾರ್ ಪರಿಷತ್- ಮಾವೋವಾದಿ ಸಂಪರ್ಕ ಪ್ರಕರಣದ ಆರೋಪಿ ಸ್ಟ್ಯಾನ್ ಸ್ವಾಮಿ ಅವರ ನಿಧನವನ್ನು ಸಾಂಸ್ಥಿಕ ಹತ್ಯೆಯೆಂದು ಆರೋಪಿಸಿ, ಪ್ರಕರಣದ 11 ಮಂದಿ ಆರೋಪಿಗಳು ಇಲ್ಲಿನ ತಾನೋಜಿ ಜೈಲಿನಲ್ಲಿ ಮಂಗಳವಾರ ಒಂದು ದಿನದ ಉಪವಾಸ ಸತ್ಯಾಗ್ರಹ ನಡೆಸಿದರು.

ಸ್ಟ್ಯಾನ್ ಸ್ವಾಮಿ ಕಳೆದ ವರ್ಷ ಜುಲೈ 5ರಂದು ನಿಧನರಾಗಿದ್ದರು.

ಬಂದೀಖಾನೆಯ ಅಧಿಕಾರಿಗಳು ಮತ್ತು ಸಿಬ್ಬಂದಿಯ ತಾತ್ಸರ , ವೈದ್ಯಕೀಯ ಸೌಲಭ್ಯಗಳ ಕೊರತೆಯು ಸ್ವಾಮಿ ಅವರ ಸಾವಿಗೆ ಕಾರಣವಾಗಿತ್ತು. ಜೈಲಿನ ಈ ಸ್ಥಿತಿಯಲ್ಲಿ ಯಾವುದೇ ಬದಲಾವಣೆಯಾಗಿಲ್ಲ ಎಂದು ಜೈಲು ಅಧೀಕ್ಷಕರಿಗೆ ಮತ್ತು ಪ್ರಕರಣದ ವಕೀಲರಿಗೆ ಬರೆದ ಪತ್ರದಲ್ಲಿ ಪ್ರಕರಣದ ಆರೋಪಿ ಹಾಗೂ ಸಾಮಾಜಿಕ ಕಾರ್ಯಕರ್ತ ಸುಧೀರ್ ಧವಳೆ ಆರೋಪಿಸಿದ್ದಾರೆ.

ಸುಧೀರ್ ಧವಳೆ ಜೊತೆಗೆ ಇತರ ಆರೋಪಿಗಳಾದ ಸುರೇಂದ್ರ ಗಡಲಿಂಗ್, ಅರುಣ್ ಫೆರೇರಾ, ಮಹೇಶ್ ರಾವತ್, ರೋನಾ ವಿಲ್ಸನ್, ವೆರ್ನನ್ ಗೊನ್ಸಾಲ್ವೆಸ್, ಸಾಗರ್ ಗೋರ್ಖೆ, ರಮೇಶ್ ಗಾಯ್ಚೋರ್, ಹನಿ ಬಾಬು, ಆನಂದ್ ತೇಲ್ತುಂಬ್ಡೆ ಮತ್ತು ಗೌತಮ್ ನವ್ಲಾಖಾ ಅವರೂ ಉಪವಾಸ ಸತ್ಯಾಗ್ರಹ ಕೈಗೊಂಡಿದ್ದಾರೆ.

'ನೂಪುರ್‌ಗೆ ಮೌಲ್ವಿಯಿಂದ ಬೆದರಿಕೆ'

ಜೈಪುರ (ಪಿಟಿಐ): ಪ್ರವಾದಿ ಮಹಮ್ಮದ್ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿದ್ದ ಬಿಜೆಪಿಯಿಂದ ಅಮಾನತು- ಗೊಂಡಿರುವ ನೂಪುರ್ ಶರ್ಮಾ ಅವರ ಶಿರಚ್ಛೇದ ಮಾಡುವ ಯಾರಿಗಾದರೂ ತಮ್ಮ ಮನೆಯನ್ನು ಉಡುಗೊರೆಯಾಗಿ ನೀಡುತ್ತೇನೆಂದು ವಿಡಿಯೊ ಮೂಲಕ ತಿಳಿಸಿದ್ದ ಅಜ್ಮೇರ್ ದರ್ಗಾದ ಮೌಲ್ವಿಯ ಪತ್ತೆ ಕಾರ್ಯಾಚರಣೆಯಲ್ಲಿ ಪೊಲೀಸರು ನಿರತರಾಗಿದ್ದಾರೆ.

ವಿಡಿಯೊದ ಆಧಾರದ ಮೇಲೆ ದರ್ಗಾದ ಮೌಲ್ವಿ ಸಲ್ಮಾನ್ ಚಿಶ್ತಿ ಎಂಬುವವರ ವಿರುದ್ಧ ನೀಡಲಾದ ದೂರಿನಡಿ ರಾಜಸ್ಥಾನದ ಪೊಲೀಸರು ಸೋಮವಾರ ರಾತ್ರಿ ಎಫ್‌ಐಆರ್ ದಾಖಲಿಸಿದ್ದರು.

ಕಲ್ಯಾಣೋತ್ಸವ... ಹೈದರಾಬಾದ್‌ನ ಬಲ್ಕಂಪೇಟೆ ಯಲ್ಲಮ್ಮಾ ದೇವಸ್ಥಾನ ಬಳಿ ಮಂಗಳವಾರ ನಡೆದ ಕಲ್ಯಾಣೋತ್ಸವ ಮತ್ತು ಪಟ್ನಂ ಹಬ್ಬದಲ್ಲಿ ಪಾಲ್ಗೊಂಡಿದ್ದ ಜನಸ್ತೋಮ ಪಿಟಿಐ ಚಿತ್ರ

ರಾಹುಲ್‌ಗಾಂಧಿ ಕುರಿತು ತಿರುಚಿದ ವಿಡಿಯೊ ಪ್ರಸಾರ

ಟಿ.ವಿ ನಿರೂಪಕ ಪೊಲೀಸ್ ವಶಕ್ಕೆ

ಗಾಜಿಯಾಬಾದ್/ರಾಯಪುರ (ಪಿಟಿಐ): ಕಾಂಗ್ರೆಸ್ ನಾಯಕ ರಾಹುಲ್‌ಗಾಂಧಿ ಅವರನ್ನು ಕುರಿತು ತಿರುಚಿದ ವಿಡಿಯೊ ಪ್ರಸಾರ ಮಾಡಿದ ಆರೋಪದಡಿ ಝೀ ನ್ಯೂಸ್ ವಾಹಿನಿ ನಿರೂಪಕ ರೋಹಿತ್ ರಂಜನ್ ಅವರನ್ನು ನೋಯ್ಡಾ ಪೊಲೀಸರು ವಶಕ್ಕೆ ಪಡೆದರು.

ರೋಹಿತ್ ವಿರುದ್ಧದ ಪ್ರಕರಣಕ್ಕೆ ಸಂಬಂಧಿಸಿ ಛತ್ತೀಸಗಡದ ಪೊಲೀಸರು ಭೇಟಿ ನೀಡಿದ್ದ ಸ್ವಲ್ಪ ಹೊತ್ತಿನಲ್ಲಿಯೇ ಸ್ಥಳೀಯ ಗಾಜಿಯಾಬಾದ್‌ನ ಪೊಲೀಸರು ಬಂದರು. ಹಿಂದೆಯೇ, ನೊಯ್ಡಾದ ಪೊಲೀಸರೂ ಬಂದರು. ಹೀಗಾಗಿ, ಬಂಧನ ಪ್ರಕರಣ ಕೆಲಹೊತ್ತು ಹೈಡ್ರಾಮಾಗೆ ಸಾಕ್ಷಿಯಾಯಿತು. ಅಂತಿಮವಾಗಿ ನೊಯ್ಡಾ ಪೊಲೀಸರು ರೋಹಿತ್‌ರನ್ನು ವಶಕ್ಕೆ ಪಡೆದರು.

ರೋಹಿತ್‌ನ ಮನೆಗೆ, ಕಾಂಗ್ರೆಸ್ ಆಡಳಿತವಿರುವ ಛತ್ತೀಸಗಡದ ಪೊಲೀಸರು ಮೊದಲು ಬಂದರು. ಸ್ಥಳೀಯ ಪೊಲೀಸರು ಆಗಮಿಸಿದ್ದರು. ಕೆಲ ಹೊತ್ತಿನಲ್ಲೇ, ಬಿಜೆಪಿ ಆಡಳಿತದ ಉತ್ತರ ಪ್ರದೇಶ ವ್ಯಾಪ್ತಿಗೆ ಬರುವ ನೊಯ್ಡಾದ ಪೊಲೀಸರು ಬಂದರು. ಉಭಯ ರಾಜ್ಯಗಳ ಪೊಲೀಸರು ಟಿ.ವಿ. ಆ್ಯಂಕರ್ ಬಂಧಿಸಲು ಮುಂದಾಗಿದ್ದು, ನಾಟಕೀಯ ಸನ್ನಿವೇಶಕ್ಕೆ ಕಾರಣವಾಯಿತು.

ತಿರುಚಲಾದ ವಿಡಿಯೊ ಪ್ರಸಾರ ಮಾಡಿದ್ದಕ್ಕೆ ಐಪಿಸಿ 505ರ ಅನ್ವಯ (ಸಾರ್ವಜನಿಕವಾಗಿ ಅನುಚಿತ ವರ್ತನೆ) ವಿಚಾರಣೆ ನಡೆಸಲು ವಶಕ್ಕೆ ಪಡೆಯಲಾಗಿದೆ ಎಂದು ನೊಯ್ಡಾದ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಈ ಮಧ್ಯೆ, ರಾಯಪುರದ ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ಪ್ರಶಾಂತ್ ಅಗರವಾಲ್ ಅವರು, ಕಾಂಗ್ರೆಸ್ ಶಾಸಕ ದೇವೇಂದ್ರ ಯಾದವ್ ದೂರು ಆಧರಿಸಿ ಭಿನ್ನ ಗುಂಪುಗಳ ನಡುವೆ ವೈಷಮ್ಯ ಮೂಡಿಸಲು ಯತ್ನ ಆರೋಪಕ್ಕೆ ಸಂಬಂಧಿಸಿ ರಂಜನ್ ಮತ್ತು ಝೀ ಟಿವಿಯ ಇತರರ ವಿರುದ್ಧ ಮೊಕದ್ದಮೆ ದಾಖಲಿಸಲಾಗಿದೆ ಎಂದು ತಿಳಿಸಿದರು.

'ಛತ್ತೀಸಗಡ ಪೊಲೀಸರು ನನ್ನನ್ನು ಬಂಧಿಸಲು ಮನೆ ಹೊರಗೆ ಕಾಯುತ್ತಿದ್ದಾರೆ. ಸ್ಥಳೀಯ ಪೊಲೀಸರಿಗೂ ಮಾಹಿತಿ ನೀಡಿಲ್ಲ ಇದು, ಕಾನೂನು ಬದ್ಧವೇ?' ಎಂದು ಟ್ವೀಟ್ ಮಾಡಿದ್ದ ರೋಹಿತ್, ಅದನ್ನು ಉತ್ತರ ಪ್ರದೇಶದ ಸಿ.ಎಂ ಮತ್ತು ಪೊಲೀಸ್ ಇಲಾಖೆಗೆ ಟ್ಯಾಗ್ ಮಾಡಿದ್ದರು. 'ಸ್ಥಳೀಯ ಪೊಲೀಸರಿಗೆ ತಿಳಿಸಬೇಕು ಎಂಬ ನಿಯಮವಿಲ್ಲ' ಎಂದು ರಾಯಪುರ ಪೊಲೀಸರು ಇದಕ್ಕೆ ಪ್ರತಿಕ್ರಿಯಿಸಿದ್ದರು.

'ಸ್ಥಳೀಯ ಡಿಎಸ್‌ಪಿ ದರ್ಜೆ ಅಧಿಕಾರಿಯೊಬ್ಬರು ಅಡ್ಡಿ ಪಡಿಸಿದ ಕಾರಣ ನಮಗೆ ರೋಹಿತ್ ವಶಕ್ಕೆ ಪಡೆಯಲು ಆಗಲಿಲ್ಲ. ಕಾನೂನು ಪ್ರಕ್ರಿಯೆಯಲ್ಲಿ ಸ್ಥಳೀಯ ಪೊಲೀಸರು ಮಧ್ಯಪ್ರವೇಶಿಸಿದರು. ನಿರೂಪಕನನ್ನು ವಶಕ್ಕೆ ಪಡೆದು ಬಳಿಕ ಆತನನ್ನು ನೊಯ್ಡಾ ಪೊಲೀಸರು ವಶಕ್ಕೆ ಪಡೆದಿದ್ದಾರೆ ಎಂದು ಮಾಹಿತಿ ನೀಡಿದರು' ಎಂದು ರಾಯಪುರದ ಅಧಿಕಾರಿಯೊಬ್ಬರು ತಿಳಿಸಿದರು.

ರಾಯಪುರ ಠಾಣೆಯಲ್ಲಿ ರೋಹಿತ್ ವಿರುದ್ಧ ಐಪಿಸಿ 153ಎ (ಗುಂಪುಗಳ ನಡುವೆ ದ್ವೇಷ ಮೂಡಿಸುವುದು), 295ಎ (ಉದ್ದೇಶ ಪೂರ್ವಕವಾಗಿ ಅನುಚಿತ ವರ್ತನೆ), 467 (ದಾಖಲೆ ತಿರುಚುವುದು), 469 (ವರ್ಚಸ್ಸಿಗೆ ಧಕ್ಕೆ ತರಲು ದಾಖಲೆ ತಿರುಚುವುದು), 504 (ಉದ್ದೇಶಪೂರ್ವಕ ಅವಮಾನಿಸುವುದು) ಆಧರಿಸಿ ಮೊಕದ್ದಮೆ ದಾಖಲಿಸಲಾಗಿತ್ತು.

'ಕಾಳಿ' ಸಾಕ್ಷ್ಯಚಿತ್ರ ನಿರ್ದೇಶಕಿ ವಿರುದ್ಧ ಎಫ್‌ಐಆರ್

ನವದೆಹಲಿ: 'ಕಾಳಿ' ಸಾಕ್ಷ್ಯಚಿತ್ರದ ಪೋಸ್ಟರ್‌ನಲ್ಲಿನ ಅವಹೇಳನಕಾರಿ ಅಂಶದ ಆರೋಪದ ಮೇರೆಗೆ ಚಿತ್ರದ ನಿರ್ದೇಶಕಿ ಲೀನಾ ಮಣಿಮೇಕಲೈ ಅವರ ವಿರುದ್ಧ ದೆಹಲಿ ಪೊಲೀಸರು ಮಂಗಳವಾರ ದೂರು ದಾಖಲಿಸಿದ್ದಾರೆ.

ಸಿಗರೇಟು ಸೇದುತ್ತಿರುವ ಕಾಳಿ ಮಾತೆಯ ಪೋಸ್ಟರ್ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿರುವ ಬಗ್ಗೆ ವಕೀಲರು ದೂರು ನೀಡಿದ್ದ ಮೇರೆಗೆ ಲೀನಾ ವಿರುದ್ಧ ದೂರು ದಾಖಲಿಸಿಕೊಳ್ಳಲಾಗಿದೆ.

ಧಾರ್ಮಿಕ ನಂಬಿಕೆಗಳಿಗೆ ಧಕ್ಕೆ ತಂದ ಆರೋಪ, ವಿವಿಧ ಗುಂಪುಗಳ ನಡುವೆ ದ್ವೇಷವನ್ನು ಉತ್ತೇಜಿಸುವ ಆರೋಪದ ಮೇರೆಗೆ ಐಪಿಸಿಯ ವಿವಿಧ ಕಲಂಗಳ ಅಡಿಯಲ್ಲಿ ಲೀನಾ ಅವರ ವಿರುದ್ಧ ದೂರು ದಾಖಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

'ಭಾರತಕ್ಕೆ ಚೀನಾ ವಿಮಾನಯಾನ ಇನ್ನೂ ನಿರ್ಧರಿಸಿಲ್ಲ'

ಬೀಜಿಂಗ್ (ಪಿಟಿಐ): ಕೋವಿಡ್‌ನಿಂದ ಎರಡು ವರ್ಷ ನಿರ್ಬಂಧಿಸಲಾಗಿದ್ದ ಅಂತರರಾಷ್ಟ್ರೀಯ ವಿಮಾನಯಾನಕ್ಕೆ ಚೀನಾ ಮತ್ತೆ ಅನುಮತಿ ನೀಡಲು ಪ್ರಾರಂಭಿಸಿದೆ. ಆದರೆ ಭಾರತಕ್ಕೆ ವಿಮಾನ ಸೇವೆ ಪುನರಾರಂಭಿಸುವ ಬಗ್ಗೆ ಅದು ಇನ್ನೂ ನಿರ್ಧಾರ ಪ್ರಕಟಿಸಿಲ್ಲ.

ಉಕ್ರೇನ್‌ನ ಗಣಿತ ತಜ್ಞೆಗೆ ಫೀಲ್ಡ್ಸ್ ಪದಕ

ಬರ್ಲಿನ್ (ಎಪಿ): ಉಕ್ರೇನಿನ ಗಣಿತ ತಜ್ಞೆ ಮರಿನಾ ವಯಾಜೋವ್‌ಸ್ಕಾ ಅವರು ಪ್ರತಿಷ್ಠಿತ ಫೀಲ್ಡ್ಸ್ ಪದಕ ಪಡೆದಿದ್ದಾರೆ. ಇದನ್ನು ಗಣಿತಶಾಸ್ತ್ರದ ನೊಬೆಲ್ ಎಂದು ಪರಿಗಣಿಸಲಾಗುತ್ತದೆ. ಲೌಸಾನೆಯಲ್ಲಿರುವ ಸ್ವಿಸ್ ಫೆಡರಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಸಂಖ್ಯಾ ಸಿದ್ಧಾಂತದ ವಿಭಾಗದ ಅಧ್ಯಕ್ಷರಾಗಿರುವ ವಯಾಜೋವ್‌ಸ್ಕಾ ಎಂಟು ಆಯಾಮಗಳಲ್ಲಿ ಒಂದೇ ರೀತಿ ಗೋಳಗಳ ಕುರಿತು ಮಾಡಿದ ಸಂಶೋಧನೆಗೆ ಈ ಪ್ರಶಸ್ತಿ ನೀಡಲಾಗುತ್ತಿದೆ ಎಂದು ಗಣಿತಶಾಸ್ತ್ರಜ್ಞರ ಅಂತರರಾಷ್ಟ್ರೀಯ ಕಾಂಗ್ರೆಸ್ ಮಂಗಳವಾರ ತಿಳಿಸಿದೆ.

ಸ್ವೀಡನ್, ಫಿನ್ಲೆಂಡ್ ನ್ಯಾಟೊ ಗುಂಪಿಗೆ

ಬ್ರಸೆಲ್ಸ್/ ಉಕ್ರೇನ್/ ಮಾಸ್ಕೊ(ಎಪಿ): ಫಿನ್ಲೆಂಡ್ ಮತ್ತು ಸ್ವೀಡನ್ ನ್ಯಾಟೊ ಮೈತ್ರಿಕೂಟಕ್ಕೆ ಸೇರಿಸಿಕೊಳ್ಳುವ ಶಿಷ್ಟಾಚಾರದ ಸದಸ್ಯತ್ವದ ಪ್ರಸ್ತಾವಕ್ಕೆ ಇತರ 30 ದೇಶಗಳು ಮಂಗಳವಾರ ಸಹಿ ಹಾಕಿವೆ.

'ಫಿನ್ಲೆಂಡ್, ಸ್ವೀಡನ್ ಹಾಗೂ ನ್ಯಾಟೊಗೂ ಇದು ನಿಜವಾಗಿಯೂ ಚಾರಿತ್ರಿಕ ಕ್ಷಣ' ಎಂದು ನ್ಯಾಟೊ ಪ್ರಧಾನ ಕಾರ್ಯದರ್ಶಿ ಜೇನ್ಸ್ ಸ್ಟೋಲ್ಟೆನ್‌ಬರ್ಗ್ ಬಣ್ಣಿಸಿದರು.

ಕಳೆದ ವಾರ ನಡೆದ ನ್ಯಾಟೊ ಶೃಂಗಸಭೆಯಲ್ಲಿ ಈ ಎರಡು ದೇಶಗಳಿಗೆ ಕಾಯಂ ಸದಸ್ಯತ್ವ ನೀಡುವ ನಿರ್ಧಾರಕ್ಕೆ 30 ದೇಶಗಳ ರಾಯಭಾರಿಗಳು ಮತ್ತು ಕಾಯಂ ಪ್ರತಿನಿಧಿಗಳು ಅನುಮೋದನೆ ನೀಡಿದ್ದರು.

ಟರ್ಕಿ ಸಂಸತ್ ನ್ಯಾಟೊ ಜತೆಗಿನ ಒಪ್ಪಂದ ಅನುಮೋದಿಸಲು ನಿರಾಕರಿಸಿದ್ದು, ಸದ್ಯಕ್ಕೆ ನ್ಯಾಟೊ ಸದಸ್ಯತ್ವ ಪಡೆಯುವ ಟರ್ಕಿಯ ಉದ್ದೇಶ ಈಡೇರಿಲ್ಲ.

ನಾಗರಿಕರ ಸ್ಥಳಾಂತರಕ್ಕೆ ಸೂಚನೆ: ಉಕ್ರೇನಿನ ಪೂರ್ವ ಭಾಗ ಲಿಸಿಚಾನ್‌ಸ್ಕ್ ಅನ್ನು ರಷ್ಯಾ ಪಡೆಗಳು ವಶಕ್ಕೆ ಪಡೆದು, ಅಧ್ಯಕ್ಷ ಪುಟಿನ್ ವಿಜಯ ಘೋಷಣೆ ಮಾಡಿದ ಬೆನ್ನಲ್ಲೇ, ಸುರಕ್ಷಿತ ಸ್ಥಳಗಳಿಗೆ ತೆರಳುವಂತೆ ಸ್ಲೊವಿಯಾನ್‌ಸ್ಕ್ ನಗರದ ನಾಗರಿಕರಿಗೆ ಮೇಯರ್ ಬುಧವಾರ ಸೂಚನೆ ನೀಡಿದ್ದಾರೆ.

ಕಾಳಸಂತೆಯಲ್ಲಿ ಶಸ್ತ್ರಾಸ್ತ್ರ: ಪಶ್ಚಿಮದ ರಾಷ್ಟ್ರಗಳು ಪೂರೈಸುತ್ತಿರುವ ಶಸ್ತ್ರಾಸ್ತ್ರಗಳಲ್ಲಿ ಕೆಲವನ್ನು ಉಕ್ರೇನ್ ಕಾಳಸಂತೆಯಲ್ಲಿ ಮಾರುತ್ತಿದ್ದು, ಇದರಿಂದ ಮಧ್ಯ ಪ್ರಾಚ್ಯದಾದ್ಯಂತ ಆ ಶಸ್ತ್ರಾಸ್ತ್ರಗಳು ಕಂಡುಬರುತ್ತಿವೆ ಎಂದು ರಷ್ಯಾ ಬುಧವಾರ ಆರೋಪಿಸಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್ : ಒತ್ತಡ ಮುಕ್ತ ಚಾಲನೆ ಸಂಬಳ: 18000-20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 08047106868

General

ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು. ಮನೆಕೆಲಸಕ್ಕೆ, ಅಡುಗೆಗೆ ಮಹಿಳೆಯರು ಹೋಂ ನರ್ಸಗಳು ಹುಡುಗಿಯರು ಬೇಕಾಗಿದ್ದಾರೆ. ಊಟವಸತಿಯಿದೆ. 10,000- 15,000, 8951315839, 9880545002

Hospital & Medical Jobs

ವಿನಾಯಕ ಚಾರಿಟಬಲ್ ಟ್ರಸ್ಟ್ ವೃದ್ಧಾಶ್ರಮ ವತಿಯಿಂದ SSLC/PUC ಯುವಕ/ಯುವತಿಯರಿಗೆ ANM ನರ್ಸಿಂಗ್ ಟ್ರೈನಿಂಗ್ ಉಚಿತ ಊಟ ವಸತಿ, Salary ಸರ್ಟಿಫಿಕೇಟ್ ನೀಡಲಾಗುತ್ತದೆ 8884343999/ 8884278999

Wanted

ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ, ಆಫೀಸ್ ಕೆಲಸಕ್ಕೆ ಯುವಕ/ ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+ OT. 17,800-68,000. 9538811104, 9538811223

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000- 16,000/-ರ ವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Teachers/ Professors

SRI.RAMAKRISHNA EDUCATION Society, Halasuru,Bangalore Requires Experienced PE-TEACHERS (BP.Ed/ CP.Ed). 8861248642/ 9845048824/ srkes1963@gmail.com

ರಿಯಲ್ ಎಸ್ಟೇಟ್ ಸೆಲ್ಲಿಂಗ್

Mathikere

URGENT SALE of 2Bhk furnished flat 1257sqft Muthyalanagara 6500/-per sqft slightly negotiable. 9686973320

ಇತರೆ

Books & Periodicals

ನಿಮ್ಮಲ್ಲಿರುವ ಹಸ್ತಪ್ರತಿಗಳು (ಕನ್ನಡ) ಪುಸ್ತಕ ರೂಪದಲ್ಲಿ ಬರಬೇಕೆ? ನೀವು ಇಂಗ್ಲಿಷ್-ಕನ್ನಡ, ತೆಲುಗು-ಕನ್ನಡ ಭಾಷಾಂತರಕಾರರೇ? ನಿಮ್ಮ ಪುಸ್ತಕಗಳನ್ನು ವಿತರಿಸಬೇಕೆ? ಕೂಡಲೇ ಸಂಪರ್ಕಿಸಿ: ವಾಸನ್ ಪಬ್ಲಿಕೇಶನ್ಸ್ 9845029297 www.mastermindbooks.com

ಭವಿಷ್ಯ

Astrology

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100%ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್. ಉಚಿತ:ಭವಿಷ್ಯ:ಖಚಿತ:ಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು- ಶ್ರೀಕ್ಷೇತ್ರಧರ್ಮಸ್ಥಳ: 7022443071

★ಅಂಭಾಭವಾನಿ★ ಜ್ಯೋತಿಷ್ಯಾಲಯ ಕೊಳ್ಳೆಗಾಲದ ನಂ.1 'ವಶೀಕರಣ ಸ್ಪೆಷಲಿಸ್ಟ್' ದೇವಿಪ್ರಸಾದ್. (ಉಚಿತ ಭವಿಷ್ಯ ಖಚಿತ ಪರಿಹಾರ) ನಿಮ್ಮ ಸಮಸ್ಯೆಗಳೇನೆಯಿರಲಿ 2ದಿನದಲ್ಲಿ ಪರಿಹಾರ.9886755306

ಪ್ರೇಮ-ವಿಚಾರ, ವಶೀಕರಣ, ಮಾಟ-ಮಂತ್ರ, ಇನ್ನು ಮುಂತಾದ ಸಮಸ್ಯೆಗಳಿಗೆ ಚಿಂತಿಸುವ ಅವಶ್ಯಕತೆ ಇಲ್ಲ,ನಿಮ್ಮ ಸಮಸ್ಯೆ ಏನೇ ಇರಲಿ ಪರಿಹಾರ ಶತಸಿದ್ಧ: 9513707409

ಪ್ರವಾಸ

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್. 14/07/22 ಉಜ್ಜಯಿನಿ ಮಹಕಾಳೇಶ್ವರ್, ಓಂಕಾರೇಶ್ವರ, ಮಹೇಶ್ವರ, ದೇವಾಸ್. 11/08/22 ಕಾಶಿ ಪ್ರವಾಸ. 13/07/22 ಪುರಿ ಜಗನ್ನಾಥ್ 9964527782

Travel

ದೆಹಲಿ ಯುಮುನೋತ್ರಿ, ಗಂಗೋತ್ರಿ ಕೇದಾರನಾಥ್,ಬದರಿನಾಥ್ ಹರಿದ್ವಾರ್ 01.09.2022 07.09.2022 15.09.2022 17.09.2022 07.10.2022 10.10.2022 ರಿಂದ 14/18 ದಿನಗಳು. ಕಾಶಿ,ಗಯಾ,ಪ್ರಯಾಗ,ಪುರಿ ಭುವನೇಶ್ವರ್ 01.09.2022 15.09.2022 14.10.2022 ರಿಂದ 9/12 ದಿನಗಳು. ಸೋಮನಾಥ್ ದ್ವಾರಕಾ ಉಜ್ಜಯಿನಿ ಓಂಕಾರೇಶ್ವರ್ ಅಷ್ಟ ಜ್ಯೋತಿರ್ಲಿಂಗಗಳು 07.10.2022 28.10.2022 ರಿಂದ 15/10 ದಿನಗಳು. ದೆಹಲಿ,ವೈಷ್ಣೊದೇವಿ,ಕುಲು ಮನಾಲಿ,ಶಕ್ತಿಪೀಠಗಳು 06.10.2022 27.10.2022 ರಿಂದ 12/16 ದಿನಗಳು. ಸಂಪರ್ಕಿಸಿ: 26508925 9980993631 ಶ್ರೀಚೈತನ್ಯ ಟ್ರಾವಲ್ಸ್ ಚಾಮರಾಜಪೇಟೆ ಬೆಂಗಳೂರು-18

30.09.2022ರಿಂದ 34ದಿನಗಳು ವಿಮಾನ.AC ಬಸ್ಸಿನಲ್ಲಿ ಮತ್ತು ರೂಂ ಸೌಲಭ್ಯದೊಂದಿಗೆ ಚಾರಧಾಮ್ ಸಮೇತ ವೈಷ್ಣೋದೇವಿ,ಕಾಶ್ಮೀರ,ಶ್ರೀನಗರ, ಅಮೃತ್ಸರ,ಕಾಶಿ,ಗಯಾ,ನೇಪಾಳ, ಜೈಪುರ,ಹರಿದ್ವಾರ,ನವದೆಹಲಿ ಇತ್ಯಾದಿ.,ಯಾತ್ರೆಗಳಿಗೆ ಏಷ್ಯನ್ ಟ್ರಾವಲ್ ಲೈನ್ಸ್.#164/3 ಆರ್.ವಿ.ರಸ್ತೆ,ಬಸ್‌ಸ್ಟಾಪ್. ಎದುರು,ಬೆಂಗಳೂರು.04. 8105657052, 9480182865.

17.07.2022 5ದಿನಗಳು A/C ಬಸ್,A/C ರೂಮ್,ಊಟ ವಸತಿಯೊಂದಿಗೆ ಮಂತ್ರಾಲಯ, ಶ್ರೀಶೈಲಂ, ಅಹೋಬಲಂ ಪ್ರವಾಸ . ಆರ್.ಗಾಂಧಿ ಟೂರ್ಸ್(ರಿ) 6363416487/ 9902433500

Home Stay

ಮನೆಯ ಊಟೋಪಚಾರದೊಂದಿಗೆ ಮಲೆನಾಡಿನ ಪ್ರಕೃತಿ ಸೌಂದರ್ಯವನ್ನು ಸವಿಯಲು,ಟ್ರೆಕಿಂಗ್ ಮಾಡಲು, ಹೋಂ ಸ್ಟೇಯಲ್ಲಿ ವಿಶ್ರಾಂತಿ ಪಡೆಯಲು 2/3 ದಿನಗಳ ಪ್ರವಾಸಗಳಿಗಾಗಿ ವಿಚಾರಿಸಿರಿ. ಸನ್ ಶೈನ್ ಹೋಂ ಸ್ಟೇ. ಸಂಸೆ,ಕುದ್ರೆಮುಖ. 9481682498 9916910655

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

DH DECCAN HERALD
ಪ್ರಜಾವಾಣಿ

Classifieds
EDUCATION SPECIAL
For More Details Contact:
Jerry Louis : 9731810277
Vishal GM : 9845114560
080- 45557161 | 163 |164
Email : dhclassifieds@deccanherald.co.in
SPECIAL RATES FOR
Admission Notice,
Education Success
Congratulation Ads

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	15,835
ಇಂದಿನ ಅಂತ್ಯ	15,810
▼	24
ದಿನದ ಕನಿಷ್ಠ	16,025

ವಿನಿಮಯ ದರ

$ ಡಾಲರ್	79.33
£ ಪೌಂಡ್	95.48
€ ಯುರೊ	81.7
¥ ಯೆನ್ (100ಕ್ಕೆ)	58.43

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹560
12 ಮೊಟ್ಟೆಗೆ	₹72
ಮೈಸೂರು	
100 ಮೊಟ್ಟೆಗೆ	₹560

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1590 (1600)
ಸೋಯಾ (ರಿಫೈನ್ಡ್)	₹1280 (1300)
ಸೂರ್ಯಕಾಂತಿ (ರಿಫೈನ್ಡ್)	₹1620 (1640)
ಪಾಮೋಲಿನ್	₹1215 (1232)

ತೆರಿಗೆ ವಿನಾಯಿತಿ ಕಡಿತದ ಸೂಚನೆ ನೀಡಿದ ಬಜಾಜ್

ಒಂದನೇ ಪುಟದಿಂದ

ಜೂನ್‌ನಲ್ಲಿ ನಡೆದ ಜಿಎಸ್‌ಟಿ ಮಂಡಳಿ ಸಭೆಯು ಪ್ಯಾಕ್ ಮಾಡಿರುವ, ಲೇಬಲ್ ಇರುವ ಮಾಂಸ, ಮೊಸರು, ಮಜ್ಜಿಗೆ, ಹಪ್ಪಳ ಸೇರಿದಂತೆ ಹಲವು ಉತ್ಪನ್ನಗಳಿಗೆ ಇದ್ದ ತೆರಿಗೆ ವಿನಾಯಿತಿಯನ್ನು ರದ್ದುಮಾಡಿದೆ.

‘ಜಿಎಸ್‌ಟಿ ಮಂಡಳಿಯ 47ನೆಯ ಸಭೆಯಲ್ಲಿ ನಾವು ಹಲವು ವಿನಾಯಿತಿಗಳನ್ನು ಹಿಂಪಡೆದಿದ್ದೇವೆ. ಆದರೂ, ವಿನಾಯಿತಿಗಳು ಒಂದಿಷ್ಟು ಉಳಿದಿವೆ. ಆ ವಿಚಾರವಾಗಿ ಕೆಲಸ ಆಗಬೇಕಿದೆ. ಬಹಳಷ್ಟು ಸೇವೆಗಳಿಗೆ ವಿನಾಯಿತಿ ಇದೆ. ವಿನಾಯಿತಿ ಇರುವ ಸರಕು, ಸೇವೆಗಳ ಪಟ್ಟಿಯನ್ನು ಇನ್ನಷ್ಟು ಚಿಕ್ಕದಾಗಿಸಲು ಸಾಧ್ಯ ಎಂದಾದರೆ ವ್ಯಾಪಾರ, ಉದ್ಯಮ ವಲಯದ ಜೊತೆಗೂಡಿ ಕೆಲಸ ಮಾಡುವುದನ್ನು ಮುಂದುವರಿಸಲಾಗುವುದು’ ಎಂದು ಬಜಾಜ್ ಹೇಳಿದ್ದಾರೆ.

ಆರೋಗ್ಯ ಸೇವೆಯಂತಹ ಕೆಲವು ವಲಯಗಳಿಗೆ ವಿನಾಯಿತಿ ಮುಂದುವರಿಸಬೇಕಾಗುತ್ತದೆ ಎಂದೂ ಅವರು ಹೇಳಿದ್ದಾರೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಸೇವಾ ಚಟುವಟಿಕೆ ಏರಿಕೆ

ನವದೆಹಲಿ (ಪಿಟಿಐ): ಜೂನ್ ತಿಂಗಳಿನಲ್ಲಿ ದೇಶದ ಸೇವಾ ವಲಯದ ಚಟುವಟಿಕೆಗಳು 2011ರ ಏಪ್ರಿಲ್ ನಂತರದ ಅತಿಹೆಚ್ಚಿನ ಮಟ್ಟವನ್ನು ತಲುಪಿವೆ. ಬೇಡಿಕೆಯಲ್ಲಿ ಸುಧಾರಣೆ ಕಂಡುಬಂದಿದ್ದು ಇದಕ್ಕೆ ಕಾರಣ.

ಎಸ್‌ಆ್ಯಂಡ್‌ಪಿ ಗ್ಲೋಬಲ್ ಇಂಡಿಯಾ ಸರ್ವಿಸಸ್ ಪಿಎಂಐ ಬ್ಯುಸಿನೆಸ್ ಆ್ಯಕ್ಟಿವಿಟಿ ಸೂಚ್ಯಂಕವು ಜೂನ್ ತಿಂಗಳಿನಲ್ಲಿ 59.2ಕ್ಕೆ ತಲುಪಿದೆ. ಮೇ ತಿಂಗಳಲ್ಲಿ ಇದು 58.9ರಷ್ಟಿತ್ತು.

ಸತತ ಹನ್ನೊಂದು ತಿಂಗಳುಗಳಿಂದ ಸೇವಾ ವಲಯದ ಚಟುವಟಿಕೆಗಳು ಹೆಚ್ಚಳ ಕಾಣುತ್ತಿವೆ. ಸೂಚ್ಯಂಕವು 50ಕ್ಕಿಂತ ಹೆಚ್ಚಿನ ಮಟ್ಟದಲ್ಲಿದ್ದರೆ ಅದನ್ನು ಬೆಳವಣಿಗೆ ಎಂದು ಅರ್ಥೈಸಲಾಗುತ್ತದೆ. 50ಕ್ಕಿಂತ ಕಡಿಮೆ ಇದ್ದರೆ ಅದನ್ನು ಕುಸಿತ ಎಂದು ಕಾಣಲಾಗುತ್ತದೆ.

‘ಪ್ರಸಕ್ತ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ ಸೇವಾ ವಲಯವು ಬೆಳವಣಿಗೆ ಕಾಣುವ ರೀತಿಯಲ್ಲಿ ಜೂನ್ ತಿಂಗಳಲ್ಲಿ ಚಟುವಟಿಕೆಗಳು ಸುಧಾರಣೆ ಕಂಡಿವೆ’ ಎಂದು ಎಸ್‌ಆ್ಯಂಡ್‌ಪಿ ಗ್ಲೋಬಲ್ ಮಾರ್ಕೆಟ್ ಇಂಟೆಲಿಜೆನ್ಸ್‌ನ ಸಹಾಯಕ ನಿರ್ದೇಶಕಿ ಪಾಲಿಯಾನಾ ಡಿ ಲಿಮಾ ಹೇಳಿದ್ದಾರೆ.

ಸೇವೆಗಳಿಗೆ ಹೆಚ್ಚಿನ ಶುಲ್ಕ ವಿಧಿಸಿದರೂ, ಹೊಸ ಬೇಡಿಕೆಗಳನ್ನು ಕಂಡುಕೊಳ್ಳಲು ಕಂಪನಿಗಳಿಗೆ ಜೂನ್‌ನಲ್ಲಿ ಸಾಧ್ಯವಾಗಿದೆ. ಜೂನ್ ತಿಂಗಳಲ್ಲಿ ಮಾರಾಟದ ಬೆಲೆಯ ಹೆಚ್ಚಳವು 2017ರ ಜುಲೈ ನಂತರದ ಅತಿವೇಗದ ಏರಿಕೆ ದಾಖಲಿಸಿದೆ. ಹಲವು ಕಂಪನಿಗಳು ತಮ್ಮ ಮೇಲಿನ ಹೆಚ್ಚುವರಿ ವೆಚ್ಚವನ್ನು ಗ್ರಾಹಕರಿಗೆ ವರ್ಗಾವಣೆ ಮಾಡಿವೆ.

ಹಣದುಬ್ಬರವು ಕಡಿಮೆ ಆಗದಿರುವುದು ಕಂಪನಿಗಳ ಪಾಲಿಗೆ ಕಳವಳ ಮೂಡಿಸಿದೆ. ಆದರೆ, ಮುಂದಿನ ಒಂದು ವರ್ಷದ ವಹಿವಾಟಿನ ವಿಚಾರವಾಗಿ ಕಂಪನಿಗಳು ಆಶಾವಾದ ಹೊಂದಿವೆ.

ಮುಖ್ಯಾಂಶಗಳು

- ಹನ್ನೊಂದು ತಿಂಗಳಿನಿಂದ ಹೆಚ್ಚುತ್ತಿರುವ ಸೇವಾ ವಲಯದ ಚಟುವಟಿಕೆ
- ಕಂಪನಿಗಳ ಕಳವಳಕ್ಕೆ ಕಾರಣವಾದ ಹಣದುಬ್ಬರ ಏರಿಕೆ
- ಜೂನ್‌ನಲ್ಲಿ ತುಸು ಹೆಚ್ಚಿದ ನೇಮಕಾತಿ

ಕೆಲವು ಕಂಪನಿಗಳು ಮಾತ್ರ ಜೂನ್ ತಿಂಗಳಲ್ಲಿ ಹೊಸದಾಗಿ ನೌಕರರನ್ನು ನೇಮಕ ಮಾಡಿಕೊಂಡಿವೆ. ಆದರೆ, ಶೇಕಡ 94ರಷ್ಟು ಕಂಪನಿಗಳಲ್ಲಿ ಯಾವುದೇ ನೇಮಕಾತಿ ನಡೆದಿಲ್ಲ. ಹೀಗಿದ್ದರೂ, ಸೇವಾ ವಲಯದಲ್ಲಿನ ನೌಕರರ ಸಂಖ್ಯೆಯು ಜೂನ್‌ನಲ್ಲಿ ತುಸು ಹೆಚ್ಚಳ ಆಗಿದೆ. ಮೇ ತಿಂಗಳಲ್ಲಿ ಇದು ಇಳಿಕೆ ಕಂಡಿತ್ತು.

ಸೇವಾ ವಲಯ ಹಾಗೂ ತಯಾರಿಕಾ ವಲಯದ ಚಟುವಟಿಕೆಗಳನ್ನು ಒಟ್ಟಾಗಿ ಹೇಳುವ ಕಾಂಪೊಸಿಟ್ ಪಿಎಂಐ ಔಟ್‌ಪುಟ್ ಸೂಚ್ಯಂಕವು ಜೂನ್‌ನಲ್ಲಿ 58.2ಕ್ಕೆ ಇಳಿಕೆಯಾಗಿದೆ. ಇದು ಮೇ ತಿಂಗಳಲ್ಲಿ 58.3 ಆಗಿತ್ತು.

ಸೆನ್ಸೆಕ್ಸ್ 100 ಅಂಶ ಇಳಿಕೆ

ಮುಂಬೈ (ಪಿಟಿಐ): ದಿನದ ಆರಂಭದಲ್ಲಿ ಏರಿಕೆ ಕಂಡಿದ್ದ ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್, ಕೊನೆಯಲ್ಲಿ ಗಳಿಕೆ ಬಿಟ್ಟುಕೊಟ್ಟಿತು. 100 ಅಂಶ ಕುಸಿತದೊಂದಿಗೆ ವಹಿವಾಟು ಕೊನೆಗೊಳಿಸಿತು. ದಿನದ ಕೊನೆಯಲ್ಲಿ ಎಫ್‌ಎಂಸಿಜಿ, ಬ್ಯಾಂಕಿಂಗ್ ಮತ್ತು ಐ.ಟಿ. ವಲಯದ ಷೇರುಗಳ ಮಾರಾಟ ಜೋರಾಗಿತ್ತು.

ವಹಿವಾಟಿನ ಒಂದು ಹಂತದಲ್ಲಿ ಸೂಚ್ಯಂಕವು 631 ಅಂಶದಷ್ಟು ಏರಿಕೆ ದಾಖಲಿಸಿತ್ತು. ಯುರೋಪಿನ ಮಾರುಕಟ್ಟೆಗಳಲ್ಲಿ ಆರ್ಥಿಕ ಹಿಂಜರಿತದ ಭೀತಿ ಆವರಿಸಿದ ಪರಿಣಾಮವು ಭಾರತದ ಷೇರುಪೇಟೆಗಳ ಮೇಲೆಯೂ ಆಗಿದೆ ಎಂದು ವರ್ತಕರು ಹೇಳಿದ್ದಾರೆ.

ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ ದಿನದ ಕೊನೆಯಲ್ಲಿ 24 ಅಂಶ ಕುಸಿದಿದೆ. ‘ಜಾಗತಿಕ ಮಾರುಕಟ್ಟೆಗಳಲ್ಲಿನ ಈಗಿನ ಪರಿಸ್ಥಿತಿ ಗಮನಿಸಿದರೆ, ಆರ್ಥಿಕ ಹಿಂಜರಿತ ಭೀತಿ ಹಾಗೂ ಹಣಕಾಸು ನೀತಿ ಬಿಗಿಗೊಳಿಸುತ್ತಿರುವುದು ಹೂಡಿಕೆದಾರರನ್ನು ಕಾಡುತ್ತಿವೆ ಎಂಬುದು ಗೊತ್ತಾಗುತ್ತದೆ’ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಅವರು ಹೇಳಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400- 420
ನಡುಗೋಲು	450-480
ರಾಶಿ	500- 520
ರಾಶಿ ಉತ್ತಮ	550-600
ಜರಡಿ	600 - 650
ಹೆರಕಿದ್ದು	1,000-1,100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1,000
ಹಸಿರು ಅತಿ ಉತ್ತಮ	1,150-1,250
ಕಾಳು ಮೆಣಸು -	470
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಭದ್ರಾವತಿ	
ರಾಶಿ	46599-49699
ಚನ್ನಗಿರಿ	
ರಾಶಿ	48099-50009
ಚಿತ್ರದುರ್ಗ	
ಅಪಿ	49719-50129
ಬೆಟ್ಟೆ	39259-39689
ಕೆಂಪುಗೋಟು	29209-29610
ರಾಶಿ	49239-49669
ಕಾರ್ಕಳ	
ಹೊಸತು	40000-45000
ಮಂಗಳೂರು	
ಕೋಕ	20000-24500
ಪುತ್ತೂರು	
ಹೊಸತು	30500-43000
ಸಾಗರ	
ಬಿಳಿಗೋಟು	27299-28500
ಚಾಲಿ	36299-37149
ಕೆಂಪುಗೋಟು	29219-35509
ರಾಶಿ	43199-48989
ಸಿಪ್ಪೆಗೋಟು	20069-20609
ಶಿವಮೊಗ್ಗ	
ಗೊರಬಲು	25270-38199
ರಾಶಿ	45009-49809
ಸಿದ್ದಾಪುರ	
ಬಿಳಿಗೋಟು	26599-32111
ಚಾಲಿ	34611-38399
ಕೋಕ	23899-32299
ಕೆಂಪುಗೋಟು	31089-33300
ರಾಶಿ	45099-49009
ತಟ್ಟಿಬೆಟ್ಟೆ	35219-46299
ಶಿರಸಿ	
ಬೆಟ್ಟೆ	35099-46099
ಬಿಳಿಗೋಟು	22619-33000
ಚಾಲಿ	34381-39199
ರಾಶಿ	45560-49689
ಯಲ್ಲಾಪುರ	
ಬಿಳಿಗೋಟು	26612-32199
ಚಾಲಿ	35399-38577
ಕೋಕ	18812-29499
ಕೆಂಪುಗೋಟು	30099-33899
ರಾಶಿ	46599-52899
ತಟ್ಟಿಬೆಟ್ಟೆ	38599-45379

ಕಾಫಿ

(50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16100	15850	15900	231.30 ಸೆಂಟ್ಸ್
ಎಸಿ	9100	8500	8750	
ಆರ್‌ಪಿ	9600	9510	9875	ಲಂಡನ್
ಆರ್‌ಸಿ	4800	4450	4575	1999 ಡಾಲರ್ಸ್

38 ಪೈಸೆ ಕುಸಿದ ರೂಪಾಯಿ ಮೌಲ್ಯ

ಮುಂಬೈ (ಪಿಟಿಐ): ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಮಂಗಳವಾರದ ವಹಿವಾಟಿನಲ್ಲಿ ರೂಪಾಯಿ ಮೌಲ್ಯವು ಅಮೆರಿಕದ ಡಾಲರ್ ಎದುರು 38 ಪೈಸೆ ಕುಸಿದಿದೆ. ರೂಪಾಯಿ ಮೌಲ್ಯವು ಸಾರ್ವಕಾಲಿಕ ಕನಿಷ್ಠ ಮಟ್ಟವಾದ 79.33ಕ್ಕೆ ತಲುಪಿದೆ.

ಡಾಲರ್ ಮೌಲ್ಯ ಹೆಚ್ಚಳವಾಗಿದ್ದು ಹಾಗೂ ದೇಶದಿಂದ ವಿದೇಶಿ ಬಂಡವಾಳ ಹೊರಹರಿವು ಅವ್ಯಾಹತವಾಗಿ ನಡೆದಿರುವುದು ರೂಪಾಯಿ ಮೌಲ್ಯ ಕುಸಿತಕ್ಕೆ ಕಾರಣ ಎಂದು ತಜ್ಞರು ಹೇಳಿದ್ದಾರೆ.

ವ್ಯಾಪಾರ ಕೊರತೆ ಅಂತರ ಹೆಚ್ಚಾಗುತ್ತಿರುವುದು, ಅಮೆರಿಕದ ಫೆಡರಲ್ ರಿಸರ್ವ್ ಮುಂದಿನ ತಿಂಗಳುಗಳಲ್ಲಿ ಬಡ್ಡಿ ದರವನ್ನು ಇನ್ನಷ್ಟು ಹೆಚ್ಚಿಸುವ ಸಾಧ್ಯತೆ ಇರುವುದು ಕೂಡ ಮೌಲ್ಯ ಕುಸಿತಕ್ಕೆ ಕಾರಣಗಳಾದವು.

‘ಕಚ್ಚಾ ತೈಲದ ದರ ಹೆಚ್ಚಾಗುತ್ತಿರುವುದು ಹಾಗೂ ಪ್ರಮುಖ ದೇಶಗಳ ಕೇಂದ್ರೀಯ ಬ್ಯಾಂಕ್‌ಗಳು ಬಡ್ಡಿ ದರ ಜಾಸ್ತಿ ಮಾಡುತ್ತಿರುವುದು ರೂಪಾಯಿ ಮೌಲ್ಯ ಕುಸಿತಕ್ಕೆ ಇಂಬು ಕೊಡುತ್ತಿವೆ’ ಎಂದು ರೆಲಿಗೇರ್ ಬ್ರೋಕಿಂಗ್ ಸಂಸ್ಥೆಯ ಉಪಾಧ್ಯಕ್ಷೆ ಸುಗಂಧಾ ಸಚದೇವ ಹೇಳಿದ್ದಾರೆ.

ಮುಂದಿನ ದಿನಗಳಲ್ಲಿ ರೂಪಾಯಿ ಮೌಲ್ಯವು ಡಾಲರ್ ಎದುರು ಗರಿಷ್ಠ 81ರ ಮಟ್ಟವನ್ನೂ ತಲುಪಬಹುದು ಎಂದು ಸುಗಂಧಾ ಅವರು ಅಂದಾಜಿಸಿದ್ದಾರೆ.

ಮುಂಬೈ ಧಾರಣೆ

ಶೇಂಗಾ

5-7-2022

ಜಾವಾ 70/80(ಹೊಸ)	10950-11000
ಜಾವಾ 80/90(ಹೊಸ)	10350-10400
ದಪ್ಪ ಮಧ್ಯಪ್ರದೇಶ(ಹೊಸ)	9850-9900
ದಪ್ಪ ಗುಜರಾತ್(ಹೊಸ)	10750-10800

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1600 (1610)
ಒಂದು ವಾರದ ಡೆಲಿವರಿ	1595 (1605)
ಸೋಯಾ ಕಚ್ಚಾ	1195 (1225)
ಪಾಮ್ ವಾರದ ಡೆಲಿವರಿ	1213 (1230)
ಸೂರ್ಯಕಾಂತಿ ಎಣ್ಣೆ ಕಚ್ಚಾ	1590 (1600)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
52,000 (51,975)
ಬೆಳ್ಳಿ ಕೆ.ಜಿ 58,000 (58,125)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ನಾಗರಾಜ, ಚಿತ್ರದುರ್ಗ

- **ಪ್ರಶ್ನೆ:** ನನ್ನ ವಯಸ್ಸು 30 ವರ್ಷ. ಬೆಂಗಳೂರಿನ ಖಾಸಗಿ ಸಂಸ್ಥೆಯೊಂದರಲ್ಲಿ ಕೆಲಸ ಮಾಡುತ್ತಿದ್ದೇನೆ. ತಿಂಗಳ ಸಂಬಳ ₹ 50 ಸಾವಿರ. ಅದರಲ್ಲಿ ಮನೆ ಬಾಡಿಗೆ, ತಿಂಗಳ ಇತರ ಖರ್ಚು ಹೊರತುಪಡಿಸಿ ಸುಮಾರು ₹ 20-25 ಸಾವಿರ ಉಳಿಸಬಹುದು. ನನಗೆ 3 ವರ್ಷ ವಯಸ್ಸಿನ ಮಗ, 1 ವರ್ಷ ವಯಸ್ಸಿನ ಮಗಳು ಇದ್ದಾರೆ. ನನ್ನ ಪ್ರಸ್ತುತ ಉಳಿತಾಯ ಯೋಜನೆಗಳು: 1. ನನ್ನ ಹೆಸರಿನಲ್ಲಿ ₹ 50 ಲಕ್ಷಕ್ಕೆ ಅವಧಿ ವಿಮೆ. 2. ನನ್ನ ಹೆಸರಿನಲ್ಲಿ ಪ್ರತಿವರ್ಷ ₹ 50 ಸಾವಿರ ಪಿಪಿಎಫ್. 3. ಮಗಳ ಹೆಸರಿನಲ್ಲಿ ಪ್ರತಿವರ್ಷ ₹ 50 ಸಾವಿರ ಸುಕನ್ಯಾ ಸಮೃದ್ಧಿ ಯೋಜನೆ ಹೂಡಿಕೆ. 4. ಪ್ರತಿವರ್ಷ ಚಿನ್ನದ ಬಾಂಡ್ ಮೂಲಕ 5 ಗ್ರಾಂ ಚಿನ್ನ ಖರೀದಿ. 5. ಕಂಪನಿಯಿಂದ ಇಪಿಎಫ್ ಹಾಗೂ ₹ 3 ಲಕ್ಷಕ್ಕೆ ಆರೋಗ್ಯ ವಿಮೆ ಇದೆ.

ಶಿಕ್ಷಣ ಮತ್ತು ವೈದ್ಯಕೀಯ ವೆಚ್ಚ ಹೆಚ್ಚಾಗುತ್ತಲೇ ಇರುವುದರಿಂದ ನಾನು ಹೇಗೆ ಇವೆರಡಕ್ಕೂ ಯೋಜನೆ ರೂಪಿಸಲಿ? ಚಿತ್ರದುರ್ಗದಲ್ಲಿ ನನ್ನದೊಂದು ನಿವೇಶನವಿದ್ದು ಮುಂದಿನ ದಿನಗಳಲ್ಲಿ ಅನುಕೂಲ ನೋಡಿಕೊಂಡು ಮನೆ ಕಟ್ಟಿಸುವ ಯೋಜನೆಯೂ ಇದೆ.

ಉತ್ತರ: ಅವಧಿ ವಿಮೆ ಹಾಗೂ ಆರೋಗ್ಯ ವಿಮೆ ವ್ಯಕ್ತಿಯ ಬದುಕಿನಲ್ಲಿ ಆಗಬಹುದಾದ ದುರ್ಘಟನೆಗಳಿಗೆ ಪರಿಹಾರ ರೂಪದಲ್ಲಿ ಒದಗಬಲ್ಲ ಸಾಧನಗಳು. ಆದರೆ, ಇವು ವಾರ್ಷಿಕ ಚಂದಾ ಇದ್ದಂತೆ. ಇದು ಮರಳಿ ಸಿಗುವ ಹೂಡಿಕೆ ಅಲ್ಲ. ಇವುಗಳೊಡನೆ ನೀವು ಯಾವುದೇ ಜೀವ ವಿಮಾ ಕಂಪನಿಯ ವಿಮಾ ಯೋಜನೆಗಳಲ್ಲೂ ವರ್ಷಕ್ಕೆ ₹ 50,000ದಷ್ಟು ತೊಡಗಿಸುವುದು ಒಳಿತು. ಅಥವಾ ಇದೇ ಮೊತ್ತವನ್ನು ಸಮೀಪದ ಅಂಚೆ ಕಚೇರಿಯ ವಿಮಾ ಯೋಜನೆಯಲ್ಲಿ ತೊಡಗಿಸಬಹುದು. ಇವು ಎಂಡೋಮೆಂಟ್ ಯೋಜನೆಗಳು. ಪರ್ಯಾಯವಾಗಿ ನೀವು ಯೂನಿಟ್ ಲಿಂಕ್ಡ್ ಇನ್ಶೂರೆನ್ಸ್ ಪ್ಲ್ಯಾನ್‌ಗಳಲ್ಲಿಯೂ (ಯುಲಿಪ್) ಹೂಡಿಕೆ ಮಾಡಬಹುದು. ಇದು ಹೂಡಿಕೆಯ ಜೊತೆಗೆ ಉತ್ತಮ ವಿಮಾ ಮೊತ್ತವನ್ನು ನಿಮಗೆ ಒದಗಿಸುತ್ತದೆ, ಷೇರು ಮಾರುಕಟ್ಟೆಗೆ ಪೂರಕವಾಗಿ ನಿಮ್ಮ ಹೂಡಿಕೆಯ ಮೊತ್ತ ಏರಿಳಿತವಾಗುತ್ತದೆ. ದೀರ್ಘಾವಧಿಗೆ ಇದು ವಿಮೆಯೂ ಹೌದು ಹೂಡಿಕೆಯೂ ಹೌದು. ಮಾತ್ರವಲ್ಲದೆ, ಆದಾಯ ತೆರಿಗೆಯ ಸೆಕ್ಷನ್ 80ಸಿ ಅಡಿ ಆದಾಯ ತೆರಿಗೆಗೆ ಸಿಗುವ ವಿನಾಯಿತಿಯನ್ನು ಪೂರ್ಣ ಪ್ರಮಾಣದಲ್ಲಿ ಪಡೆಯಲು ₹ 1.50 ಲಕ್ಷದವರೆಗೆ ಹೂಡಿಕೆ ಮಾಡುವುದು ಒಳಿತು.

ನಿವ್ವಳ ವೇತನದ ಶೇಕಡ 50ರಷ್ಟನ್ನು ಖರ್ಚಿಗಾಗಿ ಉಳಿಸಿ ಉಳಿದ ಮೊತ್ತವನ್ನು ದೀರ್ಘಾವಧಿ, ಮಧ್ಯಮಾವಧಿ ಹಾಗೂ ಅಲ್ಪಾವಧಿ ಹೂಡಿಕೆಗಳಲ್ಲಿ ತೊಡಗಿಸಿ. ಉತ್ತಮ ದರ್ಜೆಯ ಮ್ಯೂಚುವಲ್ ಫಂಡ್‌ಗಳಲ್ಲಿ ಎಸ್‌ಐಪಿ ಮೂಲಕ ಹೂಡಿಕೆ ಮಾಡಬಹುದು. ಈ ಯೋಜನೆ ನಿರಂತರವಾಗಿ, ದೀರ್ಘಾವಧಿಗೆ ಆಗಲಿ. ಇದು ನಿಮಗೆ ಮಾರುಕಟ್ಟೆ ಮೌಲ್ಯ ಏರಿಕೆಯಾದಂತೆ ದೀರ್ಘ ಕಾಲದಲ್ಲಿ ಉತ್ತಮ ಲಾಭ ನೀಡಬಲ್ಲದು. ಇದಕ್ಕೆ ಅಗತ್ಯ ಬಿದ್ದರೆ ಪರಿಣತರ ಮಾರ್ಗದರ್ಶನ ಪಡೆದುಕೊಳ್ಳಿ. ಉಳಿದ ಮೊತ್ತವನ್ನು, ಬ್ಯಾಂಕ್‌ನಲ್ಲಿ ಮಧ್ಯಮ ಅಥವಾ ಅಲ್ಪಾವಧಿಗೆ ಎಫ್.ಡಿ. ಅಥವಾ ರೆಕರಿಂಗ್ ಡೆಪಾಸಿಟ್‌ನಲ್ಲಿ (ಆರ್.ಡಿ) ಹೂಡಿಕೆ ಮಾಡುತ್ತಾ ಇರಿ. ಮುಂದಿನ ದಿನಗಳಲ್ಲಿ ಪಿಂಚಣಿ ಯೋಜನೆಗಳಲ್ಲೂ ಹೂಡಿಕೆ ಮಾಡಿ.

ರವಿಕಾಂತ ಎಂ.ಕೆ., ತುಮಕೂರು

- **ಪ್ರಶ್ನೆ:** ಸಣ್ಣ ಹೂಡಿಕೆದಾರರು ‘ಕೇಂದ್ರ ಸರ್ಕಾರದ ಸಾಲ ಪತ್ರಗಳು ಹಾಗೂ ರಾಜ್ಯ ಅಭಿವೃದ್ಧಿ ಸಾಲ ಪತ್ರಗಳಲ್ಲಿ ಹಣ ತೊಡಗಿಸಬಹುದು’ ಎಂದು ಜೂನ್ 9ರಂದು ವಾಣಿಜ್ಯ ಪುಟದ ವರದಿಯೊಂದರಲ್ಲಿ ಬರೆಯಲಾಗಿದೆ. ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರದ ಸಾಲಪತ್ರಗಳು ಎಂದರೇನು? ಇವು ಸದಾ ಸಿಗುತ್ತವೆಯೇ? ಎಲ್ಲಿಂದ ಖರೀದಿಸಬಹುದು? ಇದರ ಬಗ್ಗೆ ವಿವರವಾದ ಮಾಹಿತಿ ಕೊಡಿ.

ಉತ್ತರ: ಕೇಂದ್ರ, ರಾಜ್ಯ ಸರ್ಕಾರಗಳು ಅಭಿವೃದ್ಧಿ ಉದ್ದೇಶಕ್ಕೆ ಹಣ ಸಂಗ್ರಹಿಸಲು ಬಾಂಡ್ (ಸಾಲಪತ್ರ) ಮೂಲಕ ಜನರನ್ನು ಅಥವಾ ಸಂಸ್ಥೆಗಳನ್ನು ತಲುಪುತ್ತವೆ. ಸರ್ಕಾರ ಇದಕ್ಕೆ ಪ್ರತಿಯಾಗಿ ನಿರ್ದಿಷ್ಟ ಮೊತ್ತದ ಮುಖ ಬೆಲೆಯ ಬಾಂಡ್ ಮೇಲೆ ನಿರ್ದಿಷ್ಟ ಕೂಪನ್ ದರದ ಬಡ್ಡಿಯನ್ನು ನಿಗದಿಪಡಿಸಿದ ಅವಧಿಗೊಮ್ಮೆ (ಸಾಮಾನ್ಯವಾಗಿ ಅರ್ಧವಾರ್ಷಿಕ ಅಥವಾ ವಾರ್ಷಿಕ ಅವಧಿ) ಹೂಡಿಕೆದಾರರಿಗೆ ನೀಡುತ್ತದೆ. ಹೂಡಿಕೆ ಭದ್ರತೆಯ ವಿಚಾರ ನೋಡುವುದಾದರೆ, ಇವು ಎಫ್.ಡಿ.ಗಿಂತ ಸುರಕ್ಷಿತ. ಕಾರಣ, ಇದಕ್ಕೆ ಸರ್ಕಾರದ ಖಾತರಿ ಇದೆ. ಎಲ್ಲ ಬ್ಯಾಂಕುಗಳು ತಮ್ಮ ಹೆಚ್ಚುವರಿ ಹೂಡಿಕೆಯನ್ನು ಸರ್ಕಾರಿ ಸಾಲಪತ್ರಗಳಲ್ಲಿ ತೊಡಗಿಸಿ, ಶಾಸನಬದ್ಧ ವಿತ್ತೀಯ ಅನುಪಾತವನ್ನು ಕಾಪಾಡುತ್ತವೆ.

ಬಾಂಡ್ ಖರೀದಿಸುವುದಕ್ಕೂ ಮೊದಲು ನೀವು ಆರ್‌ಬಿಐ ರಿಟೇಲ್ ಡೈರೆಕ್ಟ್ ಪೋರ್ಟಲ್‌ನಲ್ಲಿ (https://rbiretaildirect.in) ನಿಮ್ಮ ಕೆವೈಸಿ ಮಾಹಿತಿ ದಾಖಲಿಸಿ ನೋಂದಾಯಿಸಿಕೊಳ್ಳಬೇಕು. ಇಡೀ ಪ್ರಕ್ರಿಯೆ ಸಂಪೂರ್ಣವಾಗಿ ಆನ್‌ಲೈನ್ ಮೂಲಕ ನಡೆಯುತ್ತದೆ. ನಿಮ್ಮ ಹೆಸರಲ್ಲಿರುವ ಬ್ಯಾಂಕ್ ಖಾತೆಗೆ ನೆಟ್ ಬ್ಯಾಂಕಿಂಗ್ ಹಾಗೂ ಯುಪಿಐ ಐಡಿ ಅಗತ್ಯ ಇರುತ್ತದೆ. ಇಲ್ಲಿ ಸಣ್ಣ ಹೂಡಿಕೆದಾರರಿಗೆ ಕನಿಷ್ಠ ₹ 10,000ದಿಂದ ಹೂಡಿಕೆಗೆ ಅವಕಾಶ ಇದೆ. ಬಾಂಡ್ ಅವಧಿ ದೀರ್ಘಾವಧಿಯದ್ದು – ಹತ್ತರಿಂದ ಮೂವತ್ತು ವರ್ಷಗಳತನಕ ಇದು ಮರುಪಾವತಿಯ ಅವಧಿ ಹೊಂದಿರುತ್ತದೆ. ಈ ಅವಧಿಯಲ್ಲಿ ಬಡ್ಡಿ ಬರುತ್ತಿರುತ್ತದೆ. ಈ ಪೋರ್ಟಲ್‌ನಲ್ಲಿ ಕೇಂದ್ರ ಹಾಗೂ ವಿವಿಧ ರಾಜ್ಯ ಸರ್ಕಾರಗಳ ಬಾಂಡ್, ಟ್ರೆಷರಿ ಬಿಲ್, ಚಿನ್ನದ ಬಾಂಡ್ ಖರೀದಿಸಲು ಅವಕಾಶವಿದೆ. ವರ್ಷವಿಡೀ ಒಂದಲ್ಲ ಒಂದು ವರ್ಗದಲ್ಲಿ ಹೂಡಿಕೆಗೆ ಇಲ್ಲಿ ಅವಕಾಶವಿದೆ. ಟ್ರೆಷರಿ ಬಿಲ್‌ಗಳು ಮೂರು ತಿಂಗಳಿನಿಂದ ಒಂದು ವರ್ಷದ ತನಕ ಹೂಡಿಕೆಗೆ ಅವಕಾಶ ಕೊಡುತ್ತವೆ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ
₹16000-20000
2ನೇ ದರ್ಜೆ
₹12000-15000

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹176.50
ಆರ್‌ಎಸ್‌ಎಸ್-5	₹167
ಗುಡ್ ಲಾಟ್	₹158.50

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹300-585
ದ್ವಿತಳಿ (ಬಿ.ವಿ)	₹366-786

ಭಾವಪೂರ್ಣ ಶ್ರದ್ಧಾಂಜಲಿ

ಮಾನವ ಗುರು ಶ್ರೀ ಚಂದ್ರಶೇಖರ ಗುರೂಜಿ

ಕೋಟ್ಯಂತರ ಕುಟುಂಬಗಳ ಬಾಳಿಗೆ ಬೆಳಕಾಗಿದ್ದ, ಮಹಾನ್ ಮಾನವತಾವಾದಿ, ಸಮಾಜ ಸೇವಕ, ಮಾನವ ಗುರು ಎಂದೇ ಜನಮಾನಸದಲ್ಲಿ ನೆಲೆಸಿದ್ದ ಮನುಕುಲದ ಒಳಿತಿಗಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟಿದ್ದ ಶ್ರೀ ಚಂದ್ರಶೇಖರ ಗುರೂಜಿಯವರು ದಿನಾಂಕ 05-07-2022 ಮಂಗಳವಾರ ಮಧ್ಯಾಹ್ನ ದೈವಾಧೀನರಾಗಿರುತ್ತಾರೆ.

ದೇವರು ಅವರ ಆತ್ಮಕ್ಕೆ ಚಿರ ಶಾಂತಿಯನ್ನು ಹಾಗೂ ಇವರ ಕುಟುಂಬಕ್ಕೆ ದುಃಖವನ್ನು ಭರಿಸುವ ಶಕ್ತಿಯನ್ನು ನೀಡಲಿ ಎಂದು ಪ್ರಾರ್ಥಿಸೋಣ.

ದಿನಾಂಕ 06-07-2022 ಬುಧವಾರದಂದು ಮಧ್ಯಾಹ್ನ 01:00 ಕ್ಕೆ ಹುಬ್ಬಳ್ಳಿಯ ಕೇಶವಪುರ ಸುಳ್ಳ ರೋಡ್ ಶಿವಪ್ರಭು ಲೇಔಟ್ ಹತ್ತಿರ ಗುರೂಜಿಯವರ ಸ್ವಂತ ಜಮೀನಿನಲ್ಲಿ ಗುರೂಜಿಯವರ ಅಂತಿಮ ಸಂಸ್ಕಾರವನ್ನು ನೆರವೇರಿಸಲಾಗುವುದು

ದುಃಖ ತಪ್ತ
ಗುರೂಜಿಯವರ ಅಪಾರ ಭಕ್ತ ವೃಂದ, ಅಂಗಡಿ ಕುಟುಂಬ ಹಾಗೂ ಅಪಾರ ಬಂಧು ಬಳಗ ಮತ್ತು ಸಿ ಜಿ ಪರಿವಾರದ ಸಿಬ್ಬಂದಿ ವರ್ಗ

ಸರಣಿ ಜಯದ ಅವಕಾಶ ಕೈಚೆಲ್ಲಿದ ಭಾರತ: ಸಮಬಲ ಸಾಧಿಸಿದ ಇಂಗ್ಲೆಂಡ್

ಜೋ, ಜಾನಿ ಜೊತೆಯಾಟಕ್ಕೆ ಜಯ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಇಂಗ್ಲೆಂಡ್ ಜೋಡಿ ಜೋ ರೂಟ್ ಮತ್ತು ಜಾನಿ ಬೆಸ್ಟೊ ಪಟ್ಟು ಸಡಿಲಿಸಲಿಲ್ಲ. ಎಜ್‌ಬಾಸ್ಟನ್ ಅಂಗಳದಲ್ಲಿ ನಡೆದ ಟೆಸ್ಟ್‌ನಲ್ಲಿ ಮಂಗಳವಾರ ಭಾರತದ ಬೌಲರ್‌ಗಳ ಬೆವರಿಳಿಸಿದ ಇಬ್ಬರೂ ಇಂಗ್ಲೆಂಡ್ ತಂಡಕ್ಕೆ ಜಯದ ಕಾಣಿಕೆ ನೀಡಿದರು.

ಇದರೊಂದಿಗೆ ಇಂಗ್ಲೆಂಡ್ ನೆಲದಲ್ಲಿ ಟೆಸ್ಟ್ ಸರಣಿ ಜಯದ ಸಂಭ್ರಮ ಆಚರಿಸುವ ಅವಕಾಶವನ್ನು ಭಾರತ ತಂಡ ಕಳೆದುಕೊಂಡಿತು. 5 ಪಂದ್ಯಗಳ ಸರಣಿಯು 2-2ರಲ್ಲಿ ಸಮವಾಯಿತು. ಮುರಿಯದ ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 269 ರನ್ ಪೇರಿಸಿದ ರೂಟ್ (ಅಜೇಯ 142) ಮತ್ತು ಬೆಸ್ಟೊ (ಅಜೇಯ 114) ಜೋಡಿಯ ಅಬ್ಬರಕ್ಕೆ 378 ರನ್‌ಗಳ ಕಠಿಣ ಗುರಿಯು ಮಂಜಿನಂತೆ ಕರಗಿತು. ಆತಿಥೇಯರು 7 ವಿಕೆಟ್‌ಗಳಿಂದ ಜಯಿಸಿದರು.

ನಾಲ್ಕನೇ ದಿನವಾದ ಸೋಮವಾರ 3 ವಿಕೆಟ್‌ಗಳಿಗೆ 259 ರನ್ ಗಳಿಸಿತ್ತು. ಕ್ರೀಸ್‌ನಲ್ಲಿದ್ದ ರೂಟ್ ಮತ್ತು ಬೆಸ್ಟೊ ಕೊನೆಯ ದಿನದಾಟದಲ್ಲಿ ಜಯಕ್ಕೆ ಅಗತ್ಯವಿದ್ದ 119 ರನ್‌ಗಳನ್ನು ಕೇವಲ 19.4 ಓವರ್‌ಗಳಲ್ಲಿ ಗಳಿಸಿದರು. ಜಸ್‌ಪ್ರೀತ್ ಬೂಮ್ರಾ ಪಡೆಯ ಬೌಲರ್‌ಗಳಿಗೆ ವಿಕೆಟ್ ಗಳಿಸುವ ಅವಕಾಶವನ್ನೇ ಈ ಜೋಡಿ ನೀಡಲಿಲ್ಲ.

ರೂಟ್ ಟೆಸ್ಟ್‌ನಲ್ಲಿ 28ನೇ ಶತಕ ಪೂರೈಸಿದರು. 173 ಎಸೆತಗಳಲ್ಲಿ 19 ಬೌಂಡರಿ ಮತ್ತು ಒಂದು ಸಿಕ್ಸರ್ ಬಾರಿಸಿದರು. ಬೆಸ್ಟೊ ಈ ಪಂದ್ಯದ ಎರಡೂ ಇನಿಂಗ್ಸ್‌ಗಳಲ್ಲಿ ಶತಕ ಬಾರಿಸಿದ ಹೆಗ್ಗಳಿಕೆಗೆ ಪಾತ್ರರಾದರು. 145 ಎಸೆತಗಳಲ್ಲಿ 114 ರನ್ ಗಳಿಸಿದರು. ಟೆಸ್ಟ್‌ನಲ್ಲಿ ಅವರಿಗೆ ಇದು 12ನೇ ಶತಕವಾಗಿದೆ.

ಕೋವಿಡ್‌ನಿಂದ ಬಳಲುತ್ತಿರುವ ರೋಹಿತ್ ಶರ್ಮಾ ಅವರ ಬದಲಿಗೆ ಈ ಪಂದ್ಯದಲ್ಲಿ ಬೂಮ್ರಾ ನಾಯಕತ್ವ ವಹಿಸಿದ್ದರು. ಒಂಬತ್ತು ತಿಂಗಳುಗಳ ಹಿಂದೆ ಈ ಸರಣಿಯ ನಾಲ್ಕು ಪಂದ್ಯಗಳು ನಡೆದಿದ್ದವು. ಆಗ ವಿರಾಟ್ ಕೊಹ್ಲಿ ನಾಯಕತ್ವದ ಭಾರತವು 2–1ರ ಮುನ್ನಡೆ ಗಳಿಸಿತ್ತು. ಕೊನೆಯ ಪಂದ್ಯಕ್ಕೂ ಮುನ್ನ ತಂಡದಲ್ಲಿ ಕೋವಿಡ್ ಪ್ರಕರಣಗಳು ವರದಿಯಾಗಿದ್ದವು. ಆದ್ದರಿಂದ ಮುಂದೂಡಿದ್ದ ಪಂದ್ಯವನ್ನು ಈಗ ಆಯೋಜಿಸಲಾಯಿತು.

ಈ ಪಂದ್ಯದಲ್ಲಿ ಡ್ರಾ ಮಾಡಿಕೊಂಡಿದ್ದರೂ ಸರಣಿ ಜಯದ ಅವಕಾಶ ಭಾರತಕ್ಕೆ ಇತ್ತು. ಮೊದಲ ಇನಿಂಗ್ಸ್‌ನಲ್ಲಿ 132 ರನ್‌ಗಳಉತ್ತಮ ಮುನ್ನಡೆ ಗಳಿಸಿದ್ದ ಬೂಮ್ರಾ ಪಡೆ 2ನೇ ಇನಿಂಗ್ಸ್‌ನಲ್ಲಿ ಬೌಲಿಂಗ್‌ನಲ್ಲಿ ದುರ್ಬಲವಾಗಿದ್ದು, ಮುಳುವಾಯಿತು.

ದೊಡ್ಡ ಗುರಿ ಬೆನ್ನಟ್ಟಿ ಗೆದ್ದ ಇಂಗ್ಲೆಂಡ್

ಮೊತ್ತ	ಎದುರಾಳಿ	ಸ್ಥಳ	ವರ್ಷ
378	ಭಾರತ	ಎಜ್‌ಬಾಸ್ಟನ್	2022
359	ಆಸ್ಟ್ರೇಲಿಯಾ	ಲೀಡ್ಸ್	2019
332		ಮೆಲ್ಬರ್ನ್	1928-29
315		ಲೀಡ್ಸ್	2000

ಭಾರತದೆದುರು ದೊಡ್ಡ ಗುರಿ ಯಶಸ್ವಿ ಚೇಸಿಂಗ್

ಮೊತ್ತ	ತಂಡ	ಸ್ಥಳ	ವರ್ಷ
378	ಇಂಗ್ಲೆಂಡ್	ಎಜ್‌ಬಾಸ್ಟನ್	2022
339	ಆಸ್ಟ್ರೇಲಿಯಾ	ಪರ್ತ್	1977
276	ವಿಂಡೀಸ್	ದೆಹಲಿ	1987
240	ದ.ಆಫ್ರಿಕಾ	ಜೋಹಾನ್ಸ್‌ಬರ್ಗ್	2022

ಟೆಸ್ಟ್ ಶತಕ–ಕೊಹ್ಲಿ ಹಿಂದಿಕ್ಕಿದ ರೂಟ್

ಆಟಗಾರ	ಶತಕ
ಜೋ ರೂಟ್	28
ಸ್ಟೀವನ್ ಸ್ಮಿತ್	27
ವಿರಾಟ್ ಕೊಹ್ಲಿ	27
ಕೇನ್ ವಿಲಿಯಮ್ಸನ್	24

ಜೋ ರೂಟ್ ಮತ್ತು ಜಾನಿ ಬೆಸ್ಟೊ ಸಂಭ್ರಮ –ಎಪಿ/ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್
ಭಾರತ 416 (84.5 ಓವರ್)
ಇಂಗ್ಲೆಂಡ್ 284 (61.3 ಓವರ್)
ಎರಡನೇ ಇನಿಂಗ್ಸ್
ಭಾರತ 245 (81.5 ಓವರ್)
ಇಂಗ್ಲೆಂಡ್ 3ಕ್ಕೆ 378 (76.4 ಓವರ್)
(ಸೋಮವಾರ 57 ಓವರ್‌ಗಳಲ್ಲಿ 3ಕ್ಕೆ 259)
ರೂಟ್ ಔಟಾಗದೆ 142 (173 ಎ, 4X19, 6X1), ಬೆಸ್ಟೋ ಔಟಾಗದೆ 114 (145ಎ, 4X15, 6X1)
ಇತರೆ 20 (ಬೈ 8, ಲೆಗ್‌ಬೈ 7, ನೋಬಾಲ್ 2, ವೈಡ್ 3)
ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 17–1–74–2, ಮೊಹಮ್ಮದ್ ಶಮಿ 15–2–64–0, ರವೀಂದ್ರ ಜಡೇಜ 18.4–3–62–0, ಮೊಹಮ್ಮದ್ ಸಿರಾಜ್ 15–0–98–0, ಶಾರ್ದೂಲ್ ಠಾಕೂರ್ 11–0–65–0

ಫಲಿತಾಂಶ: ಇಂಗ್ಲೆಂಡ್ ತಂಡಕ್ಕೆ ಏಳು ವಿಕೆಟ್‌ಗಳ ಜಯ
ಸರಣಿ 2-2ರಿಂದ ಸಮಬಲ

ಕ್ಷಮೆಯಾಚಿಸಿದ ಬ್ಯಾಡ್ಮಿಂಟನ್ ಏಷ್ಯಾ

ಏಷ್ಯನ್ ಚಾಂಪಿಯನ್‌ಷಿಪ್: ಸಿಂಧು ಪ್ರತಿಭಟನೆಗೆ ಸಿಕ್ಕ ಫಲ

ನವದೆಹಲಿ (ಪಿಟಿಐ): ಏಪ್ರಿಲ್‌ನಲ್ಲಿ ನಡೆದಿದ್ದ ಏಷ್ಯನ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಸೆಮಿಫೈನಲ್ ಪಂದ್ಯದಲ್ಲಿ ರೆಫರಿಯಿಂದ ಲೋಪ ಆಗಿರುವುದಕ್ಕೆ ಬ್ಯಾಡ್ಮಿಂಟನ್ ಏಷ್ಯಾದ ತಾಂತ್ರಿಕ ಸಮಿತಿಯು ಭಾರತದ ಆಟಗಾರ್ತಿ ಪಿ.ವಿ. ಸಿಂಧು ಅವರ ಕ್ಷಮೆಯಾಚಿಸಿದೆ.

‘ನಿಮಗೆ ಆಗಿರುವ ತೊಂದರೆಗೆ ನಾವು ಪ್ರಾಮಾಣಿಕವಾಗಿ ಕ್ಷಮೆಯಾಚಿಸುತ್ತೇವೆ. ಇದು ಕ್ರೀಡೆಯ ಒಂದು ಭಾಗವಾಗಿದೆ ಮತ್ತು ನೀವು ಕೂಡಾ ಕ್ರೀಡಾ ಮನೋಭಾವದಿಂದಲೇ ಅದನ್ನು ಸ್ವೀಕರಿಸಿರುವುದಾಗಿ ನಾವು ನಂಬಿದ್ದೇವೆ’ ಎಂದು ತಾಂತ್ರಿಕ ಸಮಿತಿಯ ಮುಖ್ಯಸ್ಥ ಚಿ ಶೆನ್ ಚೆನ್ ಅವರು ಸಿಂಧುಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ.

‘ಅಂದು ಆಗಿರುವ ತಪ್ಪನ್ನು ಈಗ ಸರಿಪಡಿಸಲು ಆಗದು. ಅಂತಹ ತಪ್ಪುಗಳು ಪುನರಾವರ್ತನೆಯಾಗದಂತೆ ನಾವು ಸೂಕ್ತ ಕ್ರಮಗಳನ್ನು ತೆಗೆದುಕೊಂಡಿದ್ದೇವೆ’ ಎಂದು ಹೇಳಿದ್ದಾರೆ.

ಪಿ.ವಿ.ಸಿಂಧು

ಜಪಾನ್‌ನ ಅಕಾನೆ ಯಮಗುಚಿ ಎದುರಿನ ಪಂದ್ಯದಲ್ಲಿ ಮೊದಲ ಗೇಮ್ ಗೆದ್ದುಕೊಂಡಿದ್ದ ಸಿಂಧು, ಎರಡನೇ ಗೇಮ್‌ನಲ್ಲಿ 14–11 ರಲ್ಲಿ ಮುನ್ನಡೆಯಲ್ಲಿದ್ದಾಗ ಈ ಘಟನೆ ನಡೆದಿತ್ತು. ಸರ್ವ್ ಮಾಡಲು ಸಿಂಧು ನಿಗದಿಗಿಂತ ಹೆಚ್ಚು ಸಮಯ ತೆಗೆದುಕೊಳ್ಳುತ್ತಾರೆ ಎಂದು ಅಂಪೈರ್ ಪೆನಾಲ್ಟಿ ನೀಡಿದ್ದರು. ಎದುರಾಳಿಗೆ ಒಂದು ಹೆಚ್ಚುವರಿ ಪಾಯಿಂಟ್ ಕೊಟ್ಟಿದ್ದರು.

ಅಂಪೈರ್ ತೀರ್ಮಾನ ವಿರೋಧಿಸಿ ಸಿಂಧು ರೆಫರಿ ಜತೆ ವಾದ ಮಾಡಿದ್ದರು. ಬಳಿಕ ಆಟದ ಮೇಲಿನ ಏಕಾಗ್ರತೆ ಕಳೆದುಕೊಂಡು 21-13, 19-21, 16-21 ರಲ್ಲಿ ಸೋತಿದ್ದರು. ‘ಅಂಪೈರ್‌ಗಳ ತಪ್ಪು ನಿರ್ಧಾರದಿಂದ ಸೋಲಾಗಿದೆ’ ಎಂದು ಸಿಂಧು, ಪಂದ್ಯದ ಬಳಿಕ ಕಣ್ಣೀರು ಹಾಕಿದ್ದರು.

ಕ್ಷಮೆಯಾಚನೆ ಬಗ್ಗೆ ಪ್ರತಿಕ್ರಿಯಿಸಿರುವ ಸಿಂಧು ಅವರ ತಂದೆ ಪಿ.ವಿ. ರಮಣ, ‘ತಪ್ಪನ್ನು ಒಪ್ಪಿಕೊಂಡಿರುವುದಕ್ಕೆ ನನಗೆ ಸಂತಸವಾಗಿದೆ. ಮುಂದೆ ಪಂದ್ಯದ ವೇಳೆ ಇಂತಹದೇ ಪರಿಸ್ಥಿತಿ ಎದುರಾದರೆ, ಅಂಪೈರ್ ಮತ್ತು ರೆಫರಿ ವಿಡಿಯೊ ವೀಕ್ಷಿಸಿ ಸೂಕ್ತ ತೀರ್ಮಾನ ತೆಗೆದುಕೊಳ್ಳಬೇಕೆಂಬುದು ನನ್ನ ಕೋರಿಕೆ’ ಎಂದಿದ್ದಾರೆ.

ಬಿಎಫ್‌ಸಿ ಸೇರಿದ ಹೀರಾ ಮಂಡಲ್

ಬೆಂಗಳೂರು: ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ತಂಡ ಬೆಂಗಳೂರು ಎಫ್‌ಸಿ, ಕೋಲ್ಕತ್ತದ ಹೀರಾ ಮಂಡಲ್ ಅವರೊಂದಿಗೆ ಎರಡು ವರ್ಷಗಳ ಅವಧಿಗೆ ಒಪ್ಪಂದ ಮಾಡಿಕೊಂಡಿದೆ.

25 ವರ್ಷದ ಮಂಡಲ್ ಅವರು ಐಎಸ್‌ಎಲ್‌ನಲ್ಲಿ ಈಸ್ಟ್ ಬೆಂಗಾಲ್ ತಂಡವನ್ನು ಪ್ರತಿನಿಧಿಸಿದ್ದರು. ತಮ್ಮ ಚೊಚ್ಚಲ ಋತುವಿನಲ್ಲಿ 16 ಪಂದ್ಯಗಳನ್ನು ಆಡಿದ್ದರು.

ಸೈಮನ್ ಗ್ರೇಸನ್ ಕೋಚ್ ಆದ ಬಳಿಕ ಬೆಂಗಳೂರಿನ ತಂಡವನ್ನು ಸೇರಿಕೊಳ್ಳುತ್ತಿರುವ ಐದನೇ ಆಟಗಾರ ಅವರಾಗಿದ್ದಾರೆ.

ಪ್ರಬೀರ್ ದಾಸ್, ಹಾವಿ ಹೆರ್ನಾಂಡೆಸ್, ಫೈಸಲ್ ಅಲಿ ಮತ್ತು ಅಮೃತ್ ಗೋಪೆ ಅವರೊಂದಿಗೆ ತಂಡ ಈಗಾಗಲೇ ಒಪ್ಪಂದ ಮಾಡಿಕೊಂಡಿದೆ.

ಭಾರತದ ಅಭಿಮಾನಿಗಳಿಗೆ ಜನಾಂಗೀಯ ನಿಂದನೆ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಎಜ್‌ಬಾಸ್ಟನ್‌ನಲ್ಲಿ ನಡೆದ ಟೆಸ್ಟ್ ಕ್ರಿಕೆಟ್ ಪಂದ್ಯದ ನಾಲಕ್ನೆ ದಿನದಾಟದ ಸಂದರ್ಭದಲ್ಲಿ ಭಾರತದ ಅಭಿಮಾನಿಗಳನ್ನು ಜನಾಂಗೀಯ ನಿಂದನೆ ಮಾಡಿ ಅವಮಾನಿಸಲಾಗಿದೆ ಎಂಬ ಆರೋಪ ಕೇಳಿಬಂದಿದೆ. ಈ ಕುರಿತು ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಇಂಗ್ಲೆಂಡ್ ಕ್ರಿಕೆಟ್ ಮಂಡಳಿ ಮತ್ತು ವಾರ್ವಿಕ್‌ಷೈರ್ ಕೌಂಟಿ ಕ್ರಿಕೆಟ್ ತಿಳಿಸಿವೆ.

ಭಾರತ ತಂಡದ ಕೆಲವು ಅಭಿಮಾನಿಗಳು ತಮ್ಮ ವಿರುದ್ಧ ಜನಾಂಗೀಯ ನಿಂದನೆ ಮಾಡಲಾಗಿದೆ ಎಂದು ಟ್ವೀಟ್ ಮಾಡಿದ್ದಾರೆ. ಇದಕ್ಕೆ ರಿಟ್ವೀಟ್ ಮಾಡಿರುವ ಯಾರ್ಕ್‌ಷೈರ್ ತಂಡದ ಮಾಜಿ ಆಟಗಾರ ಅಜೀಂ ರಫೀಕ್ ಬೇಸರ ವ್ಯಕ್ತಪಡಿಸಿದ್ದಾರೆ. ಅವರ ಟ್ವೀಟ್‌ಗೆ ಪ್ರತಿಕ್ರಿಯಿಸಿರುವ ಎಜ್‌ಬಾಸ್ಟನ್, ‘ನಾವು ಇದಕ್ಕಾಗಿ ಕ್ಷಮೆ ಯಾಚಿಸುತ್ತೇವೆ. ಇಂತಹ ದುರ್ವರ್ತನೆ ಸಹಿಸುವುದಿಲ್ಲ’ ಎಂದಿದೆ.

ಭಾರತ ತಂಡಕ್ಕೆ ದಂಡ: ಪಂದ್ಯದಲ್ಲಿ ನಿಗದಿಯ ವೇಳೆಗೆ ಓವರ್‌ಗಳನ್ನು ಪೂರೈಸದ ಕಾರಣಕ್ಕೆ ಭಾರತ ತಂಡಕ್ಕೆ ಪಂದ್ಯ ಶುಲ್ಕದ ಶೇ 40ರಷ್ಟು ದಂಡ ವಿಧಿಸಲಾಗಿದೆ.

ನಾಲ್ಕನೇ ಸ್ಥಾನ: ಡಬ್ಲ್ಯುಟಿಸಿ ಪಟ್ಟಿಯಲ್ಲಿ ಭಾರತ ತಂಡವು ಶೇ 52.38ರ ಅಂಕಗಳೊಂದಿಗೆ ನಾಲ್ಕನೇ ಸ್ಥಾನದಲ್ಲಿದೆ.

ಬೆಂಗಳೂರು ಗಾಲ್ಫ್ ಕ್ಲಬ್‌ಗೆ ಇತ್ತೀಚೆಗೆ ಆಯ್ಕೆಯಾದ ಪದಾಧಿಕಾರಿಗಳು: (ಕುಳಿತವರು– ಎಡದಿಂದ) ಸಂಜಯ್ ಎ. ಪೋಳ್, ಎನ್. ವಸಂತ ಕುಮಾರ್ (ಕಾರ್ಯದರ್ಶಿ), ಎ.ಸಿ. ಸುರೇಶ್ ಚಂದ್ರ (ಕ್ಯಾಪ್ಟನ್) ಮತ್ತು ಬಿ.ಕೆ.ಸುಬ್ಬಯ್ಯ (ಖಜಾಂಚಿ). ನಿಂತವರು: ಆರ್. ಎನ್. ಶಶಾಂಕ್, ಎಂ.ಕೆ.ನರಸಿಂಗ ರಾವ್, ಸುಮಂತ್ ಯಡೂರಪ್ಪ, ಶ್ರೀದೇವ್ ಭೈರಪ್ಪ ಮತ್ತು ರಘು ಶಿವರಾಮಯ್ಯ

ಕೊಕ್ಕೊ: ನಾಕೌಟ್‌ಗೆ ಮೈಸೂರು ವಿಶ್ವವಿದ್ಯಾಲಯ

ಪ್ರಜಾವಾಣಿ ವಾರ್ತೆ

ಮೈಸೂರು: ಆತಿಥೇಯ ಮೈಸೂರು ವಿಶ್ವವಿದ್ಯಾಲಯ ತಂಡವು ಮಂಗಳವಾರ ಇಲ್ಲಿ ಆರಂಭವಾದ ಅಖಿಲ ಭಾರತ ಅಂತರ ವಿಶ್ವವಿದ್ಯಾಲಯಗಳ ಮಹಿಳಾ ಕೊಕ್ಕೊ ಟೂರ್ನಿಯಲ್ಲಿ ಶುಭಾರಂಭ ಮಾಡಿತು. ಲೀಗ್ ಹಂತದಲ್ಲಿ ಎರಡೂ ಪಂದ್ಯಗಳನ್ನು ಗೆದ್ದ ಮೈಸೂರು ತಂಡವು ನಾಕೌಟ್‌ನತ್ತ ಹೆಜ್ಜೆಯಿಟ್ಟಿತು.

ಮೈಸೂರು ವಿಶ್ವವಿದ್ಯಾಲಯದ ಸ್ಪೋರ್ಟ್ಸ್ ಪೆವಿಲಿಯನ್‌ನಲ್ಲಿ ನಡೆದ ಮೊದಲ ಪಂದ್ಯದಲ್ಲಿ ಮೈಸೂರು ತಂಡವು 10–5ರಿಂದ ಪಾಣಿಪತ್‌ನ ಕುರುಕ್ಷೇತ್ರ ವಿಶ್ವವಿದ್ಯಾಲಯವನ್ನು ಮಣಿಸಿತು. ಮೊದಲೆರಡು ಸುತ್ತುಗಳಲ್ಲಿ ಮೈಸೂರು ತಂಡ 10–2ರ ಮುನ್ನಡೆ ಸಾಧಿಸಿತು. ಚೇಸಿಂಗ್‌ನಲ್ಲಿ ಮೈಸೂರಿನ ಮೋನಿಕಾ, ಪಾಣಿಪತ್‌ನ ಐವರನ್ನು ಔಟ್ ಮಾಡಿದರು. ಮೂರನೇ ಸುತ್ತಿನಲ್ಲಿ ಕೆ.ಆರ್.ತೇಜಸ್ವಿನಿ ಡಿಫೆನ್ಸ್‌ನಲ್ಲಿ ಮಿಂಚಿದರು. ಅವರಿಗೆ ಚೈತ್ರಾ ಸಾಥ್ ನೀಡಿದರು. ನಾಲ್ಕನೇ ಸುತ್ತಿನಲ್ಲೂ ತೇಜಸ್ವಿನಿ, ವಿನುತಾ, ಮಂಜುಳಾ ಚೇಸರ್‌ಗಳಿಗೆ ಸಿಗದೇ ಸತಾಯಿಸಿದರು. ವಿನುತಾ 2 ನಿಮಿಷ 40 ಸೆಕೆಂಡ್ ಔಟಾಗದೇ ಕಣದಲ್ಲಿದ್ದರೆ, ತೇಜಸ್ವಿನಿ 4 ನಿಮಿಷ 40 ಸೆಕೆಂಡ್ ಆಟವಾಡಿದರು.

ದ್ವಿತೀಯ ಪಂದ್ಯದಲ್ಲಿ ಭುವನೇಶ್ವರದ ಉತ್ಕಲ್ ವಿವಿ ತಂಡದ ವಿರುದ್ಧ 11–0 ಪಾಯಿಂಟ್‌ಗಳಿಂದ ಮೈಸೂರು ಗೆದ್ದಿತು. ಪಂದ್ಯದ ಚೇಸಿಂಗ್‌ನ ಮೊದಲ ಸುತ್ತಿನಲ್ಲಿ ಮೈಸೂರಿನ ಎಸ್.ಮೋನಿಕಾ 7 ಪಾಯಿಂಟ್ಸ್ ಗಳಿಸಿಕೊಟ್ಟರೆ, ವಿನುತಾ, ಚೈತ್ರಾ, ಮಂಜುಳಾ, ಕೆ.ಆರ್.ತೇಜಸ್ವಿನಿ ತಲಾ 1 ಪಾಯಿಂಟ್ ತಂದು ಕೊಟ್ಟರು. ಡಿಫೆಂಡಿಂಗ್‌ನಲ್ಲಿ ತೇಜಸ್ವಿನಿ ಎದುರಾಳಿ ತಂಡವನ್ನು 7 ನಿಮಿಷ ಕಾಡಿದರು.

ಬುಧವಾರ ಲೀಗ್‌ನ ಮೂರನೇ ಸುತ್ತಿನ ಪಂದ್ಯಗಳು ನಡೆಯಲಿವೆ.

ಮಳೆ: ಪಂದ್ಯಾವಳಿಗೆ ಮೈಸೂರು ವಿವಿ ಕುಲಪತಿ ಪ್ರೊ.ಜಿ.ಹೇಮಂತಕುಮಾರ್ ಚಾಲನೆ ನೀಡಿದರು. ತುಂತುರು ಮಳೆ ಆರಂಭವಾದ್ದರಿಂದ ಹೊರಾಂಗಣದ ಎರಡು ಅಂಕಣಗಳು ತೇವಗೊಂಡವು. ಒಳಾಂಗಣದಲ್ಲಿ ಪಂದ್ಯಗಳನ್ನು ನಡೆಸಬೇಕಾಯಿತು.

ಸೆಮಿಫೈನಲ್‌ಗೆ ಜೊಕೊವಿಚ್

ವಿಂಬಲ್ಡನ್ ಟೆನಿಸ್: ನಾಲ್ಕರ ಘಟ್ಟಕ್ಕೆ ಸಾನಿಯಾ ಜೋಡಿ

ವಿಂಬಲ್ಡನ್ (ಪಿಟಿಐ): ಎರಡು ಸೆಟ್‌ಗಳ ಹಿನ್ನಡೆ ಅನುಭವಿಸಿದರೂ ಮರುಹೋರಾಟ ನಡೆಸಿದ ಸರ್ಬಿಯದ ನೊವಾಕ್ ಜೊಕೊವಿಚ್ ವಿಂಬಲ್ಡನ್ ಗ್ರ್ಯಾನ್‌ಸ್ಲಾಮ್ ಟೆನಿಸ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿದರು.

ಮಂಗಳವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಕ್ವಾರ್ಟರ್ ಫೈನಲ್‌ನಲ್ಲಿ ಜೊಕೊವಿಚ್ 5–7, 2–6, 6–3, 6–2, 6–2 ರಲ್ಲಿ ಇಟಲಿಯ ಯಾನಿಕ್ ಸಿನೆರ್ ಅವರನ್ನು ಮಣಿಸಿದರು. ಐದು ಸೆಟ್‌ಗಳ ಹೋರಾಟ ಮೂರು ಗಂಟೆ 35 ನಿಮಿಷ ನಡೆಯಿತು.

ಸೆಮಿಗೆ ತತಿಯಾನ: ಜರ್ಮನಿಯ ತತಿಯಾನ ಮರಿಯಾ ಮಹಿಳೆಯರ ಸಿಂಗಲ್ಸ್ ವಿಭಾಗದ ಪಂದ್ಯದಲ್ಲಿ 4-6, 6-2, 7-5 ರಲ್ಲಿ ತಮ್ಮದೇ ದೇಶದ ಯೂಲ್ ನೀಮಯೆರ್ ವಿರುದ್ಧ ಗೆದ್ದು, ನಾಲ್ಕರಘಟ್ಟ ಪ್ರವೇಶಿಸಿದರು.

ನಾಲ್ಕರಘಟ್ಟಕ್ಕೆ ಸಾನಿಯಾ-ಪಾವಿಚ್: ಸಾನಿಯಾ ಮಿರ್ಜಾ ಮತ್ತು ಕ್ರೊಯೇಷ್ಯದ ಮಾಟೆ ಪಾವಿಚ್ ಜೋಡಿ ಮಿಶ್ರ ಡಬಲ್ಸ್ ವಿಭಾಗದ ಸೆಮಿಫೈನಲ್ ಪ್ರವೇಶಿಸಿತು.

ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಭಾರತ- ಕ್ರೊಯೇಷ್ಯದ ಜೋಡಿ 6–4, 3–6, 7–5 ರಲ್ಲಿ ಕೆನಡದ ಗ್ಯಾಬ್ರಿಯೆಲಾ ದಬ್ರೊವ್‌ಸ್ಕಿ ಮತ್ತು ಆಸ್ಟ್ರೇಲಿಯಾದ ಜಾನ್ ಪಿಯರ್ಸ್ ವಿರುದ್ಧ ಪ್ರಯಾಸದ ಗೆಲುವು ಪಡೆಯಿತು. ಸಾನಿಯಾ–ಪಾವಿಚ್ ಜೋಡಿ ಸೆಮಿಫೈನಲ್‌ನಲ್ಲಿ ರೋಬರ್ಟ್ ಫರಾ ಮತ್ತು ಯೆಲೆನಾ ಒಸ್ಟಪೆಂಕೊ ಅವರನ್ನು ಎದುರಿಸಲಿದೆ.

ಸೆಮಿಫೈನಲ್ ಪ್ರವೇಶಿಸಿದ ತತಿಯಾನ ಮರಿಯಾ –ಎಎಫ್‌ಪಿ ಚಿತ್ರ

ವಿಂಬಲ್ಡನ್ ಟೂರ್ನಿಯ ಮಿಶ್ರ ಡಬಲ್ಸ್ ವಿಭಾಗದಲ್ಲಿ ಸಾನಿಯಾ ಅವರ ಉತ್ತಮ ಸಾಧನೆ ಇದಾಗಿದೆ. 2011, 2013 ಮತ್ತು 2015 ರಲ್ಲಿ ಅವರು ಇಲ್ಲಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದರು.

ಕ್ವಾರ್ಟರ್‌ಫೈನಲ್‌ಗೆ ನಡಾಲ್: ಸ್ಪೇನ್‌ನ ರಫೆಲ್ ನಡಾಲ್ ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. ಸೋಮವಾರ ರಾತ್ರಿ ನಡೆದ ಪಂದ್ಯದಲ್ಲಿ ಅವರು 6-4, 6-2, 7-6 (8/6) ರಲ್ಲಿ ನೆದರ್ಲೆಂಡ್ಸ್‌ನ ಬೊಟಿಕ್ ವಾನ್ ಡೆ ಜಾಂಡ್‌ಶುಪ್ ಎದುರು ಜಯ ಸಾಧಿಸಿದರು. ನಡಾಲ್, ಆಲ್ ಇಂಗ್ಲೆಂಡ್ ಕ್ಲಬ್ ನಲ್ಲಿ 8ನೇ ಬಾರಿ ಕ್ವಾರ್ಟರ್‌ಫೈನಲ್ ಸಾಧನೆ ಮಾಡಿದರು.

ಎಂಟರಘಟ್ಟಕ್ಕೆ ಹಲೆಪ್, ರಿಬಾಕಿನ: ರೊಮೇನಿಯದ ಸಿಮೊನಾ ಹಲೆಪ್ ಮತ್ತು ಕಜಕಸ್ತಾನದ ಎಲೆನಾ ರಿಬಾಕಿನ ಅವರು ಮಹಿಳೆಯರ ಸಿಂಗಲ್ಸ್ ವಿಭಾಗದ ಕ್ವಾರ್ಟರ್ ಫೈನಲ್ ಪ್ರವೇಶಿ ಸಿದರು.

ಸೋಮವಾರ ನಡೆದ ಪ್ರೀಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಹಲೆಪ್ 6–1, 6–2 ರಲ್ಲಿ ಸ್ಪೇನ್‌ನ ಪೌಲಾ ಬಡೊಸಾ ಅವರನ್ನು ಮಣಿಸಿದರು. ರಿಬಾಕಿನ ಅವರು 7–5, 6–3 ರಲ್ಲಿ ಕ್ರೊಯೇಷ್ಯದ ಪೆಟ್ರಾ ಮಾರ್ಟಿಚ್ ವಿರುದ್ಧ ಗೆದ್ದರು.

ಆಸ್ಟ್ರೇಲಿಯಾದ ಅಯ್ಲಾ ಟೊಮ್ಲಾನೊವಿಚ್ 4-6, 6-4, 6-3 ರಲ್ಲಿ ಅಲೈಜ್ ಕಾರ್ನೆಟ್ ವಿರುದ್ಧ; ಅಮೆರಿಕದ ಅಮಂಡಾ ಅನಿಸಿಮೊವಾ 6–2, 6–3 ರಲ್ಲಿ ಫ್ರಾನ್ಸ್‌ನ ಹಾರ್ಮನಿ ಟಾನ್ ಎದುರು ಜಯ ಸಾಧಿಸಿದರು.

ಭಾರತ ತಂಡದ ಲಾಲ್‌ರೆಮ್ಸಿಯಾಮಿ (ನೀಲಿ ಪೋಷಾಕು) ಅವರ ಗೋಲು ಗಳಿಸುವ ಪ್ರಯತ್ನವನ್ನು ಚೀನಾ ಗೋಲ್‌ಕೀಪರ್ ತಡೆದರು –ಎಎಫ್‌ಪಿ ಚಿತ್ರ

ವಿಶ್ವಕಪ್ ಹಾಕಿ: ಭಾರತ–ಚೀನಾ ಪಂದ್ಯ ಡ್ರಾ

ಆ್ಯಮ್‌ಸ್ಟೆಲ್‌ವೀನ್ (ಪಿಟಿಐ): ಗೋಲು ಗಳಿಸುವ ಹಲವು ಅವಕಾಶಗಳನ್ನು ಹಾಳುಮಾಡಿಕೊಂಡ ಭಾರತ ತಂಡ, ಎಫ್‌ಐಎಚ್ ವಿಶ್ವಕಪ್ ಮಹಿಳಾ ಹಾಕಿ ಟೂರ್ನಿಯಲ್ಲಿ ಚೀನಾ ಜತೆ 1–1 ಗೋಲುಗಳ ಡ್ರಾ ಸಾಧಿಸಿತು.

ಟೂರ್ನಿಯಲ್ಲಿ ಮೊದಲ ಗೆಲುವು ದಾಖಲಿಸಬೇಕೆಂಬ ಸವಿತಾ ಪೂನಿಯಾ ಬಳಗದ ಕನಸು ಈಡೇರಲಿಲ್ಲ. ‘ಬಿ’ ಗುಂಪಿನ ತನ್ನ ಮೊದಲ ಪಂದ್ಯದಲ್ಲಿ ಭಾರತ, ಇಂಗ್ಲೆಂಡ್ ಜತೆ 1–1 ಗೋಲುಗಳ ಡ್ರಾ ಮಾಡಿಕೊಂಡಿತ್ತು.

ಚೀನಾ ವಿರುದ್ಧ ಗೆಲ್ಲುವ ನೆಚ್ಚಿನ ತಂಡ ಎಂಬ ಹಣೆಪಟ್ಟಿಯೊಂದಿಗೆ ಭಾರತ ಕಣಕ್ಕಿಳಿದಿತ್ತು. ಆದರೆ ಆಕ್ರಮಣಕಾರಿ ಆಟವಾಡಿದ ಚೀನಾ ತಂಡಕ್ಕೆ ಜೆಂಗ್ ಜಿಯಾಲಿ 25ನೇ ನಿಮಿಷದಲ್ಲಿ ಮುನ್ನಡೆ ತಂದುಕೊಟ್ಟರು. ವಂದನಾ ಕಟಾರಿಯಾ 44ನೇ ನಿಮಿಷದಲ್ಲಿ ಪೆನಾಲ್ಟಿ ಕಾರ್ನರ್ ಅವಕಾಶದಲ್ಲಿ ಚೆಂಡನ್ನು ಗುರಿಸೇರಿಸಿ ಸಮಬಲಕ್ಕೆ ಕಾರಣರಾದರು.

ಕೊನೆಯ ಕ್ವಾರ್ಟರ್‌ನಲ್ಲಿ ಭಾರತ ತಂಡದವರು ಗೆಲುವಿನ ಗೋಲಿಗಾಗಿ ಶಕ್ತಿಮೀರಿ ಪ್ರಯತ್ನಿಸಿದರೂ ಯಶಸ್ಸು ದೊರೆಯಲಿಲ್ಲ.

ಗುರುವಾರ ನಡೆಯುವ ಕೊನೆಯ ಲೀಗ್ ಪಂದ್ಯದಲ್ಲಿ ಭಾರತ ತಂಡ, ನ್ಯೂಜಿಲೆಂಡ್ ಜತೆ ಪೈಪೋಟಿ ನಡೆಸಲಿದೆ.

ಸಂಕ್ಷಿಪ್ತ ಸುದ್ದಿ

ಬ್ಯಾಡ್ಮಿಂಟನ್: ತ್ರಿಶಾ–ಗಾಯತ್ರಿಗೆ ಸೋಲು

ಕ್ವಾಲಾಲಂಪುರ (ಪಿಟಿಐ): ಭಾರತದ ತ್ರಿಶಾ ಜೋಲಿ ಮತ್ತು ಗಾಯತ್ರಿ ಗೋಪಿಚಂದ್ ಜೋಡಿ ಇಲ್ಲಿ ಆರಂಭ ವಾದ ಮಲೇಷ್ಯಾ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಸೋಲು ಅನುಭವಿಸಿತು.

ಮಂಗಳವಾರ ನಡೆದ ಮಹಿಳೆಯರ ಡಬಲ್ಸ್ ವಿಭಾಗದ ಮೊದಲ ಸುತ್ತಿನಲ್ಲಿ ಭಾರತದ ಆಟಗಾರ್ತಿಯರು 14–21, 14–21 ರಲ್ಲಿ ಮಲೇಷ್ಯಾದ ಪರ್ಲಿ ಟಾನ್ ಮತ್ತು ತಿನಾ ಮುರಳೀಧರನ್ ಎದುರು ಸೋತರು.

ಅಶ್ವಿನಿ ಭಟ್– ಶಿಖಾ ಗೌತಮ್ 7–21, 10–21 ರಲ್ಲಿ ಜಪಾನ್‌ನ ಯೂಕಿ ಫುಕುಶಿಮ ಮತ್ತು ಸಯಾಕ ಹಿರೊಟ ಎದುರು, ಪೂಜಾ- ಆರತಿ ಸಾರಾ ಸುನಿಲ್ 17–21, 17–21 ರಲ್ಲಿ ಬಲ್ಗೇರಿಯದ ಗ್ಯಾಬ್ರಿಯೆಲಾ ಸ್ಟೊಯೆವಾ ಮತ್ತು ಸ್ಟೆಫಾನಿ ಸ್ಟೊಯೆವಾ ಕೈಯಲ್ಲಿ ಸೋಲು ಅನುಭವಿಸಿದರು.

ಏಕದಿನ ರ‍್ಯಾಂಕಿಂಗ್: ಮಂದಾನಗೆ ಬಡ್ತಿ

ದುಬೈ (ಪಿಟಿಐ): ಭಾರತ ತಂಡದ ಉಪನಾಯಕಿ ಸ್ಮೃತಿ ಮಂದಾನ ಅವರು ಐಸಿಸಿ ಮಹಿಳಾ ಏಕದಿನ ಬ್ಯಾಟರ್‌ಗಳ ರ‍್ಯಾಂಕಿಂಗ್‌ನಲ್ಲಿ ಎಂಟನೇ ಸ್ಥಾನಕ್ಕೆ ಬಡ್ತಿ ಪಡೆದಿದ್ದಾರೆ.

ಅಗ್ರ 10 ಮಂದಿಯ ಪಟ್ಟಿಯಲ್ಲಿ ಅವರೊಬ್ಬರೇ ಭಾರತದ ಆಟಗಾರ್ತಿಯಾಗಿದ್ದಾರೆ. ಆಸ್ಟ್ರೇಲಿಯಾದ ಅಲಿಸಾ ಹೀಲಿ ಮತ್ತು ಇಂಗ್ಲೆಂಡ್‌ನ ನತಾಲಿ ಸೀವರ್ ಕ್ರಮವಾಗಿ ಮೊದಲ ಮತ್ತು ಎರಡನೇ ಸ್ಥಾನಗಳಲ್ಲಿದ್ದಾರೆ. ಆಲ್‌ರೌಂಡರ್ ದೀಪ್ತಿ ಶರ್ಮಾ ಮತ್ತು ಆರಂಭಿಕ ಬ್ಯಾಟರ್ ಶಫಾಲಿ ವರ್ಮಾ ಗಮನಾರ್ಹ ಪ್ರಗತಿ ಸಾಧಿಸಿದ್ದಾರೆ. ಬ್ಯಾಟರ್‌ಗಳ ವಿಭಾಗದಲ್ಲಿ ದೀಪ್ತಿ 29ನೇ ಸ್ಥಾನಕ್ಕೇರಿದ್ದಾರೆ. ಶಫಾಲಿ ಜೀವನಶ್ರೇಷ್ಠ 36ನೇ ಸ್ಥಾನ ಪಡೆದಿದ್ದಾರೆ.